Sri G. B. SHANKAR RAO (Deputy Minister for Revenue).—On behalf of the Minister for Development and Co-Operation I beg to lay:

(*a*) Annual Report of the Mysore State Warehousing Corporation for the year 1966-67;

Under Section 31 (ii) of the Warehousing Act, 1962.

(*b*) (i) Subscription to Dharwar District Industrial Co-operative Bank Ltd. Hubli.

Notification No. DPC 18 CIM 67 (ii) dated 19th November, 1967;

(iv) Affairs of the Mysore State Cotton Handloom Weavers, Co-operative Society Limited;

Notification No. DPC 15 CIE 67 dated 2nd October 1967;

Under Section 130 of the Mysore Co-operative Societies Act, 1959.

Mr. SPEAKER.—All the notification Rules and statements are laid on the Table of the House.

Presentation of Report

Mr. SPEAKER.—The Hon'ble Member is not here to present the Report of the Public Accounts Committee. Now Calling Attention Notice under Rule 63 by Sri L. Sreekantiah and Sri S. S. Arakeri. The Concerned Ministers are not here.

MOTION OF NO-CONFIDENCE IN THE COUNCIL OF MINISTERS

(*Debate Contd.*)

ಶ್ರೀ ಎಂ. ನಾಗಪ್ಪ (ರಾಯಚೂರು).—ಸಭಾಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರು ಮಂಡಿಸಿದಂತಹ ಈ ಅವಿಶ್ವಾಸ ಗೊತ್ತುವಳಿಯನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ನಿನ್ನೆ ಮಾತನಾಡಿದಂತಹ ಕೆಲವು ಸದಸ್ಯರು ಕಾಂಗ್ರೆಸ್‌ನ ಅಥವಾ ಆಡಳಿತ ಪಕ್ಷದವರು ಮಾಡಿದಂತಹ ಕೆಲವು ಮಹತ್ ಕಾರ್ಯಗಳ ವಿಷಯವನ್ನು ಸಭೆಯ ಗಮನಕ್ಕೆ ತರದೇ ಅವರ ಲೋಪದೋಷಗಳನ್ನು ಮಾತ್ರ ಹೇಳುತ್ತಾ ಇದ್ದಾರೆ ಎಂದು ಆಪಾದಿಸಿದ್ದಾರೆ, ಅದಕ್ಕೇ ನಾನು ಅವರು ಮಾಡಿದಂತಹ ಕೆಲವು ಮಹತ್ ಕಾರ್ಯಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದು ಮಹತ್ ಕಾರ್ಯ ಅವರು ಮಾಡಿದ್ದು ಎಂದರೆ, ಮಂತ್ರಿಮಂಡಲದ ಸಂಖ್ಯೆ 14 ಅಥವಾ 16 ಇದ್ದದನ್ನು 21-22ರ ವರೆಗೂ ಏರಿಸಿದ್ದಾರೆ. ಈ ಹೊಸ ಮಂತ್ರಿಮಂಡಲ ರಚನೆಯಾದಮೇಲೆ ಅವರು ಮಾಡಿದಂತಹ ಶಾಶ್ವತವಾದ ಕಾರ್ಯ ಎಂದರೆ ಮಂತ್ರಿಮಂಡಲವನ್ನು ವಿಶಾಲ ಮಾಡಿದ್ದು. ಎರಡನೆಯ ಮಹತ್ ಕಾರ್ಯ ಎಂದರೆ ಅವರು ತಮಗೆ ಇದ್ದ ವೇತನ 900 ರೂಪಾಯಿಗೆ ಬದಲಾಗಿ 12 ನೂರು ರೂಪಾಯಿಗಳವರೆಗೂ ಏರಿಸಿಕೊಂಡಿದ್ದಾರೆ. ಮೂರನೆಯ ಮಹತ್ ಕಾರ್ಯ ಎಂದರೆ ಸರ್ಕಾರಿ ನೌಕರರಿಗೆ ಸ್ಟ್ರೈಕ್ ಮಾಡತಕ್ಕ ಅಧಿಕಾರ ಕಾಯಿದೆ ಬದ್ಧವಾಗಿ ಇರತಕ್ಕದನ್ನು ಒಂದು ಆಕ್ಟ್ ಪಾಸ್ ಮಾಡಿ ಅಂತಹ ಒಂದು ಅಧಿಕಾರವನ್ನು ತೆಗೆದು ಹಾಕಿದ್ದಾರೆ.

ನಾಲ್ಕನೇ ಮಹಾತ್ಕಾರ್ಯ ನಮ್ಮ ಸರ್ಕಾರದವರು ಮಾಡಿದ್ದು ಎಂದರೆ, ರಾಜ್ಯದಲ್ಲಿ ಅನೇಕ ಜನತಂತ್ರ ದೃಷ್ಟಿಯಿಂದ ನಡೆಯುತಕ್ಕ ಕಾರ್ಪೊರೇಷನ್ ಮತ್ತು ನಗರಸಭೆಗಳನ್ನು ಅವುಗಳಮೇಲೆ ದುರಾಡಳಿತದ ಕಾರಣ ಹೊರಿಸಿ ರದ್ದುಗೊಳಿಸಿ ಆಡಳಿತಾಧಿಕಾರಿಗಳನ್ನು ನೇಮಿಸಿದ್ದಾರೆ. ಇದು ಒಂದು ಅವರು ಮಾಡಿದ ಮಹತ್ಕಾರ್ಯ.

ಐದನೇ ಮಹತ್ಕಾರ್ಯ ನಮ್ಮ ಮಂತ್ರಿ ಮಂಡಲದವರು ಮಾಡಿದ್ದು ಏನೆಂದರೆ ಈ ಪ್ರೊಹಿಬಿಷನ್ ಸಡಿಲಿಸಿದ್ದು ಮತ್ತು ಎಕ್ಸೈಜ್ ನಮ್ಮ ದೇಶದಲ್ಲಿ ಪ್ರಾರಂಭಿಸಿದ್ದು.

ಆರನೇ ಮಹತ್ಕಾರ್ಯ ಯಾವುದೆಂದರೆ ಅವಶ್ಯವಾದಂಥ ಜೀವನೋಪಾಯಕ್ಕೆ ಬೇಕಾಗಿರ ತಕ್ಕಂಥ ಆಹಾರಪದಾರ್ಥಗಳ ಬೆಲೆಗಳ ಏರಿಕೆಯನ್ನು ಯಾವ ದೃಷ್ಟಿಯಿಂದಲೂ ತಡೆಗಟ್ಟದೆ ಮಿತಿ ಮೀರಿ ಏರಲಿಕ್ಕೆ ಅವಕಾಶ ಕೊಟ್ಟಿದೆ.

ಏಳನೇ ಮಹತ್ಕಾರ್ಯ ರಾಜ್ಯದಲ್ಲಿ ಆಡಳಿತ ಇದೆ ಸರ್ಕಾರ ಇದೆ ಎಂದು ತೋರಿಸಿ ಕೊಡಲಿಕ್ಕಾಗಿ ವಿಧಾನ ಸೌಧ ಚಲೋ ಎನ್ನುವ ಒಂದು ಚಳುವಳಿಗೆ 5 ಸಾವಿರ ಪೋಲೀಸ್ ಬಂದೋಬಸ್ತು ಇಟ್ಟು ಚಳುವಳಿಗೆ ಧಕ್ಕೆ ತಂದಿದ್ದು ಮಧುಗಿರಿಯಲ್ಲಿ ನಡೆದ ಅಮಾನುಷ ಕೃತ್ಯ, ಶ್ರೀಮಾನ್ ವಿ. ಎನ್. ಪಾಟೀಲರು ಹೇಳಿರತಕ್ಕಂಥ ಮರ್ಕಲ್ ಮತ್ತು ಇನ್ನೂ ಇತರ ಅನೇಕ ಸ್ಥಳಗಳಲ್ಲಿ ಎಂದರೆ ದಾವಣಗೆರೆಯಲ್ಲಿ ರಾಜ್ಯದ ಬೌಂಡರಿ ಬಗ್ಗೆ ನಡೆದ ಚಳುವಳಿಯ ವಿಚಾರದಲ್ಲಿ ಸರ್ಕಾರ ಉಪಯೋಗಿಸಿದಂಥ ದಬ್ಬಾಳಿಕೆಯು ಒಂದು ಮಹತ್ಕಾರ್ಯ. ವಿಧಾನಸೌಧ ಚಲೋ ಚಳುವಳಿಗೆ 5 ಸಾವಿರ ಪೋಲೀಸರನ್ನು ನೇಮಿಸಿ ಚಳುವಳಿಗಾರರನ್ನು ಬರಲಾರದಂತೆ ನಿಲ್ಲಿಸಿದ್ದುದು ಒಂದು ಮಹತ್ಕಾರ್ಯ.

ಎಂಟನೇ ಮಹತ್ಕಾರ್ಯ ಸುಲಲಿತವಾಗಿ ನಡೆಯುತಕ್ಕ ಕಾರ್ಖಾನೆಗಳಲ್ಲಿ ಹಸ್ತಕ್ಷೇಪ ಮಾಡಿ ಕಾರ್ಖಾನೆಗಳನ್ನು ಬಂದ್ ಮಾಡಿದ್ದು. ಇವುಗಳ ಬಗ್ಗೆ ಸಾಕಷ್ಟು ವಿಷಯಗಳನ್ನು ನನ್ನಗೆಳೆಯ ಸದಸ್ಯರು ಈಗಾಲೇ ಹೇಳಿದ್ದಾರೆ.

ಒಂಭತ್ತನೇ ಮಹತ್ಕಾರ್ಯ ಸ್ವಜನರಿಗೆ ಏನೇನು ಸೌಲಭ್ಯಗಳು ಬೇಕೋ ಅವುಗಳನ್ನೆಲ್ಲಾ ಮಾಡಿಕೊಡುವುದಲ್ಲದೆ ಚುನಾವಣೆಗಳ ಮುಂಚಿತವಾಗಿ ಪ್ರಣಾಳಿಕೆಯಲ್ಲಿ ಹೇಳುವ ಎಲ್ಲಾ ವಿಷಯಗಳಿಗೂ ತಿಲಾಂಜಲಿ ಕೊಟ್ಟಿದ್ದಾರೆ. ಮಂತ್ರಿಮಂಡಲ ಬಂದು 9 ತಿಂಗಳು ಆಗಿದೆ. ಆ ಒಂಭತ್ತು ತಿಂಗಳಲ್ಲಿ ಮಾಡಿರತಕ್ಕದ್ದು 9 ಮಹತ್ಕಾರ್ಯಗಳ ಕೀರ್ತಿ ಮಂತ್ರಿಮಂಡಲಕ್ಕೆ ಸಲ್ಲತಕ್ಕವುಗಳು. ನಾವು ಚಿಕ್ಕವರಾಗಿರುವಾಗ ನಮ್ಮ ಪೂರ್ವಜರ ಕಾಲದಲ್ಲಿ ಮೂರು ಕಾಲಗಳು ಮಾತ್ರ ನೋಡುತ್ತಿದ್ದರು ಅಂದರೆ ಛಳಿಗಾಲ, ಮಳೆಗಾಲ, ಬೇಸಿಗೆ ಕಾಲ. ಈಗ 20 ವರ್ಷದ ಕಾಂಗ್ರೆಸ್ ರಾಜ್ಯದಲ್ಲಿ, ಒಂದು ಬರಗಾಲದ ಕಾಲವನ್ನೂ ಹೆಚ್ಚಿಸಿಕೊಂಡಿದ್ದಾರೆ ಎಂದರೆ ತಪ್ಪಾಗಲಾರದು. ಹೀಗಾಗಿ ಒಂದು ವರ್ಷಕ್ಕೆ 4 ಕಾಲಗಳು ಆಗಿವೆ. ಪ್ರತಿ ವರ್ಷವೂ ಇವರ ದುರಾಡಳಿತದಿಂದ ಬರಗಾಲವು ಉದ್ಭವಿಸಿದೆ. ಇಂತಹ ಪರಿಸ್ಥಿತಿಯನ್ನು ಹತೋಟಿಗೆ ತರಲಾರದೆ ಸರಿಯಾದ ಆಹಾರದ ಹಂಚಿಕೆ ಮಾಡಲಾರದೆ ತಾವು ಮಾಡತಕ್ಕ ಇಂಥ ಕಾರ್ಯಗಳನ್ನು ನೋಡಿದರೆ ನಮಗೆ ಬಹಳ ವ್ಯಸನವಾಗುತ್ತದೆ.

ಇನ್ನು ತುಂಗಭದ್ರ ಪ್ರಾಜೆಕ್ಟ್ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಹೈದ್ರಾಬಾದ್ ನಿಜಾಮರು ಇರುವ ಕಾಲಕ್ಕೆ ಇಂತಿಂಥಾ ಭಾಗಕ್ಕೆ ನೀರು ಬೇಕು ಎಂದು ಯೋಜನೆ ಮಾಡಿ, ಬರಗಾಲ ಪ್ರದೇಶ ಎಂದು ಯಾವುದನ್ನು ತಿಳಿದುಕೊಂಡಿದ್ದೇವೋ ಅದನ್ನು ಹೋಗಲಾಡಿಸಲು ಯಾವ ಯಾವ ಭಾಗಕ್ಕೆ ಈ ಯೋಜನೆಯಿಂದ ನೀರು ಕೊಡಬೇಕು ಅಂಥ ಕಡೆ ಕೊಟ್ಟು ಬರಗಾಲ ಇಲ್ಲದಂತೆ ಮಾಡಬೇಕೆಂದು ಯೋಚಿಸಿದ್ದರು. ಈಗ ಸರಕಾರ ಆ ಯೋಜನೆಯನ್ನು ಬದಲಾಯಿಸಿ, ಬರಗಾಲದ ಭಾಗವನ್ನು ಮುಂದುವರಿಸುವ ದೃಷ್ಟಿಯಿಂದ ಬರಗಾಲವಲ್ಲದ ಕಡೆಗೆ ಆ ಯೋಜನೆಯನ್ನು ತಂದಿದ್ದಾರೆ. ಈಗ ಆಗುತ್ತಾ ಇರುವುದು ಸರ್ಕಾರದ ಯಾವ ನೀತಿ ಎಂದು ಕೇಳಬೇಕು. 9 ತಿಂಗಳ ರಾಜ್ಯದಲ್ಲಿ ಮುಖ್ಯವಾಗಿ ಮಾಡಿರತಕ್ಕಂಥ ಒಂಭತ್ತು ಮಹತ್ಕಾರ್ಯ ಇವು. ನಮ್ಮ ದೇಶ ವಿಶಾಲ ಮೈಸೂರಾಗಿ 10 ವರ್ಷವಾದರೂ ಕನ್ನಡ ಭಾಷೆಯನ್ನು ನಮ್ಮ ರಾಜ್ಯ ಭಾಷೆಯಾಗಿ ಮಾಡತಕ್ಕ ಸುಯೋಗ ನಮ್ಮ ಜನತೆಗೆ ಬರಲಿಲ್ಲ. ಕನ್ನಡ ಭಾಷೆಯನ್ನು ರಾಜ್ಯಭಾಷೆಯನ್ನಾಗಿ ಮಾಡದೇ ಇರುವುದು ಈ ಮಂತ್ರಿಮಂಡಲದ ಒಂದು ದೊಡ್ಡ ಲೋಪ ಎಂದು ಹೇಳಬಯಸುತ್ತೇನೆ. ಅದೂ ಅಲ್ಲದೆ ಮೈಸೂರು ರಾಜ್ಯ ರೀಆರ್ಗನೈಸೇಷನ್ ಆಗಿ 10 ವರ್ಷವಾದರೂ ಇದರ ಹೆಸರು ಕರ್ನಾಟಕ ಎಂದು ಇಡಲಿಕ್ಕೆ ಇದುವರೆಗೂ ಯಾವ ಪ್ರಯತ್ನವನ್ನೂ ಈ ಸರಕಾರ ಮಾಡಲಿಲ್ಲ, ಮಾಡುತ್ತಾ ಇಲ್ಲ. ನಮ್ಮ ರಾಜ್ಯದ ಹೆಸರು ಕರ್ನಾಟಕ ರಾಜ್ಯ ಎಂದು ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಮಹಾಜನ್ ಕಮೀಷನ್ ರಿಪೋರ್ಟಿನಲ್ಲಿ ''ಕರ್ನಾಟಕ, ಕರ್ನಾಟಕ'' ಎಂದು ಬರೆಯುತ್ತಾರೆ. ತಾವು ಮಾತ್ರ ''ಮೈಸೂರು, ಮೈಸೂರು ಎಂದು ಹೆಸರಿಟ್ಟಿದ್ದೀರಿ. ಈ ದೋಷ ತಮ್ಮ ಮೇಲೆ ಬರತಕ್ಕಂಥಾದ್ದು.

ಶ್ರೀ ಕೆ. ಪುಟ್ಟಸ್ವಾಮಿ (ಆರೋಗ್ಯ ಮತ್ತು ವಸತಿ ನಿರ್ಮಾಣ ಶಾಖೆಗಳ ಮಂತ್ರಿಗಳು).—ಮೈಸೂರು ಎಂದು ಕರೆದರೆ ದೋಷ ಏತಕ್ಕೆ ಬರುತ್ತದೆ.

ಶ್ರೀ ಎಂ. ನಾಗಪ್ಪ.—ಕರ್ನಾಟಕ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಬೇಕಾಗಿತ್ತು ಎಲ್ಲಾ ಭಾಷಾವಾರು ಪ್ರಾಂತ ರಚನೆ ಮಾಡಬೇಕೆಂದು, ಎಲ್ಲರೂ ತಮ್ಮ ತಮ್ಮ ರಾಜ್ಯದ ಭಾಷೆಯ ಮೇಲಿಂದರೇ ತಮ್ಮ ರಾಜ್ಯದ ಹೆಸರನ್ನು ಇಟ್ಟುಕೊಂಡಿದ್ದಾರೆ.'' ಆದರೆ ನಮ್ಮ ರಾಜ್ಯ ಸರ್ಕಾರ ''ಮೈಸೂರು'' ಎಂದು ಇಟ್ಟುಕೊಂಡಿದ್ದು ಬಹಳ ಆಶ್ಚರ್ಯಕರವಾದ ಸಂಗತಿ.

ಮುಖ್ಯವಾಗಿ ಕೊನೆಯ ವಿಷಯ ಹೇಳಬೇಕಾದರೆ, ಮೊದಲನೆ ದೋಷ ನಮ್ಮ ಸರ್ಕಾರಕ್ಕೆ ಬರತಕ್ಕದ್ದು ಏನೆಂದರೆ ನಮ್ಮ ವಿರೋಧ ಪಕ್ಷದವರೂ ಎಲ್ಲರೂ ಸೇರಿ ಈ ಏಕ ಸದಸ್ಯ ಆಯೋಗ ಬೇಡ ಎಂದು ಅದಕ್ಕೆ ವಿರೋಧ ಮಾಡಿದೆವು ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಒಂದು ದೋಷದಿಂದ ತಮ್ಮ ಒಂದು ಅಧಿಕಾರದಿಂದ, ಅದನ್ನು ಒಪ್ಪಿಕೊಂಡು ಬಂದು ಇವೊತ್ತಿನ ದಿವಸ ನಮ್ಮ ಜನತೆಯಮೇಲೆ ತಮ್ಮ ತಪ್ಪಿನ ದೋಷ ಹೇರಿದ್ದಾರೆ. ಅದಕ್ಕೆಲ್ಲಾ ಕಾರಣರು ತಾವೇ ? ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯಿಸಿಕೊಂಡಂಥ ನಿಲುವನ್ನು ಕಾರ್ಯರೂಪಕ್ಕೆ ತರಲಿಕ್ಕೆ ನಿಮಗೆ ಎಷ್ಟು ಅರ್ಹತೆ ಇದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಿರಿ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಶ್ರೀ ಚವಾಣರು ಹೇಳಿದ್ದಾರೆ, ಏನೆಂದರೆ ಎಲೆಕ್ಷನ್ ಮುಂದೆ ಬಂದಿದೆ, ವಿರೋಧ ಪಕ್ಷದವರು ನಮ್ಮ ನಿಲುವಿನ ಲಾಭ ಪಡೆದುಕೊಂಡು, ಅವರು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿರಬಹುದು ಆದಕ್ಕಾಗಿ ರೆಸಲ್ಯೂಷನ್ ನಾವೆಲ್ಲರೂ ಒಪ್ಪತಕ್ಕದು ಎಂದು. ಆ ಮಾತನ್ನು ಈ ದಿವಸ ಒಂದೇ ಸಂಸ್ಥೆಯಲ್ಲಿದ್ದು ನಿಮ್ಮ ಕಾಂಗ್ರೆಸ್ ಬಂಧುಗಳಿಗೆ ನೀವು ಹೇಳಿ. ನೀವು ಮಾಡಿದಂಥ ರೆಸಲ್ಯೂಷನ್‌ಗೆ ವಿರೋಧ ಹೋಗುತ್ತಾ ಇದ್ದೀರಿ, ತಾವು ಯಾವ ತರಹ ಕ್ರಮ ತೆಗೆದುಕೊಳ್ಳಲಿಕ್ಕೆ ಸಿದ್ಧವಾಗಿದ್ದೀರಿ ಎಂದು ಅವರನ್ನು ಕೇಳಿ. ಇಡೀ ವಿರೋಧ ಪಕ್ಷದವರು ಏಕ ಸದಸ್ಯ ಕಮೀಷನ್‌ಗೆ ವಿರೋಧ ಮಾಡಿದ್ದರೂ ಅದರ ವರದಿಗೆ ಸಮ್ಮತಿ ಕೊಡದೆ ಹೋದರೆ ದೋಷ ವಿರೋಧ ಪಕ್ಷದಮೇಲೆ ಹಾಕಬಹುದು ಎಂದು ನಿಮ್ಮ ಜೊತೆಗೆ ಬಂದಿದ್ದೇವೆ. ನಿಮಗೆ ಧೈರ್ಯ ಇದ್ದರೆ, ಶಕ್ತಿ ಇದ್ದರೆ, ಮಹಾಜನ್ ಅವರು ಕೊಟ್ಟಂಥ ರಿಪೋರ್ಟನ್ನು ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿ ಇದೆ ಎಂದರೆ, ಕಾರ್ಯರೂಪಕ್ಕೆ ತರಬೇಕು. ತರದೇ ಇದ್ದರೆ ನೀವೇ ಅದಕ್ಕೆ ಕಾರಣರು, ಇಡೀ ಮೈಸೂರು ರಾಜ್ಯದ ಜನತೆಗೆ ಮೋಸ ಮಾಡಿದ ಹಾಗಾಗುತ್ತದೆ ಎಂದು ನಾನು ಭಾವಿಸುತ್ತೇನೆ.

9·00 A.M.

ಸ್ವಾಮಿ, ಇವರಿಗೆ ಪಾರ್ಲಿಮೆಂಟಿನಲ್ಲೂ ಕಾಂಗ್ರೆಸ್ ಮೆಜಾರ್ಟಿಯಲ್ಲಿ ಇದೆ, ಇಲ್ಲಿಯೂ ಮೆಜಾರ್ಟಿ ಇದೆ. ಇಷ್ಟಿದ್ದರೂ ಇವರಿಗೆ ನಮ್ಮ ದೇಶದಲ್ಲಿರತಕ್ಕ ನಮ್ಮ ಜನರಿಗೆ ಅನುಕೂಲಗಳನ್ನು ಮಾಡುವುದಕ್ಕಾಗಲಿಲ್ಲ, ಆಡಳಿತವನ್ನೂ ಸರಿಯಾಗಿ ನಡೆಸುವುದಕ್ಕಾಗಲಿಲ್ಲ. ಆದುದರಿಂದ ಈ ಪಕ್ಷಕ್ಕೆ ರಾಜ್ಯವಾಳತಕ್ಕ ಯೋಗ್ಯತೆಯಿಲ್ಲ, ಇವರು ಕೂಡಲೆ ಆಡಳಿತವನ್ನು ಬಿಟ್ಟು ಹೋಗಬೇಕೆಂದು ಹೇಳಿ, ಅಧ್ಯಕ್ಷರು ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ಮಂಡಿಸಿರತಕ್ಕ ಅವಿಶ್ವಾಸ ನಿರ್ಣಯದ ನಿಲುವನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿದೆ. ಈ ಸಂದರ್ಭದಲ್ಲಿ ನಾನು ಕೆಲವು ಮಾತುಗಳನ್ನು ಆಡಲು ಇಷ್ಟಪಡುತ್ತೇನೆ ಈ ದಿವಸ ವಿರೋಧ ಪಕ್ಷದವರಿಗೆ ಬಹುಶಃ ನಮ್ಮ ಕರ್ಣಾಟಕ ರಾಜ್ಯ ಇಡೀ ಅಖಿಲ ಭಾರತದಲ್ಲೇ ಒಂದು ಉನ್ನತ ಸ್ಥಾನವನ್ನು ಗಳಿಸಿದ್ದು, ಅಂಥಾ ಒಂದು ಉನ್ನತ ಸ್ಥಾನಕ್ಕೆ ನಮ್ಮ ಮಾನ್ಯ ನಾಯಕರು ಹೋಗತಕ್ಕ ಕಾಲದಲ್ಲಿ ಅವರಿಗೊಂದು ಇಂಥಾ ಉಡುಗರೆಯನ್ನು ಕೊಟ್ಟು ಕಳುಹಿಸಬೇಕೆಂಬ ಉದ್ದೇಶದಿಂದ ಇದನ್ನು ತಂದಿದ್ದಾರೇನೋ ಎಂದು ನನಗನಿಸುತ್ತಿದೆ. ನಾವಾದರೋ ನಮ್ಮ ನಾಯಕರ ವ್ಯಕ್ತಿತ್ವ ಅಷ್ಟು ದೊಡ್ಡದೆಂದು ತಿಳಿದಿದ್ದೇವೆ, ಅದನ್ನು ಚೆನ್ನಾಗಿ ಅರಿತವರಾಗಿದ್ದೇವೆ. ಇಂಥಾ ಒಂದು ಸಂದರ್ಭದಲ್ಲಿ ಅವರಿಗೊಂದು ಇಡೀ ಕರ್ಣಾಟಕಕ್ಕೆ ಕೀರ್ತಿ ಬರುವಂಥ ಒಂದು ಒಳ್ಳೆಯ ಮಾತನಾಡಬೇಕಾದ್ದು ಅಗತ್ಯವಾಗಿತ್ತು ಅದನ್ನು ಬಿಟ್ಟು ಅವರ ಮಂತ್ರಿಮಂಡಲಧಿಂದ ದೇಶದಲ್ಲೆಲ್ಲಾ ಬಹಳ ಅನ್ಯಾಯಗಳು ನಡೆದಿವೆ ಎಂದು ಅಪಪ್ರಚಾರ ಮಾಡಿ ಅವರು ಆ ಸ್ಥಾನಕ್ಕೆ ಅಂದರೆ ಅಖಿಲ ಭಾರತದ ಒಂದು ಅಧ್ಯಕ್ಷ ಸ್ಥಾನಕ್ಕೆ ಅವರನ್ನು ಕೂಡಿಸಬಾರದೆಂಬ ಉದ್ದೇಶದಿಂದ ಈ ರೀತಿಯಾಗಿ ಮಾತನಾಡುತ್ತಿರುವಂತೆ ನನಗೆ ಕಂಡುಬರುತ್ತಿದೆ. ಈ ದಿವಸ ದೇಶದಲ್ಲಿರತಕ್ಕ ಆಡಳಿತವೆಲ್ಲಾ ಕೆಟ್ಟಿದೆ ಎಂದು ಹೇಳುತ್ತಿದ್ದಾರೆ. ಆದರೆ ದೇಶದ ಆಡಳಿತವನ್ನು ನಡೆಸುತ್ತಿರುವ ಅಧಿಕಾರಗಳಲ್ಲಿ ನೌಕರರಲ್ಲಿ ಒಳ್ಳೆ

ಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಆದರೆ ಎಲ್ಲರನ್ನೂ ಕೆಟ್ಟವರೆಂದು ಹೇಳುವುದಕ್ಕಾಗುವುದಿಲ್ಲ. ಅಂದ ಹಾಗೆ ಅವರೆಲ್ಲರೂ ಕೆಟ್ಟ ಕೆಲಸಗಳನ್ನೆಲ್ಲಾ ಮಾಡುತ್ತಾರೆಂದು ಯಾರೂ ಹೇಳಲಾರರು ಇಲ್ಲಿರತಕ್ಕ ಮಾನ್ಯ ಸದಸ್ಯರೆಲ್ಲರೂ ಒಂದೊಂದು ಕ್ಷೇತ್ರದಿಂದ ಚುನಾಯಿತರಾಗಿ ಬಂದಿರತಕ್ಕವರಾಗಿದ್ದಾರೆ. ಮತ್ತು ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಅನುಕೂಲಕ್ಕಾಗಿ ನಾವೆಲ್ಲರೂ ಇಲ್ಲಿ ಹೋರಾಟ ಮಾಡುತ್ತಿದ್ದೇವೆ. ನಮ್ಮ ಬೇಡಿಕೆಗಳಿಗೆ ಅನುಸಾರವಾಗಿ ಸರ್ಕಾರದವರು ಇಲ್ಲಿ ಅಷ್ಟೋ ಇಷ್ಟೋ ಹಣವನ್ನು ಮಂಜೂರು ಮಾಡುತ್ತಾರೆ. ಹಾಗೆ ಇಲ್ಲಿ ಮಂಜೂರಾದ ಹಣ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಸರಿಯಾಗಿ ವಿನಿಯೋಗವಾಗುತ್ತಿದೆಯೋ ಅಲ್ಲಿನ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೋ ಇಲ್ಲವೇ ಎನ್ನತಕ್ಕ ವಿಚಾರವನ್ನು ನಾವೆಲ್ಲರೂ ಒಂದು ರಾಷ್ಟ್ರೀಯ ಮನೋಭಾವದಿಂದ ನೋಡಿ ಎಲ್ಲಿ ಯಾವ ಅಧಿಕಾರಿ ಸರಿಯಾಗಿ ಕೆಲಸ ಕಾರ್ಯಗಳನ್ನು ಮಾಡದೆ ಇದ್ದರೆ ಅದಕ್ಕೆ ಮಂತ್ರಿಗಳನ್ನು ಇಲ್ಲಿ ಟೀಕೆ ಮಾಡುವುದರಿಂದ ರಾಷ್ಟ್ರಕ್ಕೆ ಇದರಿಂದ ಒಳ್ಳೆಯದಾಗುವುದಿಲ್ಲ. ಈ ದಿವಸ ಸರ್ಕಾರದವರು ದೇಶದಲ್ಲಿ ವಿಜಿಲೆನ್ಸ್ ಕಮಿಷನ್—ಆಂಟೀಕರಪ್ಷನ್ ಎಂಬುದಾಗಿ ಎಷ್ಟೆಷ್ಟೋ ಸಮಿತಿಗಳನ್ನು ನೇಮಕ ಮಾಡಿದ್ದಾಗ್ಯೂ ಸರ್ಕಾರಕ್ಕೆ ಬರಬೇಕಾದ ತೆರಿಗೆಗಳು ಸರಿಯಾಗಿ ವಸೂಲಾಗುತ್ತಿಲ್ಲ. ಇದಕ್ಕೆಲ್ಲಾ ಅಧಿಕಾರಿಗಳೇ ಕಾರಣರೋ, ಮಂತ್ರಿಗಳು ಕಾರಣರೊ? ಈ ದಿವಸ ರಾಜ್ಯದಲ್ಲಿ ಪಂಚಾಯಿತಿ ರಾಜ್ಯ ಬಂದಿದೆ. ಅದರ ಆಡಳಿತವನ್ನು ನಡೆಸಲು ಚುನಾಯಿತ ಪ್ರತಿನಿಧಿಗಳಿದ್ದಾರೆ. ಅಲ್ಲಿಯ ಅಧಿಕಾರಿಗಳೇನಾದರೂ ಒಂದು ವೇಳೆ ತಪ್ಪು ಮಾಡಿದ್ದರೆ ಅವರಿಗೆ ಒಂದು ಒಳ್ಳೆಯ ರೀತಿಯಲ್ಲಿ ಮಾರ್ಗದರ್ಶನ ಮಾಡಿಕೊಟ್ಟು ಅವರು ದೇಶಕ್ಕೆ ಒಳ್ಳೆಯ ಕೆಲಸ ಮಾಡುವಂತೆ ಅದಕ್ಕೇನು ಏರ್ಪಾಡನ್ನು ಮಾಡಬೇಕೋ ಅದನ್ನು ಮಾಡದೆ, ಅಲ್ಲಿಯ ತಪ್ಪನ್ನು ಅಲ್ಲೇ ಸರಿಪಡಿಸದೆ ಇಲ್ಲಿಗೆ ಬಂದು ಮಂತ್ರಿಗಳು ಕೆಲಸ ಸರಿಯಾಗಿ ಮಾಡುತ್ತಿಲ್ಲ ಎಂದರೆ ಇದಕ್ಕೇನು ಹೇಳಬೇಕು? ಪ್ರತಿಯೊಂದು ಜಿಲ್ಲೆ, ತಾಲ್ಲೂಕುಗಳಿಗೆ ಮತ್ತು ಹಳ್ಳಿಗೆ ಮಂತ್ರಿಗಳೇ ಬಂದು ಅಲ್ಲಿಯ ತಪ್ಪುಗಳನ್ನು ಸರಿಪಡಿಸುವುದಕ್ಕಾಗುವುದಿಲ್ಲ. ಅಥವಾ ಇದಕ್ಕಾಗಿ ಕಾಂಗ್ರೆಸ್ ಸಂಸ್ಥೆಯಿಂದ ಅಧಿಕಾರಿಗಳನ್ನು ನೇಮಕ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಈ ದಿವಸ ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ನಾನ್ ಗೆಜೆಟೆಡ್ ನೌಕರರೇನಿದ್ದಾರೆ ಅವರನ್ನು ಒಂದು ಕಾನೂನು ಚೌಕಟ್ಟಿನಲ್ಲಿ ಆರಿಸಲಾಗಿದೆ. ಆ ನೌಕರರಾದರೋ ನಮ್ಮ ಮತ್ತು ವಿರೋಧ ಪಕ್ಷಗಳ ಹಾಗೂ ದೇಶದ ಜನತೆಗೆ ಸಂಬಂಧಪಟ್ಟವರೋ ಅಥವಾ ವಿಶ್ವಾಸಿಗಳೋ ಆಗಿರುತ್ತಾರೆ. ಅವರೇನೂ ಹೊರಗಿನಿಂದ ಬಂದವರಲ್ಲ, ಇಲ್ಲಿಯವರೇ ಹೀಗೆ ಆಡಳಿತವನ್ನು ಇಲ್ಲಿ ಒಂದು ಸುವ್ಯವಸ್ಥೆಯಿಂದ ನಡೆಸುತ್ತಿದ್ದರೂ ಅದು ಚೆನ್ನಾಗಿದ್ದರೂ ಕೂಡ ಕುಸಿದು ಬೀಳಲಿ ಅಂತಲೋ ಏನೋ ವಿರೋಧ ಪಕ್ಷದವರು ಇಂಥ ಒಂದು ಉದ್ದೇಶವನ್ನಿಟ್ಟುಕೊಂಡು ಮಾತನಾಡುತ್ತಿದ್ದರೂ ಇರಬಹುದೆಂದು ನನಗನಿಸುತ್ತಿದೆ, ಆದುದರಿಂದ ಈ ದಿವಸ ವಿರೋಧ ಪಕ್ಷದವರು ವ್ಯಕ್ತಪಡಿಸುತ್ತಿರುವ ವಿಚಾರಗಳಲ್ಲಿ ಏನು ಅಡಗಿದೆ ಎಂಬುದನ್ನು ಸಾರ್ವಜನಿಕರು ಚೆನ್ನಾಗಿ ಬಲ್ಲರು. ಈ ದಿವಸ ಇಲ್ಲಿ ನಾವೆಲ್ಲರೂ ಇಷ್ಟು ಹೇಳುತ್ತಿದ್ದೇವೆ—ನೌಕರರೆಲ್ಲರೂ ನಮ್ಮವರೇ ಆಗಿದ್ದಾರೆ. ಆದರೂ ಸರ್ಕಾರಕ್ಕೆ ಬರಬೇಕಾದ ಇನ್‌ಕಂಟ್ಯಾಕ್ಸ್ ಮತ್ತು ಮಾರಾಟ ತೆರಿಗೆಯ ಹಣವೆಲ್ಲಾ ಸೋರಿ ಹೋಗುತ್ತಿದೆ. ಆ ಹಣ ಸರಿಯಾಗಿ ವಸೂಲಾಗಿದ್ದರೆ ನಮ್ಮ ಸರ್ಕಾರ ಯಾವ ಒಂದು ಹೊಸ ತೆರಿಗೆಯನ್ನೂ ಹಾಕಬೇಕಾದ ಪ್ರಮೇಯವಿರಲಿಲ್ಲ. ಅಲ್ಲಿ ತೆರಿಗೆಯನು ವಸೂಲ್ಮಾಡತಕ್ಕ ಜನರು ಯಾರಿದ್ದಾರೋ ಅವರಿಗೆ ಒಳ್ಳೆಯ ದಾರಿಯಲ್ಲಿ ನಡೆಯುವುದಕ್ಕೆ ಅವರಿಗೊಂದು ಒಳ್ಳೇ ಮಾರ್ಗವನ್ನು ಹಾಕಿಕೊಡತಕ್ಕದ್ದು ನಮ್ಮೆಲ್ಲರ ಕರ್ತವ್ಯವಾಗಿದೆ; ಬರೀ ಸರ್ಕಾರವೊಂದರಿಂದಲೇ ಏನೂ ಸಾಧ್ಯವಿಲ್ಲ. ಅದನ್ನು ಮಾಡಿದರೆ ಸರ್ಕಾರಕ್ಕೂ ಹೆಚ್ಚಿನ ವರಮಾನ ಬರುತ್ತದೆ. ನೌಕರರಿಗೂ ಒಳ್ಳೆಯ ಸಂಬಳ ಸಾರಿಗೆಗಳನ್ನು ಕೊಡಬಹುದು. ದೇಶದ ಉತ್ಪತ್ತಿ ಜಾಸ್ತಿಯಾದರೆ ಆದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ. ಈ ಎಲ್ಲಾ ಸಮಸ್ಯೆಗಳೂ ಅದೇನೋ ಹೇಳುತ್ತಾರಲ್ಲಾ ಮದುವೆಯಾಗದ ವಿನಾ ಹುಚ್ಚು ಬಿಡದು—ಹುಚ್ಚು ಬಿಡದ ವಿನಾ ಮದುವೆ ಯಾಗದು, ಎಂದು ಹಾಗಾಗಿದೆ. ನೌಕರರ ಸಂಬಳ ಜಾಸ್ತಿಯಾಗಬೇಕಾದರೆ ದೇಶದ ವರಮಾನ ಜಾಸ್ತಿಯಾಗಬೇಕು. ಅದಕ್ಕಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಾವು ನಮ್ಮ ನಮ್ಮ ಕರ್ತವ್ಯಗಳನ್ನು ಸರಿಯಾಗಿ ಪಾಲನೆ ಮಾಡಿಕೊಂಡು ಅಲ್ಲಿಯ ನೌಕರರಿಗೆ ಒಳ್ಳೆಯ ಮಾರ್ಗ ಬೋಧನೆ ಮಾಡಬೇಕಾದ್ದು ನಮ್ಮೆಲ್ಲರ ಜವಾಬ್ದಾರಿ. ಒಂದು ರಾಷ್ಟ್ರೀಯ ಮನೋಭಾವನೆಯಿಂದ ನಾವೆಲ್ಲರೂ ಈ ಕಾರ್ಯವನ್ನು ಮಾಡಬೇಕಾಗಿದೆ. ಇದು ಒಬ್ಬೊಬ್ಬರಿಂದಾಗತಕ್ಕ ಕೆಲಸವಲ್ಲ. ಈ ದಿವಸ ನಾವಿಲ್ಲಿ ಕುಳಿತು ಹೀಗೆಲ್ಲಾ ಚರ್ಚೆ ಮಾಡುತ್ತಿರುವುದನ್ನು ಕೇಳಿಕೊಂಡು ನೌಕರರೂ ಮತ್ತು ಅಧಿಕಾರಿಗಳು ಅವರವರ ಕಛೇರಿಯಲ್ಲಿ ಸೇರಿಕೊಂಡು ಅವರೊಂದು ಗುಂಪು ಕಟ್ಟಿಕೊಂಡು ಜಾತಿ ವೈಷಮ್ಯಗಳನ್ನು ಸೂಚಿಸುತ್ತಾ ಮಾತುಗಳನ್ನಾಡುತ್ತಿರುವುದನ್ನು ನಾನು ಅನೇಕ ಕಡೆ ಕೇಳಿದ್ದೇನೆ. ಅನೇಕ ಕಡೆಗಳಲ್ಲಿ ಈ ಪ್ರಸಂಗಗಳು ನಡೆಯುತ್ತಿವೆ. ನಾನು ಒಂದಾವರ್ತಿ ಬಸ್ಸಿನಲ್ಲಿ ಪ್ರಯಾಣ ಮಾಡು

(ಶ್ರೀ ಕೆ. ಎನ್. ವೀರಪ್ಪಗೌಡ)

ತ್ತಿದ್ದಾಗ ಅಲ್ಲಿ ಸಾಮಾನ್ಯವಾಗಿ ಕಾಂಗ್ರೆಸ್ ಸರ್ಕಾರವನ್ನು ಟೀಕೆ ಮಾಡುವುದು ಜನರ ಸ್ವಭಾವವಾಗಿದೆ. ನಾನು ಅಲ್ಲಿ ನೋಡುತ್ತಿದ್ದ ಹಾಗೇ ಆ ಬಸ್ ಕಂಡಕ್ಟರು ಅಲ್ಲಿ ಬಸ್ ಹತ್ತುವುದಕ್ಕೆ ಬಂದ ಇಬ್ಬರಿಗೆ ಟಿಕೆಟ್ಟನ್ನೇ ಕೊಡಲಿಲ್ಲ. ನಾನು ಏತಕ್ಕೆ ಅವರಿಗೆ ಟಿಕೆಟ್ಟನ್ನು ಕೊಡಲಿಲ್ಲಾ ಎಂದು ಕೇಳಿದ್ದಕ್ಕೆ ಓಹೋ ಇಲ್ಲಿ ಯಾರೋ ಒಬ್ಬರು ಬೃಹಸ್ಪತಿಗಳು ಬಂದಿದ್ದಾರೆ; ಅಲ್ಲಿ ಶರಾವತಿಯಲ್ಲಿ ಕೋಟಿಗಟ್ಟಲೆ ಹೋದರೂ ಚಿಂತೆಯಿಲ್ಲ ಇಲ್ಲಿ ಇಬ್ಬರಿಗೆ ಟಿಕೆಟ್ಟನ್ನು ಏಕೆ ಕೊಡಲಿಲ್ಲಾ ಎಂದು ಕೇಳುತ್ತಿದ್ದಾರೆ—ಎಂದು ಆ ಬಸ್ಸಿನ ಕಂಡಕ್ಟರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ. ಆಗ ಬಸ್ಸಿನಲ್ಲಿದ್ದವರೆಲ್ಲಾ ಆ ಕಂಡಕ್ಟರ ಕಡೆಗೆ ಮಾತನಾಡಲಾರಂಭಿಸಿದರು; ಅದನ್ನು ನೋಡಿ ಇದು ಸರಿಯಾದ ಸ್ಥಳವಲ್ಲ ಎಂದು ನಾನೇ ಸುಮ್ಮನಾದೆ. ಆ ಬಸ್ಸು ತುಮಕೂರಿನಿಂದ—ಬೆಂಗಳೂರಿಗೆ ಬರುತ್ತಿತ್ತು. ನಾನು ಆ ಕಂಡಕ್ಟರನ್ನು ಏಕಯ್ಯಾ ಆ ಜನರಿಗೆ ಟಿಕೆಟ್ಟನ್ನು ಕೊಡದೆ ಆ ದುಡ್ಡನ್ನು ಜೇಬಿಗೆ ಬಿಟ್ಟೆ ಎಂದು ಕೇಳಿದ್ದಕ್ಕೆ ಅವನು ತನ್ನ ತಪ್ಪನ್ನು ಕೈಬಿಟ್ಟ ತನಗೆ ಸಂಬಂಧವಿಲ್ಲದ ವಿಚಾರಕ್ಕೆ ಕೈಹಾಕಿದ. ಹೀಗೆ ನಾವು ಪ್ರಯಾಣ ಮಾಡತಕ್ಕ ಬಸ್ಸಿನಲ್ಲೇ ಜನರಿಗೆ ಆ ಕಂಡಕ್ಟರು ಸರಿಯಾಗಿ ಟಿಕೆಟ್ಟನ್ನು ಕೊಡುತ್ತಾನೆಯೋ ಇಲ್ಲವೇ ಎಂಬುದನ್ನು ನೋಡುವುದಕ್ಕಾಗುತ್ತಿಲ್ಲ. ಇಲ್ಲಿ ಬಂದು ಸರ್ಕಾರವನ್ನು ಟೀಕೆ ಮಾಡಿದರೇನು ಪ್ರಯೋಜನ? ನಮ್ಮೆಲ್ಲರಲ್ಲೂ ದೇಶಾಭಿಮಾನ ಉಂಟಾದಲ್ಲಿ ಆಡಳಿತವನ್ನು ಸರಿಪಡಿಸುವುದು ಬಹಳ ಸುಲಭ. ಅದಕ್ಕೆ ಹೆಚ್ಚಿನ ಕಲಾವಾಕಾಶ ಬೇಕಾಗಿಲ್ಲ. ನಾವೆಲ್ಲರೂ ಇಂಥಾ ಕಾರ್ಯಗಳಲ್ಲಿ ಭಾಗವಹಿಸುವುದನ್ನು ಬಿಟ್ಟು ಇಲ್ಲಿ ಮಂತ್ರಿಗಳನ್ನು ಟೀಕೆ ಮಾಡಿದರೆ ಅದು ಒಳ್ಳೆಯದಲ್ಲ. ನಾವು ಮೊದಲು ನಮ್ಮ ಕ್ಷೇತ್ರಗಳಲ್ಲಿರತಕ್ಕ ಅಧಿಕಾರಿಗಳನ್ನು ಒಳ್ಳೆಯವರನ್ನಾಗಿ ಮಾಡಬೇಕು. ಒಳ್ಳೆಯ ಅಧಿಕಾರಿಗಳು ಅನೇಕ ಕಡೆ ಇದ್ದಾರೆ. ದೇಶದಲ್ಲಿ ಎಲ್ಲಿಯೋ ಎಂಟು ಹತ್ತು ಕಡೆಗಳಲ್ಲಿ ಲಂಚ ತೆಗೆದುಕೊಳ್ಳತಕ್ಕ ಅಧಿಕಾರಿಗಳಿದ್ದರೆ ದೇಶದಲ್ಲಿರತಕ್ಕವರೆಲ್ಲಾ ಲಂಚಕೋರ ಅಧಿಕಾರಿಗಳೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ಎಲ್ಲರನ್ನೂ ಟೀಕೆ ಮಾಡಿದರೆ ಒಳ್ಳೆಯವರಿಗೆ ಕೆಲಸ ಮಾಡುವುದಕ್ಕೆ ಮನಸ್ಸಾದರೂ ಹೇಗೆ ಬರುತ್ತದೆ? ಯಾರು ತಪ್ಪು ಮಾಡುತ್ತಾನೆ ಅವನನ್ನು ಹಿಡಿದು ಶಿಕ್ಷೆ ಮಾಡತಕ್ಕ ಶಕ್ತಿ ನಿಮಗೆ ಇಲ್ಲ. ನಿಮ್ಮಲ್ಲಿ ಬಹಳ ಮೋಸ, ದಗ ಇದೆ. ಯಾರು ಏನೇ ತಪ್ಪು ಮಾಡಿದರೂ ಕೂಡ ನೀನು ಹೀಗೆ ಮಾಡಿದ್ದಿ, ಹೀಗೆ ಮಾಡಬೇಡ ಎಂದು ಹೇಳುವುದು ಸ್ವಾಭಾವಿಕ, ಆಮೇಲೆ ಬರವಣಿಗೆ, ಅದು ಬಿಟ್ಟು ಶಿಕ್ಷೆಯನ್ನೇ ಮಾಡುವುದು ಸರಿಯೇನು ಎಂದು ಕೇಳುತ್ತೇನೆ.

ಇಷ್ಟು ಮಾತನಾಡಲು ತಾವು ನನಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ನಾನು ತಮಗೆ ವಂದಿಸುತ್ತಾ, ಮಾನ್ಯ ಸ್ನೇಹಿತರು ಅಧಿಕಾರಿಗಳ ಮೇಲಾಗಲಿ ಮಂತ್ರಿಗಳ ಮೇಲಾಗಲಿ ಮಾತನಾಡುವ ಸಂದರ್ಭದಲ್ಲಿ ಯಾವ ಮಂತ್ರಿ ತಪ್ಪು ಮಾಡಿದ್ದಾರೆ, ಇಂತಹ ಕಡೆ ಇಂತಹ ತಪ್ಪು ಮಾಡಿದ್ದಾರೆ ಎಂದು ಹೇಳತಕ್ಕ ಧೈರ್ಯ ಎಲ್ಲರಲ್ಲೂ ಇರಲಿ, ಯಾವ ಒಬ್ಬ ಅಧಿಕಾರಿಯಾಗಲಿ, ಗುಮಾಸ್ತೆಯಾಗಲಿ ತಪ್ಪು ಮಾಡಿದಾಗ ಅವನನ್ನು ಒಳ್ಳೆಯ ಮಾರ್ಗಕ್ಕೆ ಎಳೆಯುತಕ್ಕ ಅವಕಾಶ ಹಾಗೂ ಹೇಳತಕ್ಕ ಧೈರ್ಯ ತಮಗೆ ಬರಲಿ, ಆ ರೀತಿ ಮಾಡಿದ್ದೇ ಆದರೆ ತಮ್ಮಲ್ಲಿ ಸತ್ಯಸಂಧತೆ ಇರುವುದಕ್ಕೆ ಅವಕಾಶವಾಗುತ್ತದೆ ಎಂದು ಈ ಸಂದರ್ಭದಲ್ಲಿ ಎಲ್ಲರನ್ನೂ ಪ್ರಾರ್ಥಿಸಿ ಇದು ಯಾರೊಬ್ಬರಿಂದ ಆಗತಕ್ಕ ಕೆಲಸವಲ್ಲ, ಎಲ್ಲರೂ ಈ ಕಾರ್ಯದಲ್ಲಿ ಸಹಕಾರ ಮಾಡಬೇಕು ಇಲ್ಲದೇ ಹೋದಲ್ಲ ದೇಶ ಅಧೋಗತಿಗೆ ಹೋಗುತ್ತದೆ ಎಂದು ಹೇಳಿ ಒಟ್ಟಿನಲ್ಲಿ ಮಂತ್ರಿಮಂಡಲದ ಕಾರ್ಯದಲ್ಲಿ ಅವರು ಮಾಡತಕ್ಕ ಕೆಲಸದಲ್ಲಿ ನಮ್ಮ ನಿಮ್ಮ ಎಲ್ಲರ ಬೆಂಬಲವೂ ಅಗತ್ಯ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† Sri AMARE GOWDA (Sindhnoor).—Mr. Speaker, Sir, one of the hon. members of this august House has moved a motion of No-confidence in the Council of Ministers. It is a right of the people who have given this power in this House, this House can also remove any Minister or the Council of Ministers if it loses confidence in them. The confidence of the people is lost when the Council of Ministers fail to fulfil the aspirations of the people. These aspirations are the outcome of the promises made to them by these people during the elections and on many other platforms. Whether they have fulfilled them is the point. How far have they fulfilled is the question. Take for example the levy policy

of the Government. The levy is according to the area a person owns and not on what he actually grows on that land. They do not take into consideration whether anything is grown at all on that land. They do not consider the quantity actually grown. On the other hand, the execution of this policy is very rigid. During this paddy season, Tungabhadra main channel was breached. Water was stopped continuously for more than a month. But the demand is more than last year. They do not even have the commonsense to think over this. They say that each agriculturist should give an application about his grievance. They expect each ryot to go to the office of the Tahsildar and give an application. It is impossible. This is one of the failures of the Government.

It is admitted on all hands that corruption is rampant in the administration. They have done nothing to prevent this. Take the movement of foodgrains. Foodgrains come from Bidar to Bangalore but nobody has caught these smugglers. The police officers are parties in this transaction. To quote an instance, one official was very corrupt and he was put in a place where there was absolutely no chance to get any illegal gratification. He saw foodgrains being brought in boats. They were stopped because he wanted to count them. Thus, he started getting money. In this way, they have become experts in extracting money. Only a revolution can stop this. If a person goes to a police station to lodge a complaint, it will not be received at all, unless money is given This is within the knowledge of everybody. People are tired of this corrupt administration. In spite of these twenty years' rule, Congress Government is not able to eradicate corruption.

Then, about land revenue, there was a talk of abolition of land revenue. In Tungabhadra area, where there was no supply of water, ryots are asked to pay land revenue and that is treated as arrears. So, they have failed to fulfil the aspirations of the people.

Then, Sir, about the Mahajan Commission, this Government was also a party for the appointment of the Commission. Both the Maharashtra Government and the Mysore Government agreed to accept the recommendations of this Commission but now the Maharashtra Government is refusing to accept it. I do not know what these people are going to do at this Juncture. At least they could have protested that they will resign if there is failure to adopt the report.

Another point that I wish to say is blackmarket which is there everywhere. Now the rate of black market is made an open market price. Take for example sugar. Forty per cent is permitted to be sold in the open market and never in the history of prices such a high price is given. This is the policy that this Government is adopting. They are only trying to enrich the Birlas here. Can this ministry fulfil the trust reposed in them by the people? Only just last year they gave several promises to the voters and said they would do everything. But they have miserably failed.

I thank the Chair for giving me a chance to speak.

Mr. SPEAKER.—Presentation of the report of the Public Accounts Committee. The hon'ble member Sri S. D. Kothavale should be present here when it is called.

SECOND REPORT OF THE COMMITTEE ON PUBLIC ACCOUNTS ON APPROPRIATION/FINANCE ACCOUNTS FOR 1964-65 AND 1965-66 AND AUDIT REPORT FOR 1966.

Presentation

Sri S. D. KOTHAVALE (Sankeswar).—Sir, I express my regret both to you and to the House for being late. There is some reason for it but it is needless to state it here. However I beg to be excused on this account.

I present the Second Report of the Committee on Public Accounts on the Appropriation/Finance Accounts for the years 1964-65 and 1965-66 and the Audit Report, 1966 and the Audit Report on the Accounts of 1965-66 relating to Home, Education and Agriculture and Forest Departments.

Mr. SPEAKER.—The Second Report of the Committee on Public Accounts on the Appropriation/Finance Accounts for the years 1964-65 and 1965-66 and the Audit Report, 1966 and the Audit Report on the Accounts of 1965-66 relating to Home, Education and Agriculture and Forest Departments are presented.

MOTION OF NO CONFIDENCE IN THE COUNCIL OF MINISTERS

(Debate contd.)

† **ಶ್ರೀ ಎ. ಆರ್. ಬದರಿನಾರಾಯಣ್** (ಶಿವಮೊಗ್ಗ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧಪಕ್ಷದ ನಾಯಕರಾದಂಥ ಶ್ರೀಮಾನ್ ಶಿವಪ್ಪನವರು ಮಂತ್ರಿಮಂಡಲದ ಮೇಲೆ ತಂದಿರತಕ್ಕಂಥ ಅವಿಶ್ವಾಸ ನಿರ್ಣಯವನ್ನು ನಾನು ವಿರೋಧಿಸಲು ನಿಂತಿದ್ದೇನೆ. ವಿರೋಧಪಕ್ಷದಲ್ಲಿ ಬಹಳ ಅರಿತ ನುರಿತ ಧುರೀಣರು ಇದ್ದಾರೆ. ಅವರುಗಳ ವಿಚಾರದಲ್ಲಿ ನನಗೆ ಗೌರವವಿದೆ. ದೇಶಕಾಗಿ ಅವರುಗಳು ಬಹಳ ತ್ಯಾಗ ಮಾಡಿದ್ದಾರೆ. ಅವರುಗಳು ವಿಶೇಷವಾದಂಥ ಅನುಭವದನ್ನು ಪಡೆದಿದ್ದಾರೆ. ನನಗೆ ನೇರವಾಗಿ ತಿಳಿದಿರತಕ್ಕಂಥ ಅನೇಕ ಮಹನೀಯರು ಈ ದೇಶದ ಒಂದು ಹಿತದೃಷ್ಟಿಯಿಂದ, ಜನರ ಕಲ್ಯಾಣಕ್ಕಾಗಿ ಅವರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದಾರೆ. ಇವತ್ತಿನ ದಿವಸ ವಿರೋಧಪಕ್ಷದವರು ಕೂಡ ಸರ್ಕಾರ ರಚನೆ ಮಾಡಬೇಕು, ರಚನೆ ಮಾಡತಕ್ಕಂಥ ಕಾಲ ಬರುತ್ತದೆ ಎಂಬುದನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಅವರುಗಳು ಬಹಳ ಜವಾಬ್ದಾರಿಯುತವಾದಂಥ ರೀತಿಯಲ್ಲಿ, ದೇಶಕ್ಕೆ ಕಲ್ಯಾಣವಾಗುವಂಥ ರೀತಿಯಲ್ಲಿ, ಒಂದು ರಚನಾತ್ಮಕವಾದಂಥ ರೀತಿಯಲ್ಲಿ ಸರ್ಕಾರದ ಮೇಲೆ ಟೀಕೆ ಮಾಡುವ ಶಕ್ತಿ ತಮಗೆ ಇದೆ ಅನ್ನತಕ್ಕಂಥದ್ದನ್ನು ತಿಳಿದುಕೊಂಡಿದ್ದಾರೆ. ಆದರೆ ವಿರೋಧಪಕ್ಷದವರು ಯಾವ ದೃಷ್ಟಿಯನ್ನು ಇಟ್ಟುಕೊಡು ಟೀಕೆಯನ್ನು ಮಾಡಬೇಕೋ ಯಾವ ಒಂದು ಮಟ್ಟದ ಜವಾಬ್ದಾರಿಯಿಂದ ವರ್ತಿಸಬೇಕೋ ಅದರಂತೆ ಮಾಡುತ್ತಿಲ್ಲ. ಮುಂದೆ ನಾವು ರಾಜ್ಯಭಾರ ಮಾಡುತ್ತೇವೆಂಬ ರಾಜ್ಯದ ಹಿತದೃಷ್ಟಿಯನ್ನು ಇಟ್ಟುಕೊಂಡು ಅವರು ವರ್ತಿಸ

ಬೇಕಾಗಿತ್ತು. ಆದರೆ ಅವರ ಮನಸ್ಸಿನಲ್ಲಿ ಏನೋ ಒಂದು ರೀತಿಯಾದಂಥ ಆಬ್‌ಸೆಷನ್ ಎಂದರೆ, ಗೀಳು ಅಥವಾ ಚಟ ಇದೆ. ಈ ಕಾಂಗ್ರೆಸ್ ಸರ್ಕಾರವನ್ನು ಟೀಕೆ ಮಾಡಬೇಕು, ಕಾಂಗ್ರೆಸ್ ಸರ್ಕಾರದ ವಿಷಯದಲ್ಲಿ ವಿರೋಧವಾಗಿ ಟೀಕೆ ಮಾಡುತ್ತಲೇ ಇರಬೇಕು ಎನ್ನುವ ಆಬ್‌ಸೆಷನ್ ಇದೆಯೇ ಹೊರತು, ಒಂದು ಸರಿಯಾದ ರೀತಿಯಿಂದ ಟೀಕೆ ಮಾಡಬೇಕು, ರಚನಾತ್ಮಕವಾಗಿ ಟೀಕೆ ಮಾಡಬೇಕೆನ್ನುವುದು ಅವರ ಮನಸ್ಸಿನಲ್ಲಿ ಇಲ್ಲ. ಅವರು ಮಾಡುವ ಟೀಕೆಗಳು ನಿಜವಾಗಿಯೂ ಸರಿಯಾಗಿದ್ದರೆ ಮಂತ್ರಿಗಳು ಮತ್ತು ದೇಶದ ಜನರು ಒಳ್ಳೆಯ ರೀತಿಯಿಂದ ಕೇಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈಗ ನಮ್ಮ ಮುಂದೆ ಅವಿಶ್ವಾಸ ನಿರ್ಣಯ ಇದೆ. ಅವಿಶ್ವಾಸ ನಿರ್ಣಯ ಎಂದರೆ ಏನು ಎನ್ನುವುದು ನನಗೆ ಅರ್ಥವಾಗಲಿಲ್ಲ. ಈ ಲೆವಿ ಮೇಲಿನ ಟೀಕೆ, ಲ್ಯಾಂಡ್ ರೆವಿನ್ಯೂ ಮೇಲಿನ ಟೀಕೆ, ಆಹಾರವಿಲ್ಲ ಎನ್ನುವ ಟೀಕೆ, ಬೆಳೆಯಾಗಲಿಲ್ಲ ಎನ್ನುವ ಟೀಕೆ, ಪೋಲೀಸರು ಕಿರುಕುಳ ಕೊಟ್ಟರು ಎನ್ನುವ ಟೀಕೆಯನ್ನು ಈ ಸಭೆಯಲ್ಲಿ ಅವರು ಹೇಳಿ, ಹೇಳಿ, ಹೇಳಿ, ನಾವುಗಳು ಕೇಳಿ, ಕೇಳಿ, ಕೇಳಿ ಸಾಕಾಗಿದೆ.

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಕೇಳುವುದಕ್ಕೆ ಅಲ್ಲಿ ಒಬ್ಬರೂ ಸಹ ಮಂತ್ರಿಗಳೇ ಇಲ್ಲ.

ಶ್ರೀ ಜಿ. ನಾರಾಯಣಗೌಡ (ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು).—ಒಬ್ಬರೂ ಇಲ್ಲ ಎಂದು ಹೇಳಬೇಡಿ, ನಾನಿದ್ದೇನೆ.

ಶ್ರೀ ಎ. ಆರ್. ಬದರೀನಾರಾಯಣ್.—ನೀವು ಹೇಳುವುದನ್ನು ನಾವುಗಳು ಬೇಕಾದಷ್ಟು ಸಲ ಕೇಳಿದ್ದೇವೆ. ಆದರೆ ಈ ಅವಿಶ್ವಾಸ ನಿರ್ಣಯದ ಉದ್ದೇಶ ಏನು ಎನ್ನುವುದು ನನಗೆ ಸರಿಯಾಗಿ ಅರ್ಥವಾಗಲಿಲ್ಲ. ಈ ನಿರ್ಣಯವನ್ನು ನೀವು ಪಾಸ್ ಮಾಡುತ್ತೀರಾ, ಮಾಡುವುದಕ್ಕೆ ಸಾಧ್ಯವೇ ಎಂಬುದು ಮುಖ್ಯವಾದ ಪ್ರಶ್ನೆ. ನಿಮಗೆ ಸರ್ಕಾರದ ಮೇಲೆ ಟೀಕೆ ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ, ಇದುವರೆಗೆ ಬೇಕಾದಷ್ಟು ಮಾಡಿದ್ದೀರಿ. ಆದರೆ ನೀವು ಈ ಅವಿಶ್ವಾಸ ನಿರ್ಣಯವನ್ನು ತಂದಿರತಕ್ಕಂಥ ಉದ್ದೇಶವಾದರೂ ಏನು ಎಂದು ಕೇಳುತ್ತೇನೆ. ಆ ರೀತಿ ಅದನ್ನು ತಂದು ನೀವು ಸಾಧಿಸಿರುವುದಾದರೂ ಏನು ಎಂದು ಕೇಳುವುದಕ್ಕೆ ನಾನು ನಿಂತಿದ್ದೇನೆ.

ಕೆಲವು ಮಾನ್ಯ ಸದಸ್ಯರು.—ಮುಂದೆ ಗೃಹಮಂತ್ರಿಗಳಾಗುವವರು ?

ಶ್ರೀ ಎ. ಆರ್. ಬದರೀನಾರಾಯಣ್.—ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಅವರವರ ಹಣೆಯಲ್ಲಿ ಬರೆದಂತಾಗುತ್ತದೆ, ನನ್ನ ಕರ್ತವ್ಯವನ್ನು ನಾನು ಮಾಡುತ್ತಿದ್ದೇನೆ. ನಾನು ಕೇಳುವುದು ಇಷ್ಟೆ; ಈ ನಿರ್ಣಯವನ್ನು ತಾವು ಪಾಸ್ ಮಾಡುತ್ತೀರಾ ? ಇವತ್ತಿನ ಸಂದರ್ಭದಲ್ಲಿ ಪಾಸ್ ಮಾಡಲು ತಮಗೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ತಮ್ಮ ಒಂದು ಶಕ್ತಿಪ್ರದರ್ಶನವನ್ನು ದೇಶದ ಮುಂದೆ, ಜನಗಳ ಮುಂದೆ ತೋರಿಸಿ ನಂತರ ಜನರು ನಿಮಗೆ ಸರ್ಕಾರ ರಚನೆ ಮಾಡುವ ಶಕ್ತಿಯಿದೆ ಎಂಬುದನ್ನು ತೋರಿಸಿದರೆ ನೀವು ನಂತರ ಸರ್ಕಾರ ರಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನದಿವಸದಲ್ಲಿ ನೀವು ಸರ್ಕಾರ ರಚನೆ ಮಾಡುವುದು ಸಾಧ್ಯವಿಲ್ಲ ಅನ್ನತಕ್ಕಂಥದ್ದನ್ನು ನಾನು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ಎರಡು ದಿವಸಗಳಿಂದ ನಾವು ಕಾಲಕಳೆಯುತ್ತಿರುವುದರಿಂದ ಸುಮ್ಮನೆ ಕಾಲಹರಣವಾಯಿತು ಮತ್ತು ಹಣ ಖರ್ಚಾಯಿತು ಎಂಬುದು ನನ್ನ ಅಭಿಮತ. ವಿರೋಧಪಕ್ಷದವರು ಈ ನಿರ್ಣಯವನ್ನು ತಂದು ಏನನ್ನೂ ಸಾಧಿಸಿಲ್ಲ ಎಂದು ಹೇಳುವುದಕ್ಕೆ ನಿಂತಿದ್ದೇನೆ. ಸರ್ಕಾರದವರು ಇದುವರೆಗೆ ಏನನ್ನೂ ಮಾಡಲಿಲ್ಲ ಎನ್ನುವುದನ್ನು ಪದೇ ಪದೇ ಹೇಳುತ್ತಲೇ ಇದ್ದಾರೆ. ದೇಶದ ಮುಂದೆ ಸಮಸ್ಯೆಗಳು ಇದ್ದೇ ಇರುತ್ತವೆ. ಮಳೆ ಸಕಾಲಕ್ಕೆ ಬರದಿದ್ದರೆ ಯಾವ ಸರ್ಕಾರ ಬಂದರೂ ತಾನೆ ಮಳೆ ಬರಿಸುವುದಕ್ಕೆ ಸಾಧ್ಯವೇ ?

9-30 A.M.

ದೇಶದಲ್ಲಿ ಆಹಾರವನ್ನು ಬೆಳೆಯದಿದ್ದರೆ ಯಾವ ಸರ್ಕಾರ ಬಂದರೆ ತಾನೆ ಅದನ್ನು ಬೆಳೆಸುವುದಕ್ಕೆ ಸಾಧ್ಯ ? ಯಾವ ಸರ್ಕಾರ ಬಂದರೂ ಕೂಡ ಒಂದು ಇತಿ ಮಿತಿಯಲ್ಲಿ ರಾಜ್ಯಭಾರ ಮಾಡಬಹುದು. ಇತಿಮಿತಿಯಲ್ಲಿ ಏನು ಸಾಧನೆ ಮಾಡಬಹುದೋ ಅದನ್ನು ಮಾಡಬಹುದು. ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಅಭಿವೃದ್ಧಿಯನ್ನು ಸಾಧನೆ ಮಾಡುವುದಕ್ಕೆ ಪ್ರಯತ್ನ ಮಾಡಬಹುದು. ಆದರೆ ಅದನ್ನು ಮಾಡುವುದಕ್ಕೆ ಕಷ್ಟ ಇದೆ. ಆಹಾರದ ಕೊರತೆ, ಸಿಬ್ಬಂದಿಯ ಕೊರತೆ, ಹಣದ ಕೊರತೆ ಇತ್ಯಾದಿ ನಾನಾ ಎಡರು ತೊಡರುಗಳು ಬರುತ್ತವೆ ರಾಜ್ಯಭಾರ ಮಾಡತಕ್ಕವರಿಗೆ

(ಶ್ರೀ ಎ. ಆರ್. ಬದರೀನಾರಾಯಣ್)

ವಿರೋಧ ಪಕ್ಷದವರು ಸಹಕಾರ ಕೊಟ್ಟರೆ ರಾಜ್ಯದ ಆಡಳಿತವನ್ನು ಇನ್ನೂ ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯ ಎಂದು ಹೇಳುವುದಕ್ಕೆ ನಾನು ನಿಂತಿದ್ದೇನೆ. ಸರ್ಕಾರದ ಆಡಳಿತ ಕ್ರಮದಲ್ಲಿ ಅನೇಕ ನ್ಯೂನತೆಗಳಿಲ್ಲ. ಒಂದೆರಡು ನ್ಯೂನತೆಗಳಿರಬಹುದು ಅದು ಸ್ವಾಭಾವಿಕ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ತಮ್ಮೆಲ್ಲರ ಸಹಕಾರ ಬೇಕು. ವಿರೋಧ ಪಕ್ಷದವರು ಏನು ಟೀಕೆಗಳನ್ನು ಮಾಡಿದರೂ ರಚನಾತ್ಮಕ ದೃಷ್ಟಿಯಿಂದ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಏನು ಸಲಹೆ ಕೊಟ್ಟು ಹೇಗೆ ಮಾಡಿದರೆ ದೇಶದ ಪ್ರಗತಿಯನ್ನು ಸಾಧಿಸಬಲ್ಲರು ಎನ್ನುವುದನ್ನು ಗಹನವಾಗಿ ತಿಳಿಯತಕ್ಕಂಥ ರೀತಿಯಲ್ಲಿ ಒಂದು ರಚನಾತ್ಮಕವಾದ ಟೀಕೆಯನ್ನು ಮಾಡಿದರೆ ದೇಶವೆಲ್ಲಾ ಕಾದು ನೋಡುತ್ತಾರೆ, ಸರ್ಕಾರದ ಮಂತ್ರಿಮಂಡಲ ಕಾದು ನೋಡುತ್ತಾರೆ. ಕಾಂಗ್ರೆಸ್ ಸರ್ಕಾರದವರು ನೋಡುತ್ತಾರೆ. ಈ ದೃಷ್ಟಿಯಿಂದ ಈ ದಿವಸ ತಾವುಗಳು ದಯವಿಟ್ಟು ರಚನಾತ್ಮಕವಾದ ದೃಷ್ಟಿಯಿಂದ ಟೀಕೆಯನ್ನು ಮಾಡಬೇಕು. ಈ ದೇಶದ ಅಭ್ಯುದಯದಲ್ಲಿ ಎಲ್ಲರಿಗೂ ಕೂಡ ಅಭಿಮಾನವಿದೆ ಎನ್ನತಕ್ಕ ಸನ್ನಿವೇಶದಲ್ಲಿ ಹೇಗೆ ಮಾಡಿದರೆ, ಯಾವಾಗ ಹೇಗೆ ವರ್ತಿಸಿದರೆ ದೇಶದ ಅಭಿವೃದ್ಧಿಯನ್ನು ಸಾಧಿಸಬಹುದು ಎನ್ನುವ ದೃಷ್ಟಿಯಲ್ಲಿ ರಚನಾತ್ಮಕವಾದ ಸಲಹೆಗಳನ್ನು ತಾವು ಕೊಡಬೇಕು ಎನ್ನತಕ್ಕಂಥಾದ್ದನ್ನು ನಾನು ಬಹಳ ಬುದ್ಧಿವಂತರು ಅನುಭವ ಶಾಲಿಗಳಾದ ತಮ್ಮಿಂದ ನಿರೀಕ್ಷಣೆ ಮಾಡುತ್ತೇನೆ. ಅದು ಬಿಟ್ಟು ಇಲ್ಲವೇ ಇರತಕ್ಕ ಒಂದು ಸಂದರ್ಭವನ್ನು ಉತ್ಪನ್ನ ಮಾಡಿ ದೇಶದಲ್ಲಿ ಅಲ್ಲೋಲ ಕಲ್ಲೋಲ ಪರಿಸ್ಥಿತಿಯನ್ನುಂಟುಮಾಡಿ ಅಶಾಂತಿಯನ್ನುಂಟುಮಾಡಿದರೆ ಮತ್ತೆ ಅದನ್ನು ಹೋಗಲಾಡಿಸಿ ಶಾಂತಿ ವಾತಾವರಣವನ್ನು ತರಬೇಕಾದರೆ ಸ್ವಲ್ಪ ಕಷ್ಟವಾಗುತ್ತದೆ. ಆಡಳಿತಪಕ್ಷದವರು ದೇಶದ ಹಿತವನ್ನು ಮರೆತು ಕೆಲಸ ಮಾಡುತ್ತಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಮಂತ್ರಿಗಳು ಒಬ್ಬರೂ ಇಲ್ಲ.

ಶ್ರೀ ಜಿ. ನಾರಾಯಣಗೌಡ.—ಒಬ್ಬರೂ ಇಲ್ಲವೆಂದು ಹೇಳಬೇಡಿ. ನಾನು ಇದ್ದೇನೆ.

ಶ್ರೀ ಎ. ಆರ್. ಬದರೀನಾರಾಯಣ್.—ಈ ದೃಷ್ಟಿಯಿಂದ ದೇಶದಲ್ಲಿ ಒಂದು ಅಲ್ಲೋಲ ಕಲ್ಲೋಲ ಪರಿಸ್ಥಿತಿಯನ್ನುಂಟುಮಾಡತಕ್ಕ ಪರಿಸ್ಥಿತಿಯನ್ನು ಯಾರೇ ಆಗಲೀ ಉಂಟು ಮಾಡಿದರೆ ಅದಕ್ಕೆ ಅವರೇ ಜವಾಬ್ದಾರರಾಗಬೇಕಾಗುತ್ತದೆ. ದೇಶ ಅನಾಯಕವಾಗಿ ಹೋಗುತ್ತದೆ ಇವೊತ್ತು ಈ ಸರ್ಕಾರ ಅಧಿಕಾರದಲ್ಲಿರಬಹುದು. ನಾಳೆ ಇನ್ನೊಂದು ಸರ್ಕಾರ ಬರಬಹುದು. ಅದು ಬೇರೆ ವಿಷಯ. ಆದರೆ ನಾನು ವಿನಯದಿಂದ ಹೇಳತಕ್ಕದ್ದು ಏನು ಎಂದರೆ, ಇಂಥಾ ಪರಿಸ್ಥಿತಿಯನ್ನುಂಟುಮಾಡತಕ್ಕದ್ದು ಸರಿಯಲ್ಲ. ತಪ್ಪು ಇದ್ದರೆ ಎಲ್ಲಿ ತಪ್ಪು ಇದೆ ಎಂಬುದನ್ನು ಹೇಳಿ, ಅದನ್ನು ಸರಿಮಾಡತಕ್ಕ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟು ಆಡಳಿತ ಪಕ್ಷದವರೊಂದಿಗೆ ಸಹಕರಿಸಬೇಕು. ಹಾಗೆ ಮಾಡಿದರೆ ಅನುಕೂಲವಾಗುತ್ತದೆ. ನಿನ್ನೆಯ ದಿವಸ ಒಬ್ಬರು ವಿರೋಧ ಪಕ್ಷದ ಸದಸ್ಯರು ಮಾತನಾಡಿ ಕಂಠಶೋಷಣೆ ಮಾಡಿಕೊಂಡು ನೀರನ್ನು ಕೇಳುತ್ತಿದ್ದರು. ಬರೀ ಕಂಠಶೋಷಣೆ ಮಾಡಿಕೊಂಡರೆ ಯಾರಿಗೆ ಏನು ಪ್ರಯೋಜನ? ಇದರಿಂದ ಯಾರ ಮೇಲೆ ಏನು ಪರಿಣಾಮ ಆಯಿತು? ಈ ದೃಷ್ಟಿಯಿಂದ ಟೀಕೆಗಳನ್ನು ಮಾಡಿದರೆ ಅದರಿಂದ ಒಂದು ಪರಿಣಾಮ ಉಂಟಾಗುವ ರೀತಿಯಲ್ಲಿ ರಚನಾತ್ಮಕವಾದ ಟೀಕೆಗಳನ್ನು ಮಾಡಬೇಕು. ಅದರಿಂದ ದೇಶಕ್ಕೂ ಅನುಕೂಲವಾಗುತ್ತದೆ. ತಮಗೂ ಅನುಕೂಲವಾಗುತ್ತದೆ ಆದರೆ ಒಂದು ಮಾತ್ರ ಸಾಧ್ಯವಿಲ್ಲ. ಇವೊತ್ತಿನ ಸಂದರ್ಭದಲ್ಲಿ ವಿರೋಧ ಪಕ್ಷದವರು ಅವಿಶ್ವಾಸ ನಿರ್ಣಯವನ್ನು ಪಾಸು ಮಾಡಿಕೊಂಡು ಅವರು ಸರ್ಕಾರವನ್ನು ರಚಿಸಲಾರರು. ಕಾಂಗ್ರೆಸ್ ಹೋಗಿ ಇನ್ನೊಂದು ಸರ್ಕಾರ ಬಂದರೆ ಇಂದ್ರ ಚಂದ್ರ ಲೋಕವನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿಲ್ಲ. ಇವೊತ್ತು ದೇಶದಲ್ಲಿ ಆಹಾರದ ಕೊರತೆ, ಹಣದ ಕೊರತೆ ಇತ್ಯಾದಿ ನಾನಾ ತೊಂದರೆಗಳು ಇವೆ. ನಮ್ಮ ದೇಶದಲ್ಲಿ ಎಲ್ಲರೂ ಅಭಿಮಾನದಿಂದ ಕೆಲಸಮಾಡದೇ ಹೋದರೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಮಾತ್ರ ನಾನು ಹೇಳುತ್ತೇನೆ. ಮುಖ್ಯವಾಗಿ ಕಾಂಗ್ರೆಸ್ ಸರ್ಕಾರ, ಮಂತ್ರಿಮಂಡಲದವರು ಇವೊತ್ತಿನ ಹಣದ ಕೊರತೆಯಲ್ಲಿ ಅಭಾವ ಪರಿಸ್ಥಿತಿಯಲ್ಲಿ ಅದೆಷ್ಟು ಚೆನ್ನಾಗಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ನೋಡಬೇಕೇ ಹೊರತು ಬರೀ ಟೀಕೆಯನ್ನು ಮಾಡಿದರೆ ಅದರಿಂದೇನೂ ಪ್ರಯೋಜನ ವಾಗುವುದಿಲ್ಲ. ಜನಸಾಮಾನ್ಯರಿಗೆ ಪ್ರತಿಯೊಬ್ಬರಿಗೂ ಸುಖ, ಶಾಂತಿ ಇರಬೇಕು ಎಂದು ಹೇಳುವ ಸಂದರ್ಭದಲ್ಲಿ ಸರ್ಕಾರ ಮಾಡಿರತಕ್ಕ ಕೆಲಸವನ್ನು ಯಾವ ಒಂದು ಅಳತೆಯ ಕೋಲಿನಿಂದ ಅಳೆಯಬೇಕೋ ಅದರಿಂದ ಅಳೆಯಬೇಕು. ಇವೊತ್ತಿನ ಸನ್ನಿವೇಶದಲ್ಲಿ ನಮ್ಮ ಸರ್ಕಾರದವರು ಚೆನ್ನಾಗಿ ರಾಜ್ಯಭಾರಮಾಡುತ್ತಿದ್ದಾರೆ, ಸ್ವಲ್ಪ ಮಟ್ಟಿನ ನ್ಯೂನತೆ ಇದ್ದರೂ ಕೂಡ ಅದನ್ನು

ತಿದ್ದುವುದಕ್ಕೆ ಬೇಗ ಸಾಧ್ಯವಾಗಬಹುದು ಎಂದು ಮಾತ್ರ ನಾನು ಹೇಳುತ್ತೇನೆ. ಈಗ ವಿರೋಧ ಪಕ್ಷದವರು ಈ ಸಭೆಯಲ್ಲಿ ತಂದಿರತಕ್ಕ ಅವಿಶ್ವಾಸ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಹಂಜಿ ಶಿವಣ್ಣ (ತರೀಕೆರೆ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಮನೆಯ ವಿರೋಧ ಪಕ್ಷದ ನಾಯಕರಾದಂತ ಶ್ರೀಮಾನ್ ಶಿವಪ್ಪ ನವರು ಈ ಸಭೆಯಲ್ಲಿ ಮಂಡಿಸಿರತಕ್ಕ ಅವಿಶ್ವಾಸ ನಿರ್ಣಯವನ್ನು ಪುಷ್ಟೀಕರಿಸುತ್ತಾ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ದೇಶದಲ್ಲಿ ಇವೊತ್ತು ಕಾಂಗ್ರೆಸ್ ಆಡಳಿತದಲ್ಲಿ ಏನೇನು ನಡೆದಿದೆ ಎನ್ನತಕ್ಕಂಥಾದ್ದನ್ನು ಈಗಾಗಲೇ ನಮ್ಮ ಸ್ನೇಹಿತರನೇಕರು ಹೇಳಿದ್ದಾರೆ. ಕೆಲವು ಮುಖಂಡರು ತಮಗೆ ಬೇಕಾದವರಿಗೆ ಮಾತ್ರ ಸೀಟು ಗಳನ್ನು ಮತ್ತು ಹುದ್ದೆಗಳನ್ನು ಕೊಟ್ಟು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ, ಜನಗಳಿಗೆ ವಿಶ್ವಾಸ ಇಲ್ಲದೇ ಇರತಕ್ಕವರನ್ನು ಆರಿಸಿಕೊಂಡು ಸಂಖ್ಯಾಬಲದಿಂದ ದೇಶದಲ್ಲಿ ಇವೊತ್ತು ಈ ಕಾಂಗ್ರೆಸ್ ಸರಕಾರ ಆಡಳಿತವನ್ನು ನಡೆಸುತ್ತಿದೆ ಎನ್ನತಕ್ಕ ವಿಷಯವನ್ನು ದೇಶದ ಜನತೆ ಮನಗಾಣುತ್ತಿದೆ. ಈ ಬಗ್ಗೆ ಕೆಲವು ವಿಷಯಗಳನ್ನು ವಿವರಿಸಬೇಕು ಎಂದು ನಾನು ನಿಂತಿದ್ದೇನೆ. ರೆವಿನ್ಯೂ ಇಲಾಖೆಯಲ್ಲಿ ಮೊನ್ನೆ ತಾನೆ ಒಂದು ಆರ್ಡರ್ ಮಾಡಿದ್ದಾರೆ. ಅದರಲ್ಲಿ ಸರಕಾರದ ಜಮೀನನ್ನು ಒಂದು ಎಕರೆಗೆ ಎರಡು ಸಾವಿರ ರೂಪಾಯಿಗಳ ಬೆಲೆ ಬಾಳತಕ್ಕ ಜಮೀನನ್ನು ತಮಗೆ ಬೇಕಾದವರಿಗೆ ಹಂಚಿದ್ದಾರೆ. ಇದರಲ್ಲಿ ಅನ್ಯಾಯ ನಡೆದಿದೆ. ಹಾಗಾದರೆ ಇದನ್ನು ಸರಿಪಡಿಸುವ ದೃಷ್ಟಿಯಿಂದ ನಿಜವಾಗಿಯೂ ಇದು ಸರಿಯಾದ ಸರಕಾರವೇ ಆಗಿದ್ದರೆ ಅದನು ರದ್ದುಪಡಿಸಲಿ ಎಂದು ನಾನು ಸರ್ಕಾರಕ್ಕೆ ಸವಾಲು ಹಾಕುತ್ತೇನೆ.

ಇನ್ನೂ ಕೆಲವು ಕೆಲಸಗಳನ್ನು ಇವರು ಮಾಡುತ್ತಿದ್ದಾರೆ. ಇವರಿಗೆ ಮಂತ್ರಿಗಳ ಬೆಂಬಲವಿದೆ ಆದಕಾರಣ ಸಾಮಾನ್ಯ ಜನರ ವಿಷಯದಲ್ಲಿ ಹದ್ದುಮೀರಿ ನಡೆಯುತ್ತಿದ್ದಾರೆ. ಮೊನ್ನೆ ಸುಮಾರು ಎರಡು ತಿಂಗಳ ಕೆಳಗೆ 20 ಜನ ತಮಿಳರಿಗೆ ಸುಮಾರು 75 ಎಕರೆಗಳಷ್ಟು ಜಮೀನನ್ನು ಹಂಚಿದ್ದಾರೆ. ರೆವಿನ್ಯೂ ಸಚಿವರು ಅಲ್ಲಿಯ ಅಧಿಕಾರಿಗಳಿಗೆ ಜಮೀನು ಹಂಚುವುದಕ್ಕೆ ಬೆಂಬಲ ಕೊಟ್ಟು ನಾನು ಏನು ಬಂದರೂ ನೋಡಿಕೊಳ್ಳುತ್ತೇನೆಂದು ಹೇಳಿರುವ ವಿಷಯ ನನಗೆ ತಿಳಿದುಬಂತು. ಆ 20 ಜನರ ಪೈಕಿ ಈಗ ನಾಲ್ಕು ಜನ ಮಾತ್ರ ಉಳಿದಿದ್ದಾರೆ. ಉಳಿದವರು ಅವರ ಊರಿಗೆ ಹೊರಟು ಹೋಗಿದ್ದಾರೆ. ಆದ್ದರಿಂದ ಅವರ ಹೆಸರಿನಲ್ಲಿದ್ದ ಜಮೀನನ್ನು ಅಲ್ಲಿಯ ಅಧಿಕಾರಿಗಳು ಕಾಂಗ್ರೆಸ್ ಕಡೆಯವರಿಗೆ ಹಂಚಿದ್ದಾರೆ. ಈ ವಿಚಾರವನ್ನು ನಾವು ಒಬ್ಬ ಲಾಯರ್ ಮೂಲಕ ಸರ್ಕಾರಕ್ಕೆ ತಿಳಿಸಿದ್ದೇವೆ. ಕಾಂಗ್ರೆಸ್ ಮಂತ್ರಿಗಳ ಒಂದು ಬೆಂಬಲದಿಂದಲೇ ಅಲ್ಲಿಯ ಅಧಿಕಾರಿಗಳು ಹದ್ದುಮೀರಿ ನಡೆಯುವುದಕ್ಕೆ ಅವಕಾಶವಾಗಿದೆ. ರಾಜ್ಯದ ಯಾವ ಭಾಗದಲ್ಲೂ ಅನ್ಯಾಯ ನಡೆದಿಲ್ಲ ಎಂದು ಹೇಳುವ ಇವರು ಈ ಜಮೀನಿನ ವಿಚಾರದಲ್ಲಿ ತನಿಖೆ ನಡೆಸಿ, ದುರುಪಯೋಗವಾಗಿರುವುದನ್ನು ಸರಿಪಡಿಸಲಿ.

ಇನ್ನೊಂದು ವಿಚಾರವೆಂದರೆ, ಲಂಚಕೋರರು ಜಾಸ್ತಿಯಾಗಿದ್ದಾರೆ. ಇವರಿಗೆ ಅಧಿಕಾರಿಗಳ ರಕ್ಷಣೆಯಿದೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಊರಿನಲ್ಲಿ ವಾರಕ್ಕೆ ಒಂದು ಸಂತೆ ನಡೆಯುತ್ತದೆ. ಅಲ್ಲಿಗೆ 4–5 ಜನ ಖದೀಮರು ಬಂದು ರೈತರು ಮಾರುವುದಕ್ಕೆ ತರುವ ಸಾಮಾನುಗಳನ್ನೆಲ್ಲಾ ಸಾಮಾನ್ಯ ಜನರಿಗೆ ಸಿಗದಂತೆ ಮಾಡಿ ತಾವೇ ತೆಗೆದುಕೊಂಡು ಹೋಗಿಬಿಡುತ್ತಾರೆ. ಇವರಿಗೆ ಸೇಲ್ಸ್ ಟ್ಯಾಕ್ಸ್ ಆಫೀಸರ ಬೆಂಬಲವಿದೆ. ಒಂದು ವಾರಕ್ಕೆ ಇವರು ಒಂದು ಸಾವಿರ ರೂಪಾಯಿಗಳವರೆಗೂ ಸಂಪಾದನೆ ಮಾಡುತ್ತಾರೆ. ಈ ರೀತಿ ನಡೆಯುತ್ತಿದ್ದರೂ ಸಹ ಸರ್ಕಾರದ ಅಧಿಕಾರಿಗಳು ವಿಚಾರಮಾಡುವುದಿಲ್ಲ. ಇವರಿಗೆ ಸರಿಯಾಗಿ ರಾಜ್ಯಭಾರ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ರಾಜೀನಾಮೆ ಕೊಟ್ಟು ಹೋಗುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಕೈಗಾರಿಕೆಯ ವಿಷಯ ತೆಗೆದುಕೊಂಡರೆ, ನಮ್ಮ ರಾಜ್ಯದಲ್ಲಿ ಎಲ್ಲಾ ಕೈಗಾರಿಕೆಗಳೂ ಶೋಚನೀಯ ಸ್ಥಿತಿಯಲ್ಲಿ ನಡೆಯುತ್ತಿವೆ. ಎಲ್ಲಾ ಕೈಗಾರಿಕೆಗಳೂ ಸರ್ಕಾರದ ವತಿಯಿಂದ ಮುಚ್ಚುವ ಸ್ಥಿತಿಗೆ ಬಂದಿವೆ. ಮತ್ತೆ ಕೆಲವು ಮುಚ್ಚಿವೆ. ನನ್ನ ಪಕ್ಕದ ಊರಿನ ಎಂದರೆ ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕೂಲಿಗಾರರ ಸಂಘದವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.: ಸಂಘದವರು ಬೋನಸ್ ಕೇಳುವುದಕ್ಕೆ ಹೋದಾಗ ಮಾನ್ಯ ಡೈರೆಕ್ಟರವರು ಹೇಳಿದರಂತೆ. ನ್ಯೂ ಸ್ಟೀಲ್ ಪ್ಲಾಂಟಿನ ಲೆಕ್ಕಾಚಾರವನ್ನು ಸೇರಿಸಿ ಬ್ಯಾಲೆನ್ಸ್ ಷೀಟ್ ತಯಾರು ಮಾಡಿದಾಗ ಸುಮಾರು 120 ಲಕ್ಷ ರೂಪಾಯಿಗಳು ಕಾರ್ಖಾನೆಗೆ ನಷ್ಟವಾಗಿದೆ. ಈ ನಷ್ಟವನ್ನು ಬ್ಯಾಲೆನ್ಸ್ ಷೀಟಿನಲ್ಲಿ ತೋರಿಸಿದರೆ ಈಗ ಸಾಲ ಕೊಡುತ್ತಿರುವ ಬ್ಯಾಂಕುಗಳೂ ಮುಂದೆ ನಮಗೆ ಸಾಲಕೊಡುವುದಿಲ್ಲ, ನಿಮಗೆ ಸಂಬಳ ಕೊಡಲೂ ಸಾಲ ಸಿಗುವುದಿಲ್ಲ, ಆದುದರಿಂದ ಈ ಸಾಲ ಹುಟ್ಟಿಸಿಕೊಳ್ಳು

(ಶ್ರೀ ಹಂಜಿ ಶಿವಣ್ಣ)

ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್ ಮತ್ತು ... ವುವಕ್ಕೋಸ್ಕರ ನ್ಯೂಸ್ಟೀಲ್‌ಪ್ಲಾಂಟಿನ ಲೆಕ್ಕವನ್ನು ಪ್ರತ್ಯೇಕಿಸಿ ಬ್ಯಾಲೆನ್ಸ್ ಶೀಟನ್ನು ತಯಾರುಮಾಡಿ 44 ಲಕ್ಷ ರೂಪಾಯಿಗಳು ಲಾಭ ಬಂದಿವೆಯೆಂದು ತೋರಿಸಿದ್ದೇವೆಂದು. ಇಂತಹ ಒಂದು ಪರಿಸ್ಥಿತಿಗೆ ಈ ಸರ್ಕಾರದವರು ಕಾರ್ಖಾನೆಗಳನ್ನು ತಂದಿಟ್ಟಿದ್ದಾರೆ. ಈ ಕಾರ್ಖಾನೆಗಳಿಗೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಸಾಲವಾಗಿ ಕೊಟ್ಟು, ಜನರ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಈವಿಚಾರವನ್ನು ನಾನು ಮುಖ್ಯಮಂತ್ರಿಗಳಿಗೆ ಕಾಗದ ಬರೆದು ತಿಳಿಸಿದಾಗ, ನನ್ನನ್ನು ಬಂದು ನೋಡುವಂತೆ ಕಾಗದ ಬರೆದರು. ಅವರನ್ನು ನೋಡಲು ಬೆಂಗಳೂರಿಗೆ ಬಂದರೆ ಅವರನ್ನು ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ ಅವರಿಗೆ ನೂರೆಂಟು ಕೆಲಸಗಳು. ಇದುವರೆಗೂ ಅವರೊಡನೆ ಮಾತನಾಡಲಿಕ್ಕೆ ಸಾಧ್ಯವಾಗಲಿಲ್ಲ.

[MR. DEPUTY SPEAKER in the Chair].

ಈ ಕಾಂಗ್ರೆಸ್‌ನವರು ಇರುವವರೆಗೂ, ಇವರು ಆಡಳಿತವನ್ನು ಬಿಡುವವರೆಗೂ ದೇಶದಲ್ಲಿರುವ ಸಾಮಾನ್ಯ ಜನರಿಗೆ ತೊಂದರೆ ತಪ್ಪುವುದಿಲ್ಲ. ಈಗ ದೇಶದಲ್ಲಿ ಏನಾಗುತ್ತಿದೆಯೆಂದರೆ ಕಾಲಕ್ಕೆ ಸರಿಯಾಗಿ ಮಳೆ ಬರುತ್ತಿಲ್ಲ ಬೆಳೆಯಾಗುತ್ತಿಲ್ಲ. ಹಳ್ಳಿಯಲ್ಲಿರುವ ಹಿರಿಯರು ಇದಕ್ಕೆ ಕೊಡುವ ಕಾರಣವೇನೆಂದರೆ ಕಾಂಗ್ರೆಸ್ ಆಡಳಿತದಲ್ಲಿ ಈ ರೀತಿಯಾಗಿ ಅನ್ಯಾಯ, ಅನೀತಿ, ಸುಲಿಗೆ ದರೋಡೆ, ವಿಚಿತ್ರ ಹಿಂಸೆಗಳು ನಡೆಯುತ್ತಿದ್ದರೆ ಮಳೆ ಬೆಳೆ ಯಾವ ರೀತಿ ಚೆನ್ನಾಗಿ ಆಗುತ್ತದೆ, ದೇವರು ಸಹ ಮುನಿದಿದ್ದಾನೆ ಎಂದು ಹೇಳುತ್ತಾರೆ, ನೀವು ಕೇವಲ ದುಡ್ಡಿನ ಬಲದಿಂದ ರಾಜ್ಯಭಾರ ಮಾಡುತ್ತಿದ್ದೀರಿ. ಎಲ್ಲಾದರೂ ಚುನಾವಣೆ ನಡೆದರೆ ಅನೇಕ ಜೀಪುಗಳನ್ನು ಓಡಾಡಿಸಿ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ಓಟನ್ನು ಪಡೆಯುತ್ತಿದ್ದೀರಿ. ಆದರೆ ನಾವು ಜನಬಲದಿಂದ ಓಟನ್ನು ಪಡೆಯುತ್ತಿದ್ದೇವೆ. ಜನರಿಂದ ಸರ್ಕಾರಕ್ಕೆ ಏನಾದರೂ ದೂರುಗಳು ಬಂದರೆ ಅವುಗಳನ್ನು ಕೂಲಂಕಷವಾಗಿ ವಿಚಾರ ಮಾಡುತ್ತಿಲ್ಲ. ಯಾವುದನ್ನೂ ಸಹ ನೀವು ಸರಿಯಾಗಿ ಮಾಡುತ್ತಿಲ್ಲ. ಈ ರೀತಿ ಆಡಳಿತನ್ನು ದುರುಪಯೋಗಪಡಿಸಿಕೊಂಡು ಕೊನೆಗೆ ಈ ರಾಜ್ಯವನ್ನು ಯಾವ ಪರಿಸ್ಥಿತಿಗೆ ಮುಟ್ಟಿಸುತ್ತೀರೋ ಎಂಬುದು ನಮಗೆ ತಿಳಿಯುತ್ತಿಲ್ಲ. ಈ ರಾಜ್ಯದಲ್ಲಿ ಯಾವ ಕೆಲಸಗಳನ್ನು ನೀವು ಚೆನ್ನಾಗಿ ಮಾಡಿದ್ದೀರಿ ಎಂಬುದನ್ನು ತಿಳಿಯಬಯಸುತ್ತೇನೆ. ಈ ವಿಧಾನ ಸೌಧವನ್ನು ಕಟ್ಟಿಸಿದ ಕಾಂಗ್ರೆಸ್ಸಿಗರು ಅದರ ಮುಂದೆ ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆಸಿದರು. ಮತ್ತೆ ಅದೇ ಕಾಂಗ್ರೆಸ್‌ನವರು ಬಂದು ಆ ವಾಕ್ಯವನ್ನು ಮುಚ್ಚಿಸಿದರು. ಅವರು ಮುಚ್ಚಿಸುವ ಬದಲು ಅವರಿಗೆ ತಿಳಿದಂಥ ಬೇರೆ ಎಂದು ವಾಕ್ಯವನ್ನು ಬರೆಸಬಹುದಾಗಿತ್ತು. ಆ ರೀತಿ ಮುಚ್ಚಿಸಿದ್ದು ನಮ್ಮ ದೇಶದ ದುರಾದೃಷ್ಟವೆಂದು ಹೇಳಬಹುದು. ನೀವು ಇದೇ ರೀತಿ ಆಡಳಿತವನ್ನು ನಡೆಸಿಕೊಂಡು ಬಂದರೆ ಜನರು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಮುಂದಿನ ಚುನಾವಣೆಯಲ್ಲಿ ನೀವುಗಳು ಒಬ್ಬರೂ ಸಹ ಗೆದ್ದು ಬರುವುದಿಲ್ಲವೆಂದು ಹೇಳುತ್ತೇನೆ. ನೀವು ಇಲ್ಲಿಗೆ ಗೆದ್ದು ಬಂದಿರುವುದು ಹಣದ ಬಲದಿಂದ, ನಾವು ಗೆದ್ದು ಬಂದಿರುವುದು ಜನಬಲದಿಂದ ಎಂಬುದನ್ನು ಹೇಳುತ್ತೇನೆ. ಹಣದ ನೆರವಿನಿಂದ ಕೊನೆಯವರೆಗೂ ನಾವೇ ರಾಜ್ಯವಾಳುತ್ತೇವೆಂದು ತಾವು ತಿಳಿದಿದ್ದರೆ ಅದು ತಪ್ಪಾಗುತ್ತದೆ. ಮೊನ್ನೆ ನಡೆದ ಚುನಾವಣೆಯಲ್ಲಿ ತಿಪಟೂರಿನ ಜನ ನಿಮಗೆ ಬುದ್ಧಿ ಕಲಿಸಿದ್ದಾರೆ. ಆ ಚುನಾವಣೆಯಲ್ಲಿ ನೀವು ಎಷ್ಟು ಹಣ ಚೆಲ್ಲಿದಿರಿ, ಎಷ್ಟು ದವಸ ಹಂಚಿದಿರಿ ಎಂಬುದನ್ನು ನಾನು ಹೇಳಬೇಕಾಗಿಲ್ಲ. ಗಾಂಧೀಜಿಯವರ ತತ್ವಗಳನ್ನು ಹೇಳಿಕೊಂಡು ಇದುವರೆಗೆ ರಾಜ್ಯಭಾರ ಮಾಡಿದಿರಿ, ಆದರೆ ಇನ್ನು ಮುಂದೆ ಸಾಧ್ಯವಾಗುವುದಿಲ್ಲ. ಈಗ ಮುಖ್ಯಮಂತ್ರಿಗಳು ಸಭೆಗೆ ಬಂದಿರುವುದರಿಂದ ಆಗಲೇ ಹೇಳಿದ ಜಮೀನು ವಿಚಾರವನ್ನು ಮತ್ತೆ ಹೇಳುತ್ತೇನೆ. ತಾರೀಖು 1ನೇ ಏಪ್ರಿಲ್ 1967ರಲ್ಲಿ ಸುಮಾರು 75 ಎಕರೆ ಜಮೀನನ್ನು ಸುಮಾರು 20 ಜನ ಮದ್ರಾಸ್ ರಾಜ್ಯದ ತಮಿಳಿಯನ್ಸ್‌ಗೆ ಹಂಚಿಕೊಟ್ಟಿದ್ದಾರೆ. ಈ ರೀತಿ ಜಮೀನು ಹಂಚಿ ಕೊಟ್ಟಿರುವುದು ಶುದ್ಧ ಅನ್ಯಾಯವಾಗಿರುವುದರಿಂದ ಅದನ್ನು ರದ್ದುಪಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಬೇಕು. ಇವತ್ತಿನ ದಿವಸ ಸಾವಿರಾರು ಎಕರೆ ಜಮೀನುಗಳನ್ನು ಲಂಚಕೋರರಿಗೆ, ಲಾಭಬಡುಕರಿಗೆ ಎಡಗೈ ಮತ್ತು ಬಲಗೈ ಹೆಬ್ಬೆಟ್ಟು ಒತ್ತಿಸಿಕೊಂಡು ಅಧಿಕಾರಿಗಳು ಹಂಚುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ನನ್ನ ಜೊತೆ ಬಂದರೆ ಈ ರೀತಿ ಅನ್ಯಾಯವಾಗುತ್ತಿರುವುದನ್ನು ತೋರಿಸಿಕೊಡುತ್ತೇನೆ. ತಮಗೆ ಧೈರ್ಯವಿದ್ದರೆ ಈ ರೀತಿ ನಡೆಯುತ್ತಿರುವ ಅನ್ಯಾಯಗಳನ್ನು ಸರಿಪಡಿಸುತ್ತೀರೆಂದು ನಂಬಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಸಭೆಯ ಮುಂದೆ ಇರತಕ್ಕಂಥ ಮಾನ್ಯ ಸದಸ್ಯರಾದ ಶ್ರೀಮಾನ್ ಎಸ್. ಶಿವಪ್ಪನವರು ತಂದಿರತಕ್ಕಂಥ ಅವಿಶ್ವಾಸ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡಬೇಕೆಂದಿದ್ದೇನೆ. ಆಳುವ ಪಕ್ಷದವರ ಕಡೆಯವರಾದ ಕೆಲವು ಸದಸ್ಯರು ಮಾತ ನಾಡುತ್ತಾ ಈ ನಿರ್ಣಯ ತರುವುದಕ್ಕೆ ಇವರಿಗೇನು ಬುದ್ಧಿಗಿದ್ಧಿ ಇದೆಯೋ ಇಲ್ಲವೇ? ಎರಡು ದಿವಸ ಕಾಲ ಹಣ ವ್ಯರ್ಥವಾಗಿ ವ್ಯಯ ಮಾಡಿ ಬಿಟ್ಟರು, ಏತಕ್ಕೋಸ್ಕರ ಈ ನಿರ್ಣಯ ತರಬೇಕಾಗಿತ್ತು ಎಂದು ಕೇಳುತ್ತಾರೆ. ಓಟು ತೆಗೆದುಕೊಂಡಾಗ ಇಂಥ ನಿರ್ಣಯ ಪಾಸು ಆಗುವಷ್ಟು ಕೈಗಳು ಇವರಿಗೆ ಇವೆಯೋ? ಎನ್ನತಕ್ಕಂಥ ಮಾತು ಅವರು ಹೇಳಿದರು. ಹಾಗು ಕಟುವಾಗಿ ಟೀಕಿಸಿದರು. ಟೀಕಿಸುವುದನ್ನು ನಾನು ಯಾವಾಗಲೂ ಸ್ವಾಗತಿಸುತ್ತೇನೆ. ಯಾಕೆಂದರೆ ನಾವು ಈ ಕಡೆ ಪಕ್ಷದವರು ಇನ್ನೊಬ್ಬರನ್ನು ತೆಗಳುವುದಕ್ಕೇ ಇದ್ದೇವೆ. ಅದುದರಿಂದ ಇಂಥ ಕಟು ವಾದ ಟೀಕೆಗೆ ನಾನು ಅಸಹ್ಯ ಪಡುವುದಿಲ್ಲ ಹಾಗೂ ವ್ಯಸನಪಡುವುದಿಲ್ಲ ಆದರೆ ನಮ್ಮ ಸ್ನೇಹಿತರಾದ ಶ್ರೀಮಾನ್ ಬದರಿನಾರಾಯಣರ ವಿಚಾರದಲ್ಲಿ ನನಗೆ ಅತ್ಯಂತ ಹೆಚ್ಚಿನ ಗೌರವ ಇದೆ. ಅವರು ಕೇಳಿ ದರು, ಏತಕ್ಕೆ ಇದನ್ನು ತಂದಿರಿ? ಇದರ ಉದ್ದೇಶವೇನು? ಇದನ್ನು ನಿಮ್ಮಿಂದ ತಿಳಿಯ ಬಯಸುತ್ತೇನೆ ಎಂದು ಹೇಳಿದರು. ಈ ಉದ್ದೇಶ ಹೇಳುವುದಕ್ಕಾಗಿಯೇ ನಾನು ಈಗ ಎದ್ದು ನಿಂತಿದ್ದೇನೆ. ಶ್ರೀಮಾನ್ ಸೋಗಿಯವರು ಕೂಡ ಮಾತನಾಡಿದರು. ಅವರು ತರುಣರು. ಅವರು ಒಳ್ಳೆಯ ವಾಗ್ಮಿಗಳಾಗಿದ್ದಾರೆ. ಆದರೆ ಒಳ್ಳೇ ಮಟ್ಟದಲ್ಲಿ ಅವರು ಮಾತನಾಡುವುದಕ್ಕೆ ಸಾಧ್ಯವಾಗಲಿಲ್ಲ. ಎದುರುಗಡೆ ಇರತಕ್ಕ ಪಕ್ಷದ ಸದಸ್ಯರ ಮನಸ್ಸನ್ನು ಕೆಣಕಿಸುವ ಧಾಟಿಯಲ್ಲಿ ಮಾತನಾಡಿದ್ದಕ್ಕೆ ನಾನು ವಿಷಾದಿಸುತ್ತೇನೆ. ಶ್ರೀಮಾನ್ ಶಿವಪ್ಪನವರು ಮತ್ತು ಅವರ ಅನುಯಾಯಿಗಳು ಬಹಳ ಕೀಳುಮಟ್ಟದಿಂದ ಮಾತನಾಡಿದರು ಎಂದು ಹೇಳಿದ ಮಾತಿನಲ್ಲಿ ಯಾವ ಅರ್ಥವಿಲ್ಲ. ಕೆಲವರು ಈ ಕಡೆಯಿಂದ ಕಾಲಕಾಲಕ್ಕೆ ಈ ರೀತಿ ಅವಿಶ್ವಾಸ ನಿರ್ಣಯ ತಂದು ಕಾಲಹರಣ ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಕೆಳಮಟ್ಟದ ರಾಜಕೀಯ ಮಾಡುತ್ತಿದ್ದಾರೆ ಎಂಬ ಗುರುತರವಾದ ಅಪಾದನೆ ಮಾಡಿದರು. ನಮ್ಮ ಮಟ್ಟಿಗೆ ಹೇಳುವುದಾದರೆ ಅಂಥ ಮೆಂಬರರು ಯಾರೂ ಈ ಕಡೆ ಆರೀತಿ ಮಾತನಾಡಿಲ್ಲ. ಯಾರೂ ಪ್ರಯತ್ನ ಮಾಡಿಲ್ಲ. ಅಂಥ ಮಟ್ಟಕ್ಕೆ ನಾವು ಹೋಗುವುದಿಲ್ಲ. ಅಂಥ ಪ್ರಯತ್ನ ಮಾಡಲಿಕ್ಕೆ ಹೋಗುವುದಿಲ್ಲ. ನಾವು ಹೇಳಿದ್ದನ್ನು ನೀವು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ನಾವೇನೂ ಗ್ರೀಕ್ ಲ್ಯಾಟಿನ್ ಭಾಷೆಯಲ್ಲಿ ಹೇಳಲಿಲ್ಲ. ಕನ್ನಡದಲ್ಲಿ ಇಲ್ಲವೆ ಇಂಗ್ಲೀಷ್ ಭಾಷೆಯಲ್ಲಿ ಹೇಳಿದ್ದೇವೆ ಪ್ರಜಾಪ್ರಭುತ್ವ ನಮ್ಮ ದೇಶದಲ್ಲಿ ಉಳಿಯಬೇಕಾದರೆ ಪ್ರಜಾ ಪ್ರಭುತ್ವದಲ್ಲಿ ನಂಬಿಕೆ ಇಷ್ಟ ಇದ್ದವರ ಕೈಯಲ್ಲಿ ಅಡಳಿತ ಇರಬೇಕು ನಿಮ್ಮ ಕೈಯಲ್ಲಿ ಆಡಳಿತ ಇದ್ದರೆ ಖಂಡಿತವಾಗಿ ಪ್ರಜಾಪ್ರಭುತ್ವ ಇರುವುದಿಲ್ಲ. ಸತ್ಯವಾಗಿ ಪ್ರಜಾಪ್ರಭುತ್ವ ದೇಶದಲ್ಲಿ ಉಳಿಯುವುದಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ನೀವು ಪ್ರಜಾಪ್ರಭುತ್ವ ಕೊಲೆ ಮಾಡಬೇಕೆಂದು ಹೊರಟಿದ್ದೀರಿ. ನಿಮ್ಮ ಹಾದಿಯಿಂದ ಹೋದರೆ ದೇಶದಲ್ಲಿ ಫಾಸಿಜಂ ಬರುತ್ತದೆ. ಈಗ ಹೋಗತಕ್ಕಂಥ ರೀತಿಯಲ್ಲಿ ಏನು ಬೇಕಾದರೂ ಆಗಬಹುದು. ಹಿಂದಕ್ಕೆ ಚರ್ಚಿಲ್ ಅವರು ಒಂದು ಮಾತನ್ನು ಹೇಳಿದ್ದಾರೆ. "I have not become the Prime Minister of England for the liquidation of British Empire" ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ದೇಶದಲ್ಲಿ ಪ್ರಜಾಪ್ರಭುತ್ವ ಕೊಲೆ ಮಾಡುವುದಿಲ್ಲ ಎಂಬುದು ಮನಸ್ಸಿನಲ್ಲಿ ಇದ್ದರೆ ಈಗ ಇರತಕ್ಕಂಥ ರೀತಿಯಲ್ಲಿ ಆಡಳಿತ ಮುಂದುವರಿಸಿಕೊಂಡು ಹೋಗ ಕೂಡದು. ಬಲ ಇದ್ದರೆಬನ್ನಿ ಎಂದು ಅವರು ಅಂದರು. ನಾವು 128 ಜನ ಇದ್ದೇವೆ ನಿಮ್ಮಲ್ಲಿಯೇ ಇಂಥ ಪಾರ್ಟಿ ಅಂಫ್ ಪಾರ್ಟಿ ಇದೆ ಎಂದು ಅವರು ಅಂದರು. ಶ್ರೀಮಾನ್ ಹಂಜಿ ಶಿವಣ್ಣನವರು ಸ್ವಾರಸ್ಯವಾಗಿ ಹೇಳಿದರು. ಆದರೆ ನಾನು ಅವರಿಗೆ ಒಂದು ಮಾತು ಹೇಳುತ್ತೇನೆ. ನಮ್ಮನ್ನು ಇಲ್ಲಿಗೆ ಜನ ಕಳಿಸಿದ್ದಾರೆ. ನಿಮ್ಮನ್ನು ಹಣ ಅಧಿಕಾರ ಇಲ್ಲಿಗೆ ತಂದು ಕೂಡಿಸಿದೆ. ನಿಮ್ಮನ್ನು ಜನ ಕಳಿಸಲಿಲ್ಲ. ಹಣ ಅಧಿಕಾರ ಕಳಿಸಿದೆ. ನಾವು ಈ ಹಿಂದೆ ಹೇಳಿದ್ದೇವೆ. ನಮ್ಮಲ್ಲಿಯ ಒಬ್ಬ ಸದಸ್ಯನು ನಿಮ್ಮಲ್ಲಿಯ ನಾಲ್ಕು ಜನ ಸದಸ್ಯರನ್ನು ಹಾಕಿದರೂ ತೂಕ ಸಮಾನವಾಗುವುದಿಲ್ಲ. ನಾವು ಪಟ್ಟಂಥ ಕಷ್ಟ ಸಾಹಸ ಶ್ರಮ ಇದರ ಮುಂದೆ ನೀವು ನಿಮ್ಮ ಕುಟಿಲ ನೀತಿಯಿಂದ ಒಳಗೆ ಹೋಗಿದ್ದರೂ ಕೂಡ ಇದರಿಂದ ತಪ್ಪಿಸಿಕೊಳ್ಳಲಾರಿರಿ. ಅಭಿಮನ್ಯು ಚಕ್ರವ್ಯೂಹ ಭೇಧಿಸಿಕೊಂಡು ಒಳಗೆ ಹೋಗಿ ತಪ್ಪಿಸಿ ಕೊಂಡು ಹೊರಗೆ ಬಾರದ ಹಾಗೆ ಆಗಿದೆ. ಈ ರೀತಿಯಾಗಿದೆ ನಿಮ್ಮ ಸ್ಥಿತಿ. ನಮ್ಮ ಜಿಲ್ಲೆಯಲ್ಲಿ ಚುನಾವಣೆಯಲ್ಲಿ ಹಿಂದಿನ ರಾತ್ರಿ ಮಾನ್ಯ ಮುಖ್ಯ ಮಂತ್ರಿಗಳು ಟ್ರಾವಲರ್ಸ್ ಬಂಗಲೋನಲ್ಲಿ ತಂಗಿದಾಗ ಏನೇನು ಆಯಿತು ಅದು ನಿಮಗೂ ಗೊತ್ತಿದೆ ನನಗೂ ಗೊತ್ತಿದೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ನನಗೆ ಏನೂ ಗೊತ್ತಿಲ್ಲ. ನೀವು ಹೇಳು ವುದು ಸರಿಯಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಏನು ನಡೆಯಿತು ಇದಕ್ಕೆ ಸಾವಿರ ಜನರ ಸಾಕ್ಷಿ ಬೇಕಾದರೆ ಕೊಡಿಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಅವರು ನಿಮ್ಮ ಏಜೆಂಟ್ಸ್ ಇರಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಅದರಲ್ಲಿ ನಿಮ್ಮ ಏಜೆಂಟ್ಸೂ ಇದ್ದರು ನಮ್ಮ ಏಜೆಂಟ್ಸೂ ಇದ್ದರು. ಇಷ್ಟು ಮಾತ್ರ ತಿಳಿದುಕೊಳ್ಳೋಣ. ಈ ದಿವಸ ನಾನು ನಿಮ್ಮನ್ನು ಒಂದು ಪ್ರಶ್ನೆ ಕೇಳಬೇಕಾಗಿದೆ. ಹಿಂದೆ ಮೈಸೂರು ರಾಜ್ಯ ಸಣ್ಣ ರಾಜ್ಯವಾಗಿದ್ದಾಗ್ಗೆ ಆಡಳಿತ ಅಚ್ಚುಕಟ್ಟಾಗಿತ್ತು, ಜನ ಸುಖದಿಂದ ಇದ್ದರು. ಅದಕ್ಕೆ ಕಾರಣ ಇಷ್ಟೇ. ಪ್ರಜಾಪ್ರಭುತ್ವ ಇಲ್ಲದೇ ಇರತಕ್ಕಂಥ ದಿವಸದಲ್ಲಿ ಸರ್ ವಿಶ್ವೇಶ್ವರಯ್ಯ ಅವರು ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ಸರ್ ಶೇಷಾದ್ರಿ ಐಯರ್ ಅವರು ದಿವಾನರಾಗಿದ್ದಾಗ್ಗೆ ಕೇವಲ ಮೂರು ಕೋಟಿ ರೂಪಾಯಿ ದೇಶಕ್ಕೆ ಆದಾಯವಿದ್ದರೂ ಕೂಡ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡಿದರು, 1947 ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಈ ರಾಜ್ಯಕ್ಕೆ ನೀವು ಬರುವವರೆಗೆ ರಾಜ್ಯದಾಡಳಿತ ನೇಗಿಲ ಯೋಗಿಗಳ ಕೈಯಲ್ಲಿ ಇತ್ತು. ನೇಗಿಲವೇ ಮುಖ್ಯ ಕಸುಬು ಆಗಿರುವ ನೇಗಿಲು ಇಟ್ಟು ಕೊಂಡಂಥ ನೇಗಿಲ ಯೋಗಿಗಳ ಕೈಯಲ್ಲಿ ಈ ರಾಜ್ಯ ಇತ್ತು. 1956 ರಲ್ಲಿ ಹೊಸ ರಾಜ್ಯ ನಿರ್ಮಾಣವಾಗಿ ಈ ಜನ ಬಂದಮೇಲೆ ಏನೇನು ಆಗುತ್ತದೆ ಎಂಬುದು ಸ್ಟೇಟ್ಸ್ ರೀ—ಆರ್ಗನೈಜೇಷನ್ ಕಮಿಷನ್ ರಿಪೋರ್ಟಿನಲ್ಲಿ ವರದಿಯಾಗಿದೆ. ಮೊದಲು ಈ ದೇಶದಲ್ಲಿ ಒಂದೇ ಭಾವನೆ ಇತ್ತು. ಈ ಜಾತಿಯ ಪೆಡಂಭೂತವನ್ನು ಎಬ್ಬಿಸಿ ಹಳೇ ಮೈಸೂರಿನಲ್ಲಿ ಒಕ್ಕಲಿಗರ ರಾಜ್ಯ ಹೊಸ ಮೈಸೂರಿನಲ್ಲಿ ಲಿಂಗಾಯತರ ರಾಜ್ಯವಾಗುತ್ತದೆ ಎಂದು ಹೇಳಲಾಗಿದೆ. ನಾನು ಇದನ್ನು ಸೃಷ್ಟಿ ಮಾಡಿ ಹೇಳುವುದಿಲ್ಲ. ಇದು ಆ ವರದಿಯಲ್ಲಿ ಇದೆ. ತಾವು ಬಂದಿರಿ. ನೀವು ಮುಂಚೆ ಕೂಡ ಹೇಳುತ್ತಾ ಇದ್ದಿರಿ. ಮೈಸೂರು ರಾಜ್ಯದಲ್ಲಿ ಯಾರೇ ಬರಲಿ ಮುಖ್ಯವಾಗಿ ಒಕ್ಕಲಿಗರೇ ಆಗಲಿ ಯಾರು ಬಂದರೂ ನನಗೆ ಅಧಿಕಾರ ಬೇಡ ನನಗೆ ಆಶೆ ಇಲ್ಲ ನನಗೆ ಅಂಥಾದ್ದು ಬೇಡ ಎಂದು ಹೇಳುತ್ತಿದ್ದಿರಿ. 1956ನೇ ಇಸವಿ ನವಂಬರ್ ಒಂದನೇ ತಾರೀಖಿಗೆ ಹೊಸ ರಾಜ್ಯವಾದಮೇಲೆ ಮಾನ್ಯ ಸ್ನೇಹಿತರು ಉತ್ತರ ಕರ್ನಾಟಕ ಪ್ರದೇಶದಿಂದ ಬಂದರು. ಉತ್ತರ ಕರ್ನಾಟಕದ ಜನ ಬಹಳ ಒಳ್ಳೆಯ ಜನ. ನನಗೆ ಅವರ ಬಗ್ಗೆ ಪ್ರೇಮ ಮತ್ತು ವಿಶ್ವಾಸ ಇದೆ. ನನ್ನ ಅನೇಕ ನೆಂಟರು ಆಪ್ತರು ಧಾರವಾಡ ಜಿಲ್ಲೆಯಲ್ಲಿ ಇದ್ದಾರೆ. ಅವರಿಗೆ ಈ ಕುಟಿಲ ರಾಜಕೀಯ ನೀತಿ ತಿಳಿಯದು. ಕುಟಿಲ ನೀತಿ ಅವರಿಗೆ ಅರ್ಥವಾಗುವುದಿಲ್ಲ. ಇಂಥವರ ಆಶ್ರಯ ಸಿಕ್ಕಮೇಲೆ ನಿಜಲಿಂಗಪ್ಪನವರು ಬಂದರು. ಏತಕ್ಕೋಸ್ಕರ ನನಗೆ ವ್ಯಸನವಾಗುತ್ತದೆ ಅಂದರೆ ಶ್ರೀ ಅಜೀಜ ಶೇಠರವರು ಒಂದು ಮಾತು ಹೇಳಿದರು. ಬಸವ ಸೇನೆ ಕಟ್ಟಲು ಹೊರಟಿದ್ದೀರಾ ಎಂದು ಕೇಳಿದರು. ಬಸವ ಸೇನೆ ಎಂದು ಕೇಳಿದ ಕೂಡಲೇ ನನಗೆ ಬಹಳ ವ್ಯಸನವಾಯಿತು. ಲಿಂಗಾಯತರು ಇಲ್ಲಿ ಬಂದು ಜಾತಿಯಲ್ಲಿ ಅದು ಒಂದು ಪಂಥ. ಬಸವೇಶ್ವರರ ಹೆಸರಿನಲ್ಲಿ ಈ ರೀತಿ ಹೇಳತಕ್ಕಂಥಾದ್ದು ಇರಕೂಡದು. ಕೆಲವರ ಮನಸ್ಸಿನಲ್ಲಿ ಇಂಥ ಭಾವನೆ ಬರಬೇಕಾದರೆ ಅದು ಏನು ಕಾರಣ ಬಂತು ? ಇದಕ್ಕೆ ಕಾರಣವೇನು ? ಈ ಬಗ್ಗೆ ಯೋಚನೆ ಮಾಡತಕ್ಕಂಥ ಕಾಲ ಬಂದಿದೆ. ಈ ಅವಿಶ್ವಾಸ ನಿರ್ಣಯದಿಂದ ನಿಮಗೆ ಏನಾದರೂ ಸಹಾಯವಾಗಬೇಕಾದರೆ ಜನರ ಮನಸ್ಸಿನಲ್ಲಿ ಏನೇನು ಇದೆ ಎಂಬುದನ್ನು ತಿಳಿದುಕೊಂಡು ಮುಂದಿನ ಕ್ರಮ ರಚಿಸಬೇಕು. ನಾನು ಹೇಳುತ್ತೇನೆ ಮೈಸೂರು ರಾಜ್ಯ ಒಂದು ಜಾತಿಯ ಸ್ವತ್ತು ಅಲ್ಲ. ಒಂದು ಜಾತಿಯ ಆಸ್ತಿ ಅಲ್ಲ. ಮೈಸೂರು ರಾಜ್ಯದಲ್ಲಿ ಯಾವ ಜಾತಿಯವರೇ ಆಗಲೀ ಮುಂದೆ ಬರುವುದಕ್ಕೆ ಅವಕಾಶ ಕೊಡದೇ ಇದ್ದರೆ ನನ್ನ ದೃಷ್ಟಿಯಲ್ಲಿ ಮೈಸೂರು ರಾಜ್ಯಕ್ಕೆ ಒಳ್ಳೆಯದಾಗದು. ಇಂದು ರಾಜ್ಯ ತಕ್ಕಡಿಯವರ ಕೈಯಲ್ಲಿ ಸಿಕ್ಕಿದೆ. ಇಂದು ನೂರಕ್ಕೆ ಎಂಭತ್ತರಷ್ಟು ಇರತಕ್ಕ ಜನ ನೇಗಿಲ ಯೋಗಿಗಳ ಕೈಯಲ್ಲಿ ರಾಜ್ಯದ ಆಡಳಿತ ಇಲ್ಲ. ಈ ದಿವಸ ಕಂಪನಿಗಳಲ್ಲಿ ಆಗತಕ್ಕಂಥ ಲೂಟಿ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ನಡೆಯಿರತಕ್ಕಂಥ ಲೂಟಿ ನೋಡಿದರೆ ಯಾರ ಕೈಯಲ್ಲಿ ಇದು ಹೋಗುತ್ತಿದೆ. ಈ ದೇಶದ ಸ್ವತ್ತು ಕೆಲವೇ ಜನರ ಮುಡುಪು ಆಗುತ್ತಿದೆ. ಜಾತಿಯ ಹೆಸರಿನಲ್ಲಿ ಕೆಲವೇ ಜನ ತಕ್ಕಡಿ ಹಿಡಿದುಕೊಂಡವರ ಕೈಯಲ್ಲಿ ರಾಜ್ಯ ಇದೆ. ನೇಗಿಲ ಯೋಗಿಗಳು ನೂರಕ್ಕೆ ಎಂಭತ್ತರಷ್ಟು ಜನ ಇದ್ದರೂ ಅವರ ಕೈಯಲ್ಲಿ ರಾಜ್ಯ ಇಲ್ಲ. ಈ ರೀತಿ ಬಂದಿರತಕ್ಕಂಥ ಪರಿಸ್ಥಿತಿ ಇದು ದೇಶದ ದುರ್ದೈವ. ಇವನ್ನು ತಪ್ಪಿಸಬೇಕು. ಪ್ರಾಯಶ್ಚಿತ್ತ ರೂಪದಲ್ಲಿ ರಾಜ್ಯವನ್ನು ಮುಂದೆ ಸುಗಮವಾಗಿ ತೆಗೆದುಕೊಂಡು ಹೋಗಬೇಕೆಂಬ ದೃಷ್ಟಿಯಿಂದ ನಿಜಲಿಂಗಪ್ಪನವರಲ್ಲಿ ನಾನು ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಜಾತಿ ಪಿಡುಗು ದೇಶಕ್ಕೆ ಬಂದಿದೆ. ಇದೊಂದು ಸಮಯ ಸಿಕ್ಕಿದೆ. ಈಗ ನೀವು ಒಬ್ಬ ಹರಿಜನ ಮುಖ್ಯ ಮಂತ್ರಿಯನ್ನು ಮಾಡಿ ನಮ್ಮ ಈ ರಾಜ್ಯದಲ್ಲಿ ಜಾತಿ ಇಲ್ಲ ಯಾವುದೂ ಇಲ್ಲ. ಲಿಂಗಾಯತರು ಬೇಡ ಒಕ್ಕಲಿಗರು ಬೇಡ ಎಂಬುದನ್ನು ತೋರಿಸಿಕೊಡಿ. ಯೋಗ್ಯ ದಕ್ಷ ಹರಿಜನ ಮುಖ್ಯ ಮಂತ್ರಿಯನ್ನು ನೀವು ತೋರಿಸಿ.

ಜಾತಿ ನಮ್ಮಲ್ಲಿ ಇಲ್ಲ. ಎನ್ನುತಕ್ಕಂಥಾದ್ದನ್ನು ನಾವು ಇವೊತ್ತಿನ ದಿವಸ ಬಾಯಲ್ಲಿ ಹೇಳುವುದಕ್ಕಿಂತ ಕೃತಿಯಲ್ಲಿ ತೋರಿಸಬೇಕಾದ ಕಾಲ ಬಂದಿದೆ. ಸರ್ಪಭೂಷಣ ಶಿವಯೋಗಿಗಳು ಈರೀತಿ ಹೇಳುತ್ತಾರೆ.—

ಬಿಡುಬಾಹ್ಯದೊಳು ಡಂಬವ ಮಾನಸದೊಳಗೆಡವಿಡದಿರು ಶಂಭುವ
ಬಡವಾಳು ವಂಚಿಸಿ ಹೊರಗೆ ಕೀರ್ತಿಯ ಪಡೆವರೆ ಶಿವನಿನಗೊಲಿವನೇ ಮರುಳೇ

10-00 A.M.

ಶ್ರೀ ಎಸ್. ನಿಜಲಿಂಗಪ್ಪ.—ಖಂಡಿತ ಒಲಿಯುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅದು ಗೊತ್ತು, ನೀವು ಈ ಮಾತು ಹೇಳುತ್ತೀರಿ ಎಂದು.

ಶ್ರೀ ಎಸ್. ನಿಜಲಿಂಗಪ್ಪ.—ಅದು ನಮಗಲ್ಲ ನಿಮಗೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಈ ರಾಜ್ಯ ಬಂದಮೇಲೆ ಏನಾದರೂ ಕಲ್ಯಾಣ ಆಗಿದೆಯೇ ಎನ್ನುವುದನ್ನು ನೋಡಬೇಕಾದರೆ ಏನು ಹಿಂದೆ 1956ನೇ ನವಂಬರ್ 1ನೇ ತಾರೀಖಿನಲ್ಲಿ ಹೊಸ ರಾಜ್ಯ ಪ್ರಾರಂಭ ಆದಾಗ ನಮ್ಮ ಹಣಕಾಸಿನ ಸ್ಥಿತಿ ಏನು ಇತ್ತು ಎಂಬುದನ್ನು ನಾವು ಗಮನದಲ್ಲಿಟ್ಟುಕೊಂಡು ನೋಡಬೇಕು. ನವಂಬರ್ 1ನೇ ತಾರೀಖಿನಲ್ಲಿ ಹೊಸ ಮೈಸೂರು ರಾಜ್ಯ ಪ್ರಾರಂಭ ಆದಾಗ 25 ಕೋಟಿ ರೂಪಾಯಿ ಸಾಲ ಇದ್ದುದು ಈಗ ಎಷ್ಟಿದೆ ಎಂದು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. 1966-67ರ ಹಿಂದಕ್ಕೆ 313 ಕೋಟಿ 36ಲಕ್ಷ ರೂಪಾಯಿ ಸಾಲ ಇತ್ತು. ಅದೇ ಕಾಲಕ್ಕೆ 3ನೇ ಪಂಚವಾರ್ಷಿಕ ಯೋಜನೆಯು ಪೂರೈಸುವುದರೊಳಗೆ ಸಬ್ಸಿಡಿ ರೂಪದಲ್ಲಿ 58 ಕೋಟಿ ರೂಪಾಯಿಗಳಷ್ಟು ಹಣವನ್ನು ಉಪಯೋಗಿಸಿಕೊಂಡಿರಿ. ಸಬ್ಸಿಡಿ ಅಂದರೆ ಕೊಟ್ಟ ಹಣ ವಾಪಸ್ಸು ಕೊಡದಿರುವುದು ಧರ್ಮಕ್ಕಾಗಿ ಹೇಗೆ ಕೆನಡಾದೇಶದವರು ಒಂದು ಕೋಟಿ ಡಾಲರನ್ನು ಸಾಲಕೊಟ್ಟು ಸೂಟಾ ಬಿಟ್ಟಿದ್ದಾರೆ ಆರೀತಿ ಇವೊತ್ತಿನ ದಿವಸ ಆ ಹಣ ಎಲ್ಲಿ ಹೋಯಿತು ? ಎಂದು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಯಾವುದೋ ಒಂದು ಕಾಲದಲ್ಲಿ ದಿವಾನ್ ಮಾಧವರಾಯರು ಇದ್ದರು. ಅಂಥಹವರನ್ನು ನೆನಿಸಿಕೊಳ್ಳಬೇಕು. "ನಾವು ಬಿಟ್ಟು ಬಂದಾಗ 28ಕೋಟಿ ರೂಪಾಯಿಯನ್ನು ನಗದು ಇಟ್ಟಿದ್ದೆವು ಅದನ್ನು ಏನು ಮಾಡಿದರು ಎಂದು ಒಂದು ಸಾರಿ ಕೇಳಿದರು. ಆಗಿನ ಕಾಲದಲ್ಲಿ ಸೌಂಡ್ ಫೈನಾನ್ಸ್ ಅನುಭವ ಇದ್ದವರು ಯಾವರೀತಿ ಯೋಚನೆ ಮಾಡುತ್ತಾರೆ, ಈಗ ನಮ್ಮ ಫೈನಾನ್ಸ್ ಮಿನಿಸ್ಟರ್ ಏನು ಹೇಳುತ್ತಾರೆ ? ಅಸೆಟ್ಸ್ ಬೇಕಾದಷ್ಟು ಮಾಡಿದ್ದಾರೆ. ಸಾಲ ಮಾಡಿದರು. ಹಿಂದೆ ವ್ಯವಸಾಯಗಾರರು ಹೇಳುತ್ತಿದ್ದರು, ಸಾಲಕ್ಕೆ ಅಂಜುವವನು ಒಕ್ಕಲಿಗನಲ್ಲ ಸ್ನೇಹಕ್ಕೆ ಅಂಜುವವನು ಬ್ರಾಹ್ಮಣನಲ್ಲ" ಎಂದು. ಸಾಲ ಮಾಡುವುದು ರೂಢಿ ಆಗಿ ಬಿಟ್ಟಿದೆ. ಎಲ್ಲಿಯವರೆಗೆ ಕೊಡುತ್ತಾರೋ ಅಲ್ಲಿಯವರೆಗೆ ಸಾಲ ಮಾಡುತ್ತಾರೆ. ಸಾಲ ಕೊಡಬೇಡಿರಿ. ದಿವಾಳಿ ಸರ್ಕಾರ, ದುಂದುಗಾರಿಕೆ ಸರ್ಕಾರ, ಕೊಟ್ಟ ದುಡ್ಡು ಲಪಟಾಯಿಸುವ ಸರ್ಕಾರ ಎಂದು ಈಗ ಹೇಳುವ ಕಾಲ ಬಂದಿದೆ. ದುಡ್ಡು ಕೊಟ್ಟರೆ ಮುಂದಿನ ಸರ್ಕಾರ ರೆಪ್ಯೂಡಿಯೇಟ್ ಮಾಡುವ ಕಾಲ ಬರುತ್ತದೆ. ಯಾವರೀತಿ ಒಂದು ಮನೆತನಲ್ಲಿದ್ದ ಒಬ್ಬ ತಂದೆ ಅವ್ಯವಹಾರಿಕವಾಗಿ ಸಾಲ ಮಾಡಿದಾಗ ಮಗ ಕೋರ್ಟಿಗೆ ಹೋಗಿ ನಮ್ಮ ಮ್ಯಾನೇಜರ್ ಸರಿಯಾಗಿ ಕೆಲಸ ಮಾಡಿಲ್ಲ, ಕುಟುಂಬದ ಉಪಕಾರಕ್ಕಾಗಿ ಸಾಲ ಮಾಡಿಲ್ಲ, ಆದುದರಿಂದ ಸಾಲ ತೀರಿಸುವುದಿಲ್ಲ ಎಂದು ಹೇಳುತ್ತಾನೆ. ಹೇಗೆ ಹಿಟ್ಲರ್ ತನ್ನ ಕಾಲದಲ್ಲಿ ದೇಶದಲ್ಲಿ ಮಾಡಿದ ಸಾಲವನ್ನು ಒಂದೇ ಮಾತಿನಲ್ಲಿ ಕೊಡುವುದಿಲ್ಲ ಎಂದು ಹೇಳಿದನೋ ಮುಂದೆ ಯಾವ ಸರ್ಕಾರ ಬರಲಿ ಅವರೂ ಹಾಗೇ ನಿಮ್ಮ ಸಾಲವನ್ನು ಕೊಡುವುದಿಲ್ಲ ಎನ್ನುವ ಕಾಲ ಬರುತ್ತದೆಂದು ಎಚ್ಚರಿಕೆ ಈ ಸಭೆಯು ಕೊಡಬೇಕಾಗುತ್ತದೆ. ಇನ್ಸಿಡೆಂಟಲ್ ಡೆಟ್, ಪ್ರೈವೇಟ್ ಡೆಟ್ ಆಗಲಿ ಅವರಿಗೆ ಖಂಡಿತ ಕೊಡಬೇಡಿ ಎಂದು ಹೇಳಬೇಕಾಗುತ್ತದೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಶ್ರೀಮಾನ್ ನಿಜಲಿಂಗಪ್ಪನವರ ಮೂರನೇ ಅಧಿಕಾರದ ಯುಗದ ಕಾಲದಲ್ಲಿ ಇವರು ಇದ್ದಂಥ ಕಾಲದಲ್ಲಿ 16 ಕೋಟಿ 32 ಲಕ್ಷ ರೂಪಾಯಿಗಳನ್ನು ಕೈಗಾರಿಕೆಗೆ ಹಾಕಿದ್ದಾರೆ. ಯಾವ ಕೈಗಾರಿಕೆಗೆ ಹಾಕಿರುವುದು ? ಶಂಕರ ಟೆಕ್ಸ್‌ಟೈಲ್, ಆ ಟೆಕ್ಸ್‌ಟೈಲ್, ಈ ಟೆಕ್ಸ್‌ಟೈಲ್, ಎಂದು ಇದೆ. ಸ್ವಲ್ಪ ಪರಿಜ್ಞಾನ ಇದೆಯೇ ? ಇದಕ್ಕಾಗಿ ಕೇಂದ್ರದಲ್ಲಿ ಒಂದು ಸಂಸ್ಥೆಇದೆ ; ನ್ಯಾಷನಲ್ ಇಂಡಸ್ಟ್ರಿಯಲ್ ಫೆನಾನ್ಸ್ ಕಾರ್ಪೊರೇಷನ್ ಎಂದು. ಇದು ಯಾವು ಯಾವು ಸಿಕ್ ಆಗಿರುತ್ತದೋ, ಯಾವುವು ಕಷ್ಟ ಪರಿಸ್ಥಿತಿಯಲ್ಲಿ ಇವೆಯೋ ಅಂತಹವಕ್ಕೆ ಸಾಲ ತೆಗೆಯಲಿಕ್ಕೆ ಈ ಸಂಸ್ಥೆಗಳು ಇವೆ. ದಾವಣಗೆರೆಯಲ್ಲಿರತಕ್ಕಂಥ ಗಣೇಶ ಟೆಕ್ಸ್‌ಟೈಲ್ ಅವರಿಗೆ ಕಷ್ಟ ಬಂದಾಗ ನ್ಯಾಷನಲ್ ಇಂಡಸ್ಟ್ರಿಯಲ್ ಫೆನಾನ್ಸ್ ಕಾರ್ಪೊರೇಶನ್‌ನಲ್ಲಿ ಸಾಲ ತೆಗೆದಿದ್ದಾರೆ. ಅಂಥಹದ್ದರಲ್ಲಿ ಶ್ರೀ ಶಂಕರ ಟೆಕ್ಸ್‌ಟೈಲ್

(ಶ್ರೀ ಎಚ್. ಸಿದ್ದವೀರಪ್ಪ)

ಅವರಿಗೆ ಶ್ರೀಮಾನ್ ನಿಜಲಿಂಗಪ್ಪನವರು ಕೊಡಬೇಕಾದ ಅವಶ್ಯಕತೆ ಏನು ಇತ್ತು? ಅಷ್ಟೇ ಅಲ್ಲ, ಇವರು ಆಗಿರತಕ್ಕಂಥ ಗ್ಯಾರಂಟಿ ಎಂಥಾದ್ದು? ಗ್ಯಾರಂಟಿ ಕೊಡಲು ಕಣ್ಣು ಕಣ್ಣು ಮುಚ್ಚಿ ಕೊಂಡು ಹೋಗುವುದು ಕಾಣಿಸುತ್ತಿದೆ. ನಿಮ್ಮ ಅಧಿಕಾರಿಗಳಿಗೆ ಸವಿನಯವಾದ ಸೂಚನೆ ಹೇಳಲು ಬಯಸುತ್ತೇನೆ. ಈ ಸರ್ಕಾರ ಬಹಳ ದಿವಸ ಇರುವುದಿಲ್ಲ. ಸರ್ಕಾರ ಮಾಡಿರತಕ್ಕ ದುರಾಡಳಿತ ಇವತ್ತಲ್ಲ ಇನ್ನು 10 ವರ್ಷಗಳಾಗಲಿ ಭೂಮಿಯಲ್ಲಿ ಇರಲಿ, ಎಲ್ಲೇ ಇರಲಿ ಇದು ವಿಚಾರಣೆ ಆಗಲೇ ಬೇಕು. ವಿಚಾರಣೆ ಬಂದ ಕಾಲಕ್ಕೆ ಬಯಲಿಗೆ ಬರಬೇಕು. ತಮ್ಮ ಕರ್ತವ್ಯ ಮಾಡಿದ್ದರೆ ನೀವು ಸರ್ಕಾರಕ್ಕೆ ಸರಿಯಾಗಿ ತಿಳಿಸಿದ್ದೀರಾ? ರಿಕಾರ್ಡ್ ಇರಬೇಕು. ನಿರ್ದಾಕ್ಷಿಣ್ಯವಾಗಿ ಹೋಗಬೇಕು. ನಿಮ್ಮ ಅಧಿಕಾರಿಗಳು ಬಹಳ ಒಳ್ಳೆಯವರು ನನಗೆ ಗೊತ್ತಿದೆ. ಇವರಿಗೆ ವರ್ಗ ಮಾಡುವ ಗುಮ್ಮ ನನ್ನು ಬಿಟ್ಟು ಹೆದರಿಸುತ್ತಾರೆ. ಹೆಚ್ಚು ಕಡಿಮೆ ಮಾತನಾಡಿದರೆ ಅವರನ್ನು ಒಂದು ಗಂಟೆಯೊಳಗೆ ವರ್ಗ ಮಾಡುತ್ತೀರಿ. ಅದು ಒಂದೇ ಭಯ ತೋರಿಸುವುದು. ಸತ್ಯವಾಗಿ ನಡೆಯುವವರನ್ನು ಟ್ರಾನ್ಸ್‌ಫರ್ ಮಾಡುತ್ತೀರಿ, ಇನ್ನು ಏನೂ ಇಲ್ಲ. ಅಧಿಕಾರಿಗಳಿಗೆ ಈ ಸಮಯದಲ್ಲಿ ಒಂದು ಸವಿನಯ ಸೂಚನೆ ಕೊಡುವುದು ಏನೆಂದರೆ, ನೀವು ಕಾನೂನಿನಲ್ಲಿ ಏನು ಇದೆ ಅದನ್ನು ನೋಡಿ ಕೊಂಡು ಅದರಂತೆ ಸತ್ಯವಾಗಿ ಹೋಗಬೇಕು. ಇವೊತ್ತು ನೀವು ನಿಮ್ಮ ಉಳಿಗಾಲಕ್ಕೆ, ನಿಮ್ಮ ರಕ್ಷಣೆಗೆ ಮಾಡಬೇಕಾದ ಕೆಲಸ ಇದು ಎಂದು. ಸಾಲದ ಹೊರೆಯನ್ನು ಯಾವ ರೀತಿ ತೀರಿಸಬೇಕು? ಈ ಹಣದಿಂದ ಕೈಗಾರಿಕೆ ಇಂದು ಪ್ರಗತಿಯಾಗಿಲ್ಲ. ಸ್ವಾಮಿ, ಮೊನ್ನೆ ದಿವಸ ಶ್ರೀಮಾನ್ ದೊಡ್ಡ ಮೇಟಿ ಅಂದಾನಪ್ಪನವರು ಹೇಳಿದರು. ಲವ ಕುಶರು ಎಂದು ಹೇಳಿದರು. ಲವ ಯಾರೋ ಕುಶ ಯಾರೋ ಗೊತ್ತಾಗುತ್ತಾ ಇಲ್ಲ. ಲವ ಕುಶರು ಏತಕ್ಕೆ ಇಷ್ಟು ಮಟ್ಟಿಗೆ ಆದರು? ಪುರಾಣದ ಕಥೆಯಿಂದ ತಿಳಿದುಕೊಳ್ಳಬೇಕು. ಲವ ಕುಶರು ರಾಮನ ನೆಲೆಯಲ್ಲಿ ಬೆಳೆಯಲಿಲ್ಲ. ಅವರು ಬೆಳೆದದ್ದು ಪವಿತ್ರವಾದ ವಾಲ್ಮೀಕಿ ಆಶ್ರಮದಲ್ಲಿ ಬೆಳೆದರು. ಸೀತಾ ಮಾತೆಯಿಂದ ಬೆಳೆದರು. ಇಂತಹ ಲವಕುಶರಾಗತಕ್ಕವರು ಯಾರು? ಇದ್ದಾರೆಂದರೆ ನಾನು ನಂಬುವುದಿಲ್ಲ. ಇವರನ್ನು ಹಿರಣ್ಯಾಕ್ಷ ಹಿರಣ್ಯಕಶ್ಯಪರಿಗೆ ಹೋಲಿಸಬಹುದು. ಈ ಸಮಯದಲ್ಲಿ ಲವ ಕುಶರ ಹೋಲಿಕೆ ಇವರಿಗೆ ಅನ್ವಯಿಸುವುದಿಲ್ಲವೆಂದು. ಧೈರ್ಯವಾಗಿ ಹೇಳಬಲ್ಲೆ.

ಸ್ವಾಮಿ, ನಮ್ಮ ಮಂತ್ರಿಗಳಲ್ಲಿ ಕೆಲವರಿಗೆ ವಿದೇಶ ಪ್ರವಾಸದ ಹುಚ್ಚು ಹಿಡಿದಿದೆ. ಅದಕ್ಕೆ ಹಣವಿದೆಯೇ, ಇಲ್ಲವೇ, ಸಾಲ ತಂದಿರುವ ಹಣ ಉಪಯೋಗಮಾಡಬೇಕೇ, ಲೆವಿಯಿಂದ ಬಂದಿರುವು ದನ್ನು ಖರ್ಚುಮಾಡಬೇಕೇ, ಅಥವಾ ಬಡವರಿಂದ ತಂದಿರುವುದನ್ನು ತೆಗೆದುಕೊಳ್ಳಬೇಕೇ ಎಂಬು ದನ್ನು ಸಹ ನೋಡದೆ ಪ್ರವಾಸಮಾಡುತ್ತಿದ್ದಾರೆ. ಇದರ ಸಂಬಂಧದಲ್ಲಿ 1967 ನೆಯ ಇಸವಿ ನವೆಂಬರ್ 10ನೆಯ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಈ ರೀತಿ ಇದೆ:

(Wonderlust of Indian Ministers increases)

> "One British newspaper recently wondered how the Government of India conducted its normal business, when the Cabinet Ministers stayed away from the country for weeks at a stretch. So great was the rush of these VIPs including senior Indian officials of all descriptions that even the over-sized Indian High Commission which is a replica of the Central Secretariat complete with orderlies and hamals to run the officials' errands found this year's staggering hospitality almost unbearable. The acting Indian High Commissioner and his senior colleagues at the Mission spent most of their waking hours receiving or seeing off the endless stream of VIPs. Air India's local Manager failing to satisfy all VIPs. wanting him near the gang-way came close to a nervous breakdown."

ನಮ್ಮ ದೇಶದಲ್ಲಿ ಮಂತ್ರಿಗಳಿಗೆ ಇನ್ನೊಂದು ಹವ್ಯಾಸವಿದೆ, 'ಸಿದ್ದವೀರಪ್ಪ ಏನಾದರೂ ಕೇಳಿ ದರೆ ಕೊಡಬೇಡಿ, ಬಹಳ ಹುಷಾರಾಗಿರಿ' ಎಂದು ಅಧಿಕಾರಿಗಳಿಗೆ ಹೇಳಿರುತ್ತಾರೆ. ಹಾಗಿದ್ದರೂ

ಕೂಡ ನಮಗೆ ಹೇಗೋ ಸಮಾಚಾರ ಗೊತ್ತಾಗುತ್ತದೆ. ಹೊರಗಡೆಯಿಂದ ಸಮಾಚಾರ ತರಿಸ ಬಹುದು. ಮಂತ್ರಿಗಳು ಪ್ರವಾಸ ಹೋಗುವುದು ನನಗೆ ಗೊತ್ತಿತ್ತು. 1967ನೆಯ ಇಸವಿ ಜುಲೈ 3ನೆಯ ತಾರೀಖಿನಲ್ಲಿ ಮಂತ್ರಿಗಳನ್ನು ಈ ರೀತಿ ಕೇಳಿದೆ :

"We have been hearing from the last one week though of course the Government have not said anything about it, that the Hon'ble Minister for Finance will be shortly undertaking a tour to the foreign countries. If it is so, he may go. What we are interested in is, will there be any cost involved to the State Exchequer ? In the first place, is there any truth in his going? If he goes probably we feel sorry for his absence because there is a lot of financial business going on. In case he has to go, we would like to know whether the State Exchequer will be saddled with any cost on account of that."

ಈ ಮಾತು ಹೇಳಿದಾಗ ಮಂತ್ರಿಗಳು ನಮಗೆ ಹೀಗೆ ಹೇಳಿದರು : ಜುಲೈ 4ನೆಯ ತಾರೀಖಿನಲ್ಲಿ ಅವರು ಹೇಳಿರುತ್ತಾರೆ. ಇದೇ ವಿಚಾರದಲ್ಲಿ ನಾನು ಪ್ರಶ್ನೆ ಕೇಳಿದೆ. ಮುಖ್ಯ ಮಂತ್ರಿಗಳ ವಿಚಾರ ಓದುವುದಿಲ್ಲ. ಅವರು ಪ್ರವಾಸಮಾಡಲಿಲ್ಲ. ಅರ್ಥ ಮಂತ್ರಿಗಳು ವಿದೇಶಗಳಿಗೆ ಹೋಗಿದ್ದರು. ಯಾರ ಖರ್ಚಿನಲ್ಲಿ ಎಲ್ಲಿಗೆ ಹೋಗುತ್ತೀರಿ ಎಂದು ನಾನು ಕೇಳಿದೆ. ಅದಕ್ಕೆ 4-7-67ರಲ್ಲಿ ಹೀಗೆ ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು ಮತ್ತು ಯೋಜನಾ ಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರಿಗೆ ಒಂದು ವಿಚಾರವನ್ನು ಹೇಳಬೇಕಾಗಿದೆ. ನಾನು ವಿದೇಶಗಳಿಗೆ ಹೋಗುವ ವಿಚಾರ ಯಾವುದೂ ನಿರ್ಧಾರವಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ವರ್ತಮಾನ ಪತ್ರಿಕೆಯಲ್ಲಿ ಬಂದುದು ನಿಜವೋ ಸುಳ್ಳೋ ಎಂದು ಕೇಳುತ್ತಾರೆ. ಮಂತ್ರಿಗಳನ್ನು ಕೇಳಿ ತಿಳಿದುಕೊಳ್ಳಬೇಕೆಂದು ಹೇಳುತ್ತಾರೆ. ನಮ್ಮ ದೇಶದಲ್ಲಿ ವರ್ತಮಾನ ಪತ್ರಿಕೆಯಲ್ಲಿ ಬರುವುದು that is the only medium of communication. ಆದುದರಿಂದ ವರ್ತಮಾನ ಪತ್ರಿಕೆಯಲ್ಲಿ ಬಂದುದನ್ನು ಕೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ವರ್ತಮಾನ ಪತ್ರಿಕೆಗಳಲ್ಲಿ ಅಧಿಕೃತವಾಗಿ ಬಂದಿದೆಯೆಂದು ನನಗನ್ನಿಸುವುದಿಲ್ಲ. ಹೀಗಾಗಿ ಆ ವಿಚಾರವಾಗಿ ಯಾರೂ ಮಾತನಾಡುತ್ತಾ ಇಲ್ಲ. ಮುಖ್ಯ ಮಂತ್ರಿಗಳು ಅಲ್ಲಿಗೆ ಹೋದರೆ ಅದರಿಂದ ಪ್ರಯೋಜನವಾಗುತ್ತದೆಂದರೆ ಅವರು ಹೋಗಬೇಕು. ಮಂತ್ರಿಗಳಲ್ಲಿ ಯಾರಾದರೂ ಹೋದರೆ ಅದರಿಂದ ಪ್ರಯೋಜನವಾಗುತ್ತದೆಂದರೆ ಅವರು ಹೋಗ ಬೇಕು. ಅಥವಾ ಯಾರಾದರೂ ಸದಸ್ಯರನ್ನು ಕಳುಹಿಸುವುದರಿಂದ ಪ್ರಯೋಜನವಿದ್ದರೆ. ಅವರನ್ನು ಕಳುಹಿಸಬೇಕು. ಆದ್ದರಿಂದ ಅದನ್ನು ಇಲ್ಲಿ ದೊಡ್ಡದಾಗಿ ಪ್ರಸ್ತಾಪಮಾಡುವ ಅಗತ್ಯವೇ ಇರಲಿಲ್ಲ ..

ಶ್ರೀ ಎಚ್. ಸಿದ್ದವೀರಪ್ಪ.—ಮತ್ತೆ ಇನ್ನೊಂದು ಸಾರಿ 17-7-67ರಲ್ಲಿ ಇದೇ ಪ್ರಶ್ನೆ ಬಂದಿದೆ. 17ನೆಯ ತಾರೀಖು ಬಹಳ ಮುಖ್ಯವಾದುದು, ಕಾರಣ ಹೇಳುತ್ತೇನೆ. 17-7-67ರಲ್ಲಿ ನಾನು ಕೇಳಿದ್ದು ಈ ರೀತಿ ಇದೆ:

"Sri H. Siddaveerappa : Before the demands are taken up, I would like to bring to your kind notice that today's paper mentions that our Chief Minister proposes to have a continental tour to Japan and Germany. That is what has been published in the papers. He may visit and we shall be very happy if he visits; perhaps it will do some good to his health. But what we are worried about is with regard to the expenditure on the public exchequer whenever these tours are undertaken. Hereafter, in view of the stringent economy measures the Government wish to impose, not a single paisa should be spent out of

(ಶ್ರೀ ಎಚ್. ಸಿದ್ದವೀರಪ್ಪ)

the public exchequer on any foreign tour by any of the Ministers. If they have to do it, they have to bring it before this House and if the House is satisfied about their tour then only it can be done. I am not against the Chief Minister or any other Minister going abroad. But we are worried about the public money being spent on that account."

17ನೆಯ ತಾರೀಖು ನಾನೊಂದು ಚುಕ್ಕೆಯ ಗುರುತಿನ ಪ್ರಶ್ನೆ ಹಾಕಿದೆ. 10 ಪ್ರಶ್ನೆ ಅಗಲೇ ಕೊಟ್ಟಿರುವುದರಿಂದ ಅದನ್ನು ಚುಕ್ಕೆ ಗುರುತಿನ ಪ್ರಶ್ನೆಯಾಗಿ ಪರಿಗಣಿಸುವುದಕ್ಕಾಗುವುದಿಲ್ಲ, ಅನ್‌ಸ್ಟಾರ್ಡ್ ಪ್ರಶ್ನೆಯಾಗಿ ಟ್ರೀಟ್ ಮಾಡುತ್ತೇವೆ ಎಂದು ಹೇಳಿದರು. ಆದರೆ ಅದಕ್ಕೆ ಜವಾಬೇ ಬಂದಿಲ್ಲ. ಸೆಕ್ರೆಟರಿಯವರು ಸಭೆಯಮುಂದೆ ಇಟ್ಟ ಮೊದಲನೆಯ ಪಟ್ಟಿಯಲ್ಲಿ ನನ್ನ ಪ್ರಶ್ನೆ ಇಲ್ಲ, ಅದಕ್ಕೆ ಕಾರಣ ವಿದೆ. ನನ್ನ ಪ್ರಶ್ನೆ ಈ ರೀತಿ ಇತ್ತು :

"The total foreign-exchange incurred on this tour;

The number of countries he visited and the number of days spent in each country ;

Whether he has submitted any tour notes to the Government;

If so, whether the same would be placed on the Table of the House ;

The amount spent by the Mysore Government treasury on account of the tour ;

Whether it is not a fact that the Finance Minister had given an assurance on the floor of the House that he did not intend to undertake a foreign tour ;

The number of times he has visited foreign countries as Minister and the total amount the Government have spent on his previous tour and the purpose of the tour...etc."

ಆಮೇಲೆ ಜುಲೈ 15ರಲ್ಲಿ ಒಂದು ಗವರ್ನಮೆಂಟ್ ಆರ್ಡರಾಗಿದೆ, ಅದರ ಕಾಪಿ ನನ್ನಲ್ಲಿದೆ ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ನವರು ಕೊಟ್ಟಿದ್ದಾರೆ. ಆ ಆರ್ಡರಿನಲ್ಲಿ ಹೇಳಿರುವುದು ವಿಚಿತ್ರವಾಗಿದೆ. ಅದನ್ನು ಓದುತ್ತೇನೆ. ಅದು ಈ ರೀತಿಯಾಗಿದೆ :

GOVERNMENT OF MYSORE

Commerce and Industries Department

Order No. CI 154 GMT 67 dated, Bangalore, 15th July 1967
24th Asada, S.E. 1889

Preamble :—

The Finance Minister, has for some time past been closely and continuously associated within the State as well as outside at Bombay and Calcutta, with the sponsoring of certain new projects for the rapid industrialisation of the State. From the point of view of investment and

industrial development, some of the projects envisaged are of considerable magnitude, notably the projects relating to:

(Japan 2, France 1, America 2)

* * * *

Certain foreign firms have shown keen interest in collaborating both financially and technically with the State Government in establishing these industries,

***

A well known firm of the USA has offered both technical and financial collaboration for establishing the project in Mysore State.

The importance and urgency of establishing such big industries in the State cannot be over-emphasised. It is essential that advantage should be taken of the foreign offers available without delay.

It is felt that proposals for establishing those projects could be negotiated more effectively, in a speedier manner and brought to a stage of finality, if the Finance Minister were to go to Japan, United States and France directly to participate in the negotiations. Psychologically too, this would be of great value.

Order :—

In the interest of the rapid establishment of industries in the State with foreign technical and financial collaboration, Government approve of the Finance Minister undertaking a tour in Japan, the USA and France for a period of five weeks for the purpose of directly participating in the negotiations with foreign collaborators, more particularly those mentioned in the preamble.

2. The expenditure on this account shall be debited to the budget head "19-General Administration—A—b—Ministers."

Subject : **Foreign tour of Shri Ramakrishna Hegde (Minister for Finance.)**

GOVERNMENT OF MYSORE

(Commerce and Industries Department)

Government order No. CI 154 GMI 1967

Bangalore dated 22nd August 1967/Shravana 31, S.E. 1889

Read: Government order No. CI 154 GMI 67 dated 15th July 1967

Preamble.—

In the Government order cited above, Government have approved of the Minister for Finance undertaking a tour in Japan, the U.S.A. and

(ಶ್ರೀ ಹೆಚ್. ಸಿದ್ಧವೀರಪ್ಪ)

France for a period of five weeks for the purpose of directly participating in the negotiations with foreign collaborators in the interest of the rapid establishment of Indistries in the State with Foreign Technical and financial collaboration.

Order :—

In partial modification of the orders issued in Government order No. CI 154 67 dated 15th July 1967, Government approve the tour of the Minister for Finance In Japan, the U.S.A. and France for a period of eight weeks.

2. Sanction is also accorded to an advance of Rs. 25,900 (Rupees twenty five thousand nine hundred only) towards the probable expenditure in connection with D.A., T.A., etc. of the said foreign tour.

* * * *

Deputy Secretary to Government,
C & I DEPARTMENT

17ನೆಯ ತಾರೀಖು ಪ್ರಶ್ನೆ ಕೇಳಿದಾಗ ಬಾಯುಲ್ಲಿ ಕಡುಬಿತ್ತೇ ? ಸತ್ಯಾಂಶವನ್ನೇಕೆ ಹೇಳಲಿಲ್ಲ ? ಸರಕಾರದವರು ಹೀಗೇಕೆ ಕಳ್ಳತನ ಮಾಡಿದರು ? 15ನೆಯ ತಾರೀಖು ಆರ್ಡರು ಮಾಡಿರುವಾಗ 17ನೆಯ ತಾರೀಖು ಪ್ರಶ್ನೆ ಕೇಳಿದರೆ ಆಗ ಏಕೆ ಹೇಳಲಿಲ್ಲ ? ಅಮೇಲೆ ಈ ಆರ್ಡರುಗಳನ್ನು ಹೊರಡಿಸಿ ಹೋಗಿದ್ದಾರೆ. ಮೊದಲು 5 ವರ್ಷ ಎಂದು ಮಾಡಿದರು. ಬಿಲ್ಸ್ ಬಂದಮೇಲೆ 8 ವರ್ಷ ಮಾಡಬೇಕೆಂದಿದ್ದಾರೆ. ಇದರ ಜೊತೆಗೆ 15-7-1967ರಲ್ಲಿ ಆರ್ಡರಾದಮೇಲೆ ಆಗಸ್ಟ್ 27ರಲ್ಲಿ ಅಡ್ವಾನ್ಸ್ 25,900 ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಇನ್ನೂ ಎಷ್ಟು ಖರ್ಚಾಗಿದೆಯೋ ದೇವರಿಗೇ ಗೊತ್ತು ! ಅವರು ಯಾವಾಗಲೂ 5 ಸಂಖ್ಯೆ ಫಿಗರ್ ಖರ್ಚು ಮಾಡುವವರಲ್ಲ 6–7 ಸಂಖ್ಯೆ ಫಿಗರ್‌ನಲ್ಲೇ ಸಂತುಷ್ಟಿಪಡುವವರು, ಮೊದಲು ದಕ್ಷಿಣೆ ಕೊಟ್ಟರೆ ಒಂದು ರೂಪಾಯಿ ಎರಡು ರೂಪಾಯಿ ಕೊಟ್ಟರೆ ಸಮಾಧಾನವಾಗುತ್ತಾ ಇತ್ತು ಈಗ ಆಗುವುದಿಲ್ಲ ಆ ರೀತಿ. ಅದಾದ ಮೇಲೆ ಒಂದು ಪ್ರಶ್ನೆಯನ್ನು ಚೀಫ್ ಮಿನಿಸ್ಟರ್‌ನ್ನು ಕೇಳಿದೆ, ಅದೇನೆಂದರೆ :

> "The number of new industries started in the State either in the private sector or public sector after the Chief Minister and his colleagues started negotiations in Bombay and Calcutta".

11ನೇ ಲಿಸ್ಟ್‌ನಲ್ಲಿ ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೇನೆ ಅದಕ್ಕೆ ಅವರು ಕೊಟ್ಟಿರತಕ ಉತ್ತರ 'ನಿಲ್'' ಅಂತ. ಪತ್ರಿಕೆಗಳಲ್ಲಿ ಓದಿದೆ 'ನೀವು' ಯಾರು ಹೋಗುವುದಕ್ಕೆ, ಕೊನೆಯ್ಕ ಮಾತನಾಡಲಿಕ್ಕೆ ನಿಮಗೆ ಏನು ಹಕ್ಕು ಇದೆ' ಎಂದು ಕೇಂದ್ರಸರ್ಕಾರದವರು ಅವರಿಗೆ ವಾರನ್ ಮಾಡಿದ್ದಾರೆ. ಅದನ್ನು ನೋಡಿ ಇವರು ನಾವೇನು ಬೇಕಾದರೂ ಮಾಡುತ್ತೇವೆ, ಈಕೇಂದ್ರ ಸರ್ಕಾರ ಅಸ್ಥಿ ಇದ್ದ ಹಾಗೆ ಇವೆ. ಏನು ಮಾಡುವುದಕ್ಕೂ ಮುಂದೆ ಬಿಡುತ್ತಿಲ್ಲ, ಈಕೇಂದ್ರ ಸರ್ಕಾರದ ನೀತಿಯಿಂದ ನಾವು ಕೈಗಾರಿಕೆಗಳನ್ನು ಮುಂದುವರಿಸುವುದಕ್ಕೆ ಆಗುತ್ತಿಲ್ಲ ಎಂದು ಸ್ಟೇಟ್‌ಮೆಂಟ್ ಕೊಟ್ಟರು. ಯಾವ್ಯಾವ ಊರಿಗೆ ಹೋಗಿದ್ದಿರಿ ? ಹೊನಲೂಲು, ಹಾಲಿವುಡ್‌ನಲ್ಲಿ ಎಷ್ಟು ದಿವಸ ಇದ್ದಿರಿ ? ಯಾವ ಯಾವ ಕೈಗಾರಿಕೆಗಳನ್ನು ನೋಡಿಕೊಂಡು ಬಂದಿರಿ ? ಇದೇನು ವಿಹಾರ ಯಾತ್ರೆಯೇ ? ಹೊರದೇಶಗಳಿಂದ ಕೈಗಾರಿಕೆಗಳನ್ನು ನಮ್ಮ ದೇಶಕ್ಕೆ ಬರಮಾಡಿ ಕೊಳ್ಳಲಿಕ್ಕಾಗಿ ಮಾಡಿದ ಯಾತ್ರೆಯೇ ಎಂಬುದನ್ನು ನಮಗೆ ಹೇಳಬೇಕು. ನಾನು ಮಂತ್ರಿಯಾಗಿ

ದ್ದಾಗ ಪರದೇಶಕ್ಕೆ ಹೋಗಿದ್ದೆ. ಒಂದು ಪೈಸಾವನ್ನೂ ಕೂಡ ಸರ್ಕಾರಕ್ಕೆ ಖರ್ಚು ಹಾಕಲಿಲ್ಲ. ಒಂದು ಪೈಸಾ ಖರ್ಚು ಹಾಕಿದರೆ ದೇಶಕ್ಕೆ ದ್ರೋಹ ಮಾಡಿದಂತೆ ಎಂಬ ದೃಷ್ಟಿಯಿಂದ ಮುಖ್ಯ ಮಂತ್ರಿಗಳಾಗಿದ್ದ ನಮ್ಮ ಹಿರಿಯರು ನಮ್ಮ ಕೈಯಿಂದಲೇ ಹಾಕಬೇಕೆಂದು ಹೇಳಿದರು. ನಾನೂ ಕೂಡ ಹೊರದೇಶಗಳಿಗೆ ಹೋಗಿ ಅಲ್ಲಿ ನಡೆಯುತಕ್ಕ ಕೈಗಾರಿಕೆಗಳನ್ನು ನೋಡಿಕೊಂಡು ಬಂದೆ. ಒಂದು ವರದಿಯನ್ನೂ ಕೂಡ ಕೊಟ್ಟಿದ್ದೇನೆ. ಸರ್ಕಾರ ಇಂತಿಂಥ ಕಡೆ ಇಂತಿಂಥ ಕೈಗಾರಿಕೆಗಳನ್ನು ಮಾಡಬೇಕು ಎಂದು ಹೇಳಿದ್ದೇನೆ. ಆ ರೀತಿ ಯಾವುದೂ ಮಾಡದೇ ಸರ್ಕಾರದ ಹಣವನ್ನು ಹೀಗೆ ಲಬ ಟಾಯಿಸ್ತಾರೆಯೇ, ಸರ್ಕಾರದ ಹಣವನ್ನು ಲೂಟಿ ಮಾಡ್ತಾರೆಯೇ ಎಂದು ಶ್ರೀಮಾನ್ ಬದರೀ ನಾರಾಯಣರವರನ್ನು ಕೇಳುತ್ತೇನೆ. ಅವರಲ್ಲಿ ಸಂಸ್ಕೃತಿ ಇದೆಯೇ, ಈ ರೀತಿ ಮಾಡುವುದು ಸರಿಯೇ? ನನಗೆ ಗೊತ್ತು ನಿಮಗೆ ಅನೇಕರಲ್ಲಿ ಈ ರೀತಿ ಆಗುತ್ತಾ ಇರುವುದನ್ನು ನೋಡಿ ಬಹಳ ಸಂಕಟ ಇದೆ, ಬಹಳ ವ್ಯಥೆ ಇದೆ, ಆದರೆ ಏನು ಮಾಡುವುದು ದುರ್ಯೋಧನನ ಸಭೆಯಲ್ಲಿ ಭೀಷ್ಮ ಇದ್ದ, ವಿದುರ ಇದ್ದ, ಬೇಕಾದಷ್ಟು ಜನ ಆಚಾರ್ಯರು ಇದ್ದರು. ಆದರೂ ದ್ರೌಪದಿಯ ಮಾನ ಭಂಗವಾಗುವ ಕಾಲಕ್ಕೆ ಅವರೆಲ್ಲರೂ ಸಹ ಕೈಕಟ್ಟಿಕೊಂಡು ಇದ್ದರು 'ನಾವೇನು ಮಾಡುವುದು ಉಪ್ಪು ತಿಂದಿದ್ದೇವೆ ಅದಕ್ಕೇ ಸುಮ್ಮನೆ ಇರಬೇಕು' ಅಂತ. ಆ ರೀತಿ ಅವರ ಉಪ್ಪನ್ನು ತಿನ್ನುತ್ತಾ ಇದ್ದೇವೆ ಆದ್ದರಿಂದ ಸುಮ್ಮನೆ ಇರಬೇಕಾಗಿದೆ ಎಂದು ನಮ್ಮ ಸ್ನೇಹಿತರು ಈಗ ಸುಮ್ಮನೆ ಇದ್ದಾರೆ.

ಶ್ರೀ ಡಿ. ಎಂ. ಸಿದ್ಧಯ್ಯ (ಬಿಳಿಗೆರೆ).—ನಾವು ಯಾರ ಉಪ್ಪನ್ನೂ ತಿಂದು ಯಾರ ಹಂಗಿನಲ್ಲೂ ಇಲ್ಲ, ಯಾರ ಹಂಗಿಗೂ ಒಳಗಾದವರಲ್ಲ, ಜನರಿಂದ ಚುನಾಯಿತರಾಗಿ ಬಂದಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.— ಬಹಳ ಸಂತೋಷ ಒಪ್ಪಿಕೊಳ್ಳುತ್ತೇನೆ. ಇವತ್ತಿನ ದಿವಸ ನಿಮ್ಮ ಕಾಲದಲ್ಲಿ ಈ ಕೈಗಾರಿಕೆಗಳೆಲ್ಲಾ ಕುಂಠಿತವಾಗಿವೆ, ನೀವು ಬಂದ ಮೇಲೆ, ಈ ರಾಜ್ಯ ಪ್ರಾರಂಭವಾದ ಮೇಲೆ ಒಂದು ಹೊಸ ಕೈಗಾರಿಕೆಯನ್ನೂ ಮಾಡಲಿಲ್ಲ, ನೀವು ಕೊಟ್ಟಂಥ ದುಡ್ಡು ಎಲ್ಲಾ ಕ್ಷಯ ರೋಗ ಹತ್ತಿದಂತಹ ಕೈಗಾರಿಕೆಗಳಿಗೆ ಕೊಟ್ಟಿರೇ ಹೊರತು ಪೂರ್ಣಾವಸ್ಥೆಯಲ್ಲಿರ ತಕ್ಕ ಮುಂದೆ ಬರತಕ್ಕ ಕೈಗಾರಿಕೆಗಳಿಗೆ ಯಾವುದಕ್ಕೂ ಕೊಟ್ಟಿಲ್ಲ, ಬರೀ ಸ್ಟ್ರೆಪ್ಟೋಮೈಸಿನ್ ಕೊಟ್ಟದ್ದೂ ಕೊಟ್ಟದ್ದೇ. ಇವತ್ತು ಸಾಯುವವರು ನಾಳೆ ಸಾಯಬಹುದು ಅಷ್ಟೆ. ಕೆಲವು ಕೈಗಾರಿಕೆಗಳನ್ನು ಈ ರೀತಿ ಮಾಡಿ ತಮಗೆ ಬೇಕಾದವರಿಗೆ, ತಮಗೆ ಯಾರಲ್ಲಿ ಆಸಕ್ತಿ ಇದೆಯೋ ಅವರಿಗೆ ಮಾರಾಟ ಮಾಡಲಿಕ್ಕೆ ಒಂದು ಒಳಸಂಚನ್ನು ಮಾಡಿದ್ದಾರೆ. ನೀವು ನಡೆಸಿದರೆ ಲುಕ್ಸಾ ನಾಗುತ್ತದೆ, ಖಾಗಿಯವರು ನಡೆಸಿದರೆ ಲುಕ್ಸಾನಾಗುವುದಿಲ್ಲವೊ? ಇದಕ್ಕೆ ಕಾರಣವೇನು? ನಿಮಗೆ ಈ ಕೈಗಾರಿಕೆಗಳನ್ನು ನಡೆಸುವುದಕ್ಕೆ ಶಕ್ತಿ ಇಲ್ಲ, ಯೋಗ್ಯತೆ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದನ್ನು ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ಈ ಹಿಂದೆ ನಾವು ಮುಂದೆ ಕರ್ನಾಟಕ ರಾಜ್ಯ ಆಗಲಿ ಎಂದು ಹೇಳಿದಾಗ ಅನೇಕರು ಅನೇಕ ರೀತಿಯಲ್ಲಿ ಶಂಕೆ ಇದ್ದರೂ ಕರ್ನಾಟಕದಲ್ಲಿ ಇದ್ದಂಥ ಅಪಾರ ಸಂಪತ್ತನ್ನು ಉಪಯೋಗಿಸಿ ಬಡ ಜನರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಹಣವನ್ನು ವ್ಯಯ ಮಾಡಬೇಕು, ಅವರಿಗೆ ಹೆಚ್ಚಿನ ಅನುಕೂಲಗಳನ್ನು ಮಾಡ ಬೇಕು ಎನ್ನತಕ್ಕ ದೃಷ್ಟಿಯಿಂದ ಕರ್ನಾಟಕ ರಚನೆ ಮಾಡಿದೆವೇ ಹೊರತು ಕೆಲವರ ಹೊಟ್ಟೆ ತುಂಬಿ ಕೊಳ್ಳಲಿಕ್ಕೆ ಮಾಡಿದ್ದಲ್ಲ. ಇವತ್ತಿನ ದಿವಸ ಏನಾಗಿದೆ? ಎಲ್ಲಿ ನೋಡಿದರೂ ಬಡವ ಬಡವನೇ ಆಗಿದ್ದಾನೆ, ನಿರುದ್ಯೋಗದ ಸಮಸ್ಯೆ ದಿನೇ ದಿನೇ ಹೆಚ್ಚುತ್ತಾ ಇದೆ. 5000 ಜನ ಇಂಜನಿಯರಿಂಗ್ ಗ್ರ್ಯಾಜ್ಯುಯೇಟುಗಳು ಇವತ್ತಿನ ದಿವಸ ಕೆಲಸವಿಲ್ಲದೇ ಅವರ ಒಂದು ಯೂನಿಯನ್ ಮಾಡಿಕೊಂಡಿ ದ್ದಾರೆ. 14 ಇಂಜನಿಯರಿಂಗ್ ಕಾಲೇಜುಗಳು ಇವೆ, 29 ಪಾಲಿಟೆಕ್ನಿಕ್‌ಗಳು ಇವೆ, ಅಲ್ಲಿ ಓದಿ ಪರೀಕ್ಷೆಗಳನ್ನು ಪಾಸ್ ಮಾಡಿಕೊಂಡು ಬಂದು ಕೆಲಸವಿಲ್ಲದೇ ಇರತಕ್ಕ ಹುಡುಗರ ಗೋಳು ನೋಡು ವುದಕ್ಕೆ ಆಗುವುದಿಲ್ಲ, ಈ ರೀತಿ ಕಷ್ಟಪಡುವುದಕ್ಕಿಂತ ಕಣ್ಣುಮುಚ್ಚಿಕೊಳ್ಳುವುದು ಲೇಸು ಎಂದು ಹೇಳಿ ಅವರು ಸಂಕಟಪಡುತ್ತಾ ಇದ್ದಾರೆ. ಶ್ರೀಮಾನ್ ಜತ್ತಿಯವರಿಗೆ ಪ್ರಾರ್ಥನೆ ಮಾಡುತ್ತೇನೆ, 50 ಸಾವಿರ ಮೂಟೆ ಸಕ್ಕರೆ ಬರುತ್ತದೆಯಲ್ಲಾ ಒಂದೊಂದು ಮೂಟೆ ಸಕ್ಕರೆಯನ್ನಾದರೂ ಆ ಹುಡುಗರಿಗೆ ಕೊಡಿ 500 ರೂಪಾಯಿ ಸಿಕ್ಕುತ್ತದೆ. ಕೆಲಸ ಮಾಡುತ್ತೇನೆ ಎಂದರೆ ಅವರಿಗೆ ಕೆಲಸವಿಲ್ಲ, ತಮಗೆ ಅದರ ಕಡೆಗೆ ಗಮನವೇ ಇಲ್ಲ. ಎಲ್ಲಿ ನೋಡಿದರೂ ನಾವು ಅಲ್ಲಿ ಹಾಗೆ ಮಾಡುತ್ತೇವೆ, ಇಲ್ಲಿ ಹೀಗೆ ಮಾಡುತ್ತೇವೆ, ಎಂದು ಹೇಳುತ್ತಿದ್ದೀರೇ ಹೊರತು ಮತ್ತೇನೂ ಕಾಣಿ ಸುತ್ತಿಲ್ಲ.

ಇನ್ನು ಈ ಕಂಟ್ರಾಕ್ಟುದಾರರುಗಳ ಕೆಲಸದ ವಿಷಯದಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದು, ಈಗಾಗಲೇ ಎಷ್ಟೊ ವೇಳೆ ಈ ವಿಷಯವನ್ನು ಹೇಳಿದ್ದೇನೆ. ಈ ಕಂಟ್ರಾಕ್ಟು ದಾರರುಗಳ ಹಾವಳಿ ಈ ದೇಶಕ್ಕೆ ತಪ್ಪಿದ್ದಲ್ಲ. ಇವತ್ತು ಏನಾಗಿದೆ? ಇವರೆಲ್ಲರೂ ಈ ಕಂಟ್ರಾಕ್ಟು ದಾರರುಗಳೊಡನೆ ಭಾಗಿಗಳಾಗಿದ್ದಾರೆ—ಮಂತ್ರಿಮಂಡಲದಲ್ಲಿರತಕ್ಕವರು ಎಲ್ಲರೂ ಎಂದು ನಾನು

(ಶ್ರೀ ಎಚ್. ಸಿದ್ಧವೀರಪ್ಪ)

ಹೇಳುವುದಿಲ್ಲ—ಕೆಲವರು ಭಾಗಿಗಳಾಗಿದ್ದಾರೆ. 5 ಸ್ಟಾರ್ ಹೋಟೇಲ್‌ಗೂ ಅವೇ ಕಂಟ್ರಾಕ್ಟ್‌ದಾರರು. ಆಮೇಲೆ ಭದ್ರಾವತಿಯಲ್ಲಿ ಮೊನ್ನೆ 60-70 ಜನರು ಆರ್.ಸಿ.ಸಿ. ಹಾಕಬೇಕಾದರೆ ಸೆಂಟರಿಂಗ್ ಸರಿಯಾಗಿ ಹಾಕಿರಲಿಲ್ಲ ಅದು ಬಿದ್ದು ಹೋಯಿತು, ಮೈ ಕೈ ಮುರಿದುಕೊಂಡರು ಅದಕ್ಕೂ ಅದೇ ಕಂಟ್ರಾಕ್ಟ್‌ದಾರರು, ಮಲ್ಟಿಸ್ಟೋರೀಡ್ ಬಿಲ್ಡಿಂಗಿಗೂ ಅದೇ ಕಂಟ್ರಾಕ್ಟ್‌ದಾರರು, ಕಮಿರ್ಷಿಯಲ್ ಟ್ಯಾಕ್ಸ್ ಬಿಲ್ಡಿಂಗ್‌ಗೂ ಅದೇ ಕಂಟ್ರಾಕ್ಟ್‌ದಾರರು, ಆ ಕಂಟ್ರಾಕ್ಟ್‌ದಾರರ ಕೈಯಲ್ಲಿ ನೀವು ಇದ್ದೀರಿ. ಅದೂ ಹೋಗಲಿ, ಅದಕ್ಕೂ ಯೋಚನೆ ಇಲ್ಲ ಅವರು ಏನಾದರೂ ಮಾಡಿಕೊಳ್ಳಲಿ, ಭದ್ರಾವತಿಯಲ್ಲಿ ಸೆಂಟರಿಂಗ್ ಬಿದ್ದುಹೋಗಿ ಎಷ್ಟು ಜನ ಮೈ ಕೈ ಮೂಳೆ ಮುರಿದುಕೊಂಡರಲ್ಲಾ ಅವರ ಗತಿ ಏನು ಎಂಬುದನ್ನು ಯೋಚನೆ ಮಾಡಿದ್ದೀರಾ? ಭದ್ರಾಚಾನಲ್ ಕೆಳಗೆ ಕೆಲಸ ನಡೆಯುತ್ತಾ ಇದೆ, ಅಲ್ಲಿ ಮಾಡುತ್ತಾ ಇರತಕ್ಕ ಕಾರ್ಯ ಸರಿಯಾಗಿಲ್ಲ ಕೆಲವು ದಿವಸಗಳ ಹಿಂದೆ ಒಂದು ಪ್ರದೇಶದಲ್ಲಿ ನಾಲೆ ಒಡೆದು ಎರಡು ಲಕ್ಷ ಎಕರೆಯಲ್ಲಿರತಕ್ಕ ಫಸಲಿಗೆ ನಷ್ಟವಾಯಿತು. ಎಲ್ಲಿ ಏನಾದರೂ ಆಗಲೀ ನಮಗೇನು ಎಂದು ಈ ರೀತಿ ಪ್ರತಿನಿತ್ಯ ನಡೆಯುತ್ತಾ ಇರತಕ್ಕದ್ದನ್ನು ನಾವು ನೋಡುತ್ತಾ ಇದ್ದೇವೆ. ಇಂತಹ ಅನೇಕ ವಿಷಯಗಳು ಇವೆ, ಆದರೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಅದು ಬಹಳ ಮುಖ್ಯವಾದದ್ದು ಅದು ಯಾವುದು ಎಂದರೆ, ದೇಶದಲ್ಲಿ ಶಾಂತಿ ರಕ್ಷಣೆ ಮಾಡುವುದು, ಲಾ ಅಂಡ್ ಆರ್ಡ್‌ರ್. ಮೊದಲಿನ ರಾಜ್ಯಕ್ಕೆ ಅದನ್ನು 'ತಳವಾರಿಕೆ ರಾಜ್ಯ' ಎಂದು ಕರೆಯುತ್ತಾಯಿದ್ದರು. ಅವರ ಕೆಲಸ ಏನು? ಕಂದಾಯ ವಸೂಲು ಮಾಡುವುದು, ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದು.—ನಾವು ಈ ಸುಖೀ ರಾಜ್ಯದ ಕಲ್ಪನೆ ಮಾಡುವುದಕ್ಕೆ ಮುಂಚೆ— ಇದೇ ಅವರ ಆದ್ಯ ಕರ್ತವ್ಯವಾಗಿತ್ತು. ಇವತ್ತು ನಮ್ಮ ದೇಶದಲ್ಲಿ ಲಾ ಅಂಡ್ ಅರ್ಡರ್ ಎಲ್ಲಿದೆ? ಯಾವ ರೀತಿ ಇದೆ ಎಂಬುದನ್ನು ನೋಡಿ. ಮಧುಗಿರಿಯಲ್ಲಿ ಏನಾಯಿತು ಎಂಬುದನ್ನು ನಾವೆಲ್ಲಾ ನೋಡಿದ್ದೇವೆ. ಈ ಸಮಯದಲ್ಲಿ ಹೇಳಬೇಕೆಂದರೆ ಶ್ರೀಮಾನ್ ರಾಮರಾಯರು ಈ ದೇಶಕ್ಕೆ ಒಂದು ಒಳ್ಳೆಯ ಸತ್ಸಂಪ್ರದಾಯವನ್ನು ಹಾಕಿಕೊಟ್ಟಿದ್ದಾರೆ ಎಂದರೆ ತಪ್ಪಾಗಲಾರದು. ಇದು 'ಹಿಂದು' ಪತ್ರಿಕೆಯಲ್ಲೂ ಕೂಡ ಬಂದಿದೆ. 19ನೆಯ ತಾರೀಖಿನ ಪತ್ರಿಕೆಯಲ್ಲಿ ಲೀಡರ್ ಬರೆದಿದ್ದಾರೆ—ಶ್ರೀಮಾನ್ ರಾಮರಾಯರು ರಾಜೀನಾಮೆ ಕೊಟ್ಟಿರುವುದು ಸರಿಯಾಗಿದೆ, ಆದರೆ ಮಿಕ್ಕವರ ಸ್ವಾರ್ಥ ಕುಟಿಲ ನೀತಿಯಿಂದ ಅದನ್ನು ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದರೆ ವಾಪಸು ತೆಗೆದುಕೊಳ್ಳಕೂಡದು ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಅವರು ಆನರ್ ಅಂಡ್ ಇಂಟೆಗ್ರಿಟಿ ರಕ್ಷಣೆ ಮಾಡಿಕೊಳ್ಳಬೇಕಾದರೆ ಅವರು ಆ ರೀತಿ ಮಾಡಬೇಕೆಂದು ಹೇಳುತ್ತಾರೆ. ಶ್ರೀಮಾನ್ ರಾಮರಾಯರ ಮೇಲೆ ಏನೂ ಅಪಾದನೆ ಮಾಡಲಿಕ್ಕೆ ಆಸ್ಪದವಿಲ್ಲದೇ ಇರತಕ್ಕ ಈ ಸಮಯದಲ್ಲಿ ಒಂದು ವಿಚಾರವನ್ನು ಹೇಳದಿದ್ದರೆ ತಪ್ಪಾಗಬಹುದು. ಅದೇನೆಂದರೆ, ಅವರ ಕೈ ಶುದ್ಧವಾಗಿದೆ (ಹಿಸ್ ಹಾಂಡ್ಸ್ ಆರ್ ಪ್ಯೂರ್) ಅವರ ಕ್ಲೀನ್ ಹ್ಯಾಂಡ್ಸ್ ವಿಚಾರದಲ್ಲಿ ವ್ಯತಿರಿಕ್ತವಾಗಿ ಹೇಳುವಂತಹದು ಒಂದೂ ಇಲ್ಲ. ಅಂತಹ ಶ್ರೀ ರಾಮರಾಯರನ್ನು ಬಲಿಕೊಟ್ಟಿರಲ್ಲಾ; ಆ ಬಲಿ ಕೊಟ್ಟಂಥ ರಾಮರಾಯರು ಏನು ತಪ್ಪು ಮಾಡಿದ್ದಾರೋ ಆ ತಪ್ಪಿಗಿಂತ ಕಡಮೆ ತಪ್ಪು ನೀವು ಏನು ಮಾಡಿದ್ದೀರಿ ಎಂದು ಈ ಸಮಯದಲ್ಲಿ ಬಹಳ ವ್ಯಸನದಿಂದ ಹೇಳಬೇಕಾಗಿದೆ. ಶ್ರೀಮಾನ್ ರಾಮರಾಯರು ಬಹಳ ದೊಡ್ಡಮನುಷ್ಯರು. ಇವತ್ತು ದೇಶದಲ್ಲಿ ಏನು ಪರಿಸ್ಥಿತಿ ಇದೆ ಎಂದರೆ ಸಭಾಪರ್ವದಲ್ಲಿ ನಾರದರು ಧರ್ಮರಾಯನ ಆಸ್ಥಾನಕ್ಕೆ ಬಂದಾಗ ಒಂದು ಮಾತನ್ನು ಹೇಳುತ್ತಾರೆ ಅದೇನೆಂದರೆ:

'ಅರಸು ರಾಕ್ಷಸ ಮಂತ್ರಿಯೆಂಬುವ
ಮೊರೆವ ಹುಲಿಪರಿವಾರಹದ್ದಿನ
ನೆರವಿ ಬಡವರ ಬಿನ್ನಪವ ನಿನ್ನಾರು ಕೇಳುವರು
ಉರಿವುರಿವುತಿದೆ ದೇಶವಾವಿ
ನ್ನಿರಲು ಬಾರದೆನುತ್ತ ಜನ ಬೇ
ಸರಿನ ಬೇನೆಯಲಿರದಲೇ ಭೂಪಾಲಕೇಳೆಂದ'

ಇವತ್ತು ನಮ್ಮ ರಾಜ್ಯದಲ್ಲಿ ಆ ರೀತಿ ಆಗಿದೆ. ರಾಜ್ಯದ ಜನ ಬೇಸತ್ತು ಎಲ್ಲಿಗೆ ಹೋಗೋಣಪ್ಪಾ ಎಂದು ಅನ್ನುವ ರೀತಿಯಲ್ಲಿ ಆಗಿದೆ. ಬಡವರ ಬೇನೆ ನಿಮಗೆ ಇನ್ನೂ ಅಂಟಿಲ್ಲ. ಈಗ ಹದಿನೈದು ದಿನದ ಕೆಳಗೆ ಕೊರಟಗೆರೆ ಸಮೀಪದ ಕುರುಂಕಟ್ಟೆ ಗ್ರಾಮಕ್ಕೆ ಹೋಗಿದ್ದೆ, ಆ ಊರಿನ ಜನಸಂಖ್ಯೆ

650. ಅಲ್ಲಿ ವಿಚಾರ ಮಾಡಿದ್ದರಲ್ಲಿ ಆ 650 ಜನರಲ್ಲಿ 25 ಜನಕ್ಕೇ ಎರಡು ಹೊತ್ತು ಊಟ ಇರುವುದು, ಇನ್ನು ಬಾಕಿಯುವರು ಒಂದು ಹೊತ್ತು ಊಟ ಮಾಡಿಕೊಂಡು ಇದ್ದಾರೆ, ಅಲ್ಲಿ ಸುತ್ರಾಂ ಮಳೆ ಇಲ್ಲ, ಇಲ್ಲಿ ನೀವು 'ಹೇಗಯ್ಯ ವಾಸಮಾಡುತ್ತೀರಿ' ಎಂದರೆ ಅವರು ಹೇಳುತ್ತಾರೆ 'ಸ್ವಾಮಿ, ಒಂದು 5 ಪೈಸೆ ಕೊಟ್ಟರೆ ಟೀ ಪೊಟ್ಟಣ ಕೊಡುತ್ತಾರೆ, ಹಾಲು ಅಂತೂ ಇಲ್ಲವೇ ಇಲ್ಲ, ನೀರಿಗೆ ಬೆಲ್ಲ ಟೀ ಸೊಪ್ಪುಹಾಕಿ ಟೀ ಕಾಯಿಸಿಕೊಳ್ಳುವುದು ಅದನ್ನೇ ಅಡವಾಗಿ ಕುಡಿದು ಬಿಡುವುದು' ಎಂದು, ಇವತ್ತು ದೇವರ ಗುಡಿಯಲ್ಲಿ ಹೇಳಿದ ಹಾಗೆ ಹೇಳುತ್ತೇನೆ, ಹಸಿವಾಗುವುದು ಗೊತ್ತಾಗದೆ ಇರಲಿ ಎಂದು ಹೇಳಿ ಆ ಜನರು ಹೊಟ್ಟೆಗೆ ಬಟ್ಟೆ ಕಟ್ಟಿಕೊಳ್ಳುತ್ತಾರೆ. ಈ ರೀತಿ ಒಂದು ಹೊತ್ತಿಗೆ ಅನ್ನಇಲ್ಲದೇ ಇರತಕ್ಕ ಜನ ಇವತ್ತಿನ ದಿನ ನಮ್ಮ ರಾಜ್ಯದಲ್ಲಿ ತೊಳಲಾಡುತ್ತಿರುವಾಗ ಸೌಧದ ಮೇಲೆ ಸೌಧ, 20 ಅಂತಿಸ್ಥಿನ ಮನೆ, ಅದು ಬೇಕು, ಇದು ಬೇಕು, ಪಂಚತಾರೆ ಬೇಕು, ಏಳು ತಾರೆ ಬೇಕು ಅಂದರೆ ಮುಂದೆ ಜನ ನಿಮನ್ನು ಸುಮ್ಮನೆ ಬಿಡುವುದಿಲ್ಲ, ನಿಮ್ಮ ಮೈ ಮೇಲೆ ಒಂದು ಒಳ್ಳೆಯ ಷರಟು ಇದ್ದರೆ ಅದನ್ನು ಕೊಟ್ಟುಬಿಡಿ ಎಂದು ಕಸಿದುಕೊಳ್ಳತಕ್ಕ ಕಾಲ ಬರುತ್ತದೆ. ಅದು ಬರುವುದಕ್ಕಿಂತ ಮುಂಚೆ ನೀವು ಹುಷಾರಾಗಿರಬೇಕು. ಎಷ್ಟೇ ಹೇಳಿದರೂ ಒಂದು ಏಟಿಗೆ ನೀವು ಬಗ್ಗುವವರಲ್ಲಾ, ಒಳ್ಳೆಯ ಮಾತಿಗೆ ಕೇಳುವವರಲ್ಲ. ಹಳ್ಳಿಗಾಡಿನಲ್ಲಿರುವ ಜನರು ಚೆನ್ನಾಗಿ ತಿಳಿದುಕೊಂಡಿದ್ದಾರೆ, ಅದರಲ್ಲೂ ಹುಬ್ಬಳ್ಳಿ ಅಗ್ನಿ ಹೋತ್ರಿ ಅವರ ಕಡೆ ಎಮ್ಮೆ ಮುಸುರೆ ಕುಡಿಯಲಿಕ್ಕೆ ಹತ್ತಿದರೆ ಅದರ ಹತ್ತಿರ ಯಾರು ಹೋದರೂ ಗುರುಗುಟ್ಟುತ್ತದೆ ಹೇ ಅಂದರೆ ಬಿಡುವುದಿಲ್ಲ, ದೊಣ್ಣೆ ತೆಗೆದುಕೊಂಡು ಹೊಡೆದರೆ ಆಗಲೇ ಹಿಂದಕ್ಕೆ ಸರಿಯುವುದು, ಅಂತಹ ಒಂದು ಸಂದರ್ಭ ಈ ದೇಶದಲ್ಲಿ ಇವೆ. ಒಳ್ಳೆಯ ಮಾತಿನಲ್ಲಿ ಕೈ ಮುಗಿದು ಹೇಳಿದರೆ ನೀವು ಕೇಳುವುದಿಲ್ಲ. ಆದ್ದರಿಂದ ಈ ದೇಶಕ್ಕೆ ಒಂದು ಕರೆ ಕೊಡಲೇ ಬೇಕಾಗಿದೆ. ಅಸೆಂಬ್ಲಿಯನ್ನು ಕರೆದರೆ ಆಯಿತು, ನಮ್ಮ ಪಕ್ಷದ ಜನ ಇದ್ದಾರೆ ನಮ್ಮ ಕೈಲಾದುದನ್ನು ನಾವು ಮಾಡಿಕೊಳ್ಳೋಣ ಯಾವುದು ಸಿಕ್ಕಿದರೆ ಅದೇ ಆಯಿತು ಎಂದು ತಿಳಿದುಕೊಳ್ಳಬೇಡಿ, ಜನರಲ್ಲಿ ಜಾಗ್ರುತಿ ಆಗಬೇಕು, ಜನರಲ್ಲಿ ಕ್ರಾಂತಿ ಆಗಬೇಕು, ವಿಚಾರ ಶಕ್ತಿ ಬರಬೇಕು, ಆ ರೀತಿ ಆದಾಗ ಈ ಸ್ವಾರ್ಥಪರ ಸರ್ಕಾರ ಹೋಗುತ್ತದೆಯೇ ಹೊರತು ಅಲ್ಲಿಯ ವರೆಗೂ ಈ ಸರ್ಕಾರ ಹೋಗುವುದಿಲ್ಲ ಎಂದು ಹೇಳಿ ಈ ದಿವಸ ದೇಶಕ್ಕೆ ಕರೆ ಕೊಡುತ್ತೇನೆ. ಇನ್ನು ಬಹಳ ಹೆಚ್ಚು ಹೇಳುವುದಿಲ್ಲ, ಮುಖ್ಯವಾದ ಒಂದು ಮಾತನ್ನು ಹೇಳಲೇ ಬೇಕಾಗಿದೆ. ಶ್ರೀಮಾನ್ ನಾಡಗೌಡರು ಈಗ ಇಲ್ಲ ಇಲ್ಲ, ನನ್ನ ಮಟ್ಟಿಗೆ ಹೇಳುವುದಾದರೆ ಇಂತಹ ನಾಲಾಯಕ್ ಮಂತ್ರಿ ದೇಶದಲ್ಲಿ ಇನ್ನೆಲ್ಲೂ ಇಲ್ಲ, ಅವರು ನನ್ನ ಸ್ನೇಹಿತರು ಆದರೂ ಕೂಡ ವ್ಯಸನದಿಂದ ಈ ಮಾತು ಹೇಳಬೇಕು : ಅವರ ಭಾಷಣಗಳನ್ನು ಕೇಳಿ ಬಂದ ಜನ ಏನು ಹೇಳುತ್ತಾರೆ, ಎಂಬುದನ್ನು ಕೇಳಿ. ಅವರು ಎಲ್ಲೇ ಭಾಷಣ ಮಾಡಿದರೂ 'ನಮ್ಮ ಮೆಚ್ಚಿನ ಜನನಾಯಕರು—ನಮ್ಮ ಮೆಚ್ಚಿನ ಗಣ ನಾಯಕರು ಅಂಥವರು ಇಂಥವರು' ಎಂದು ಹೇಳುವುದನ್ನು ಒಂದು ಕಲಿತಿದ್ದಾರೆಯೋ ಹೊರತು ಬಾಕಿಯುದು ಒಂದೂ ಬರುವುದಿಲ್ಲ. ಇಂಥವರು ಅಧಿಕಾರ ಮಾಡತಕ್ಕದ್ದು ಎಷ್ಟು ಸರಿಯೋ ಗೊತ್ತಿಲ್ಲ. ಸ್ವಾಮಿ, ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಸಂಬಂಧಪಟ್ಟ ಹಾಗೆ ಇರತಕ್ಕ ಕಮಿಟಿ ಆಫ್ ಪಿಟಿಷನ್ಸ್‌ಗೆ ತಾವು ಅಧ್ಯಕ್ಷರಾಗಿದ್ದೀರಿ, ತಿಪಟೂರಿನಲ್ಲಿ, ರಾಯಚೂರಿನಲ್ಲಿ, ದಾವಣಗೆರೆಯಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಚುನಾವಣೆ ಆಗಿ, 9 ತಿಂಗಳಾಗಿದೆ, ಹೇಡಿ ಸರ್ಕಾರ, ನಾಚಿಕೆ ಇಲ್ಲದ ಸರ್ಕಾರ ಇನ್ನೂ ನೋಟಿಫಿಕೇಷನ್ ಕೊಡದೇ ಅದನ್ನು ಹಾಗೆಯೇ ಇಟ್ಟಿದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಬಿಲ್ ಪಾಸ್ ಮಾಡಿದ್ದೀರಿ ಅದನ್ನು ಇನ್ನೂ ಜಾರಿಗೆ ಕೊಟ್ಟಿಲ್ಲ. ಏಕೆಂದರೆ ರೈತರಿಂದ ಏನೂ ಸಿಕ್ಕುವುದಿಲ್ಲ, ವ್ಯಾಪಾರಸ್ಥರಾದರೆ ಅವರ ಪ್ರೀತಿ ಸಂಪಾದನೆ ಮಾಡುವುದಕ್ಕೆ ಏನು ಬೇಕಾದರೂ ಮಾಡುತ್ತೀರಿ. ರೈತರ ಹತ್ತಿರ ಇರುವುದು ಬರೀ ಜ್ವಾಳ, ಮುಗ್ಗಿದ ಜ್ವಾಳ, ರಾಗಿ. ಹೋಗಲಿ ರೈತನಿಗೆ ನೀವು ಏನು ಸಹಾಯ ಮಾಡುವುದೂ ಬೇಡ ಅವನು ಬೆಳೆದ ಫಸಲಿಗೆ ಅವನಿಗೆ ಸರಿಯಾದ ಧಾರಣೆ ಸಿಕ್ಕತಕ್ಕ ವ್ಯವಸ್ಥೆ ಮಾಡಿ, ಮಾರ್ಕೆಟ್‌ನಲ್ಲಿ ಅಸಡ್ಡಾಳ ಆಗದ ರೀತಿಯಲ್ಲಿ, ಮಾರಾಟ ಮಾಡುವುದಕ್ಕೆ ಅನುಕೂಲ ಮಾಡಿಕೊಡಿ ಎಂದರೆ, ಬಾಯಿ ಬಾಯಿ ಬಡಿದುಕೊಂಡರೂ ಮಾಡುತ್ತಾ ಇಲ್ಲ. ಇಷ್ಟರಲ್ಲೇ ಅದಕ್ಕಾಗಿ ಒಂದು ಚಳುವಳಿಯನ್ನೂ ಕೂಡ ಮಾಡಬೇಕೆಂದು ಇದ್ದಾರೆ. ಇದನ್ನು ನೋಡಿದರೆ ಶ್ರೀಮಾನ್ ಬದರೀನಾರಾಯಣ್‌ರವರಿಗೆ ಹೇಳುತ್ತೇನೆ, ಭೂತ ಬಿಡಬಹುದು ಅದೇನೂ ಕಷ್ಟವಾಗುವುದಿಲ್ಲ ಆದರೆ ಅದನ್ನು ವಾಪಸು ತೆಗೆದುಕೊಳ್ಳುವುದು ಕಷ್ಟ. ಪ್ರಜಾಪ್ರಭುತ್ವದಲ್ಲಿ ಬಹಳ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾಗುತ್ತದೆ, ಜನರು ಇಂದಲ್ಲ ನಾಳೆ ನಮ್ಮ ಮಾತಿಗೆ ಬೆಲೆ ಕೊಟ್ಟಾರು, ನಮ್ಮ ಮಾತನ್ನು ಕೇಳಿಯಾರು ಎಂದು ಸುಮ್ಮನೆ ಇದ್ದಾರೆ. ಹೈಕೋರ್ಟಿನಲ್ಲಿ ಒಂದು ಸ್ಟೇ ಇದೆ ಎಂದು ಹೇಳಿದರು, ಅರ್ಜಿಹಾಕಿ ವೆಕೇಟ್‌ಮಾಡಿ ಎರಡು ತಿಂಗಳು ಆಯಿತು, ಅಧಿಕಾರಿಗಳು ರೆಕಮಂಡ್ ಮಾಡಿದ್ದಾರೆ, ಅದನ್ನು ಈ ಮಂತ್ರಿಮರ್ಯರು ಬಂದ ಮೇಲೆ ಒಂದು ತಿಂಗಳ ಕಾಲ ತಮ್ಮ ಹತ್ತಿರ ಆ ಫೈಲನ್ನು ಇಟ್ಟುಕೊಂಡಿದ್ದಾರೆ. ಹೀಗಾದರೆ ಏನು ಮಾಡಬೇಕು ? ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಮುರಿದು ನಿಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳೋಣ

(ಶ್ರೀ ಎಚ್. ಸಿದ್ದವೀರಪ್ಪ)

ವೆಂದು ಮಾಡಿದ್ದೀರಾ? ಅದು ಖಂಡಿತ ಏನೂ ನಡೆಯುವುದಿಲ್ಲ. ಇದನ್ನೆಲ್ಲಾ ನೆನಿಸಿಕೊಂಡರೆ ನಿಮ್ಮ ಉದ್ದೇಶ ಏನು ಇದೆ ಎಂಬುದು ತಿಳಿಯುತ್ತದೆ, ಇದರಿಂದ ಈವೊತ್ತಿನ ದಿವಸ ನಮ್ಮ ರಕ್ತ ಕುದಿಯುತ್ತಾ ಇದೆ. ದಾವಣಗೆರೆಯಲ್ಲಿ ಅಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಅವ್ಯವಸ್ಥೆಯಿಂದ ನಡೆಯುತ್ತಾ ಇದೆ. ಇದರಿಂದ ವರ್ಷಕ್ಕೆ 50 ಲಕ್ಷ ರೂಪಾಯಿ ರೈತರ ದುಡ್ಡು ಪೋಲು ಆಗುತ್ತಾ ಇದೆ. ಅಲ್ಲಿ ಲೆವಿ ವಸೂಲಿ ಮಾಡುತ್ತಿದ್ದೇವೆಂದು ಆಹಾರ ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ನಾನು ಕೇಳುವುದು ಇದರಿಂದ ಆ ರೈತರಿಗೆ ಬಹಳ ಕಷ್ಟವಾಗುವುದಿಲ್ಲವೇ ಎಂದು. ಈಗ ಇರುವುದು ನೇಗಿಲು ಹಿಡಿಯುವ ಸರ್ಕಾರವಲ್ಲ, ತಕ್ಕಡಿ ಹಿಡಿಯುವ ಸರ್ಕಾರ. ತಕ್ಕಡಿ ಹಿಡಿದುಕೊಂಡ ಜನ ಕೆಲಸ ಮಾಡುವುದಿಲ್ಲ. ನಮ್ಮ ದೇಶದಲ್ಲಿ 100ಕ್ಕೆ 80 ಜನ ರೈತರ ಮಕ್ಕಳೇ ಇರುತ್ತಾರೆ. ಅವನ ಕೆಲಸ ರಾಗಿ ಬೆಳೆಯುವುದು. ಶ್ರೀ ನಾರಾಯಣಗೌಡರು ಹೊಲ ಉಳುವುದನ್ನು ನಾನು ನೋಡಿದ್ದೇನೆ. ಆದರೆ ಶ್ರೀ ಪುಟ್ಟಸ್ವಾಮಿಯವರು ಹೊಲ ಉಳುತ್ತಾರೋ, ಇಲ್ಲವೋ ಗೊತ್ತಿಲ್ಲ.

10-30 A.M.

ದಾವಣಗೆರೆ ಗೆಸ್ಟ್‌ಹೌಸ್ ಪಾನಗೃಹ ಮತ್ತು ವೇಶ್ಯಾಗೃಹವಾಗಿ ನಡೆಯುತ್ತ ಇದೆ ಎಂದು ಅಲ್ಲಿಗೆ ಹೋದ ನಿಮ್ಮ ಪಕ್ಷದ ಶ್ರೀಮಾನ್ ಚಿಕ್ಕೇಗೌಡರು ಬರೆದಿದ್ದಾರೆ. ಅವರನ್ನೇ ಕೇಳಿ ನೋಡಿ. ಈ ರೀತಿ ಆಗುತ್ತಾ ಇರುವಾಗ ಯಾವುದಕ್ಕೂ ಲಕ್ಷ್ಯಕೊಡದೇ ಇರತಕ್ಕಂಥ ಜನ ಯಾವ ರೀತಿ ದೇಶದ ಅಭಿವೃದ್ಧಿಯನ್ನು ಮಾಡುತ್ತಾರೋ ಎಂದು ಅತ್ಯಂತ ವ್ಯಸನದಿಂದ ಹೇಳುತ್ತೇನೆ. ನಿಮ್ಮಿಂದ ಅಭಿವೃದ್ಧಿ ಆಗುತ್ತದೆಯೇ? ಶ್ರೀಮಾನ್ ನಿಜಲಿಂಗಪ್ಪನವರು ಎಲ್ಲಿಗಾದರೂ ಹೋಗಲಿ, ಅವರು ಗೌರಿಶಂಕರದಲ್ಲಿರುವ ಈಶ್ವರನ ಹತ್ತಿರಕ್ಕಾದರೂ ಹೋಗಲಿ, ಅದಕ್ಕೆ ನಾವು ಸಂತೋಷಪಡೋಣ. ಅವರು ಜಾಗ ಬಿಟ್ಟು ಹೋಗುವುದರಿಂದ ವೈಯಕ್ತಿಕವಾಗಿ ನನಗಾಗಿರುವ ವ್ಯಸನ ಯಾರಿಗೂ ಆಗಿಲ್ಲ. ಅವರು ಇಲ್ಲೇ ಇದ್ದಿದ್ದರೆ ಅವರು ಮಾಡುವಂಥ ಕೆಟ್ಟ ಆಡಳಿತ ನಮ್ಮ ಪೈಕಿ ಯಾರಿಗೆ ಕೊಟ್ಟರೂ ಮಾಡುವುದಿಲ್ಲ. ಅವರು ಇಲ್ಲಿ ಇದ್ದುಕೊಂಡು ನಮ್ಮ ದೇಶದ ಸಂಪತ್ತನ್ನು ಅಳಿಸುತ್ತಾ ಇದ್ದಾರೆ. ಸರಿಯಾದ ವಿರೋಧ ಪಕ್ಷ ಬೆಳೆಯಬೇಕಾದರೆ ಅವರು ಇಲ್ಲಿಯೇ ಇದ್ದಿದ್ದರೆ, ಆಗ ವಿರೋಧ ಪಕ್ಷದ ಬಲ ಬೆಳೆಯುತ್ತಿತ್ತು. ಅವರು ಕಾಂಗ್ರೆಸ್ಸಿನ ಅವನತಿ ನೋಡಬಹುದಾಗಿತ್ತು. ಇವರು ಹೋಗುವುದರಿಂದ ಕಾಂಗ್ರೆಸ್ಸಿನ ಬಲ ಹೆಚ್ಚಾಗಬಹುದು. ಶ್ರೀಮಾನ್ ಸೋಗಿಯವರು ಹೇಳಿದರು ನಮಗೆ 30-35 ವರ್ಷದಿಂದ ದ್ವೇಷ ಇದೆ. ನಮ್ಮ ಜಿಲ್ಲೆಯವರು ಈ ರೀತಿ ಕೆಲವು ಮಂತ್ರಿಗಳ ಮೇಲೆ ದ್ವೇಷ ಇದೆ ಎಂದು. ಆ ರೀತಿ ನಮಗೆ ವೈಯಕ್ತಿಕವಾಗಿ ದ್ವೇಷ ಇಲ್ಲ. ಶ್ರೀಮಾನ್ ನಿಜಲಿಂಗಪ್ಪನವರ ಬಗ್ಗೆ ನಮಗ್ಯಾರಿಗೂ ವೈಯಕ್ತಿಕ ದ್ವೇಷವಿಲ್ಲ. ಆದರೆ ನಾನು ವ್ಯಕ್ತಿಯ ಆರಾಧಕನೂ ಅಲ್ಲ, ನಿಂದಕನೂ ಅಲ್ಲ. ಇವರ ಆಡಳಿತ ಬಂದ ಮೇಲೆ ದೇಶದಲ್ಲಿ ಶೇಖರಿಸಿಟ್ಟಿದ್ದ ಲಿಕ್ವಿಡ್ ಅಸೆಟ್ಟುಗಳೆಲ್ಲಾ ತಿಂದುದಾಯಿತು, ಟ್ರೆಜರಿ ಬಿಲ್ಸ್, ಇತರೇ ಎಲ್ಲಾ ಸೆಕ್ಯೂರ್ಟಿಗಳನ್ನೂ ತಿಂದು ಮುಗಿಸಿ ಈಗ ದೇಶದ ಸ್ಥಿರ ಆಸ್ತಿಗಳನ್ನು ಮಾರಾಟ ಮಾಡುವುದಕ್ಕೆ ಹೊರಟಿದ್ದಾರೆ. ಈ ಆಸ್ತಿಗಳನ್ನು ನೀವು ರೂಢಿಸಲಿಲ್ಲ, ಯಾರೋ ಪುಣ್ಯಾತ್ಮರು ಹಿರಿಯರು ಇದನ್ನೆಲ್ಲಾ ಮಾಡಿಟ್ಟಿದ್ದಾರೆ. ಕೆಲವು ವ್ಯಕ್ತಿಗಳು ತಮ್ಮ ದುಂದುಗಾರಿಕೆಗೆ ಹಣ ಬೇಕಾದಾಗ ಅವರಲ್ಲಿದ್ದ ಪೆನ್ನುಗಳನ್ನು ಮಾರುತ್ತಾರೆ, ಅನಂತರ ಗಡಿಯಾರ ಇತ್ಯಾದಿಗಳನ್ನು ಮಾರಾಟ ಮಾಡುತ್ತಾರೆ. ಮೊದಲು ಮೊದಲು ಹೀಗೆ ಸಣ್ಣಪುಟ್ಟ ಸಾಮಾನುಗಳನ್ನು ಮಾರಿ ಕಡೆಗೆ ತನಗೆ ಬೇಕಾದ ರೊಕ್ಕದಾಸೆಗಾಗಿ ತನ್ನ ಹೊಲವನ್ನೂ ಮಾರುವುದಕ್ಕೆ ಪ್ರಾರಂಭ ಮಾಡುತ್ತಾನೆ. ಅದರಂತೆ ಈ ದಿವಸ ಇವರಿಗೆ ರೊಕ್ಕ ಬೇಕಾಗಿರುವುದರಿಂದ ದೇಶದಲ್ಲಿದ್ದ ಅಮೃತ ಮಹಲ್ ಕಾವಲುಗಳನ್ನೂ ಕೂಡ ಈಗ ಮಾರಾಟ ಮಾಡುವುದಕ್ಕೆ ಹೊರಟಿದ್ದಾರೆ. ಇವರೇನಾದರೂ ಅದಕ್ಕೆ ಕೈಹಾಕಿದರೆ ನಾವು ಇವರ ಕೈಗಳನ್ನು ಕತ್ತರಿಸಿ ಹಾಕುತ್ತೇವೆ. ಈ ದಿವಸ ಎಕರೆ ಒಂದಕ್ಕೆ 2 ಸಾವಿರಕ್ಕೂ ಮೇಲ್ಪಟ್ಟು ಬೆಲೆ ಬಾಳತಕ್ಕಂಥ 75 ಸಾವಿರ ಎಕ್ರೆ ಅಮೃತಮಹಲ್ ಕಾವಲಿನ ಜಮೀನು ನಮ್ಮ ಚಿತ್ರದುರ್ಗ ಜಿಲ್ಲೆಯ ಸಿಂಗಾಪುರದ ಕಾವಲಿನಲ್ಲಿದೆ. ಆ ಭೂಮಿಯನ್ನು ವ್ಯವಸಾಯ ಮಂತ್ರಿಗಳೇ ಮಾರಾಟ ಮಾಡುವುದಾಗಿ ಪ್ರಯತ್ನ ಮಾಡುತ್ತಿದ್ದಾರೆಂದು ಕೇಳುತ್ತೇನೆ. ಅದನ್ನು ಅವರಿಗೆ ಮಾರಾಟ ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಇವರೇನು ಕಡೆಗೆ ಈ ವಿಧಾನಸೌಧವನ್ನು ಸಹಾ ಮಾರಾಟ ಮಾಡುವುದಕ್ಕೆ ಸಿದ್ಧರಾಗಿರಬಹುದು. ಏಕೆಂದರೆ ಇದು ಇವರು ಕಟ್ಟಿಸಿದ್ದಲ್ಲ. ಯಾರೋ ಪುಣ್ಯಾತ್ಮರು ಕಟ್ಟಿಸಿದರು. ಹೀಗೆ ಈ ದಿವಸ ಈ ಮಂತ್ರಿಮಂಡಲ ಹೋಗುತ್ತಿರುವ ರೀತಿನೀತಿಗಳು ಸರಿಯಾಗಿಲ್ಲ. ಇಂಥಾ ಕೆಲಸಗಳನ್ನು ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಅರಿತು ನಡೆದರೆ ಆರು ಪಟ್ಟು, ಮರೆತು ನಡೆದರೆ ಮೂರು ಪಟ್ಟು ಎಂದು ಮಹನೀಯರು ಹೇಳುತ್ತಾರೆ. ಅದಕ್ಕೆ ಇನ್ನೂ ಮೊನ್ನೆ ತಾನೆ

ನಡೆದ ಆ ಮಧುಗಿರಿ ಪ್ರಕರಣದಲ್ಲಿ ನಾವು ಸತ್ಯದ ನಿಲುವಿಗಾಗಿ ಹೋರಾಟ ಮಾಡಿದೆವು. ಆದರಂತೆ ನಿಮ್ಮಲ್ಲಿಯೂ ಸತ್ಯದ ನಿಲುವಿಗಾಗಿ ಹೋರಾಟ ಮಾಡತಕ್ಕವರಿದ್ದರೆ ಅದನ್ನು ಮಾಡಿ ರಾಜ್ಯದಲ್ಲಿ ಒಂದು ಒಳ್ಳೆಯ ಬುನಾದಿಯನ್ನು ಹಾಕುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI P. B. NANDIHALI (Uchagaon).—Mr. Speaker, Sir, on this occasion I must express the feelings of the border area of Belgaum and Khanapur. I have come here to express my views regarding Mahajan Commission and incidentally this motion is there Before us. It is my bounden duty and responsibility to express my no-confidence even in the Opposition party here who has attacked the democratic fundamental rights of the Marathi people of the border area. They did not take into account the feelings of the people there.

Regarding the Mysore Government, this Government has failed to gain the confidence of the Marathi people for the last twelve years and even twenty years after Independence. They have not solved any problem of the minority people in our part. As a matter of fact, the Congress Party had promised before Independence that they would create the rule of equality and safeguard and protect the poor people of this country. But unfortunately after twenty years we see in this country that the poor people are becoming poorer and the rich richer and it is a matter of sadness that less than hundred capitalists are able to purchase the whole of this Bharat Bhoomi *i.e.* India. The Ruling Party namely the Congress had also promised that all the problems of the peasants and workers will be solved after Independence; but what picture do we see about peasants and their difficulties? Day by day their difficulties are increasing and no problems are solved. The Tenancy Act has created confusion and bitterness between the peasants and the landlords and the tenants are dragged to the courts and the thereshold of the pleaders. Thousands of peasants will have to enter the court like sheep under a butcher; they have no food to eat. In these circumstances they have no alternative but to go to the court and the pleader, to protect the lands which are in their possession and the Mysore Government has failed to make the peasant the owner of the land. The problem of landless labourers, and the Scheduled Castes and Scheduled Tribes and most important of all, the problem of Beggars is not at all solved. These people are starving, crying and dying on the roads and fields. The problem of Beggars is purposely neglected. It is the bounden duty and responsibility of all the leaders on either side, the Ruling Party and the Opposition, to try to solve this problem. A man who has taken birth in this Bharath Bhoomi is the owner of this land but this owner today is begging in the streets and nobody is taking care of him. It is the Government which must solve this problem. The landless labourers and the Harijans and the Scheduled Castes and Scheduled Tribes have no land to work on, and the Government has failed to provide them with land, food and clothing and to solve their problems. The Government and the leaders have been promising even up to this day, but they have not fulfilled their promises. Mysore has now claimed the villages where

(SRI P. B. NANDIHALI)

the Rakascope Water Works are there. The Chief Minister and other Ministers had promised to solve all the problems of these villages. So, we encouraged the people to leave their lands which they were protecting as if they are their mothers. They left the lands and left the villages and now the Water Supply Scheme is there. Not a single problem of the village is solved. Sir, amounts are given to some persons, but the lands are not at all given. The wild land is everywhere lying unnoticed. We are trying for years together to get the land, but the problem remains unsolved although six long years have passed. I pray to the concerned Ministers and also the leaders on the other side and earnestly appeal to their hearts to solve this problem immediately, as otherwise I cannot show my face to the people of the constituency. The then Chief Minister had also promised to solve the problem immediately, after the work starts. People in that area have no food, no clothes and no land, but only the empty sheds are there. Therefore, I once again appeal to the concerned leaders opposite of our area to solve the problem immediately.

I can quote a number of instances. A function had been arranged by the then Congress candidate in 1962 to undertake the construction of the road between Yellur and Rajhansgad. Uptill now that work has not been taken up. The leaders, during the time of elections, had promised that they would undertake the construction of a road between Belgundi and Belvatti and the work was also started. But, now the work is stopped. My learned friend, Sri Koujalgi stated in his speech that Sri Y. B. Chavan, the Union Minister had neglected this work, because his part would be included in Mysore State. Now the Mysore Government is neglecting it, thinking that it might be merged in future in Maharashtra. We are paying tax and it is our right to have communication facilities. As a Government, which believes in democracy, I would like to bring to their kind notice to solve all the difficulties experienced by the people of the area, now, at this moment and this moment only, because they are neglected for years together.

I would like to say a few words about electricity and other problems of the area. When the Sharavathi Generating Station was commissioned, we were very happy, and we passed resolutions to get electricity for the villages. But, so far the problem is not solved. In some places there are poles, but there are no lines. I suspect that electricity lines are given there on political considerations. We were told when we saw a memorandum of Mysore Government, that they claimed Belgaum and some villages because they supplied electricity. There should not be any such partiality shown to the people, because it is their right and they are our countrymen ; they belong to one country, India, wherever they are.

Some of my friends criticised Sri Dayanandraoji Bandoodkar and his ministry of Goa that the Maharashtra Government had bribed them. It is entirely incorrect. I know him personally.

Mr. SPEAKER.—Let him not bring in names.

Sri P. B. NANDIHALI.—He was previously the Chief Minister of Goa. He has worked very hard for the upliftment of the masses, specially the poor people. It is not correct to say that he became rich after entering politics but the politics became rich when he entered in it. The people at large dragged him into politics for the protection of the poor people. I can assure the House that he has not taken money even in the opinion poll. There is a rumour that the Mysore Government spent lakhs of rupees in that part in the Opinion Poll against Maharastra.

Mr. SPEAKER.—We are not concerned with the Opinion Poll. We are dealing with the 'no-confidence' or otherwise in the Council of Ministers. Personally, I have got the highest respect for Sri Bandodkar. I know he is a patriot.

Sri P. B. NANDIHALI.—Immediately it was made known that opinion poll would be taken, he resigned without any hesitation.

With these words, I took the opportunity to express the difficulties of my part and I hope that hereafter the Government will pay urgent attention to the various points and solve all the difficulties.

Thank you, Sir.

ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ).—ಅಧ್ಯಕ್ಷರೇ, ಈ ಅವಿಶ್ವಾಸ ಠರಾವಿನ ಮೇಲೆ ಮಾತನಾಡುವುದು ಎಂದರೆ ಒಂದು ಸಂತೋಷದ ಸಂಗತಿ ಅಲ್ಲ. ನಿಜವಾಗಿಯೂ ನಾವೆಲ್ಲರೂ ಒಂದು ದೇಶದವರು, ಒಂದು ಸರ್ಕಾರದಲ್ಲಿದ್ದವರು, ಎಲ್ಲರೂ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ವಿದ್ದವರೇ ಇದ್ದೇವೆ. ಒಮ್ಮತವಾಗಿ ನಾವು ಕೆಲಸ ಮಾಡಬೇಕಾಗುತ್ತದೆ. ಈಗ ಈ ಮಂತ್ರಿಮಂಡಲ ಮಾಡಿದ ಕೆಲಸ ನನ್ನ ಜಿಲ್ಲೆಯ ಮಟ್ಟಿಗೆ ನಾನು ನೋಡುವಂತೆ ಏನೂ ಇಲ್ಲ. ಈ ಮೈಸೂರು ರಾಜ್ಯದ ವಿಷಯದಲ್ಲಿ ಮಾತನಾಡಿದಷ್ಟೂ ಸಾಕಾಗುವುದಿಲ್ಲ. ನಮ್ಮ ಗಡಿ ಪ್ರಶ್ನೆಯನ್ನು ಎಷ್ಟು ವರ್ಷ ಎಳೆದಾಡಿದರೋ ಅಷ್ಟೂ ಹೊಲಸು ಮಾಡಿದರು ಎಂಬ ವಿಷಯ ಸ್ಪಷ್ಟವಾಗಿದೆ. ಚರ್ಚೆ ಇನ್ನೂ ನಡೆಯುತ್ತಾ ಇದೆ, ಕೃಷ್ಣಾ ಗೋದಾವರಿ ಪ್ರಶ್ನೆಯಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ಅನ್ಯಾಯ ವಾಯಿತು ಎಂಬುದನ್ನು ನೋಡಿದರೆ, ಅವರಿಗೆ ಯೋಗ್ಯತೆ ಇಲ್ಲದೇ ಈ ಎರಡು ಪ್ರಶ್ನೆಗಳಲ್ಲೂ ನಮಗೆ ಲುಕ್ಸಾನಾಗುತ್ತಾ ಇದೆ. ಎಂಬುದು ಸ್ಪಷ್ಟವಾಗಿದೆ. ನಮ್ಮ ಸಂಸ್ಥಾನದ ಹಿತರಕ್ಷಣೆಗೆ ಧಕ್ಕೆಯಾಗಿದೆ ಎಂಬುದಕ್ಕೆ ಈ ಎರಡು ವಿಷಯಗಳೇ ಸಾಕು. ಇನ್ನು ಕೆಲವು ಸಂಗತಿಗಳನ್ನು ಹೇಳಬೇಕಾಗಿದೆ. ಸರ್ಕಾರದ ಪಕ್ಷದ ಕಾಂಗ್ರೆಸ್ ಮಿತ್ರರು ಕೆಲವರು ವಿರೋಧ ಪಕ್ಷದಲ್ಲಿ 5-6 ಪಕ್ಷಗಳು ಇವೆ ಅವರ ಕೈಯಲ್ಲಿ ಸರ್ಕಾರ ಸಿಕ್ಕಿದರೆ ಏನು ಮಾಡಬಹುದು ವಗೈರೆ ವಿಷಯಗಳನ್ನು ಹೇಳಿದರು. ನಾವು 5-6 ಪಕ್ಷಗಳವರು ಯಾರಿದ್ದೇವೆ ನಮ್ಮಲ್ಲಿ ಅಭಿಮಾನವಿದೆ ಎಂದು ನಾನು ಅವರಿಗೆ ಹೇಳುತ್ತೇನೆ. ಆದರೆ ಅವರಲ್ಲಿ ಏನು ನಡೆಯುತ್ತಾ ಇದೆ ಎಂಬುದನ್ನು ನಾವು ಪ್ರತಿನಿತ್ಯ ನೋಡುತ್ತಾ ಇದ್ದೇವೆ. ಜಾತೀಯತೆ, ಪಂಗಡ, ಒಳಪಂಗಡ, ಒಳಗುಂಪು ಇವುಗಳನ್ನು ಹೇಳಲಿಕ್ಕೆ ಸಾಧ್ಯವಿಲ್ಲ, ಈ ಕಾಂಗ್ರೆಸ್ ಮೆಂಬರುಗಳು ಲಾಬಿಯಲ್ಲಿ ಮಾತನಾಡುತ್ತಾ ಇರುವಾಗ ಹೇಳುವುದನ್ನು ನಾನು ಕೇಳಿದ್ದೇನೆ. ನನಗೆ ಅನೇಕರ ಪರಿಚಯವಿಲ್ಲ, ಅವರು ಮಾತನಾಡುವ ವಿಷಯ ಇಲ್ಲಿ ಹೇಳಲಿಕ್ಕೆ ಹೋದರೆ ನನಗೇ ನಾಚಿಕೆಯಾಗುತ್ತದೆ. ಉಪದೇಶ ಮಾಡುತ್ತಾರೆ, ಅವರದು ಒಂದು ಕಾಲದಲ್ಲಿ ಬಹಳ ಸಂಘಟಿತವಾದ ಪಕ್ಷ ಒಪ್ಪುತ್ತೇನೆ, ಆದರೆ ಜಾತಿಯತೆ, ಗುಂಪುಗಾರಿಕೆ, ಭ್ರಷ್ಟಾಚಾರ, ಇವುಗಳನ್ನು ನಿರ್ಮೂಲನ ಮಾಡಲು ಅವರಿಂದ ಸಾಧ್ಯವಾಗಿಲ್ಲ ಎಂದು ಹೇಳಬೇಕಾಗಿದೆ.

ಇನ್ನು ಮಂತ್ರಿಪದವಿ. ಮುಖ್ಯ ಮಂತ್ರಿಗಳನ್ನು ಆರಿಸುವ ಪ್ರಶ್ನೆ ಬಂದಾಗ ಅವರಿಗೂ ಅದು ಯಾವ ರೀತಿಯಾಗುತ್ತದೆ ಎಂಬುದು ಗೊತ್ತು. ಅದನ್ನು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಬಜಾರಿನಲ್ಲಿ ಹೋಗಬೇಕಾದರೆ, ಬಸ್ಸಿನಲ್ಲಿ ಹೋಗಬೇಕಾದರೆ ಯಾರೋ ಯಾರೋ "ಮುಖ್ಯಮಂತ್ರಿ ಯಾಗಲಿಕ್ಕೆ ಒಂದು ಕೋಟಿ ರೂಪಾಯಿ ಕೂಡಿಸುತ್ತಾ ಇದ್ದಾರೆ, ಮೈಸೂರು ರಾಜ್ಯದಲ್ಲಿ ಇವತ್ತು ಮುಖ್ಯಮಂತ್ರಿಪದವಿ ಒಂದು ಕೋಟಿ ರೂಪಾಯಿಗೆ ಮಾರಿ ಹೋಯಿತು' ಎಂದು ಜನ ಆಡಿ

(ಶ್ರೀ ಡಿ. ಎಸ್. ನಾಡಕರ್ಣಿ)

ಕೊಳ್ಳುತ್ತಾ ಇರುವುದನ್ನು ನಾವು ಕೇಳುತ್ತಾ ಇದ್ದೇವೆ. ನೀವು ನಮಗೆ ಉಪದೇಶ ಮಾಡುವುದು ಬೇಡ. ನಿಮ್ಮಂತೆ ನಾವು ವಶೀಲಿಬಾಜಿ ಕೆಲಸ ಮಾಡಲಿಕ್ಕೆ ಹೋಗುವುದಿಲ್ಲ. ನಿಮ್ಮ ಆಡಳಿತದ ವೈಖರಿ ಹೇಗಿದೆ ಎನ್ನುವುದನ್ನು ತೋರಿಸಲು ಈಚೆಗೆ ಸುಪ್ರೀಂ ಕೋರ್ಟಿನವರು ರಾಜ್ಯ ಸರಕಾರಕ್ಕೆ ಯಾವರೀತಿ ಛೀಮಾರಿ ಹಾಕಿದ್ದಾರೆ ಎನ್ನುವುದು ಆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನಿಂದಲೇ ಪೂರ್ತಿಯಾಗಿ ವ್ಯಕ್ತವಾಗುತ್ತದೆ. ಅದು ಹೀಗಿದೆ : ಓದುತ್ತೇನೆ ನೋಡಿ : ಇದು ಜನಸೇವಕ 6-9-1967ರ ಪತ್ರಿಕೆಯಲ್ಲಿ ಬಂದಿದೆ :

11-00 A.M.

"ಮೈಸೂರು ಸರಕಾರದ ಆಡಳಿತ ಹೇಗೆ ನಡೆದಿದೆ ಎಂಬುದನ್ನು ತಿಳಿಯಬೇಕಾದರೆ ಕಳೆದ ಹದಿನೈದು ವರುಷಗಳಲ್ಲಿ ಮೈಸೂರಿನ ಹೈ ಕೋರ್ಟು ಮತ್ತು ದಿಲ್ಲಿಯ ಸುಪ್ರೀಂ ಕೋರ್ಟು ಮೈಸೂರು ಸರಕಾರ ವಿರುದ್ಧ ನೀಡಿದ ತೀರ್ಪುಗಳನ್ನು ಪರಿಶೀಲಿಸಬೇಕು. ಈ ತೀರ್ಪುಗಳಲ್ಲಿ ನ್ಯಾಯಮೂರ್ತಿಗಳು ಸರಕಾರದ ಕಿವಿ ಹಿಂಡಿ ಛೀಮಾರಿ ಹಾಕಿದ್ದಾರೆ. ಆದರೂ ಮೈಸೂರು ಮಂತ್ರಿಮಂಡಳಕ್ಕೆ ವಿವೇಕ ಮೂಡುವುದಿಲ್ಲ. ಮಂತ್ರಿಮಂಡಳಕ್ಕೆ ನಾಚಿಕೆಇಲ್ಲದಿರುವುದೇ ಇದಕ್ಕೆ ಕಾರಣ"

ಇತ್ಯಾದಿ, ಇತ್ಯಾದಿ ಎಂದು ಹೇಳಿದ್ದಾರೆ.

ಇದಕ್ಕೆಲ್ಲಾ ಕಾರಣವೇನು ಎಂದರೆ ಆಡಳಿತದಲ್ಲಿರುವ ಜನರ ಪ್ರಮೋಷನ್ನು ಹಾಗೂ ಸೀನಿಯಾರಿಟಿ ಇವುಗಳನ್ನು ಇನ್ನು ಪರಿಹರಿಸದೇ ಇರುವ ಕಾರಣದಿಂದಾಗಿ ಇದಕ್ಕೆ ಸಂಬಂಧಪಟ್ಟ ಜನ ಸುಪ್ರೀಂ ಕೋರ್ಟಿನವರೆಗೆ ಹೋಗಬೇಕಾಯಿತು. ಇದು ಕಾಂಗ್ರೆಸು ಮಂತ್ರಿಮಂಡಲದವರು ಮಾಡುತ್ತಿರುವ ಅನುಕೂಲಗಳು. ಈಗ ಇಲ್ಲೂ ಕಾಂಗ್ರೆಸು ರಾಜ್ಯವಿದೆ ಹಾಗೂ ಹಿಂದೂಸ್ಥಾನದಲ್ಲೂ ಕಾಂಗ್ರೆಸು ರಾಜ್ಯ ಇದೆ. ಇಲ್ಲಿರುವ ಕಾಂಗ್ರೆಸು ರಾಜ್ಯದಲ್ಲಿ ಹೇಗೆ ನಡೆಯುತ್ತಿದೆ ಮತ್ತು ಸೆಂಟ್ರಲ್ ಗವರ್ನಮೆಂಟಿನಲ್ಲಿರುವ ಕಾಂಗ್ರೆಸು ರಾಜ್ಯ ಯಾವರೀತಿ ನಡೆಯುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಾಗಿದೆ. ನಿಮ್ಮ ಸಂಸ್ಥೆಯಲ್ಲೇ ಹುಳುಕಿರುವಾಗ ಇನ್ನೊಬ್ಬರಿಗೆ ನೀವು ಉಪದೇಶ ಕೊಡುವುದಕ್ಕೆ ಹೋಗಬೇಡಿ.

ಇನ್ನು ನಮ್ಮ ಪಬ್ಲಿಕ್ ಅಕೌಂಟ್ಸ್ ಕಮಿಟಿ ಕೊಟ್ಟಿರುವ ರಿಪೋರ್ಟುಗಳು ಬಂದಿವೆ. ಇದೇ ರೀತಿಯಾಗಿ ಹಿಂದೂಸ್ಥಾನದ ಪಬ್ಲಿಕ್ ಅಕೌಂಟ್ಸ್ ಕಮಿಟಿಗಳ ರಿಪೋರ್ಟುಗಳು ಬಂದಿರುವುದನ್ನು ಎಲ್ಲರೂ ಓದಿದ್ದೇವೆ. ಈ ರಿಪೋರ್ಟುಗಳಿಂದ ಬಡವರಿಗೆ ಎಷ್ಟು ಮಟ್ಟಿನ ಅನುಕೂಲಮಾಡುವ ಯೋಜನೆಗಳನ್ನು ಮಾಡಿದ್ದೀರಿ ? ಯಾವರೀತಿ ಆಡಳಿತ ಪಕ್ಷ ಕೆಲಸಮಾಡುತ್ತಿದೆ ಎನ್ನುವುದನ್ನು ಎಲ್ಲರೂ ನೋಡಿದ್ದಾರೆ, ನಿಮ್ಮ ಸರಕಾರ ಮಾಡುತ್ತಿರುವ ಕೆಲಸಗಳಿಂದ ಜನ ಬೇಜಾರಾಗಿ ಬಹು ಕಷ್ಟಪಡುತ್ತಿದ್ದಾರೆ. ಇದರಿಂದಾಗಿ ಇಲ್ಲಿ ಅವಿಶ್ವಾಸ ನಿರ್ಣಯ ತರಬೇಕಾಯಿತು. ಸುಮ್ಮನೆ ಇತರರಿಗೆ ಉಪದೇಶ ಮಾಡುವ ಕೆಲಸವನ್ನು ನೀವು ಮಾಡಲು ಹೋಗಬೇಡಿ. ನಿಮ್ಮ ಆಡಳಿತದಿಂದ ಜನರು ಮೋಸಹೋಗಿದ್ದಾರೆ ಮತ್ತು ಬಹಳ ಕಷ್ಟಗಳಿಗೆ ಸಿಕ್ಕಿ ನರಳುತ್ತಿದ್ದಾರೆ. ಇಲ್ಲಿ ಬಂದು ಬರೀ ಬಾಯಲ್ಲಿ ನಾವು ಬಹಳ ಕೆಲಸಗಳನ್ನು ಅವರಿಗಾಗಿ ಮಾಡಿದ್ದೇವೆ. ಎಂದು ಹೇಳಬಹುದು. ಆದರೆ ಹಳ್ಳಿಗಾಡಿನ ಜನರಿಗೆ ನೀವು ಮಾಡುತ್ತಿರುವ ಅನ್ಯಾಯ ಹಾಗೂ ಭ್ರಷ್ಟಾಚಾರಗಳಿಂದ ಜನ ಬೇಸತ್ತಿದ್ದಾರೆ. ನಿಮ್ಮ ಮಂತ್ರಿಗಳೊಳಗೇ ಒಬ್ಬೊಬ್ಬರು ಒಂದೊಂದು ಗ್ರೂಪಿಗೆ ಸೇರಿದಂತೆ ಕಾಣುತ್ತದೆ. ಇದರಿಂದಾಗಿ ಜನತೆಗೆ ಅನುಕೂಲ ಮಾಡುವ ಒಂದು ಕೆಲಸವನ್ನೂ ಮಾಡುತ್ತಿಲ್ಲ.

ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಕೆಲವು ಮುಖ್ಯ ವಿಚಾರಗಳ ಬಗ್ಗೆ ಇಲ್ಲಿ ಹೇಳಬೇಕಾಗಿದೆ. ನಮ್ಮ ರಾಜ್ಯಕ್ಕೆ ಬೇಕಾಗಿರುವ ರೈಲ್ವೇ, ಬಂದರುಗಳು, ಮೀನುಗಾರಿಕೆ ಉದ್ಯೋಗಾವಕಾಶಗಳು, ಶಿಕ್ಷಣ ಹಾಗೂ ಇನ್ನೂ ಕೆಲವು ಇಲಾಖೆಗಳ ಬಗ್ಗೆ ಇಲ್ಲಿ ಹೇಳಬೇಕಾದರೆ ನನಗೆ ಬಹಳ ದುಃಖವಾಗುತ್ತದೆ. ಇದರ ಬಗ್ಗೆ ನನ್ನ ಜಿಲ್ಲೆ ಮಟ್ಟಿಗೆ ಇಲ್ಲಿ ಹೇಳುತ್ತೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರಲ್ಲಿ ನಾವು ಪದೇ ಪದೇ ನಮ್ಮ ಭಾಗದಲ್ಲಿ ರೈಲ್ವೆ ಹಾಗೂ ಬಂದರುಗಳ ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಿದ್ದರೂ ಇದುವರೆಗೆ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಯಾವ ಒಂದು ಹೊಸ ರೈಲ್ವೆಯನ್ನು ಕೊಡಿಸಿಕೊಡಲು ಸಾಕಷ್ಟು ಪ್ರಯತ್ನಗಳನ್ನು ಮಾಡಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಮೂರು ವರ್ಷದಿಂದಲೂ ಕಾರವಾರ ಬಂದರು ಆಗಬೇಕಾಗಿದೆ ಎಂದು ಒತ್ತಾಯ ಮಾಡುತ್ತಿದ್ದರೂ ಇದುವರೆಗೂ ಆಗಲಿಲ್ಲ. ಹುಬ್ಬಳಿಯಿಂದ ಕಾರವಾರಕ್ಕೆ ಕೇವಲ 177 ಕಿಲೋಮೀಟರು ಉದ್ದ ರೈಲ್ವೆ ಇದೆ, ಇದರಲ್ಲಿ. ನಮ್ಮ ಭಾಗದಲ್ಲಿ

ಮಾಡಬೇಕಾಗಿರುವುದು ಕೇವಲ 40 ಕಿಲೋಮೀಟರುಗಳಷ್ಟು ದೂರ. ಇದಕ್ಕೆ ಖರ್ಚು ಸುಮಾರು 19 ಕೋಟಿಯಷ್ಟು ಬರುತ್ತೆ ಎಂದು ಹಿಂದೆಯೇ ಅಂದಾಜಾಗಿತ್ತು. ಬೇಕಾದ ಕಡೆಗಳಲ್ಲಿ ದುರುಪಯೋಗ ಮಾಡುತ್ತಿರುವ ಈ ಆಡಳಿತದವರು ನಾಲ್ಕು ಕೋಟಿ ಉತ್ಪನ್ನ ಬರುವ ಈ ರೈಲ್ವೆ ಲೈನನ್ನು ಮಾಡಿಸಿಕೊಡಲು ಅವರಿಗೆ ಆಗುತ್ತಿಲ್ಲ. ಈ ರೈಲ್ವೆ ಲೈನು ಮಾಡಬೇಕೆಂದು 1866 ರಲ್ಲೇ ಅರ್ಲಿಫ್ ಕಮಿಟಿ ಎಂದು ಮಾಡಿದ್ದರು ಅವರು ಕೊಟ್ಟಿರುವ ರಿಪೋರ್ಟಿನಲ್ಲಿ ಕಾರವಾರದ ಬಗ್ಗೆ ಎಲ್ಲ ವಿಚಾರಗಳೂ ಇವೆ. ಇದೇ ರೀತಿ 1864 ರಲ್ಲಿ ಗಿಲಫ್ರಡ್‌ಫೋರ್ಕ್ ಎನ್ನುವ ಒಬ್ಬರು ಕನ್‌ಸಲ್ಟಿಂಗ್ ಇಂಜನೀಯರು ಕೂಡ ಈ ರೈಲ್ವೆ ಬಗ್ಗೆ ಒಂದು ರಿಪೋರ್ಟು ಬರೆದಿಟ್ಟಿದ್ದಾರೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಜನರು ಬಹಳ ಕಷ್ಟಕ್ಕೆ ಸಿಕ್ಕಿ ಎಲ್ಲರೂ ಮುಂಬಯಿ ಭಾಗದ ಸಾಹುಕಾರರುಗಳಿಗೆ ಸಿಕ್ಕಿಕೊಂಡು ನರಳುತ್ತಿದ್ದಾರೆ. ಇವರ ಸ್ಥಿತಿಯನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಮಂಗಳೂರಿನ ಸಾಹುಕಾರರುಗಳ ಸಂಚುಕಾರದಿಂದಾಗಿ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕಾರವಾರ ಬಂದರು ಆಗಲಿಲ್ಲ. ನಮ್ಮ ಕಾರವಾರ ಬಂದರು ಎಷ್ಟು ಉತ್ತಮವಾದುದು ಎನ್ನುವುದಕ್ಕೆ ಬೇಕಾದ ಅಂಕೆ ಸಂಖ್ಯೆಗಳು ನನ್ನಲ್ಲಿವೆ. ಬೇಕಾದರೆ ಕೊಡುತ್ತೇನೆ. ಆದರೆ ಇಷ್ಟು ಉತ್ತಮವಾದ ಬಂದರು ಮಾಡುವುದರಲ್ಲಿ ಸರಕಾರ ಆಸಕ್ತಿ ವಹಿಸದೇ ಇರುವುದನ್ನು ನೋಡಿ ಬಹು ದುಃಖವಾಗುತ್ತಿದೆ. ಈಗಿರುವ ಕಾಂಗ್ರೆಸ್ಸು ಪಕ್ಷದ ರಾಜಕಾರಣಿಗಳಿಂದ ಹಾಗೂ ಮಂತ್ರಿಮಂಡಲದಲ್ಲಿರುವ ಧೋರಣೆಗಳ ಕಾರಣದಿಂದ ಸ್ವಾಭಾವಿಕವಾಗಿರುವ ಕಾರವಾರ ಬಂದರನ್ನು ಕಟ್ಟಲಿಕ್ಕೆ ಅವಕಾಶ ಕೊಡದೇ ಮಂಗಳೂರು ಬಂದರಿನ ಕಡೆಗೆ ಹೆಚ್ಚುಲಕ್ಷ್ಯಕೊಟ್ಟು ಬೇಕಾದಷ್ಟು ಖರ್ಚು ಮಾಡುತ್ತಿದ್ದಾರೆ. ಇಲ್ಲಿ ಈ ಮಂತ್ರಿಮಂಡಲದವರು ಮಾಡಿರುವ ಅನ್ಯಾಯಗಳು ಬೇಕಾದಷ್ಟಿವೆ. ಅವನ್ನೆಲ್ಲಾ ಇಲ್ಲಿ ಹೇಳಲು ಸಮಯವಿಲ್ಲ. ಇದಕ್ಕೆ ಸಂಬಂಧಪಟ್ಟ ರಿಕಾರ್ಡುಗಳು ಕೂಡ ನನಲ್ಲಿದೆ. ಈ ಮಂತ್ರಿಮಂಡಲದವರು ಎಲ್ಲ ಜನರೂ ಸುಖದಿಂದ ಬಾಳೋಣ ಎನ್ನುವುದಕ್ಕೆ ಅವಕಾಶಗಳನ್ನು ಕೊಡುತ್ತಿಲ್ಲ.

ಇನ್ನು ಮೀನುಗಾರಿಕೆ ವಿಚಾರವಾಗಿ ಇಲ್ಲಿ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಎರಡು ಭಾಗದಲ್ಲಿ ಮೀನುಗಾರಿಕೆಯನ್ನು ಮುಂದಕ್ಕೆ ತರಬೇಕೆಂದು ಮಾಡಿದ್ದಾರೆ. ಅದು ಉತ್ತರ ಕನ್ನಡ ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆಗೆ ಹೆಚ್ಚು ಅವಕಾಶಗಳಿವೆ, ಇದಕ್ಕಾಗಿ ಸರಕಾರ ಬೇಕಾದಷ್ಟು ಹಣವನ್ನು ಮಂಜೂರು ಮಾಡಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಗೆ ಹೇಗೆ ಖರ್ಚು ಮಾಡುತ್ತಾರೋ ಅದೇ ರೀತಿಯಾಗಿ ಉತ್ತರ ಕನ್ನಡ ಜಿಲ್ಲೆ ಕಡೆಗೆ ಲಕ್ಷ್ಯ ಕೊಡುತ್ತಿಲ್ಲ ಮತ್ತು ಇದರಲ್ಲಿ ಅವರಿಗೆ ಬೇಕಾದವರು ಹಾಗೂ ಜಾತಿಯವರು ಇದ್ದರೆ ಮಾತ್ರ ಅವರಿಗೆ ಉತ್ತೇಜನ ಕೊಡುತ್ತಾರೆಯೇ ವಿನಹ ಇತರರಿಗೆ ಯಾವ ಸೌಕರ್ಯಗಳನ್ನೂ ಕೊಡುತ್ತಿಲ್ಲ. 1955 ರಿಂದ ನಾವು ನೋಡುತ್ತಲೇ ಬರುತ್ತಿದ್ದೇವೆ. ನಿಮ್ಮ ಒಂದು ಪಕ್ಷದ, ಒಂದು ಜಾತಿಯ ಒಂದೇ ಬಣ್ಣವನ್ನು ಕಳೆದ ಹತ್ತು ವರ್ಷಗಳಿಂದಲೂ ನೋಡುತ್ತಲೇ ಬರುತ್ತಿದ್ದೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಪ್ರಗತಿಯನ್ನು ಮಾಡಲಿ ಅವರೂ ನಮ್ಮ ಮಿತ್ರರು, ನಾನು ಅದನ್ನು ಒಪ್ಪುತ್ತೇನೆ. ಮಂತ್ರಿಮಂಡಲದವರು ತಮ್ಮ ಸ್ವಾರ್ಥ ಸಾಧನೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವರನ್ನು ಒಲಿಸಿಕೊಂಡು ಹಾಗೆಲ್ಲಾ ದೊಂಬರಾಟ ಆಡಿಸುವುದಕ್ಕೆ ಹೋಗುತ್ತಾರೆ. ನಮ್ಮ ಜಿಲ್ಲೆಯವರೂ ಮಂತ್ರಿಗಳಾಗಿದ್ದರೂ ಕೂಡ ನಮ್ಮ ಕಾರ್ಯಸಾಧನೆ ಮಾಡುವುದಕ್ಕೆ ಆಗಿಲ್ಲ.

ಇನ್ನು ಮೀನುಗಾರಿಕೆಗೆ ಸಂಬಂಧಪಟ್ಟ ಹಾಗೆ ಇಂಡೋ ನಾರ್ವೇಜಿಯನ್ ಯೋಜನೆಯನ್ನು ಮಾಡಿದ್ದೇವೆಂದು ಹೇಳಿದರು. ಆದರ ಹಣೆಯಬರಹ ಏನಾಗಿದೆ? ಎಷ್ಟು ವರ್ಷವಾಯಿತು? ನಮ್ಮ ಭಾಗದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ವಿದ್ಯುಚ್ಛಕ್ತಿ ಲೈನನ್ನು ಹಾಕುವುದಕ್ಕೆ 10 ಮೈಲಿ ಕಂಟ್ರಾಕ್ಟ್ ಕೊಡುವುದಕ್ಕೆ ಇನ್ನೂ ಆಗಿಲ್ಲವೇ? ಅದನ್ನು ಯಾರಿಗೆ ಕಂಟ್ರಾಕ್ಟ್ ಕೊಡುತ್ತೀರಿ ಎಂಬುದು ಇದುವರೆಗೂ ಆಗಿಲ್ಲ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 43 ಲಕ್ಷ ರೂಪಾಯಿಗಳನ್ನು ಸ್ಪಿಲ್ ಓವರ್ ಕೆಲಸಗಳಿಗೆ ಖರ್ಚು ಮಾಡಿದ್ದಾರೆ. ಮೀನುಗಾರಿಕೆಗೆ ಖರ್ಚು ಮಾಡಬೇಕಾಗಿದ್ದ ಎಷ್ಟು ಹಣವನ್ನು ಸರೆಂಡರ್ ಮಾಡಿದ್ದೀರಿ? ಹರಿಜನರ ಕಲ್ಯಾಣದಲ್ಲಿ ಎಷ್ಟು ಹಣವನ್ನು ಖರ್ಚು ಮಾಡದೆ ಸರೆಂಡರ್ ಮಾಡಿದ್ದೀರಿ? ನೀವು ಮೈಸೂರು ರಾಜ್ಯಕ್ಕೆ ಲುಕ್ಸಾನು ಮಾಡಿದ್ದೀರಿ. ನಮಗೆ ಉಪದೇಶ ಹೇಳುತ್ತೀರಿ. ಮೀನುಗಾರಿಕೆಗೆ ಐಸ್ ಪ್ಲಾಂಟ್ ಇದೆಯೇ? ಫ್ರೀಜಿಂಗ್ ಪ್ಲಾಂಟ್ ಇದೆಯೇ? ಯಂತ್ರ ಸಾಮಗ್ರಿ ಅಲ್ಲಿ ದುರಸ್ತು ಮಾಡುವುದಕ್ಕೆ ಇಲ್ಲ. ಇದೆಲ್ಲವೂ ಏನಾಯಿತು? ಉತ್ತರ ಕನ್ನಡ ಜಿಲ್ಲೆಗೆ ಬರಬೇಕಾಗಿದ್ದಂತಹ ಲಾಂಚ್ ಮಂಗಳೂರಿಗೆ ಬಂತು. ಮಂಗಳೂರು ಬಂದರಿನಲ್ಲಿ ಕೆಲಸ ಮಾಡುವವರಿಗೆ ಎಲ್ಲಾ ಸೌಲಭ್ಯಗಳೂ ಇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿರುವರಿಗೆ ಯಾವ ಸೌಲಭ್ಯವೂ ಇಲ್ಲ. ವ್ಯಾಪಾರ ಮಾಡುವ ಸೌಲಭ್ಯವೂ ಮಂಗಳೂ

(ಶ್ರೀ ಡಿ. ಎಸ್. ನಾಡಕರ್ಣಿ)

ರಿಗೆ ಹೋಗುತ್ತದೆ. ಕಮಿಷನ್ನೂ ಅವರಿಗೇ ಹೋಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೂಲಿ ನೌಕರರಿಗೆ ಲಾಂಚಿನ ಸಂಪಾದನೆಯಿಲ್ಲ. ನಾನು ಹೇಳುತ್ತಿದ್ದೇನೆ ನ್ಯಾಯವಾಗಿ ನಮ್ಮ ಜಿಲ್ಲೆಯವರಿಗೆ ಏನು ಕೊಡಬೇಕೋ ಅದನ್ನು ಕೊಡಿ. ಬೇರೆ ಜಿಲ್ಲೆಯವರಿಗೆ ಬೇಕಾದಷ್ಟು ಕೊಡಿ ಅದಕ್ಕೆ ನಮ್ಮ ತಕರಾರು ಇಲ್ಲ. 6 ವರ್ಷಗಳಿಂದ ಮಾಡಿದ ಅನ್ಯಾಯವನ್ನು ಈಗಲಾದರೂ ಸರಿಪಡಿಸಿರಿ. ಮಂತ್ರಿಮಂಡಲದ ಗಮನ ಆ ಕಡೆ ಹೋಗುತ್ತಿಲ್ಲ. ದೊಂಬರಾಟ ಆಡುತ್ತಿದ್ದಾರೆ. ಇದು ಸರಿಯಲ್ಲ.

ಆ ಮೇಲೆ ಔದ್ಯೋಗೀಕರಣದಲ್ಲಿ ಹೇಳಬೇಕಾಗಿದ್ದರೆ ಅದರಲ್ಲಿ ಬಹಳ ಚಮತ್ಕಾರ ಇದೆ. ಮೈಸೂರು ರಾಜ್ಯದಲ್ಲಿ ಔದ್ಯೋಗೀಕರಣ ಏನಾಗಿದೆ ಎಂಬುದನ್ನು ನಾನು ಈಗ ತಮಗೆ ಹೇಳುತ್ತೇನೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಔದ್ಯಗೀಕರಣ ವಿನಿಯೋಗ ಈ ರೀತಿ ಇದೆ: ಮಧ್ಯ ಪ್ರದೇಶ 232.66 ಕೋಟಿ ರೂಪಾಯಿಗಳು. ಬಿಹಾರ 196.85 ಕೋಟಿ ರೂಪಾಯಿಗಳು. ಒರಿಸ್ಸಾ 182.11 ಕೋಟಿ ರೂಪಾಯಿಗಳು. ವೆಸ್ಟ್ ಬೆಂಗಾಳ 159.55 ಕೋಟಿ ರೂಪಾಯಿಗಳು. ಮಹಾರಾಷ್ಟ್ರ 51.28 ಕೋಟಿ ರೂಪಾಯಿಗಳು. ಗುಜರಾತ್ 49.7 ಕೋಟಿ ರೂಪಾಯಿಗಳು. ಅಸ್ಸಾಮ್ 31.67 ಕೋಟಿ ರೂಪಾಯಿಗಳು. ಮೈಸೂರು 25.33 ಕೋಟಿ ರೂಪಾಯಿಗಳು. ಕೇರಳ 30.16 ಕೋಟಿ ರೂಪಾಯಿಗಳು. ನಮ್ಮ ಮೈಸೂರು ರಾಜ್ಯದ ಔದ್ಯೋಗೀಕರಣದ ಬಗ್ಗೆ ನಮ್ಮ ಸರ್ಕಾರದವರು ಖರ್ಚು ಮಾಡುವುದು ನಮ್ಮ ಹಣೇ ಬರಹ. ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ವಿಷಯ ತೆಗೆದುಕೊಂಡರೆ ನಮಗೆ ಹೊಟ್ಟೆ ಉರಿಯುತ್ತದೆ.

ಅಧ್ಯಕ್ಷರು.—'ಹಣೇ ಬರಹ', 'ಹೊಟ್ಟೆ ಉರಿಯುತ್ತದೆ' ಹೀಗೆಲ್ಲಾ ಹೇಳುವುದು ಸರಿಯಲ್ಲ. ಈಗಾಗಲೇ 15 ನಿಮಿಷ ದಾಟಿ ಹೋಯಿತು. ಬೇಗ ಮುಗಿಸಬೇಕು.

ಶ್ರೀ ಡಿ. ಎಸ್. ನಾಡಕರ್ಣಿ.—ಹಣೇ ಬರಹ ಎಂದರೆ ನಮ್ಮ ಹಣೇ ಬರಹ. ನಾನು ಬೇರೆ ಯಾರಿಗೂ ಹೇಳಲಿಲ್ಲ. ಇದ್ದದ್ದು ಹೇಳುತ್ತೇನೆ. ಸಣ್ಣ ಉದ್ಯೋಗ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಏನಾಗಿದೆ? ಎರಡು ಹೆಂಚಿನ ಕಾರ್ಖಾನೆಗಳನ್ನು ಸಹಕಾರಿ ಕಾರ್ಖಾನೆಯ ರೂಪದಲ್ಲಿ ಕಟ್ಟುವುದ ರಲ್ಲಿದ್ದಾರೆ. ಆದರೆ ಆ ಕೆಲಸ ನಡೆಯುತ್ತಿಲ್ಲ.

ಆ ಮೇಲೆ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಮದ್ರಾಸ್ ಸರ್ಕಾರದವರು ಅಡ್ವರ್‌ಟೈಜ್ ಮಾಡುತ್ತಿದ್ದಾರೆ. ಕೇರಳ ಸರ್ಕಾರದವರು ಅಡ್ವರ್‌ಟೈಜ್ ಮಾಡುತ್ತಿದ್ದಾರೆ. ಆಂಧ್ರ ಸರ್ಕಾರ ದವರು ಮಾಡುತ್ತಿದ್ದಾರೆ. ಮೈಸೂರು ಸರ್ಕಾರದವರು ನಮಗೆ ಬೇಕಾದವರು ನಿಮಗೆ ಬೇಕಾದವರು ನಮ್ಮ ಜಾತಿಯವರು ಎಂದು ಲೋಕಲ್ ಕ್ಯಾಂಡಿಡೇಟ್‌ಗಳನ್ನು ತೆಗೆದುಕೊಳ್ಳುವುದು ಒಂದು ವರ್ಷ ಮುಂದುವರಿಸುವುದು 3 ವರ್ಷಗಳಾದಮೇಲೆ ರೆಗ್ಯುಲರೈಜ್ ಮಾಡುವುದು. ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೀವು ಅಡ್ವರ್‌ಟೈಜ್ ಮಾಡಿದ್ದೀರಾ? ಇನ್ನಾದರೂ ಆ ರೀತಿ ಮಾಡುವುದನ್ನು ನಿಲ್ಲಿಸುತ್ತೀರಾ? ಇಡೀ ದೇಶದಲ್ಲಿ ನಿಮ್ಮ ತರಹ ಯಾರೂ ಮಾಡುವುದಿಲ್ಲ. ಲೋಕಲ್ ಕ್ಯಾಂಡಿಡೇಟ್ ಗಳನ್ನು ತೆಗೆದುಕೊಳ್ಳುವಾಗ ಯೋಗ್ಯವಂತರನ್ನು ಹಿಂದಕ್ಕೆ ಇಟ್ಟಿದ್ದಾರೆ. ಹೊಸದಾಗಿ ಬಂದವರನ್ನು ತಮಗೆ ಬೇಕಾದವರನ್ನು ಮುಂದೆ ಹಾಕಿದ್ದಾರೆ. ಇದನ್ನೆಲ್ಲಾ ಬಿಟ್ಟು ಬಿಡಿ. ಇನ್ನೂ ಹೇಳ ಬೇಕಾದ್ದು ಬೇಕಾದಷ್ಟು ಇದೆ. ಆದರೆ ವೇಳೆ ಇಲ್ಲದ್ದರಿಂದ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಸಮಯ ಕೊಟ್ಟಿದ್ದಕ್ಕಾಗಿ ಅವರಿಗೆ ತುಂಬಾ ಅಭಾರಿಯಾಗಿದ್ದೇನೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು) —ಸ್ವಾಮಿ, ನಮ್ಮ ವಿರೋಧಪಕ್ಷದ ಮುಖಂಡರ ಆದೇಶದಂತೆ ಕಾಂಗ್ರೆಸ್ ಪಕ್ಷ ಮತ್ತು ಅವರ ಮಂತ್ರಿಮಂಡಲ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮಾಡಿರ ತಕ್ಕಂಥ ಅನ್ಯಾಯವನ್ನು ಮಾತ್ರ ಚಿತ್ರಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಎರಡು ಮೂರು ದಿವಸಗಳ ಹಿಂದೆ ಮಾನ್ಯ ವಿದ್ಯಾ ಮಂತ್ರಿಗಳಾದ ಶ್ರೀ ಶಂಕರೇಗೌಡರು ಮಾತನಾಡುತ್ತಾ ಹಿಂದೀ ಭಾಷೆಯಲ್ಲಿ ಸೊನ್ನೆ ಬಂದರೂ ವಿದ್ಯಾರ್ಥಿಯನ್ನು ಉತ್ತೀರ್ಣನನ್ನಾಗಿ ಮಾಡುತ್ತೇವೆ ಎಂದು ಹೇಳಿದರು. ಸಂತೋಷ. ಈ ಸಂದರ್ಭದಲ್ಲಿ ನಾನು ಅವರನ್ನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಹತ್ತಾರು ವರ್ಷಗಳಿಂದ ವಿದ್ಯಾರ್ಥಿಯು ಹಿಂದಿ ಭಾಷೆಯನ್ನು ಓದಿ ಅವನು ಪರೀಕ್ಷೆಯಲ್ಲಿ ಸೊನ್ನೆ ತೆಗೆದುಕೊಂಡರೂ ಕೂಡ ಪಾಸು ಮಾಡಿಸುತ್ತೇವೆ ಎಂದು ಹೇಳಿದರೆ ಕಾಲಹರಣ, ಹಣ ವ್ಯಯ, ಹೀಗೆ ಆಗಿರತಕ್ಕ ಸಂದರ್ಭದಲ್ಲಿ ಹುಡುಗರಿಗೆ ಕಡ್ಡಾಯವಾಗಿ ಹಿಂದಿ ಭಾಷೆಯನ್ನು ಏತಕ್ಕೆ ಕೊಡಿಸುತ್ತಿದ್ದೀರಿ ಎಂದು ನಾನು ತಮ್ಮನ್ನು ಪ್ರಶ್ನೆ ಕೇಳುತ್ತಿದ್ದೇನೆ. ಯಾವ ಕಾನೂನಿನ ಮೇಲೆ,

ಯಾವ ಆದೇಶದ ಮೇಲೆ ತ್ರಿಭಾಷಾ ಸೂತ್ರವನ್ನು ಮೈಸೂರು ಸರ್ಕಾರ ಜಾರಿಗೆ ತಂದಿದ್ದಾರೆ, ಯಾವ ಪೂರ್ವಾಪರ ಯೋಚನೆ ಇಲ್ಲದೆ ಹುಡುಗರಿಗೆ ಸಮಯವನ್ನು ಕಾಲವನ್ನು ಹಾಳುಮಾಡುವ ವಿಚಾರದಲ್ಲಿ ಬಲತ್ಕಾರ ಹಿಂದಿ ವಿದ್ಯಾಭ್ಯಾಸ ಕನ್ನಡ ನಾಡಿನ ಜನರಮೇಲೆ ಹೊರಿಸುತ್ತಿದ್ದಾರಲ್ಲಾ ಇವರು ಸ್ವಲ್ಪವಾದರೂ ಆಲೋಚನೆ ಮಾಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಒಂದು ಪಕ್ಷ ಮಂತ್ರಿಮಂಡಲ ಹೇಳಬಹುದು, ಎಲ್ಲಾ ದೇಶದ ಐಕ್ಯತೆಯ ದೃಷ್ಟಿಯಿಂದಲೂ ಪುರೋಭಿವೃದ್ಧಿ ದೃಷ್ಟಿಯಿಂದಲೂ ತ್ರಿಭಾಷಾ ಸೂತ್ರಕ್ಕೆ ಕಟ್ಟುಬಿದ್ದಿದ್ದೇವೆ ಎಂದು. ನಾನು ಅವರನ್ನು ಕೇಳುತ್ತೇನೆ ನಮ್ಮ ಮಕ್ಕಳು ಚಿಕ್ಕವಯಸ್ಸಿನಲ್ಲಿ ಪ್ರೈಮರಿ, ಸೆಕೆಂಡರಿ ಸ್ಟೇಜಿನಲ್ಲಿ ಕನ್ನಡ, ಇಂಗ್ಲೀಷು, ಹಿಂದಿ ಈ ಮೂರು ಭಾಷೆಗಳನ್ನು ಓದಬೇಕೆಂದು ಕಡ್ಡಾಯ ಮಾಡುವಾಗ ಉತ್ತರ ಪ್ರದೇಶದಲ್ಲಿ ಯಾವ ಶಾಲೆಯಲ್ಲಾಗಲೀ, ಕಾಲೇಜಿನಲ್ಲಾಗಲೀ, ಕನ್ನಡವನ್ನಾಗಲೀ, ಮಲೆಯಾಳಿಯನ್ನಾಗಲೀ, ತಮಿಳನ್ನಾಗಲೀ, ತೆಲಗು ಭಾಷೆಯನ್ನಾಗಲೀ ಓದಬೇಕೆಂದು ಕಡ್ಡಾಯ ಮಾಡುತ್ತಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಉತ್ತರ ಪ್ರದೇಶದ ವಿದ್ಯಾರ್ಥಿ ಕೇವಲ ಹಿಂದಿ ಭಾಷೆಯನ್ನು ವಿದ್ಯಾಭ್ಯಾಸ ಮಾಡಿ ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರೆಯುವುದಕ್ಕೆ ಅವಕಾಶವಿರುವಾಗ ನಮ್ಮ ಮಕ್ಕಳ ಮೇಲೆ ಹೊರಲಾರದ ಹೊರೆಯನ್ನು ಹೊರಿಸಿ ಹಿಂದಿಯಲ್ಲಿ ಪಾರಂಗತನಾಗಿಲ್ಲ, ಕನ್ನಡದಲ್ಲಿ ಪರಿಶ್ರಮವಿಲ್ಲ, ಇಂಗ್ಲೀಷನ್ನು ತಿಳಿದುಕೊಂಡಿಲ್ಲ. ಈ ರೀತಿಯಾದ ವಿದ್ಯಾಭ್ಯಾಸದ ಕ್ರಮವನ್ನು ನಮ್ಮ ಮಕ್ಕಳ ಮೇಲೆ ಹೇರಿ ಅವರು ನಮ್ಮ ಮಕ್ಕಳ ಪುರೋಭಿವೃದ್ಧಿಗೆ ಕಂಟಕಪ್ರಾಯರಾಗಿದ್ದಾರೆ. ಆದ್ದರಿಂದ ಈ ಮಂತ್ರಿಮಂಡಲದ ಮೇಲೆ ನನ್ನ ಅವಿಶ್ವಾಸ ಏನೆಂದರೆ, ನಮ್ಮ ಕನ್ನಡ ನಾಡಿನ ಮಕ್ಕಳ ಅಭಿವೃದ್ಧಿ ದೃಷ್ಟಿಯನ್ನು ಇಡದೆ ಯಾರೋ ಒಬ್ಬರು ಹೇಳಿದ ಮಾತ್ರಕ್ಕೇ, ಆ ಮಟ್ಟಕ್ಕೆ ವಿದ್ಯಾಭ್ಯಾಸ ಕ್ರಮವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ಮಧ್ಯೆ ಶ್ರೀಮಾನ್ ಕಂಠಿಯವರು ದೆಹಲಿಗೆ ಪ್ರಯಾಣ ಮಾಡಿದ್ದರು. ಮಾನ್ಯ ಶಂಕರೇಗೌಡರೂ ದೆಹಲಿಗೆ ಪ್ರಯಾಣ ಮಾಡಿದ್ದರು. ಅನೇಕವೇಳೆ ಈ ಸಭೆಯಲ್ಲಿ ನಾವು ಒತ್ತಾಯ ಮಾಡಿದ್ದೇವೆ. ಭಾಷೆಯ ಬಗ್ಗೆ ಒಂದು ಸರಿಯಾದ ನಿಲುವನ್ನು ತೆಗೆದುಕೊಳ್ಳಿ ಎಂದು ನಾವು ಪ್ರಾರ್ಥಿಸಿದ್ದರೂ ಇವರು ದೆಹಲಿಯಲ್ಲಿ ನಡೆದ ಕಾನ್‌ಫರೆನ್ಸಿಗೆ ಹೋಗಿ ಮೈಸೂರಿನ ಕನ್ನಡ ಜನತೆಯ ಪರವಾಗಿ ಆಶ್ವಾಸನೆ ಕೊಟ್ಟು ದ್ವಿಭಾಷಾ ಸೂತ್ರಕ್ಕೆ ಒಪ್ಪಿಕೊಂಡು ಬಂದಿದ್ದಾರೆ. ಇವರು ಯಾರನ್ನು ಕೇಳಿ ಆ ರೀತಿ ಒಪ್ಪಿಕೊಂಡು ಬಂದಿದ್ದಾರೆ ಎಂದು ನಾನು ಕೇಳುತ್ತೇನೆ. ಈ ಹೇಳಿಕೆಯನ್ನು ಕೊಟ್ಟರಲ್ಲ ಯಾರನ್ನು ಕೇಳಿ ಕೊಟ್ಟು ಬಂದಿದ್ದೀರಿ ಎಂದು ನಾನು ಇಲ್ಲಿ ಕೇಳುತ್ತೇನೆ. ಇದರಿಂದ ನೀವು ನಮ್ಮ ರಾಜ್ಯದಲ್ಲಿರುವ ಮಕ್ಕಳ ವಿದ್ಯಾಭ್ಯಾಸಕ್ಕೆ ಧಕ್ಕೆ ತರುತ್ತಿದ್ದೀರಿ. ಇಂತಹ ಪ್ರಾಮುಖ್ಯವಾದ ವಿಷಯವನ್ನು ಮೊದಲಿಗೆ ಈ ಅಸೆಂಬ್ಲಿ ಮುಂದೆ ತಂದು ಅನಂತರ ನಿಮ್ಮ ಅಭಿಪ್ರಾಯಗಳನ್ನು ಕೊಡಬೇಕು ಎನ್ನುವ ನೀತಿಯನ್ನು ಇಲ್ಲಿ ಪರಿಪಾಲಿಸಲಿಲ್ಲ.

ಎರಡನೆಯದು, ಭಾಷೆಯ ವಿಷಯವಾಗಿ ನೀವು ಮೈಸೂರು ರಾಜ್ಯದ ಮಕ್ಕಳಿಗೆ ತುಂಬಾ ಅನ್ಯಾಯ ಮಾಡುತ್ತಿದ್ದೀರಿ. ಪ್ರೈಮರಿ ಹಾಗೂ ಸೆಕಂಡರಿ ಸ್ಟೇಜಿನಲ್ಲಿ ನಮ್ಮ ಮಕ್ಕಳು ಓದುತ್ತಿದ್ದಾರೆ ಅವರು ಯಾವ ಪರಿಸ್ಥಿತಿಗೆ ಈ ಭಾಷೆಯ ಗೊಂದಲದಿಂದ ಬಂದಿದ್ದಾರೆ ಎಂದರೆ ಯಾರೂ ಹೇಳುವುದಕ್ಕೇ ಆಗುತ್ತಿಲ್ಲ. ನಮ್ಮ ಅಡ್ಮಿನಿಸ್ಟ್ರೇಷನ್ ಸರ್ವೀಸಸ್‌ಗೆ ನಮ್ಮ ಮಕ್ಕಳು ಸೇರಬೇಕಾದರೆ, ಅವರು ಕಾಂಪಿಟೆಟೀವ್ ಎಕ್ಸಾಮಿನೇಷನ್‌ಗಳಿಗೆ ಕೂರಬೇಕಾದರೆ, ಸರಿಸಮಾನವಾಗಿ ಇತರರಂತೆ ಪರೀಕ್ಷೆಗಳಲ್ಲಿ ಕಂಪೀಟ್ ಮಾಡಲು ಅವಕಾಶ ಈಗ ಆಗುತ್ತಿಲ್ಲ. ಇದರಿಂದ ನಮ್ಮ ಮಕ್ಕಳಿಗೆ ತುಂಬಾ ಅನ್ಯಾಯವಾಗಳಾಗುತ್ತಿವೆ. ಮುಖ್ಯವಾಗಿ ಇಂತಹ ಗೊಂದಲಗಳಿಗೆಲ್ಲಾ ನಮ್ಮ ಈ ಮಂತ್ರಿಮಂಡಲವೇ ಹೊಣೆ ಎಂದು ಹೇಳಬೇಕಾಗಿದೆ. ಕಡ್ಡಾಯವಾಗಿ ಒಂದು ಪದ್ಧತಿ ತರಬೇಕು ಎಂದು ಮಾಡುವಾಗ ದೆಹಲಿಗೆ ಹೋಗಿ ಈ ರೀತಿ ಹೇಳಿಕೆಯನ್ನು ಕೊಡುವಾಗ ಯಾರನ್ನು ಕೇಳಿ ಕೊಟ್ಟಿರಿ? ಈ ರಾಜ್ಯದ ವಿದ್ಯಾಭ್ಯಾಸ ಪದ್ಧತಿಯ ಬಗ್ಗೆ ನೀವು ಮದ್ರಾಸು ಸರಕಾರದಲ್ಲಿ ಧೈರ್ಯವಾಗಿ ತೆಗೆದುಕೊಂಡಂತೆ, ಕೇರಳ ರಾಜ್ಯದ ಸರಕಾರ ಧೈರ್ಯವಾಗಿ ಒಂದು ನಿಲುವನ್ನು ತೆಗೆದುಕೊಂಡಂತೆ ಮೈಸೂರು ಸರಕಾರದಲ್ಲಿ ಏಕೆ ತೆಗೆದುಕೊಳ್ಳಲು ಧೈರ್ಯ ಬರಲಿಲ್ಲ? ಮದ್ರಾಸು ಹಾಗೂ ಕೇರಳ ರಾಜ್ಯಗಳು ತಾಳಿದಂತಹ ಧೈರ್ಯವಾದ ನಿಲುವನ್ನು ಮೈಸೂರು ಸರಕಾರ ಏಕೆ ಮಾಡುವುದಕ್ಕೆ ಆಗಲಿಲ್ಲ? ಕೇಂದ್ರ ಸರಕಾರದವರನ್ನು ಒಲಿಸುವುದಕ್ಕಾಗಿ ಅವರ ಒಂದು ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಈ ರಾಜ್ಯದ ಜನರ ಅನುಮತಿಯಿಲ್ಲದೆ ಮೈಸೂರು ಸರಕಾರ ಏತಕ್ಕಾಗಿ ಒಪ್ಪಬೇಕಾಗಿತ್ತು? ಈ ಭಾಷಾ ಯೋಜನೆ ನಮ್ಮ ದೇಶದ ಪದ್ಧತಿಗೆ ಸರಿಯಾಗಿ ಹೊಂದುವುದಿಲ್ಲ ಇದನ್ನು ಜಾರಿಗೆ ತರಕೂಡದು ಎನ್ನುವ ದಿಟ್ಟ ನಿಲುವನ್ನೇಕೆ ತಾಳಬಾರದಾಗಿತ್ತು? ಇದರೊಳಗೆ ಮದ್ರಾಸು ಹಾಗೂ ಕೇರಳ ರಾಜ್ಯಗಳು ತಾಳಿದಂತ ಧೈರ್ಯವಾದ ದಿಟ್ಟವಾದ ನಿಲುವನ್ನು ನೀವೇತಕ್ಕೆ ತಾಳಬಾರದಾಗಿತ್ತು? ರಾಜ್ಯದ ಮಕ್ಕಳ ವಿದ್ಯಾಭ್ಯಾಸದ ಹೊಣೆ ಹೊತ್ತಿರುವ ಈ ಮಂತ್ರಿಮಂಡಲದವರು ಯಾರನ್ನೂ ಕೇಳದೆ ದೆಹಲಿಗೆ ಹೋಗಿ ಹೇಳಿಕೆಗಳನ್ನು ಕೊಟ್ಟರು ಎಂದು ಪುನಃ ಪುನಃ ಅವರನ್ನು ಕೇಳಲು ಇಷ್ಟಪಡುತ್ತೇನೆ. ಈ ಮಂತ್ರಿ

(ಶ್ರೀ ಎಲ್. ಶ್ರೀಕಂಠಯ್ಯ)

ಮಂಡಲದವರು ನಮ್ಮ ಮೈಸೂರು ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ಅನ್ಯಾಯ ಮಾಡುತ್ತಿದ್ದಾರೆ. ನಮ್ಮ ರಾಜ್ಯದ ಜನರ ಹಿತಕ್ಕೆ ಕುಂದುಕಗಳನ್ನು ತರುವ ರೀತಿಯಲ್ಲಿ ಇಂತಹ ಪದ್ಧತಿಗಳನ್ನು ತರಲು ಯೋಜನೆಗಳನ್ನು ಹಾಕಿಕೊಂಡಿದ್ದಾರೆ.

ಇನ್ನು ಎರಡನೇ ವಿಷಯ ಎಂದರೆ, ಎಜುಕೇಷನಲ್ ರೀ ಆರ್ಗನೈಸೇಷನ್ ಪ್ಯಾಟರ್ನ್ ಮಾಡ ಬೇಕೆಂದು ಇದ್ದಾರೆ. ಇದರ ಬಗ್ಗೆ ಒಂದು ಸಣ್ಣ ವಿಚಾರ ಹೇಳಬೇಕಾಗಿದೆ. ಹಿಂದಿ ಪರೀಕ್ಷೆಗಳ ಬಗ್ಗೆ ಒಂದು ಪ್ರಶ್ನೆಗೆ ಉತ್ತರ ಕೊಡುವ ಕಾಲದಲ್ಲಿ ಮಾನ್ಯ ವಿದ್ಯಾಮಂತ್ರಿಗಳಾದ ಶ್ರೀಮಾನ್ ಶಂಕರೇ ಗೌಡರು ಸೊನ್ನೆ ನಂಬರು ಬಂದರೂ ಕೂಡ ಅವರು ಪಾಸಾಗುತ್ತಾರೆ ಎಂದು ಹೇಳಿದರು. ಈ ಒಂದು ವಿಷಯದಲ್ಲೇ ಈ ರೀತಿಯಾದರೆ ಇನ್ನೂ ದೇಶದಲ್ಲಿರುವ ಅನೇಕ ಇಂಜನೀಯರಿಂಗು ಕಾಲೇಜುಗಳಲ್ಲಿ ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಇತರ ಕಾಲೇಜುಗಳಲ್ಲಿ ಇರುವ ಪಠ್ಯಪುಸ್ತಕಗಳ ಪದ್ಧತಿ ಗಳೇ ಈ ರೀತಿಯಾದರೆ ಮುಂದೇನು ಮಾಡುವುದು ? ಅಲ್ಲದೆ ಇಂತಹ ಕಾಲೇಜುಗಳಿಂದ ಉತ್ತೀರ್ಣ ರಾಗಿ ಬಂದವರಿಗೆ ಎಷ್ಟು ಜನರಿಗೆ ಉದ್ಯೋಗಗಳನ್ನು ಒದಗಿಸಿಕೊಟ್ಟಿದ್ದೀರಿ ? ಎಷ್ಟು ಸಾವಿರ ಜನ ಗಳಿಗೆ ಉದ್ಯೋಗಕ್ಕೆ ಸೇರಲು ಅವಕಾಶಗಳನ್ನು ಕೊಟ್ಟಿದ್ದೀರಿ ? ಒಂದು ಕಡೆ ಒಂದು ಪದ್ಧತಿ ಒಂದು ಪ್ಲಾನು ಯಾವುದೂ ಇಲ್ಲದೆ ಟೆಕ್ನಿಕಲ್ ಎಜುಕೇಷನ್‌ನ್ನು ಏನು ಕೊಡುತ್ತಿದ್ದೀರಿ ಅವರಿಗೆ ಸಾಕಷ್ಟು ಉದ್ಯೋಗಗಳಿಲ್ಲದೆ ನಿರುದ್ಯೋಗದ ಒಂದು ಸಮಸ್ಯೆ ಹೆಚ್ಚಾಗಿರುವುದು ಇಂದು ನಮ್ಮ ದೇಶದಲ್ಲಿ ಎದ್ದು ಕಾಣುತ್ತಿದೆ. ಇದಕ್ಕೆ ಕಾರಣರು ಯಾರು ? ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಮಾಡುವ ಹಾಗೆ ಎಜುಕೇಷನಲ್ ಡೆವಲಪ್‌ಮೆಂಟು ಮಾಡುವಾಗ ಸರಕಾರ ಯಾವ ಒಂದು ನೀತಿ ನಡವಳಿಕೆ ಗಳನ್ನೂ ಅನುಸರಿಸದೇ ಸರಿಯಾದ ಕಾರ್ಯಕ್ರಮವನ್ನು ಅನುಸರಿಸದೇ ಇರುವುದರಿಂದಾಗಿ ಈ ಪರಿಸ್ಥಿತಿ ಬಂದಿದೆ ಎಂದು ನಾವು ಅರ್ಥಮಾಡಿಕೊಳ್ಳಬಹುದು. ಇಂದು ದೇಶದಲ್ಲಿ ಪರಿಣತರಾದ ಜನಕ್ಕೆ ಉದ್ಯೋಗಗಳನ್ನು ಒದಗಿಸಿಕೊಡಲು ಯಾವ ತರಹದ ಇನ್‌ಸ್ಟಿಟ್ಯೂಷನ್‌ಗಳೂ ನಮ್ಮಲ್ಲಿ ಇಲ್ಲ. ಇದರಿಂದಾಗಿ ನಮ್ಮಲ್ಲಿರುವ ಅನೇಕ ಯುವಕರುಗಳಿಗೆ ಕೆಲಸ ಸಿಗದೆ ನಿರುದ್ಯೋಗಿಗಳಾ ಗಿದ್ದಾರೆ. ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಮಾಡಿದ ಯುವಕರುಗಳಿಗೆ ವಿದ್ಯಾಭ್ಯಾಸದ ಕ್ರಮದಲ್ಲಿ ಸರಿಯಾದ ಪದ್ಧತಿಗಳನ್ನು ಅನುಸರಿಸುತ್ತಿಲ್ಲ ಇದರಿಂದ ಯಾವ ಸಹಾಯಗಳೂ ಸಿಗುವುದಿಲ್ಲ ಎನ್ನುವ ಭಾವನೆ ಇತ್ತೀಚೆಗೆ ಜನರಲ್ಲಿ ಉಂಟಾಗುತ್ತಿದೆ. ಇದಕ್ಕೆ ಕಾರಣ ನಮ್ಮ ಈ ಮಂತ್ರಿಮಂಡಲ ಎಂದು ಹೇಳಬೇಕಾಗಿದೆ. ಇನ್ನಾದರೂ ಮಂತ್ರಿಮಂಡಲದವರು ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡುತ್ತಾರೆಯೇ ? ನಮ್ಮ ಮಾನ್ಯ ವಿದ್ಯಾಮಂತ್ರಿಗಳಾದ ಶ್ರೀಮಾನ್ ಶಂಕರಗೌಡರು ಹೇಳಿದರು ವಿದ್ಯಾಭ್ಯಾಸ ಕೊಟ್ಟ ಮೇಲೆ ಅದಕ್ಕೆ ತಕ್ಕಂತೆ ಉದ್ಯೋಗ ಗಳನ್ನು ಒದಗಿಸಿ ಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿಲ್ಲ ಎಂದು ಹೇಳಿದರು. ನಿಜ. ಈಗಿನ ಪರಿಸ್ಥಿತಿಯಲ್ಲಿ ಸರಕಾರ ಹಾಗೆ ಮಾಡಲು ಆಗುತ್ತಿಲ್ಲ. ಆದರೆ ನಾವು ಕೊಟ್ಟ ಸಲಹೆಗಳನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡುತ್ತಿಲ್ಲ. ಹಾಗೂ ಇಂಪ್ಲಿಮೆಂಟ್ ಮಾಡುತ್ತೇವೆ ಎಂದು ಆಶ್ವಾಸನೆಯನ್ನೂ ಅವರು ಕೊಟ್ಟಿಲ್ಲ. ಕೇಂದ್ರದವರು ನಮಗೆ ಹಣ ಕೊಡುತ್ತಾರೆ ಅದಕ್ಕಾಗಿ ಅವರು ಹೇಳಿದಂತೆ ನಾವು ಕೇಳಬೇಕು ಎಂದು ಹೇಳಬಹುದು. ಆದರೆ ಒಬ್ಬ ಮನುಷ್ಯ ಮೆಡಿಕಲ್ ಕಾಲೇಜಿನಲ್ಲಿ ಗ್ರಾಜುಯೇಟು ಆಗಬೇಕಾದರೆ ಅಥವಾ ಒಂದು ಇಂಜನೀಯರಿಂಗು ಗ್ರಾಜುಯೇಟು ಆಗಬೇಕಾದರೆ ಅಥವಾ ಪಾಲಿಟೆಕ್ನಿಕ್ ಪದವಿಗಳನ್ನು ಪಡೆಯಬೇಕಾದರೆ ಎಷ್ಟು ಖರ್ಚು ಮಾಡು ತ್ತಾರೋ ಅದಕ್ಕೆ ಸರಿಯಾಗಿ ಸರಕಾರ ತಮ್ಮ ಬೊಕ್ಕಸದಿಂದ ಅಷ್ಟು ಹಣ ಖರ್ಚುಮಾಡುತ್ತಿದ್ದಾರೆ. ನಾವು ಖರ್ಚುಮಾಡುವ ಹಣಕ್ಕೆ ತಕ್ಕ ಪ್ರತಿಫಲ ದೊರೆಯಲಿಲ್ಲ ಎನ್ನುವುದರಿಂದಾಗಿ ಪ್ರತಿಯೊಂದು ವಿದ್ಯಾರ್ಥಿಯೂ ಪರಿಣತರಾದ ಮೇಲೆ ಮನೆಯಲ್ಲೇ ಕಾಲಹರಣ ಮಾಡಬೇಕಾದ ಪರಿಸ್ಥಿತಿ ಬಂದು ಒದಗಿದೆ. ಇದರಿಂದಾಗಿ ನಮ್ಮ ವಿದ್ಯಾಭ್ಯಾಸದ ಯೋಜನೆಗಳೆಲ್ಲಾ ಕುಂಠಿತವಾಗಿದೆ. ಇದಕ್ಕೆ ಮುಖ್ಯ ಕಾರಣ ಈ ಮಂತ್ರಿಮಂಡಲ. ಈ ಮಂತ್ರಿಮಂಡಲದವರು ಇಂಡಿಯಾ ಸರಕಾರದವರು ಕೊಟ್ಟ ಗ್ರಾಂಟುಗಳ ಪ್ರಕಾರವೇ ತಮ್ಮ ಪ್ರೋಗ್ರಾಮನ್ನು ಯಾವ ವಿಧವಾಗಿ ಕಲ್ಪಿಸಿಕೊಳ್ಳ ಬೇಕೆಂದು ಮಾಡುತ್ತಿದ್ದಾರೆ. ಆದರೆ ಇವರು ಅನುಸರಿಸುವ ಪದ್ಧತಿಗಳಿಂದಾಗಿ ವಿದ್ಯಾರ್ಥಿಗಳು ತೊಂದರೆಪಡಬೇಕಾದ ಪರಿಸ್ಥಿತಿ ಬಂದು ಒದಗಿದೆ. ಇದೇ ಇದಕ್ಕೆಲ್ಲ ಮೂಲ ಕಾರಣವಾಗಿದೆ. ಆದುದರಿಂದ ದೇಶದಲ್ಲಿ ಇಂದು ಸುಮಾರು 51 ಕೋಟಿಯಷ್ಟು ಖರ್ಚುಮಾಡುತ್ತಿದ್ದೇವೆ. ಇಷ್ಟೊಂದು ಖರ್ಚು ಮಾಡಿದರೂ ಕೂಡ ಇದರಲ್ಲಿರುವ ಮೂಲ ಸಮಸ್ಯೆಯನ್ನು ಈ ಮಂತ್ರಿಮಂಡಲ ಬಗೆಹರಿಸು ವುದಕ್ಕೆ ಆಗಲಿಲ್ಲ ಮತ್ತು ಇದರಿಂದ ದೇಶಕ್ಕೆ ಯಾವ ವಿಧವಾದ ಪ್ರಯೋಜನವೂ ಬರಲಿಲ್ಲ. ಇತ್ತೀಚೆಗೆ ನಮ್ಮ ವಿದ್ಯಾ ಕ್ಷೇತ್ರದಲ್ಲಿ ಆಗಿರುವ ಹಗರಣಕ್ಕೆಲ್ಲಾ ಈ ಮಂತ್ರಿಮಂಡಲವೇ ಹೊಣೆಯೆಂದು ಧಾರಾಳವಾಗಿ ಹೇಳಬೇಕಾಗುತ್ತದೆ.

ಇನ್ನು ಮೂರನೇದು ವಿದ್ಯಾಭ್ಯಾಸ ಸ್ಟೇಟ್ ಸಬ್ಜೆಕ್ಟ್ ಎಂದು ಕನ್‌ಕರೆಂಟ್ ಸಬ್ಜೆಕ್ಟ್‌ನಲ್ಲಿ ಬರುತ್ತದೆ ಎಂದು ಸಾಮಾನ್ಯವಾಗಿ ಹೇಳಬಹುದು. ಆದರೆ ಇಂದು ದೇಶದಲ್ಲಿರುವ ವಿದ್ಯಾರ್ಥಿಗಳ ಅಶಿಸ್ತಿಗೆ ಇಂದಿನ ವಿದ್ಯಾಭ್ಯಾಸವೇ ಕಾರಣ ಎಂದು ಹೇಳಬಹುದು. ಆದರೆ ಇದರಲ್ಲಿ ವಿದ್ಯಾರ್ಥಿಗಳೇ ಇಂತಹ ಅಶಿಸ್ತಿಗೆ ಕಾರಣ ಎಂದೂ ಹೇಳುತ್ತಾರೆ. ವಿದ್ಯಾಇಲಾಖೆಯ ಕಡಿವಾಣವನ್ನು ಹೊತ್ತಿರುವ ಮಂತ್ರಿಗಳೇ ಇದಕ್ಕೆಲ್ಲಾ ಕಾರಣರು ಎಂದು ಹೇಳಬೇಕಾಗಿದೆ. ಅಲ್ಲದೆ ಮಂತ್ರಿಮಂಡಲವೇ ಇದಕ್ಕೆಲ್ಲಾ ಕಾರಣ ಎನ್ನುವ ಭಾವನೆ ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿದೆ. ಈ ಒಂದು ಮಂತ್ರಿಮಂಡಲದಲ್ಲಿ ಯಾವ ಯೋಜನೆಗಳನ್ನು ವಿದ್ಯಾ ಕ್ಷೇತ್ರದಲ್ಲಿ ಯಾವ ರೀತಿಯಾಗಿ ಹಾಕಿಕೊಂಡಿದ್ದಾರೋ ಅದೇ ಇದರ ಮುಖ್ಯ ಕಾರಣ ಎಂದು ಹೇಳುತ್ತೇನೆ. ಮತ್ತು ಈಗಿರತಕ್ಕ ಎಜ್ಯುಕೇಷನಲ್ ಪ್ಯಾಟರ್ನ್‌ನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಹಿಂದಿನಿಂದಲೂ ನಮ್ಮ ದೇಶದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದಿಂದ ಎಸ್. ಎಸ್. ಎಲ್. ಸಿ. ಯವರೆಗೆ ಒಂದು ರೀತಿಯಾಗಿ ನಡೆದುಕೊಂಡು ಬರುತ್ತಿತ್ತು. ಈಚೆಗೆ ಎಸ್. ಎಸ್. ಎಲ್. ಸಿ. ಯಲ್ಲಿ ಈಗಿರುವ ಪದ್ಧತಿಗಳನ್ನು ಪುನಃ ತೆಗೆದು ಎಲ್ಲವನ್ನೂ ಕಂಪಲ್‌ಸರಿ ಸಬ್‌ಜಕ್ಸ್‌ನಂತೆ ಮಾಡಬೇಕು ಎಂದು ಅದಕ್ಕೆ ತಕ್ಕ ಪ್ರೋಗ್ರಾಂ ಹಾಕುತ್ತಿದ್ದಾರೆ ಎಂದು ಕೇಳುತ್ತೇನೆ. ಇದೂ ಅಲ್ಲದೆ ಈಚೆಗೆ ಸರಕಾರ ತಂದಿರುವ ಮಲ್ಟಿ ಪರ್ಪಸ್ ಹೈ ಸ್ಕೂಲುಗಳು ಎಂದು ಮಾಡಿರುವುದರ ಬಗ್ಗೆ ಇದು ಸರಿಯಾಗಿ ನಡೆಯುತ್ತಿಲ್ಲ ಎಂದು ಇದರ ವಿಧಾನಗಳನ್ನು ಸಡಿಲಗೊಳಿಸಬೇಕೆಂದು ಪುನಃ ಮಾಡುತ್ತಿದ್ದಾರೆ ಎನ್ನುವ ವಿಚಾರಗಳನ್ನು ಈಚೆಗೆ ಕೇಳುತ್ತಿದ್ದೇವೆ. ಹೀಗೆ ಬದಲಾವಣೆಗಳನ್ನು ಮಾಡಬೇಕೆಂದು ಯಾರೂ ಇದುವರೆಗೆ ಕೇಳಲಿಲ್ಲ. ಮಲ್ಟಿ ಪರ್ಪಸ್ ಹೈ ಸ್ಕೂಲುಗಳು ಹಾಗೂ ಕಂಪಲ್‌ಸರಿ ಹೈ ಸೂಲ್ಕುಗಳು ಎಂದು ಇದ್ದುದನ್ನು ಪುನಃ ರೀ ಆರ್ಗನೈಸು ಮಾಡಬೇಕು ಎಂದು ಈ ಮಂತ್ರಿಮಂಡಲದಲ್ಲಿ ಚರ್ಚೆಗಳನ್ನು ಮಾಡುತ್ತಿದ್ದಾರೆ ಎಂದು ಕೇಳುತ್ತೇವೆ. ಎರಡನೇದು ಈಗ ಇರುವ ಪಿ. ಯು. ಸಿ. ಪದ್ಧತಿಯಲ್ಲಿರುವ ವಿದ್ಯಾಭ್ಯಾಸವನ್ನು ಒಂದು ವರ್ಷದ ಅವಧಿ ಎಂದು ಮಾಡಿರುವುದನ್ನು ಎರಡು ವರ್ಷದ ಅವಧಿಯವರೆಗೆ ಹೆಚ್ಚು ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದಾರೆಂದು ಕೇಳುತ್ತೇವೆ ; ಹಾಗೂ ಡಿಗ್ರಿ ಕೋರ್ಸುಗಳನ್ನು ಎರಡು ವರ್ಷಗಳಷ್ಟು ಮಾಡಬೇಕೆಂದು ಇದ್ದೇವೆ ಎಂದು ಈಚೆಗೆ ಒಂದು ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮೇಲ್ಮನೆಯಲ್ಲಿ ಹೇಳಿಕೆ ಕೊಟ್ಟರು ಎನ್ನುವುದು ನಮಗೆ ತಿಳಿದು ಬಂತು. ಇದರ ಬಗ್ಗೆ ನಾನು ಹೇಳುವುದೂ ಕೇಂದ್ರ ಸರಕಾರದವರೂ ರಾಜ್ಯ ಸರಕಾರಕ್ಕೆ ಏನು ಹೇಳಿದರೂ ಅದನ್ನು ಒಪ್ಪುವುದಕ್ಕೆ ಸಿದ್ಧರಾಗುತ್ತಿರುವುದನ್ನು ನೋಡಿದರೆ ಇವರಿಗೆ ಜನತೆಯ ಮೇಲೆ ವಿಶ್ವಾಸವಿಲ್ಲ ಎನ್ನುವುದು ಕಂಡು ಬರುತ್ತದೆ. ಕೇಂದ್ರದವರು ಇಂತಹ ಸೂಚನೆಗಳನ್ನು ಕಳುಹಿಸಿದಾಗ ರಾಜ್ಯ ಸರಕಾರದವರು ಅವರಿಗೆ ನಮ್ಮ ಮೈಸೂರು ರಾಜ್ಯದಲ್ಲಿ ಈಗ ಇದಕ್ಕೆ ತಕ್ಕ ಪರಿಸ್ಥಿತಿ ಇಲ್ಲ ಎಂದು ಧೈರ್ಯವಾಗಿ ಹೇಳಲು ನಮ್ಮ ಈ ಮಂತ್ರಿಮಂಡಲ ಅಶಕ್ತವಾಗಿದೆ. ಅದಕೋಸ್ಕರ ನಾನು ಈ ಮಂತ್ರಿಮಂಡಲದವರು ಜನತೆಯ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎಂದು ಹೇಳಬೇಕಾಗಿದೆ. ಏತಕ್ಕೋಸ್ಕರವಾಗಿ ವಿದ್ಯಾ ಮಂತ್ರಿಗಳು ಯಾರನ್ನೂ ಕೇಳದೆ ದೆಹಲಿಗೆ ಹೋಗಿ ಹೇಳಿಕೆಯನ್ನು ಕೊಟ್ಟು ಏತಕ್ಕಾಗಿ ಅವರು ಹೇಳಿದಂತೆ ಒಪ್ಪಿಕೊಂಡು ಬರಬೇಕು ? ಈ ವಿದ್ಯಾಭ್ಯಾಸದ ಪದ್ಧತಿ ನಮ್ಮ ದೇಶದ ಜನರಿಗೆ ಒಪ್ಪುವಂತಹುದಲ್ಲ ಮತ್ತು ನಮ್ಮಲ್ಲಿರುವ ವಿದ್ಯಾಕ್ಷೇತ್ರದಲ್ಲಿ ಇದನ್ನು ಇನ್ನೂ ಎಕ್ಸ್‌ಪೆರಿಮೆಂಟ್ ಮಾಡಿ ನೋಡಬೇಕಾಗಿದೆ ಎಂದು ಕೇಂದ್ರಕ್ಕೆ ಹೇಳದೇ ಕೇಂದ್ರದವರು ಹೇಳಿದರು ಎಂದು ಅದಕ್ಕೆ ಅನುಮೋದನೆ ಕೊಟ್ಟು ಅದನ್ನು ಕಾರ್ಯಗತ ಮಾಡುವುದಕ್ಕೂ ಹೊರಟಿದ್ದಾರೆ. ಇದಕ್ಕೆ ಮಂತ್ರಿಗಳು ಹೇಳುವ ಕಾರಣ ಕೇಂದ್ರದವರು ನಮಗೆ ಎಲ್ಲದಕ್ಕೂ ಗ್ರಾಂಟುಗಳ ರೂಪದಲ್ಲಿ ಹಣ ಕೊಡುತ್ತಾರೆ ಇದರಿಂದ ನಾವು ಮಾಡಲೇಬೇಕು ಎಂದು ಹೇಳುತ್ತಾರೆ. ಗ್ರಾಂಟುಗಳನ್ನು ಪಡೆಯುವ ಆಸೆಗಾಗಿ ಜನತೆಯ ವಿಚಾರಗಳನ್ನು ಕಡೆಗಣಿಸಿ ಕೇಂದ್ರದವರು ಹೇಳಿದುದನ್ನು ಯಾವ ವಿಚಾರವೂ ಮಾಡದೇ ಅವರು ಹೇಳಿದ್ದನ್ನೇ ಒಪ್ಪಿಕೊಂಡು ಇಲ್ಲಿಯೂ ಪ್ರಾರಂಭ ಮಾಡಬೇಕು ಎಂದು ಹೇಳುತ್ತಿರುವುದು ನೋಡಿ ಬಹಳ ವಿಷಾದವಾಗುತ್ತದೆ. ಕೇಂದ್ರದವರು ಎಜುಕೇಷನ್ ಕನ್‌ಕರೆಂಟು ಸಬ್‌ಜಕ್ಟ್ ಇದು ರಾಜ್ಯಕ್ಕೆ ಸೇರಿದ್ದು ಎಂದು ಹೇಳಿದ್ದರೂ ಕೂಡ ಕೇಂದ್ರದವರು ಹೇಳಿದುದಕ್ಕೆಲ್ಲಾ ರಾಜ್ಯದ ಮಂತ್ರಿಮಂಡಲದವರು ತಾಳ ಹಾಕಿಕೊಂಡು ಕುಣಿಯುತ್ತಿರುವುದನ್ನು ನೋಡಿದರೆ ನಮ್ಮ ರಾಜ್ಯದ ವಿದ್ಯಾಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸುತ್ತಾ ಹೋಗುತ್ತಿದ್ದಾರೆ. ಹಿಂದೆ ಇಲ್ಲಿ ವಿದ್ಯಾಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಮಾಡಿದ್ದು ತಪ್ಪು ಎಂದು ಎನಿಸಿದ್ದರೂ ಅವರು ಅದನ್ನೇ ಅನುಸರಿಸಿದರು. ಇಂದೂ ಕೂಡ ಮುಂದೇನು ಮಾಡುತ್ತಾರೋ ನಮಗೊಂದೂ ಗೊತ್ತಾಗುತ್ತಿಲ್ಲ. ನಿಮ್ಮ ಮನಸ್ಸಿಗೆ ತೋರಿದಂತೆ ನೀವು ಮಾಡುವುದು ಸರಿಯಲ್ಲ ಎಂದು ಹೇಳುತ್ತಿದ್ದರೂ ಅದನ್ನೇ ಕಾರ್ಯಗತ ಮಾಡುವುದಕ್ಕೂ ಹೊರಟಿದ್ದಾರೆ. ಇದರಿಂದ ಮೈಸೂರು ದೇಶದಲ್ಲಿರುವ ಕನ್ನಡನಾಡಿನ ಹುಡುಗರಿಗೆ ಬಹಳ ಹಾನಿಯುಂಟಾಗುತ್ತದೆ ಇದಕ್ಕೆಲ್ಲಾ ಈ ಮಂತ್ರಿಮಂಡಲದವರೇ ಹೊಣೆ ಎಂದು ಪರಿಗಣಿಸಿ ಪುನಃ ಪುನಃ ಇಲ್ಲಿ ಒತ್ತಿಹೇಳಬೇಕಾಗುತ್ತದೆ.

(ಶ್ರೀ ಎಲ್. ಶ್ರೀಕಂಠಯ್ಯ)

11-30 A.M.

ಇನ್ನು ನಾಲ್ಕನೆಯದಾಗಿ ಮುಖ್ಯವಾದುದು ಪ್ರೈಮರಿ ವಿದ್ಯಾಭ್ಯಾಸದ ಜೊತೆಗೆ ಕಿಂಡರ್ ಗಾರ್ಟನ್ ಬೇಕು ಎಂದು ಈ ಸಭೆಯಲ್ಲಿ ನಾನು ಅನೇಕ ಸಲ ಒತ್ತಿ ಹೇಳಿದ್ದೇನೆ. ನಮ್ಮ ಮೈಸೂರು ದೇಶದಲ್ಲಿ ಕಿಂಡರ್‌ಗಾರ್ಟನ್ ಸಲುವಾಗಿ ಒಂದು ಪ್ರತ್ಯೇಕವಾದ ವ್ಯವಸ್ಥೆಮಾಡಿ ಅದಕ್ಕೊಂದು ಡೈರೆಕ್ಟರೇಟ್ ಮಾಡಿ ಎಂದು ಕೇಳಿದೆ. ದುಡ್ಡಿನ ಅನುಕೂಲವಿದ್ದವರು ತಮ್ಮ ಮಕ್ಕಳನ್ನು ಕಾನ್‌ವೆಂಟ್ ಸ್ಕೂಲುಗಳಿಗೆ ಕಳಿಸುವುದಕ್ಕೆ ಸಾಧ್ಯವಿದೆ. ಸಾಮಾನ್ಯ ಪ್ರಜೆಗೆ ಇಷ್ಟು ದುಬಾರಿ ಹಣ ಖರ್ಚು ಮಾಡಿ ಕಾನ್‌ವೆಂಟ್ ಸ್ಕೂಲಿಗೆ ಮಕ್ಕಳನ್ನು ಕಳಿಸುವುದಕ್ಕೆ ಸಾಧ್ಯವಿಲ್ಲ.

Mr. SPEAKER.—Now, practically all the names in the list have been exhausted, except Sri Thammanna. I want to know what time would be required by the Ministers.

Sri B. D. JATTI (Minister for Food and Civil Supplies).—We may require one and a half hours. Nobody is going to intervene but we would say what we want to say continuously.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ನಾನು ಕಾಂಗ್ರೆಸ್ ಪಾರ್ಟಿ ಮುಖ್ಯ ಸಚೇತಕರನ್ನು ಭೇಟಿ ಮಾಡಿ ಕೇಳಿ ತಿಳಿದುಕೊಂಡು ಬಂದಿದ್ದೇನೆ. ಐದೂವರೆ ಗಂಟೆಗೆ ಚರ್ಚೆ ಮುಗಿಸಿ, ಐದೂವರೆ ಗಂಟೆಗೆ ಮಂತ್ರಿಗಳು ಉತ್ತರ ಕೊಟ್ಟರೆ ಏಳು ಗಂಟೆವರೆಗೆ ಕುಳಿತು ಕೊಳ್ಳೋಣ.

ಶ್ರೀ ಎಲ್. ಶ್ರೀಕಂಠಯ್ಯ.—ನಾನು ಕಿಂಡರ್‌ಗಾರ್ಟನ್ ಬಗ್ಗೆ ಮಾತನಾಡುತ್ತಿದ್ದೆನು. ಸಾಮಾನ್ಯ ವರ್ಗದ ಜನರ ಮಕ್ಕಳಿಗೆ ಕಿಂಡರ್‌ಗಾರ್ಟನ್ ಮೂಲಕ ಉತ್ತಮ ವಿದ್ಯಾಭ್ಯಾಸ ಕೊಡಿಸುವುದು ಅವಶ್ಯಕ. ಇದು ಬಹಳ ಪ್ರಾಮುಖ್ಯವಾದುಧು. ಇದರ ಬಗ್ಗೆ ನಮ್ಮ ವಿದ್ಯಾ ಸಚಿವರು ಅಷ್ಟು ಆಸ್ಥೆವಹಿಸಿಲ್ಲ. ಹಣಕಾಸಿನ ದೌರ್ಬಲ್ಯದ ಮೂಲಕ ಈ ರೀತಿ ಅನಾಸಕ್ತಿ ಉಂಟಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಆದುದರಿಂದ ಪ್ರೈಮರಿ ವಿದ್ಯಾಭ್ಯಾಸವನ್ನು ಸೂಕ್ತ ರೀತಿಯಲ್ಲಿ ಉತ್ತಮಪಡಿಸಿ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಚಿಕ್ಕ ಮಕ್ಕಳಿಗೆ ಪಟ್ಟಣಗಳಲ್ಲಿ ವಿದ್ಯಾಭ್ಯಾಸ ದೊರೆಯುವ ಹಾಗೆ ಅನುಕೂಲ ಮಾಡಿ ಕೊಡುವುದಕ್ಕೆ ಹೆಚ್ಚು ಗಮನ ಕೊಟ್ಟು ವಿದ್ಯಾಭ್ಯಾಸವನ್ನು ಉತ್ತಮ ಪಡಿಸಬಹುದು. ಇದು ವರೆಗೆ ಕಿಂಡರ್‌ಗಾರ್ಟನ್ ಶಿಕ್ಷಣ ವನ್ನು ಪ್ರೈವೇಟ್ ಏಜೆನ್ಸಿಯವರು ನೋಡಿಕೊಳ್ಳುತ್ತಿದ್ದಾರೆ. ಇದನ್ನು ತಾಲ್ಲೂಕ ಬೋರ್ಡ್ ಮುನಿಸಿಪಾಲಿಟಿ ನೋಡಿಕೊಳ್ಳಬೇಕಾಗಿದೆ. ಇಷ್ಟು ಹಣ ಇರತಕ್ಕಂಥ ದೊಡ್ಡ ಸರಕಾರ ಕಿಂಡರ್ ಗಾರ್ಟನ್ ಶಿಕ್ಷಣ ನೋಡಿಕೊಳ್ಳದೇ ಇರುವುದರಿಂದ ಚಿಕ್ಕಮಕ್ಕಳ ವಿದ್ಯಾಭ್ಯಾಸ ಇಂದು ಕುಂಠಿತ ವಾಗಿದೆ. ಪ್ರೈಮರಿ ಎಜ್ಯುಕೇಷನ್ ಕಂಪಲ್ಸರಿ ಮಾಡಬೇಕು ಎಂದು ಸರಕಾರದ ಧೋರಣೆ ಇದೆ. ನಮ್ಮ ದೇಶದ ಗ್ರಾಮಾಂತರ ಪ್ರದೇಶಕ್ಕೆ ಹೋದರೆ ಅಲ್ಲಿ ಹೆಸರಿಗೆ ಒಂದು ಪ್ರೈಮರಿ ಸ್ಕೂಲು ಇರುತ್ತದೆ. ಆದರೆ ಮೇಷ್ಟ್ರು ಇರುವುದಿಲ್ಲ. ಮೇಷ್ಟ್ರು ಇದ್ದ ಕಡೆ ಸ್ಕೂಲು ಕಟ್ಟಡ ಇರುವುದಿಲ್ಲ. ಈ ರೀತಿ ಪ್ರಾಥಮಿಕ ವಿದ್ಯಾಭ್ಯಾಸ ಮುಂದುವರಿಯುತ್ತಿದೆ. ಇದು ಹೇಗೆ ಆಗಿದೆ ಅಂದರೆ, ರಾಯರ ಮನೆಯಲ್ಲಿ ನಡೆಯುವ ಮದುವೆ ಸಮಾರಾಧನೆಯಾಗಿದೆ. ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಒಳ್ಳೇ ವಿದ್ಯಾಭ್ಯಾಸ ಪಡೆದು ಸೆಕೆಂಡರಿ ಸ್ಕೂಲಿಗೆ ಹೋಗಿ ಮುಂದೆ ಕಾಲೇಜಿಗೆ ಹೋಗಲು ಒಂದು ಸರಿ ಯಾದ ಮೆಟ್ಟಲು ಹಾಕುತ್ತಾ ಇಲ್ಲ. ಎಸ್ಸೆಸ್ಸೆಲ್ಸೀ ಸಪ್ಲಿಮೆಂಟರಿ ಎಗ್ಸಾಮಿನೇಷನ್ ರಿಜಲ್ಟ್ ನೋಡಿದರೆ ಮನಸ್ಸಿಗೆ ಬಹಳ ದುಃಖವಾಗುತ್ತದೆ. ರಿಜಲ್ಟ್ ಷೀಟ್ ನೋಡಿದರೆ ಯಾವ ವಿಷಯ ದಲ್ಲಿಯೂ ಶೇಕಡ 20 ರ ಮೇಲೆ ಪಾಸು ಆಗಿಲ್ಲ. ಶೇಕಡ 20 ರಷ್ಟು ಪಾಸು ಮಾಡುವುದಕ್ಕೆ ಕೂಡ ಎಷ್ಟು ಗ್ರೇಸ್ ಮಾರ್ಕ್ಸ್ ಕೊಟ್ಟಿದ್ದಾರೋ ಗೊತ್ತಿಲ್ಲ. ಯಾವ ಬೇಸಿಸ್ ಮೇಲೆ ಗ್ರೇಸ್ ಮಾರ್ಕ್ಸ್ ಕೊಡುತ್ತಾರೋ ಗೊತ್ತಿಲ್ಲ. 10 ಪರ್ಸೆಂಟ್ ಗ್ರೇಸ್ ಮಾರ್ಕ್ಸ್ ಕೊಟ್ಟರೂ ಕೂಡ ಹುಡುಗರು ಪಾಸಾಗುತ್ತಿಲ್ಲ. ವಿದ್ಯಾಭ್ಯಾಸದಲ್ಲಿ ಲೋಪ ಇದೆ ಎಂದು ಕಂಡು ಬರುತ್ತದೆ. ಎಲ್ಲಿ ಲೋಪ ಇದೆ ಎನ್ನುವುದನ್ನು ಪತ್ತೆ ಮಾಡಬೇಕು. ಕಿಂಡರ್‌ಗಾರ್ಟನ್ ಶಿಕ್ಷಣ ನಿರ್ಲಕ್ಷ್ಯ ಮಾಡಿರುವುದರಿಂದ ಇಷ್ಟು ಕಡಿಮೆ ಪಾಸು ಆಗುವುದಕ್ಕೆ ಇದು ಮುಖ್ಯ ಕಾರಣವಾಗಿದೆ ಎಂದು ಹೇಳಬಹುದು. ಸಣ್ಣ ಸಸಿ

ಯನ್ನು ಸರಿಯಾಗಿ ಆರೈಕೆ ಮಾಡಿದರೆ ಗಿಡ ಸರಿಯಾಗಿ ಬೆಳೆಯುತ್ತದೆ. ಆದುದರಿಂದ ಕಿಂಡರ್ ಗಾರ್ಟನ್ ಶಿಕ್ಷಣಕ್ಕೆ ಹೆಚ್ಚು ಗಮನ ಕೊಟ್ಟು ಅದಕ್ಕೆ ಪ್ರತ್ಯೇಕವಾದ ಒಂದು ಡೈರೆಕ್ಟರೇಟ್ ಕ್ರಿಯೇಟ್ ಮಾಡಿ ಎಂದು ನಾನು ಹೇಳುತ್ತೇನೆ. ಸೆಕೆಂಡರಿ ಪ್ರೈಮರಿ ಕಿಂಡರ್‌ಗಾರ್ಟನ್ ಶಿಕ್ಷಣ ವ್ಯವಸ್ಥೆಗೆ ಒಬ್ಬರೇ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇರುವುದರಿಂದ ಪ್ರೈಮರಿ ಸ್ಟೇಜಿನಲ್ಲಿ ಸಂಪೂರ್ಣವಾಗಿ ಶಿಕ್ಷಣವು ಹಾಳಾಗಿ ಹೋಗಿದೆ.

ಇನ್ನೊಂದು ಮುಖ್ಯ ಕಾರಣ ಹೇಳುತ್ತೇನೆ. ಪಠ್ಯ ಪುಸ್ತಕಗಳ ಬಗ್ಗೆ ಒಂದು ಮಾತು ಹೇಳುತ್ತೇನೆ. ಇದಕ್ಕೆ ಎಷ್ಟು ಹಣ ಖರ್ಚಾಗುತ್ತಿದೆ? ಪಠ್ಯ ಪುಸ್ತಕದ ಬಗ್ಗೆ ದಿನಗಟ್ಟಲೇ ಬೇಕಾದರೆ ಹೇಳಬಹುದು. ಇದೊಂದು ಸ್ಕ್ಯಾಂಡಲ್ ಆಗಿದೆ. ಪಠ್ಯ ಪುಸ್ತಕದ ಬಗ್ಗೆ ಒಂದು ಸಮಿತಿ ಇದೆ. ಹಣ ಮಾಡಬೇಕು ಎನ್ನುವ ಉದ್ದೇಶದಿಂದ ಪಠ್ಯ ಪುಸ್ತಕಗಳನ್ನು ಬರೆಯುತ್ತಾರೆ. ಸರಕಾರದವರು ಮಕ್ಕಳಿಗಾಗಿ ಪ್ರಕಟಿಸುವ ಪಠ್ಯ ಪುಸ್ತಕಗಳ ವೈಖರಿ ನೋಡಿದ್ದೀರಾ? ಇಲ್ಲಿ ಸರಕಾರ ಇದೆ, ಮಂತ್ರಿಗಳು ಇದ್ದಾರೆ. ಆದರೆ ಅವರು ಇದ್ದಾರೆಯೇ ಎಂದು ಅನುಮಾನ ಬರುತ್ತದೆ. ಈ ವಿಚಾರದಲ್ಲಿ ಅಸಮರ್ಪಕವಾಗಿ ಕಾರ್ಯಕ್ರಮ ನಡೆದುಕೊಂಡು ಹೋಗುತ್ತಿದೆ. ಕನ್ನಡದಲ್ಲಿ ಚಿಕ್ಕಮಕ್ಕಳಿಗಾಗಿ ಸಣ್ಣ ಸಣ್ಣ ಪುಸ್ತಕಗಳು ಇಲ್ಲ. ರಷ್ಯಾ ಅಮೇರಿಕಾ ದೇಶದಿಂದ ಸಣ್ಣ ಪುಸ್ತಕಗಳನ್ನು ತೆಗೆದುಕೊಳ್ಳಬೇಕಾಗಿದೆ. ಕನ್ನಡದಲ್ಲಿ ಚಿಕ್ಕಮಕ್ಕಳ ಪುಸ್ತಕ ಪ್ರಕಟಿಸುವುದಕ್ಕೆ ಸರಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ?

ಸಂಸ್ಕೃತಿ ಪ್ರಚಾರದ ಹೆಸರಿನಲ್ಲಿ ಕಾಂಗ್ರೆಸ್ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಕೆಲಸಕ್ಕೆ ಬಾರದ ಪುಸ್ತಕಗಳನ್ನು ಮುದ್ರಿಸಲು ಖರ್ಚು ಮಾಡಿ, ದಪ್ಪ ದಪ್ಪ ರಟ್ಟು ಹಾಕಿ ಮಾರಾಟ ಮಾಡಿದರು. ಓದುವ ಮಕ್ಕಳಿಗೆ ನಾಲ್ಕಾಣೆ, ಎಂಟಾಣೆ ಬೆಲೆಯಲ್ಲಿ ಕೊಂಡುಕೊಂಡು ಓದಲು ಸರಿಯಾದ ಪುಸ್ತಕಗಳಿಲ್ಲ. ಚಿಲ್‌ಡ್ರನ್ಸ್ ಪುಸ್ತಗಳನ್ನು ಕೊಂಡು ಓದಬೇಕೆಂದು ಮಕ್ಕಳು ಪ್ರಯತ್ನ ಪಟ್ಟರೆ ಯಾವ ಅಂಗಡಿಗೆ ಹೋದರೂ ಸಿಕ್ಕುವುದಿಲ್ಲ. ಇಂಥ ಯಾವ ಪುಸ್ತಕವನ್ನೂ ಮೈಸೂರು ಸರ್ಕಾರದವರು ಪ್ರಕಟಣೆ ಮಾಡಿಲ್ಲ. ಇವತ್ತಿನ ದಿವಸ ಚಿಕ್ಕ ಬೆಳವಣಿಗೆ, ನಡತೆ, ವಿದ್ಯಾಭ್ಯಾಸ ಕ್ರಮ ಇವುಗಳನ್ನು ಚೆನ್ನಾಗಿ ಪೋಷಿಸಿದರೆ ಪರೀಕ್ಷೆಯಲ್ಲಿ ಫಲಿತಾಂಶಗಳು ಉತ್ತಮವಾಗುತ್ತವೆ, ದೇಶಕ್ಕೆ ಕೀರ್ತಿ ಬರುತ್ತದೆ, ಕಾಲೇಜು ವಿದ್ಯಾಭ್ಯಾಸ ಮುಗಿದ ಮೇಲೆ ಪರಿಪಕ್ವವಾಗಿ ಅಡ್ಮಿನಿಸ್ಟ್ರೇಟಿವ್ ಸರ್ವಿಸ್‌ನಲ್ಲಿ, ಆರ್ಮಿಯಲ್ಲಿ, ಪ್ರತಿಯೊಂದರಲ್ಲಿಯೂ ಯಶಸ್ಸು ಪಡೆಯುತ್ತಾರೆ. ಮೈಸೂರಿನ ವೈಖರಿಯನ್ನು ನೋಡುತ್ತ ಹೋದರೆ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಸರಿಯಾದ ರೀತಿನೀತಿಗಳಿಲ್ಲದೆ, ಯೋಜಿತವಾದ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳದೆ ಹಸು ಮಕ್ಕಳನ್ನು ಯಜ್ಞಪಶುಗಳನ್ನಾಗಿ ಪರಿವರ್ತಿಸಿಕೊಂಡು ರಾಜ್ಯಭಾರವನ್ನು ಮುಂದುವರಿಸುತ್ತಿದ್ದಾರೆ. ವಿದ್ಯಾಭ್ಯಾಸ ಪಕ್ಷಾತೀತವಾದ ವಿಷಯ, ಕಾಂಗ್ರೆಸ್ ಪಕ್ಷದವರ ಮಕ್ಕಳಿಗೂ ಬೇಕು, ವಿರೋಧ ಪಕ್ಷದವರ ಮಕ್ಕಳಿಗೂ ಬೇಕು. ಒಟ್ಟಿನಲ್ಲಿ ಪರಿಸ್ಥಿತಿಯನ್ನು ನೋಡುತ್ತ ಹೋದರೆ ಯಾವ ಶಾಲೆಯಲ್ಲಿಯೂ ಪರಿಪಕ್ವವಾದ ವಿದ್ಯಾಭ್ಯಾಸ ಸಿಕ್ಕುತ್ತಿಲ್ಲ. ಹೀಗಿರುವಾಗ ನಮ್ಮ ಮಕ್ಕಳನ್ನು ದೂಷಿಸುವುದರಿಂದ ಏನೂ ಪ್ರಯೋಜನವಿಲ್ಲ. ಸರ್ಕಾರದವರು ಈ ಮುಖ್ಯವಾದ ಕಾರ್ಯದಲ್ಲಿ ಸಂಪೂರ್ಣವಾಗಿ ವಿಮುಖರಾಗಿದ್ದಾರೆ. ಸರ್ಕಾರದವರು ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದರೂ ಸೇಕಡ ಆರು, ಎಂಟರಷ್ಟು ಜನ ಪಾಸಾಗುತ್ತಿದ್ದಾರೆ. ಗ್ರಾಮಾಂತರದ ಪರಿಸ್ಥಿತಿಯನ್ನು ತೆಗೆದುಕೊಂಡರೆ ಇನ್ನೂ ಚಿಂತಾಜನಕವಾಗಿದೆ. ಗ್ರಾಮಾಂತರದ ಜನ ಮುಂದುವರಿಯಬೇಕು ಎಂದು ಹೇಳುವಾಗ ಅವರಿಗೆ ಏನು ಸೌಲಭ್ಯ ದೊರಕುತ್ತಿದೆ? ಪಟ್ಟಣವಾಸಿಗಳಿಗೆ ಹೆಚ್ಚು ಅನುಕೂಲಗಳು ದೊರಕುತ್ತಿವೆ. ಇಂಥದ್ದರಲ್ಲಿ ಗ್ರಾಮಾಂತರದ ಮಕ್ಕಳು ಪಟ್ಟಣವಾಸಿಗಳ ಮಕ್ಕಳ ಜೊತೆಯಲ್ಲಿ ಪೈಪೋಟಿ ನಡೆಸುವಂಥ ಪರಿಸ್ಥಿತಿ ಇದೆ. ಗ್ರಾಮಾಂತರಗಳಿಂದ ಪಟ್ಟಣಕ್ಕೆ ಬಂದು ನೆಲಸಿದವರೇ ಬುದ್ಧಿವಂತರು, ಅದೃಷ್ಟವಂತರು, ಗ್ರಾಮಾಂತರದಲ್ಲಿಯೇ ಇರುವವರು ನತದೃಷ್ಟರು. ಅವರು ಪಟ್ಟಣಕ್ಕೆ ಬಂದು ನೆಲಸುವುದಕ್ಕೆ ಸಾಧ್ಯವೇ ಇಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಧೋರಣೆಯಲ್ಲಿ ಸಂಪೂರ್ಣವಾಗಿ ಬ್ಯಾಕ್‌ವರ್ಡ್ ಕ್ಲಾಸ್‌ನವರೆಲ್ಲ ಗ್ರಾಮಾಂತರದಲ್ಲಿಯೇ ಉಳಿಯಬೇಕು, ಯಾರು ಅದೃಷ್ಟವಂತರೋ, ಅವರು ಪಟ್ಟಣದಲ್ಲಿ ಸೇರಿಕೊಂಡರು ಎನ್ನುವಂತಾಗಿದೆ. ಪಟ್ಟಣದಲ್ಲಿ ಸೇರಿಕೊಂಡವರು ಅವರ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸವನ್ನು ಕೊಡಲು ಬೇಕಾದಷ್ಟು ಸೌಕರ್ಯಗಳಿರುವುದರಿಂದ ಅವರು ಮುಂದುವರಿಯುವುದಕ್ಕೆ ಅವಕಾಶವಾಗುತ್ತಿದೆ. ಹಳ್ಳಿಯು ಮುಂದುವರಿಯುವುದಕ್ಕೆ ಸರ್ಕಾರ ಏನೂ ಸಹಾಯ ಮಾಡುತ್ತಿಲ್ಲ. ಈ ಮಂತ್ರಿಮಂಡಲಕ್ಕೆ ವಿದ್ಯಾಭ್ಯಾಸವನ್ನು ಸುಯೋಜಿತವಾದ ರೀತಿಯಲ್ಲಿ, ದಕ್ಷ ರೀತಿಯಲ್ಲಿ, ನಿರ್ವಹಿಸುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ಅವರು ರಾಜಿನಾಮೆ ಕೊಡಲಿ ಎಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

† Sri B. P. GANGADHAR.—Mr. Deputy Speaker, I have to submit that this State is on the brink of a disaster. Of course the hon'ble member Sri A. R. Badri Narayan was making frantic appeals to the House and he was narrating big sermons. But I want to charge this Government of four important matters and if for any reason they are unable to satisfy or give valid reasons for all the charges that I am narrating, I think that will really be a matter which has to be taken serious note of and if there is any collective responsibility, they must forthwith resign. All the members on the other side, if they feel that the interest of the country and the progress of the State are uppermost, they must have to vote for this motion.

First of all, I submit that large tracts of land, to an extent of nearly 200 acres have been disposed of within the Corporation area of Bangalore, to the henchmen of the Congress, participants in the Congress organisation and big contractors, money lenders and tycoons of the Congress party. This large extent has been disposed of at a very nominal price. I may mention here some of the disposals which are heartrending and the Minister concerned is significantly absent here. Perhaps he is also a colluding party to this. Four acres of land has been disposed of in S.No. 80 of Akkithimmanahalli, now called Shantinagar to a contractor. His name is Muniswamiah and it is given at a nominal price of Rs. 3,500 per acre. This plot of land is worth at least Rs. 20 lakhs now. Is it not a big crime committed on the State Exchequer? Further more at Byrasandra in S.No. 98 and 98/2, 2½ acres of land has been granted to one Narayana Gowda an Editor of a small daily paper and another half an acre to his brother. The vicinity is very close to the Sanatorium. Is it a cheap land to be disposed of like this? Is it not a valuable piece of land and is it in the interest of the State that such valuable lands to be disposed of? The wealth of this State has really been disposed of and there is no body to ask. Similarly 2 acres of land in Vasantha Nagar has been disposed of to Bhoopalam and like this several large tracts of land have been disposed of to their men. Property worth nearly 10 crores has been lost to the State Exchequer. If there is one man who has a clean conscience and interest of the betterment of the citizens of Mysore, he must forthwith offer his resignation. I am sure they will not do so because if they resign they have no other means to eke out their livelihood.

Take the question of education. A question was put regarding unemployment in the country. It was admitted by the Education Minister that there are 3,000 graduates in engineering who are unemployed. He said that only 10 per cent of them can get employment. Of course Government say that they have no responsibility; I think their responsibility is restricted only to their henchmen. What has to happen to these 3,000 people who are now unemployed? Is it not a sorrowful atmosphere prevailing in the country? If they are not capable of providing employment for these engineering graduates, what for they are ruling the country? Is it to help their own henchmen and their

partymen they are ruling ? This is a shameful atmosphere and I think the Government has to resign even on this score alone. In the matter of education, for nearly 22 subjects there are no professors. Is their any great dearth for professors ? Perhaps the Government does not want to see that these posts are filled up so that our boys can get good education. The ratio between the professors and students is one professor for 3,330 students. I must say that they are only ruining the students. I submit that this Government does not think of either education or land reforms or the interests of ryots but they think of only ministry making and that seems to be their sole motto. They have absoluteiy no regard for the growing generation of this country. When the student and professor ratio is 3330 : 1 I do not know what the Education Minister is going to do for this.

Similarly on the food front, what is the achievement of this Government ? The Food Minister will kindly note that in mofussil parts in the famine-stricken areas—he has been going on in his own way and unfortunately that is the fate of this country—five or six villages have been grouped together in one Panchayat and one bag of milo or wheat is given. Government have no responsibility in respect of the persons who are the real growers and who are in famine-stricken areas. So far as Bangalore City and some other places are concerned, they say that this is a statutory area and that they have to fulfil their commitments, but so far as the hopelessly famine-stricken areas are concerned, for the past three years they have been suffering and they have the temerity to say that they have no responsibility. They say that if there is anything available, they will give and if there is nothing they can't give. Can we tolerate this Government ? If at all this were some othe European country, they would not have tolerated this Ministry even for a minute; they would have hounded them out but unfortunately our people have not come to that stage. This is another charge against this Government.

I have been telling time and again that at least in the famine-stricken areas they must completely give up land revenue. In spite of the promises made by them during election time, they have not kept them. They have been trying to hoodwink the people. They now say that they are not going to abolish land revenue but are going to levy in it a different way. I do not see any logic in it. It is only deceit and fraud practised on the innocent millions of ryots in the mofussil parts. This is another issue in which they have failed. Can we tolerate such a Government even for a minute ? This issue will have far-reaching consequences so far as the ryots are concerned.

These are the three charges against the Government They have not only failed miserably but have also brought the State to the brink of a disaster and therefore they must forthwith tender their resignation. With these observations, I commend the motion moved by the Hon'ble the Leader of the Opposition. I support it in toto.

Sri J. P. SARWESH (Serum).—[*Spoke in Urdu*].

12-00 NOON.

ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಈ ಅವಿಶ್ವಾಸ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಿ ಕೆಲವರು ವಿರೋಧವಾಗಿಯೂ ಕೆಲವರು ಪರವಾಗಿಯೂ ಮಾತನಾಡಿದ್ದಾರೆ. ಆ ಕಡೆಯವರು ಮಾತನಾಡಿರತಕ್ಕವರ ಪೈಕಿ ಕೆಲವರು ಸ್ವಲ್ಪ ಸ್ವಾರಸ್ಯವಾಗಿಯೇ ಮಾತನಾಡಿದ್ದಾರೆ. ಅವರ ವಾದವಾದರೂ ಇಷ್ಟೇ, ನಿಮಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ, ನೀವು ಅವಿಶ್ವಾಸ ನಿರ್ಣಯವನ್ನು ತಂದು ಈ ಸರ್ಕಾರವನ್ನು ಬುಡಮೇಲು ಮಾಡುವುದಕ್ಕೆ ನಿಮಗೆ ಸಾಮರ್ಥ್ಯ ಎಲ್ಲಿದೆ ? ಇದನ್ನು ಏಕೆ ತಂದಿರಿ ಎಂದು ವಾದಮಾಡಿದ್ದಾರೆ. ಮತ್ತು ಈ ಅವಿಶ್ವಾಸ ನಿರ್ಣಯವನ್ನು ಮಂಡಿಸಿರತಕ್ಕವರ ವ್ಯಕ್ತಿತ್ವದ ಮೇಲೂ ಸಹ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಬಹಳ ಅನುಭವಶಾಲಿಗಳಾದ ನೀವು ಇದ್ದುಕೊಂಡು ಇಂಥಾದ್ದೆಲ್ಲಾ ತರಬಾರದಾಗಿತ್ತು, ತಂದು ಈ ಸರ್ಕಾರ ಬದಲಾವಣೆ ಮಾಡುವ ಸಾಮರ್ಥ್ಯ ನಿಮಗೆ ಇಲ್ಲ ಎಂಬ ವಾದ ಸರಣಿ, ಧಾಟಿಯಲ್ಲಿ ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಈ ಸರ್ಕಾರ ಎಲ್ಲಿಯವರೆಗೆ ಈ ರೀತಿ ಆಡಳಿತ ನಡೆಸಿಕೊಂಡು ಹೋಗಬೇಕು ಎಂಬುದನ್ನು ನೀವೇ ಹೇಳಿ, ಆ ರೀತಿ ಹೇಳುವಾಗ ಈ ದೇಶದ ಮುಖ್ಯ ಸಮಸ್ಯೆ ಏನಿದೆ ಅದನ್ನು ಮುಂದೆ ಇಟ್ಟುಕೊಂಡು ಹೇಳುವುದಾದರೆ ನಮ್ಮ ಅಭ್ಯಂತರವಿಲ್ಲ, ನಾವು ಈಗ ನಮ್ಮ ದೇಶದಲ್ಲಿ ಒಂದು ಕಠಿಣತರವಾದ ಪರಿಸ್ಥಿತಿಯಲ್ಲಿದ್ದೇವೆ. ಆಹಾರದ ಅಭಾವ ಇದೆ, ಗ್ರಾಮಾಂತರಗಳಿಗೆ ಸೆಪ್ಟಂಬರ್, ಅಕ್ಟೋಬರ್, ನವೆಂಬರ್ ತಿಂಗಳಿನಿಂದ ಈಚೆಗೆ—ನಮ್ಮ ಹಿಂದೂ ಪದ್ಧತಿಯ ಪ್ರಕಾರ ಹದಿನೈದು ದಿವಸಕ್ಕೆ ಒಂದು ಉಪವಾಸ ಇತ್ತು ಅದು ಹೋಗಿ ಇವತ್ತು ಒಂದೊಂದು ಗ್ರಾಮದಲ್ಲಿ ಕೂಳಿಲ್ಲದೆ ವಾರಕ್ಕೆ ಎಷ್ಟು ದಿನ ಉಪವಾಸವಾಗುತ್ತದೆಯೋ ಅದನ್ನು ವರ್ಣಿಸಲಿಕ್ಕೆ ಆಗುವುದಿಲ್ಲ. ನಾನು ಹೇಳುತ್ತಿರುವುದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಇವತ್ತಿನ ದಿವಸ ಮಂತ್ರಿಗಳಾಗಿರತಕ್ಕವರು ಬೆಂಗಳೂರಿನಲ್ಲಿ ಒಂದೊಂದು ದೊಡ್ಡ ಬಂಗಲೆಯಲ್ಲಿ ಇದ್ದಾರೆ, ಅದರ ಅರಿವು ಅವರಿಗೆ ಇಲ್ಲದೇ ಇರಬಹುದು. ಆದರೆ ಗ್ರಾಮಾಂತರಗಳಿಂದ ಬಂದಿರತಕ್ಕವರಾದ ನೀವುಗಳು ಆ ಕಡೆಯವರು ಯಾರಿದ್ದೀರಿ ನೀವು ಹೇಳಿ ಇದರಲ್ಲಿ ಸತ್ಯಾಂಶ ಇದೆಯೋ ಇಲ್ಲವೇ ಎಂಬುದನ್ನು. ಇಂತಹ ಒಂದು ಆಹಾರದ ಅಭಾವ ಸಮಸ್ಯೆ ಇರುವಾಗ, ತಾವು 20 ವರ್ಷದಿಂದ ರಾಜ್ಯಭಾರ ಮಾಡುತ್ತಾ ಇದ್ದೀರಿ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ಎಂದು ನೋಡಿದರೆ ಅಂತಹ ಗಮನಾರ್ಹವಾದ ಪ್ರಗತಿ ಯಾವುದೂ ಕಾಣುತ್ತಾ ಇಲ್ಲ. ಒಂದು ಅಂಶ ಮಾತ್ರ ಎದ್ದು ಕಾಣುತ್ತಾ ಇದೆ, ಯಾರಾದರೂ ದಕ್ಷರು, ನೀತಿವಂತರು, ಸತ್ಯವಂತರು ಕಾಂಗ್ರೆಸ್ ಸಂಸ್ಥೆಯಲ್ಲಿ ಇದ್ದರೆ ಅವರನ್ನು ತೆಗೆದು ಹಾಕಬೇಕು, ಗುಂಪುಗಾರಿಕೆ ಕಟ್ಟಬೇಕು ಎಂಬ ದೃಷ್ಟಿಯೊಂದನ್ನು ಬಿಟ್ಟರೆ ಮತ್ತೆ ಯಾವ ಅಂಶವೂ ಕಾಣುತ್ತಿಲ್ಲ. ಕೆಲವರು ಹೇಳಿದರು, ವರ್ಷೇ ವರ್ಷೇ ಯೋಜನೆಗಳು ಬದಲಾಗುತ್ತಾ ಇವೆ, ಮೊದಲು 16 ಲಕ್ಷ ಇದ್ದದ್ದು 32 ಲಕ್ಷ ಆಯಿತು ಮೂರನೆ ಯೋಜನೆಯಲ್ಲಿ 48 ಲಕ್ಷ ರೂಪಾಯಿಗಳಿಗೆ ಬಂದಿಲ್ಲವೇ ಎಂದು ಅಂಕಿಅಂಶಗಳನ್ನು ಪುಸ್ತಕದಿಂದ ತೆಗೆದು ಹೇಳುತ್ತಾ ಇದ್ದರು. ಹಾಗಿದ್ದ ಮೇಲೆ ಏಕೆ ಈ ಆಹಾರ ಸಮಸ್ಯೆ ಬಗೆಹರಿದಿಲ್ಲ ಎಂಬುದನ್ನು ಅವರು ತಿಳಿಸಬೇಕು. ಜನಸಂಖ್ಯೆ ಜಾಸ್ತಿಯಾಯಿತು ಎಂದು ಹೇಳುತ್ತಾರೆ, ಹೌದು. ಅಮೇರಿಕಾ ಮತ್ತು ಇತರ ದೇಶಗಳಿಂದ ತರಿಸತಕ್ಕ ದಿನಸಿ ಇದ್ದರೂ ಕೂಡ ಈ ಆಹಾರದ ಅಭಾವ ಇರುವುದನ್ನು ನೋಡಿದರೆ ನಿಜವಾಗಿಯೂ ನೀವು ದಕ್ಷತೆಯಿಂದ ರಾಜ್ಯಭಾರವನ್ನು ಮಾಡುತ್ತಾ ಇದ್ದೀರಾ ಎಂಬುದನ್ನು ನೀವೇ ಎದೆ ಮುಟ್ಟಿ ಹೇಳಿ. ವಿರೋಧಪಕ್ಷದವರು ಏನೋ ಹೊಟ್ಟೆಕಿಚ್ಚಿಗೆ ಹೇಳುತ್ತಾರೆ ಅಂತ ಅಲ್ಲ, ನಾನು ಆ ಕೆಲಸ ಮಾಡುವವನಲ್ಲ. ಪ್ರಜೆಗಳ ಮುಖಂಡರು, ರಾಜ್ಯಭಾರ ಮಾಡಬೇಕು ಎಂದು ಹೇಳಿ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರತಕ್ಕವರು ಬೃಹದಾಕಾರವಾಗಿ ಇರತಕ್ಕ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ದಕ್ಷರಾಗಿಲ್ಲ, ನಿಮಗೆ ಜೋಹುಕುಂ ಹೇಳತಕ್ಕ ಜನ ಬೇಕು, ನೀತಿ, ನಿಯಮ ಪರಿಪಾಲನೆ ಮಾಡತಕ್ಕವರು ನಿಮಗೆ ಬೇಕಾಗಿಲ್ಲ, ಲಂಚಕೋರರು ಬೇಕು. ನೀವು ಹೇಳಿದ್ದನ್ನು ಕೇಳುವವರು ಬೇಕು, ಅಂಥವರಿಗೆ ನೀವು, ನಿಮ್ಮ ಸಂಸ್ಥೆ ಇರುವುದು ಎಂದು ಘಂಟಾಘೋಷವಾಗಿ ನಾನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನೀವು ಅನೇಕ ಪ್ರಾಜೆಕ್ಟುಗಳನ್ನು ಹಾಕಿಕೊಂಡಿದ್ದೀರಿ. ಕಪಿಲಾ ನದಿ ಪ್ರಾಜೆಕ್ಟ್ ಇದೆ. ಎಷ್ಟು ದಿವಸ ಆಯಿತು ? ಇವತ್ತಿಗೆ 13 ವರ್ಷವಾಯಿತು ಇನ್ನೂ ಫೌಂಡೇಷನ್ ಮುಗಿದಿಲ್ಲ, ನಿಮಗೆ ಕಂಟ್ರಾಕ್ಟುದಾರರು ಸರಿಯಾದವರು ಆಗಬೇಕು, ನೀವು ಹೇಳಿದವರು, ನೀವು ಹೇಳಿದಂತೆ ಕೇಳುವವರು ಆಗಬೇಕು. ಈ ದೇಶದ ದುಡ್ಡೆಲ್ಲಾ ಕಂಟ್ರಾಕ್ಟುದಾರರು ಮತ್ತು ಅಧಿಕಾರಿಗಳಿಗೆ ವ್ಯಯವಾಗುತ್ತಾ ಇರುವುದನ್ನು ನೋಡಿದರೂ ಕೂಡ ಏನೂ ಕಾಣದ ಹಾಗೆಯೇ ಇರುತ್ತೀರಿ, ಅದು ಏಕೋ ಗೊತ್ತಾಗುವುದಿಲ್ಲ. ಕಪಿಲಾ ಪ್ರಾಜೆಕ್ಟ್ ಆಗುವುದಕ್ಕೆ 12 ವರ್ಷ ಏಕೆ ಬೇಕು ? ಮಳೆ ಆಗಿಂದಾಗ್ಗೆ ಕೈಕೊಡುತ್ತಿರುವಾಗ ನೀವು ಇರತಕ್ಕ

ವಿದ್ಯುಚ್ಛಕ್ತಿಯನ್ನು ವ್ಯವಸಾಯಕ್ಕೆ ಉಪಯೋಗಿಸಬೇಕು ಎನ್ನತಕ್ಕ ಒಂದು ದೊಡ್ಡ ಮನಸ್ಸನ್ನು ಏಕೆ ಮಾಡಲಿಲ್ಲ ? ಗೋರೂರು, ಕೃಷ್ಣಾ ಮೇಲ್‌ದಂಡೆ ಯೋಜನೆಗೆ ದುಡ್ಡಿಲ್ಲ ಎಂದು ಹೇಳುತ್ತೀರಿ, ಹೌದು, ಒಪ್ಪಿಕೊಳ್ಳುತ್ತೇನೆ. ಈ ಎರಡು ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಆಗುವ ತನಕ ಆಹಾರ ಸಮಸ್ಯೆ ಬಗೆಹರಿಯುವುದಿಲ್ಲ ಇದಕ್ಕೆ ಏನು ಯೋಜನೆ ಹಾಕಿದ್ದೀರಿ ಎಂದು ಕೇಳುತ್ತೇನೆ. ಬಜೆಟ್ ಅಧಿವೇಶನದಲ್ಲಿ ಒಂದು ಪ್ರಶ್ನೆ ಕೇಳಿದ್ದಕ್ಕೆ ಇನ್ನು 2-3 ವರ್ಷ ಯಾವ ಅಭಿವೃದ್ಧಿ ಕಾರ್ಯಗಳನ್ನೂ ತೆಗೆದುಕೊಳ್ಳುವುದಿಲ್ಲ ಅದಕ್ಕೆ ಉಪಯೋಗಿಸತಕ್ಕ ದುಡ್ಡನ್ನು ಆಹಾರವನ್ನು ಒದಗಿಸುವುದಕ್ಕೆ ಮುಖ್ಯವಾಗಿರತಕ್ಕ ಪ್ರಾಜೆಕ್ಟುಗಳು ಯಾವುವು ಇವೆಯೋ ಅವನ್ನು ಮುಗಿಸುವುದಕ್ಕೆ ಉಪಯೋಗಿಸುತ್ತೇವೆ ಎಂದು ಹೇಳಿದಿರಿ. ಅದಕ್ಕೆ ಇವತ್ತು ನೀವು ಮನಸ್ಸು ಮಾಡಿಲ್ಲ. ಹೇಮಾವತಿಯಾಗಲಿ, ಕೃಷ್ಣಾ ಮೇಲ್ ದಂಡೆಯಾಗಲಿ ಪ್ರಾಜೆಕ್ಟ್‌ಗಳನ್ನು ಮಾಡಿಸಿದ್ದೀರಿ, ಎಸ್ಟಿಮೇಟ್ ಮಾಡಿಸಿದ್ದೀರಿ. ಫೌಂಡೇಷನ್ ಹಾಕಿಸಿದ್ದೀರಿ, ಆಫೀಸು ಸಹ ತೆಗೆಸಿದ್ದೀರಿ. ಆಫೀಸರುಗಳಿಗೆ ಸಂಬಳ ಕೊಡುತ್ತಾ ಇದ್ದೀರಿ, ದುಡ್ಡು ವ್ಯಯವಾಗುತ್ತಾ ಇದೆ. ಆದರೆ ಕೆಲಸ ಮಾತ್ರ ಆಗುತ್ತಾ ಇಲ್ಲ. ಎನ್. ಇ ಎಸ್ ಮುಂತಾದುವುಗಳಿಗೆ ದುಡ್ಡು ಚೆಲ್ಲುತ್ತಾ ಇದ್ದೀರಿ, ಆ ಹಣವನ್ನು ಈ ಪ್ರಾಜೆಕ್ಟುಗಳಿಗೆ ಉಪಯೋಗ ಮಾಡಿ ಅನ್ನದ ಅಭಾವವನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡಿ ಎಂದು ಪ್ರಾರ್ಥನೆ ಮಾಡುತ್ತೇನೆ. ಇವರು ಬರೀ ನಾಟಕವನ್ನಾಡಿ ಜನರನ್ನು ಮೋಸಮಾಡುವ ಪ್ರಯತ್ನದಲ್ಲಿದ್ದಾರೆ. ದೇಶದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ತಂಡಗಳು ಬೀದಿ ಬೀದಿಯಲ್ಲಿ ಅಲೆಯುತ್ತಿವೆ. ದಿನ ಬೆಳಗಾದರೆ ಅವರು ನಮ್ಮ ಮನೆಗಳ ಮುಂದೆ ಬಂದು ನಿಲ್ಲುತ್ತಾರೆ. ಅವರ ಗೋಳನ್ನು ನೋಡುವುದಕ್ಕಾಗುವುದಿಲ್ಲ. ಅವರು ಟೆಕ್ನಿಕಲ್ ಕಾಲೇಜುಗಳಲ್ಲಿ ಓದಿ ಕೆಲಸವಿಲ್ಲದೆ ಬೀದಿಗಳಲ್ಲಿ ಅಲೆದಾಡುತ್ತಿದ್ದಾರೆ. ಇಲ್ಲಿ ಬೆಂಗಳೂರಿನಲ್ಲಿರತಕ್ಕ ಸೆಂಟ್ರಲ್ ಸ್ಪಾನ್ಸರ್ಡ್ ಕೈಗಾರಿಕೆಗಳಲ್ಲೆಲ್ಲಾ ಹೊರಗಿನವರನ್ನು ತಂದು ತುಂಬುತ್ತಿದ್ದಾರೆ. ನಮ್ಮಲ್ಲಿ ಬುದ್ಧಿವಂತರಾದ ಜನರು ಅನೇಕರಿದ್ದಾಗ್ಯೂ ಇವರಿಗೆ ಕೆಲಸಗಳೇ ಸಿಕ್ಕುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಬಿ. ಇ. ಎಲ್. ಫ್ಯಾಕ್ಟರಿಯಲ್ಲಿ ಪೂರಾ ಹೊರಗಿನವರನ್ನೇ ತಂದು ತುಂಬಿದ್ದಾರೆ. ಈ ವಿಚಾರದಲ್ಲಿ ನಾವು ಸರ್ಕಾರಕ್ಕೆ ಪದೇ ಪದೇ ಹೇಳಿದಾಗ್ಯೂ ಅವರೇನೂ ಪ್ರಯತ್ನ ಮಾಡಿಲ್ಲ. ಹೀಗೆ ಪ್ರಜೆಗಳ ಕೇಳಿಕೆಗೆ ಮನ್ನಣೆ ಕೊಡದ ಸರ್ಕಾರ ಇದಿನ್ನೂ ಇರಬೇಕೇ ?

ಇನ್ನು ನಾನು ಆಹಾರದ ಲೆವಿ ವಿಚಾರದಲ್ಲಿ ಎರಡು ಮಾತುಗಳನ್ನು ಆಡಬೇಕಾಗಿದೆ. ಆಹಾರ ಧಾನ್ಯಗಳನ್ನು ಸಂಗ್ರಹಿಸಲು ಸಂಸ್ಥಾನಾದ್ಯಂತ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಅವರಲ್ಲಿ ನನಗೆ ಅನೇಕರು ಚಿರಪರಿಚಿತರು. ಆದರೆ ಹಿಂದಿನ ಸರ್ಕಾರದಲ್ಲಿದ್ದು ಡಿಸ್‌ಮಿಸ್ ಆಗಿರತಕ್ಕವರೊಬ್ಬರನ್ನು ಇವರು ಆಡಳಿತಕ್ಕೆ ಬಂದ ಮೇಲೆ ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಹಾಗೆ ಅವರನ್ನು ಕೆಲಸಕ್ಕೆ ನೇಮಿಸಿಕೊಂಡರು ಅಂದರೆ ಅದೂ ಎಂಥಾ ಕೆಲಸಕ್ಕೆ ಎಂದರೆ ಅವರನ್ನು ಈ ಫುಡ್ ಇಲಾಖೆಗೆ ನೇಮಿಸಿಕೊಂಡಿರುತ್ತಾರೆ. ಇವರು ಮೈಸೂರು ದೇಶದಲ್ಲಿರತಕ್ಕ ಮಿಲ್ ಮಾಲೀಕರನ್ನೆಲ್ಲಾ ಒಂದೇ ಸಾರಿಗೆ ನುಂಗಿ ನೀರು ಕುಡಿಯತಕ್ಕಂಥ ವ್ಯಕ್ತಿ ಅವರು : ಗಗನದಲ್ಲಿ ಹಾರಾಡತಕ್ಕ ಆ ಒಂದು ಪಕ್ಷಿಗೆ ಭೂಮಿಯ ಮೇಲೆ ಎಲ್ಲಿ ಹೆಣ ಬಿದ್ದಿದ್ದರೂ ಕೂಡಲೇ ಅಲ್ಲಿಗೆ ಹಾರಿ ಇಳಿಯುವಂತೆ ಅವರು ಮಿಲ್ ಮಾಲೀಕರನ್ನು ಹಿಡಿದು ಹಿಂಸೆಯನ್ನು ಕೊಡುತ್ತಿದ್ದಾರೆ. ಅಂಥಾ ಒಬ್ಬ ಅಧಿಕಾರಿಗಳನ್ನು ಈ ಫುಡ್ ಇಲಾಖೆಗೆ ತಂದು ಹಾಕಿದ್ದಾರೆ. ರೈತನಾದವನು ಈ ದಿವಸ ತಾನು ಸರ್ಕಾರಕ್ಕೇನೂ ಲೆವಿ ಕೊಡಬೇಕೋ ಅದನ್ನು ಕೊಟ್ಟಮೇಲೂ ಅವನಿಗೆ ಸರ್ಕಾರದವರೇಕೆ ಕಿರುಕುಳ ಕೊಡಬೇಕು ? ಅವನು ತಾನು ಕೊಡಬೇಕಾದ ಲೆವಿಯನ್ನು ಕೊಟ್ಟ ಬಳಿಕ ಅವನೇನಾದರೂ ತನ್ನ ಸ್ವಂತಕ್ಕೆ ಇಟ್ಟುಕೊಂಡಿದ್ದ ಬತ್ತವನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗುತ್ತಿದ್ದರೆ ಅಂಥವರನ್ನೂ ಸಹಾ ಹಿಡಿದು ಪೋಲೀಸ್ ಸ್ಟೇಷನ್ನಿನಲ್ಲಿ 3—4 ದಿನಗಟ್ಟಲೆ ಇಟ್ಟು ಹಿಂಸೆ ಕೊಡುತ್ತಿದ್ದಾರೆ. ಈ ದಿವಸ ಸರ್ಕಾರಿ ಅಧಿಕಾರಿಗಳು ಆ ರೈತನಿಗೆ ಕೊಡತಕ್ಕ ಕಿರುಕುಳವನ್ನು ಸೈರಿಸಲಾರದೆ ಅವರು ಈ ವ್ಯವಸಾಯವನ್ನೇ ಕೈಬಿಡಬೇಕೆಂಬ ಸ್ಥಿತಿಯಲ್ಲಿದ್ದಾರೆ. ಈ ದಿವಸ ನಮ್ಮ ತಾಲ್ಲೂಕಿನಲ್ಲಿ ಇಂತಿಷ್ಟು ಲೆವಿ ಕೊಡಬೇಕೆಂಬುದನ್ನು ಕೊಟ್ಟ ಮೇಲೂ ಅಲ್ಲಿ ಫ್ರೀ. ಮೂವ್‌ಮೆಂಟಿಗೆ ಅವಕಾಶವಿಲ್ಲ. ಇಂಥ ನಡತೆಯನ್ನು ದೇಶದಲ್ಲಿ ಯಾವ ದೇಶಭಕ್ತ ತಾನೆ ಸಹಿಸಲು ಸಾಧ್ಯ ? ನಮ್ಮಲ್ಲಿರತಕ್ಕ ಒಂಭತ್ತು ಲಕ್ಷ ಎಕರೆಗಳಲ್ಲಿ ಮಳೆ ಹೋದುದರಿಂದ ಕೇವಲ ಎರಡು ಲಕ್ಷ ಎಕರೆಗಳಲ್ಲಿ ಮಾತ್ರ ನಿರಾವರಿ ಇದ್ದ ಕಡೆ ಸ್ವಲ್ಪ ಮಟ್ಟಿಗೆ ಬೆಳೆಯಾಗಿದೆ. ಇನ್ನುಳಿದ ಏಳು ಲಕ್ಷ ಎಕರೆಗಳಲ್ಲಿ ಏನೇನೂ ಬೆಳೆಯಾಗಿಲ್ಲ. ಅಂಥ ಕಡೆ ರೈತರುಗಳಿಂದ ಸ್ವಲ್ಪ ತಡೆದು ಕಂದಾಯವನ್ನು ತೆಗೆದುಕೊಳ್ಳಿ ಎಂದು ಪ್ರಾರ್ಥನೆ ಮಾಡಿಕೊಳ್ಳಲು ಕೆಲವು ಜನ ರೈತರುಗಳು ಬಂದು ನನ್ನನ್ನೂ ಸಹಾ ಮಂತ್ರಿಗಳಾಗಿರತಕ್ಕ ಶ್ರೀ ಬಿ. ರಾಚಯ್ಯನವರ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ನಾನು ಅವರಿಗೆ ಈ ವಿಚಾರವನ್ನು ತಿಳಿಸಿದಾಗ ಅವರು ನನಗೆ ನೀವು ಇಂಥಾ ಒಂದು ಚೀಪ್ ಪಾಪ್ಯುಲಾರಿಟಿಯನ್ನು ಗಳಿಸಲು ಇದನ್ನೆಲ್ಲಾ ಮಾಡುತ್ತಿದ್ದೀರಿ ಎಂದು ಹೇಳಿಬಿಟ್ಟರು.

(ಶ್ರೀ ಎಂ. ಕೆ. ಬೊಮ್ಮೇಗೌಡ)

ಜನರು ಸತ್ತರೆ ಸಾಯಲಿ ಎಂಬುದಾಗಿ ಹೇಳಿದರು. ಇವರು ಕಾಂಗ್ರೆಸ್ಸಿನಲ್ಲಿ ಜನರಲ್ ಸೆಕ್ರೆಟರಿಗಳಿಗೆ ಎಸ್—ಮಾಸ್ಟರಾಗಿದ್ದವರು, ಈ ದಿವಸ ಸುಪ್ಪತ್ತಿಗೆಯ ಮೇಲಿದ್ದಾರೆಂದು ಹೇಳಬೇಕೆಂಬ ಆಸೆ ನನಗಿದ್ದರೂ ನಾನು ಅವರ ಮನೆಯಲ್ಲಿದ್ದುದರಿಂದ ಇನ್ನು ನನ್ನ ಮನೆಯಲ್ಲಿ ಗಲಾಟೆ ಮಾಡುವುದಕ್ಕೆ ಬಂದಿದ್ದಾರೆಂದು ಪೋಲಿಸಿಗೆ ದೂರು ಕೊಟ್ಟರೂ ಕೊಡಬಹುದೆಂದು ನಾನು ಅಲ್ಲಿ ಹೆಚ್ಚು ಮಾತನಾಡುವುದಕ್ಕೆ ಹೋಗದೆ ಸುಮ್ಮನಾದೆನು. ನಾವೆಲ್ಲರೂ ಅದೇ ಕಾಂಗ್ರೆಸ್ ಸಂಸ್ಥೆಯಲ್ಲಿದ್ದು ಇವರೆಲ್ಲರೂ ಬಹಳ ಹಿಂದುಳಿದವರು, ಇವರೂ ಸಹಾ ನಮ್ಮ ಹಾಗೆ ಮುಂದೆ ಬರಲೆಂದು ಆ ದಿವಸ ನಾವೆಲ್ಲರೂ ಹೋರಾಡಿದೆವು. ಹೀಗೆ ಇವರು ಜನರನ್ನು ಗುಂಡಿಟ್ಟು ಕೊಲ್ಲುತ್ತಾರೆಂದು ತಿಳಿದಿದ್ದರೆ ನಾವು ಆ ಹೋರಾಟಕ್ಕೆ ಕೈಹಾಕುತ್ತಿರಲಿಲ್ಲ. ಆದರೆ ಕಾಂಗ್ರೆಸ್ಸಿನಲ್ಲಿ ಇನ್ನೂ ಒಳ್ಳೆಯವರಿದ್ದಾರೆ. ಅದರೆ ಅಂಥ ದಕ್ಷರನ್ನೂ ನಿಸ್ಪೃಹರನ್ನೂ ಸಂಸ್ಥೆಯಿಂದ ಹೊರಗೆ ಹಾಕಿ ಇವರಿಗೆ ದಾಸಾನುದಾಸರಾಗಿ ವರ್ತಿಸತಕ್ಕ ಜನರನ್ನು ಮಾತ್ರ ಈ ದಿವಸ ಆ ಸಂಸ್ಥೆಯಲ್ಲಿಟ್ಟುಕೊಂಡಿದ್ದಾರೆ. ಹೇಳಬೇಕೆಂದರೆ ಎಷ್ಟೋ ಇದೆ. ಆದರೆ ನನಗೆ ಕಾಲಾವಕಾಶವಿಲ್ಲ. ಈ ದಿವಸ ದೇಶದಲ್ಲಿ ಪೋಲೀಸ್ ಇಲಾಖೆಯನ್ನು ಏತಕ್ಕೆ ಇಡಲಾಗಿದೆ? ಸಮಾಜ ಕಂಟಕರನ್ನು ಶಿಕ್ಷೆ ಮಾಡುವುದಕ್ಕೂ ಮತ್ತು ಉತ್ತಮರಿಗೆ ರಕ್ಷಣೆಯನ್ನು ಕೊಡುವುದಕ್ಕೂ ಆ ಇಲಾಖೆಯನ್ನು ಇಟ್ಟಿರುವುದು. ಆದರೆ ಈ ದಿವಸ ದೇಶದಲ್ಲಿ ನಡೆಯುತ್ತಿರುವುದೇನು? ಪೋಲೀಸರೆ ಊರುಗಳಲ್ಲಿ ಎರಡು ಪಾರ್ಟಿಗಳನ್ನು ಮಾಡಿ ಇಬ್ಬರಿಂದಲೂ ದುಡ್ಡನ್ನು ಕಿತ್ತುಕೊಳ್ಳುತ್ತಿದ್ದಾರೆ. ಹೀಗೆ ದೇಶಾದ್ಯಂಥವೂ ನಡೆಯುತ್ತಿದೆ. ಪೋಲೀಸ್ ಸ್ಟೇಷನ್ನಿಗೇನಾದರೂ ಸಣ್ಣ ಪುಟ್ಟ ಅರ್ಜಿಗಳು ಬಂದರೆ ಅವರನ್ನು ಹಿಡಿದು ಪೋಲೀಸ್ ಸ್ಟೇಷನ್ನಿನಲ್ಲಿ 24 ಗಂಟೆಗಳು ಇಟ್ಟಿರುವುದು. ಅಷ್ಟರಲ್ಲೇನಾದರೂ ಯಾರಾದರೂ ದುಡ್ಡನ್ನು ತಂದರೆ ಆ ಹಿಡಿದಿದ್ದ ಮನುಷ್ಯನನ್ನು ಬಿಡುತ್ತಾರೆ, ಇಲ್ಲದಿದ್ದರೆ ಅವನನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸುತ್ತಾರೆ. ಇವರು ಮಹಾತ್ಮ ಗಾಂಧಿಯ ಭಕ್ತರು. ಇಂಥವರಿಗೆ ಯಾರು ಮುಖಂಡರು ಅಂದರೆ ಇವರಿಗೆ ಸರಿಯಾದವರು. ಹಿಂದೆ ಅದರಲ್ಲಿ ಅವಿಚ್ಛಿನ್ನ ಗಾಂಧಿ ಭಕ್ತರಿದ್ದರು. ತ್ಯಾಗಿಗಳಿದ್ದರು. ಆದರೆ ನಾನು ಎಂದೂ ಚೀಪುಪಾಪ್ಯುಲಾರಿಟಿಗಾಗಿ ಹೊಡೆದಾಡಿದವನಲ್ಲ. ನಾನು ಇನ್ನೊಬ್ಬರ ಹೆಸರನ್ನು ಹೇಳಿ ಕೊಂಡು ಮುಂದಕ್ಕೆ ಬಂದವನೂ ಅಲ್ಲ. ಅವರು ಯಾರ ಹೆಸರನ್ನು ಹೇಳಿಕೊಂಡು ಮುಂದೆ ಬಂದರೆಂಬುದನ್ನು ನಾನು ಹೇಳಬೇಕಾದ್ದಿಲ್ಲ. ಆದರೆ ಈ ದಿನ ದೇಶದಲ್ಲಿರತಕ್ಕ ಪೋಲೀಸ್ ಇಲಾಖೆಯನ್ನು ಸಂಪೂರ್ಣವಾಗಿ ತೆಗೆದು ಹಾಕಿದರೂ ಪರವಾ ಇಲ್ಲ ಎಂದು ಹೇಳತಕ್ಕ ಸ್ಥಿತಿಯಲ್ಲಿದೆ ಜನ. ಈ ದಿವಸ ನಾನು ನಮ್ಮ ಗ್ರಾಮದಲ್ಲೇ ಊರಿನ ವ್ಯಾಜ್ಯಗಳನ್ನು ಕೋರ್ಟಿನವರೆಗೂ ಬಿಡದಂತೆ ಅಲ್ಲಿಯೇ ಒಂದು ದಿನವನ್ನು ಗೊತ್ತುಮಾಡಿಕೊಂಡು ಅಲ್ಲೇ ತೀರ್ಮಾನ ಮಾಡುತ್ತಿದ್ದೇನೆ. ಹಿಂದೆ ವಾರದಲ್ಲಿ ಒಂದು ದಿನ ಸೋಮವಾರದಲ್ಲಿ ಹೀಗೆ ಊರಿನ ವ್ಯವಹಾರಗಳನ್ನು ಅಲ್ಲಲ್ಲೇ ಬಗೆಹರಿಸುತ್ತಿದ್ದ ದಾಖಲೆಗಳಿವೆ. ಹಿಂದೆ ನಮ್ಮಲ್ಲಿ ನಾಡಿನ ಯಜಮಾನರಾಗಿ ಶ್ರೀ ಚೆನ್ನೇಗೌಡರು ಎನ್ನತಕ್ಕವರಿದ್ದರು. ಅವರು ಇಂಥ ವ್ಯವಹಾರಗಳನ್ನು ತೀರ್ಮಾನ ಮಾಡುವುದರಲ್ಲಿ ಎತ್ತಿದ ಕೈ ಎಂದು ಜನರು ಈಗಲೂ ಹೇಳುತ್ತಿದ್ದಾರೆ. ಆ ಕಾಲದ ಜನರಿಗೆ ಈಗಿನಂತೆ ನ್ಯಾಯವನ್ನು ಅನ್ಯಾಯ ಮಾಡುವುದು, ಅನ್ಯಾಯವನ್ನು ನ್ಯಾಯವನ್ನಾಗಿ ಮಾಡುವುದು ತಿಳಿದಿರಲಿಲ್ಲ. ಈ ದಿವಸ ಲಂಚ ತೆಗೆದುಕೊಳ್ಳತಕ್ಕವರು ಕೇವಲ ಸಣ್ಣವರು ಮಾತ್ರವೇ ಅಲ್ಲ—ಅವರಲ್ಲಿ ದೊಡ್ಡವರೂ ಇದ್ದಾರೆ.

†ಶ್ರೀ ಎಂ. ಬಸವರಾಜು (ಕೃಷ್ಣರಾಜ ನಗರ).—ಸನ್ಮಾನ್ಯ ಸಭಾಪತಿಗಳೇ, ಈ ಸಾರಿ ಸಭೆಯಲ್ಲಿ ನಡೆದ ಚರ್ಚೆಯನ್ನು ನೋಡಿದರೆ ಮತ್ತು ಸಭೆಯ ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನೋಡಿದರೆ ಈ ಟ್ರೆಜರಿ ಬೆಂಚಿಗೆ ಯಾವುದಾದರೂ moral binding ಇದೆಯೇ ಇನ್ನುವ ಅನುಮಾನ ಬರುತ್ತದೆ. ಈವೊತ್ತು ಇಡೀ ಮೈಸೂರು ಸೀಮೆಯಲ್ಲಿ ಅಭಾವ ಪರಿಸ್ಥಿತಿ ಹೇಗಿದೆ ಎಂದರೆ ಅದನ್ನು ವರ್ಣಿಸಲಿಕ್ಕೆ ಸಾಧ್ಯ ಇಲ್ಲ. ಈ ಪರಿಸ್ಥಿತಿ ಬಗ್ಗೆ ಸನ್ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಿದರೆ ಕಳೆದ 20 ವರ್ಷಗಳಿಂದ ಒಂದು ಕೋಟಿ 99 ಲಕ್ಷ ಇರುವ ಹಳ್ಳಿಗಾಡಿನ ಜನ ಸಂಖ್ಯೆಯ ಉಪಯೋಗಕ್ಕಾಗಿ ಸರ್ಕಾರ ಏನಾದರೂ ಕೆಲಸ ಮಾಡಿದೆಯೇ ಎನ್ನುವುದನ್ನು ಯೋಚನೆ ಮಾಡಿದರೆ, ಏನೂ ಇಲ್ಲ ಎಂದು ಹೇಳಬೇಕಾಗುತ್ತದೆ. ಸರ್ಕಾರದ ಅಂಕಿ ಅಂಶ ನೋಡಿದರೆ ಭಾರತದ ನೀರಾವರಿ ಸರಾಸರಿ 18 ಪರ್ಸೆಂಟ್ ಇರುವಾಗ ಮೈಸೂರಿನಲ್ಲಿ 7·8 ಪರ್ಸೆಂಟ್ ಅಥವಾ ಎಂಟು ಪರ್ಸೆಂಟ್ ಇದೆ ಎಂದು ಹೇಳುತ್ತಾರೆ. ಭಾರತ ರಾಷ್ಟ್ರದ ಒಂದು ಅಂಗವಾದ ಮೈಸೂರಿಗೂ ಇಡೀ ಇಂಡಿಯಾ ದೇಶಕ್ಕೂ ಹತ್ತು ಪರ್ಸೆಂಟ್ ವ್ಯತ್ಯಾಸ ಇರುವುದಾದರೆ ನಾವು ಆರ್ಥಿಕ ಕ್ಷೇತ್ರದಲ್ಲಿ ತೆಗೆದುಕೊಂಡಿರತಕ್ಕಂಥ ದೃಢವಾದ ನಿಲುವು ಏನೂ ಇಲ್ಲ ಎಂದು ಹೇಳಬಹುದು. ಇದು ಶೋಚನೀಯವಾದ ಸ್ಥಿತಿ. ಈ ವಿಷಯದಲ್ಲಿ ಸರ್ಕಾರ

ತಪ್ಪು ಮಾಡಿದೆ ಅದು ತನ್ನ ಕರ್ತವ್ಯದಲ್ಲಿ ವಿಮುಖವಾಗಿದೆ. ಹಳ್ಳಿಗಾಡಿನಲ್ಲಿರತಕ್ಕ ಒಂದೂ ಕೋಟಿ 99 ಲಕ್ಷ ಜನಸಂಖ್ಯೆಯಲ್ಲಿ ಶೇಕಡ 12.7 ಜನಸಂಖ್ಯೆ ಅಗ್ರಿಕಲ್‌ಚರಲ್ ಲೇಬರ್ ಕ್ಲಾಸ್. ಮೈಸೂರು ಸೀಮೆಯಲ್ಲಿ ಕಳೆದ ಮೂರು ವರ್ಷದಿಂದ ಒಂದೇ ಸಮನೆ ಕ್ಷಾಮ ಪರಿಸ್ಥಿತಿ ಇದ್ದು ಮಳೆ ಬೆಳೆ ಏನೂ ಇಲ್ಲದೆ ಕೂಲಿ ಸಿಕ್ಕುತ್ತಾ ಇಲ್ಲ. ಇಂತಹ ಪರಿಸ್ಥಿತಿ ಒಳಗೆ ಮೈಸೂರು ಸೀಮೆಯಲ್ಲಿರತಕ್ಕ 29 ಲಕ್ಷ 36 ಸಾವಿರ ಜನ ಯಾವರೀತಿ ಇರಬೇಕು ಎಂದು ಯೋಚನೆ ಮಾಡಿ. ಈ ಜನಕ್ಕೆ ಮೈಸೂರು ಸರ್ಕಾರ, ಸ್ಕೇರ್ಸಿಟಿ ಬಾಬಿಗಾಗಿ ಇಂತಿಷ್ಟು ಹಣ ಇಟ್ಟಿದ್ದೇವೆ ಎಂದು ಅಂಕಿ ಅಂಶ ಒದಗಿಸುತ್ತಾರೆ. ಅದನ್ನು ಹಂಚಿದರೆ 10 ಅಥವಾ 11 ಅಣೆ ಬರಲಾರದು. ಮುಂಗಾರಿಗೆ ಸರಿಯಾಗಿ ಕೆಲಸ ಸಿಕ್ಕ ಬೇಕಾದರೆ ಇನ್ನು ಐದು ತಿಂಗಳು ಇದೆ. ಹೀಗೆ 11 ಅಣೆ ಖರ್ಚು ಮಾಡುವುದರಿಂದ ಅವರು ಐದು ತಿಂಗಳು ಹೇಗೆ ಇರಬೇಕು ? ಹಳ್ಳಿಗಾಡಿನಲ್ಲಿರತಕ್ಕ ಬೇಸಾಯಗಾರರ ಮತ್ತು ಕೂಲಿಗಾರರ ಸ್ಥಿತಿಗೆ ಕಲ್ಲು ಹಾಕಿದ್ದಾರೆ. ಸರ್ಕಾರದವರು ಇದನ್ನು ತೀವ್ರವಾಗಿ ಆಲೋಚಿಸಿ ಹೆಚ್ಚಿನ ಹಣವನ್ನು ಒದಗಿಸಿ ಶಾಶ್ವತವಾದ ಪರಿಹಾರ ಕೆಲಸ ಮಾಡಲು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳಬೇಕು. ಮೈಸೂರು ಸೀಮೆಯಲ್ಲಿ ಹಳ್ಳಿಗಾಡಿನಲ್ಲಿರತಕ್ಕ ಬೇಸಾಯ ಮತ್ತು ಕೂಲಿಗಾರರ ಜೀವನಕ್ಕೆ ಅನುಕೂಲ ಮಾಡದೇ ಇದ್ದುದರಿಂದ ಸರ್ಕಾರ ತನ್ನ ಕರ್ತವ್ಯದಲ್ಲಿ ವಿಫಲವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ನಾನಾ ತಾಲ್ಲೂಕಿನಲ್ಲಿ ಮೇಲಿನಿಂದ ಅಡಿಯ ವರೆಗೂ ಅದು ನನ್ನ ತಾಲ್ಲೂಕಿನಲ್ಲಿ ಅಂದರೆ ಕೆ. ಆರ್. ನಗರದಲ್ಲಿ, ಕಾವೇರಿ ನದಿ ಹರಿಯುತ್ತದೆ. ಅಲ್ಲಿ ಇರತಕ್ಕ ಆರು ನಾಲೆಗಳಲ್ಲಿ 1, 400 ಕ್ಯೂಸೆಕ್ಸ್‌ಗಳಷ್ಟು ಹರಿಯುವ ಕಡೆ 620 ಕ್ಯೂಸೆಕ್ಸ್‌ಗಳು ಹರಿಯುತ್ತಾ ಇಲ್ಲ. ಆದರೂ ಇವೊತ್ತಿನ ದಿವಸ ಲೆವಿ ವಸೂಲ್ಮಾಡುತ್ತಾ ಇದ್ದೀರಿ. ಲೆವಿ ಕಡ್ಡಾಯ ವಾಗಿ ಕೊಡಬೇಕು ಎಂದರೆ ಹೇಗೆ ? ಹಳ್ಳಿಗಾಡಿನ ಆರ್ಥಿಕ ಪರಿಸ್ಥಿತಿ ಹೇಗೆ ಇದೆ ಎಂದು ಸರ್ಕಾರ ಅಂದಾಜು ಮಾಡಿದೆಯೇ ? ಇವೆಲ್ಲದರಲ್ಲೂ ಕೂಡ ಸರ್ಕಾರ ವಿಫಲವಾಗಿದೆ ಎಂದು ನಾನು ಹೇಳ ಬೇಕಾಗುತ್ತದೆ. ಇದನ್ನೆಲ್ಲಾ ಯೋಚನೆ ಮಾಡಿದರೆ ಹೇಗೆ ಕಾಣುತ್ತದೆ ಎಂದರೆ ಕೋಳಿಯ ಬಟ್ಟೆ ಯನ್ನು ಮಡಿಮಾಡಿದ ಹಾಗಾಗುತ್ತದೆ. ಆ ಬಟ್ಟೆಯನ್ನು ಮಡಿ ಮಾಡಬೇಕಾದರೆ ನೀರಿಗೆ ಹಾಕುತ್ತಾನೆ, ಅದು 1957ನೇ ಇಸವಿ ಜನರಲ್ ಎಲೆಕ್ಷನ್‌ನಲ್ಲಿ ಆಗಿದೆ. ಅದಕ್ಕೆ ಸೋಪ್ ಹಾಕುತ್ತಾನೆ, ಅದು 1962ನೇ ಇಸವಿ ಜನರಲ್ ಎಲೆಕ್ಷನ್‌ನಲ್ಲಿ ಆಗಿದೆ. ಅನಂತರ ಚೆನ್ನಾಗಿ ಬಡಿಯುತ್ತಾನೆ, ಅದು 1967ನೇ ಇಸವಿ ಜನರಲ್ ಎಲೆಕ್ಷನ್‌ನಲ್ಲಿ ಆಗಿದೆ. ಒಗೆದಮೇಲೆ ಹಿಂಡುತ್ತಾನೆ ಅದು 1972ನೇ ಇಸವಿಯಲ್ಲಿ ಆಗುತ್ತದೆ. ಈವೊತ್ತು ಸರ್ಕಾರದವರಿಗೆ ಹಾಗೂ ಟ್ರೆಜರಿ ಬೆಂಚಿನಲ್ಲಿರ ತಕ್ಕ ಮಾನ್ಯ ಸದಸ್ಯರಿಗೆ ಹೇಳುತ್ತೇನೆ. 1972ನೇ ಇಸವಿಗೆ ಇಂತಹ ಪರಿಸ್ಥಿತಿಗೆ ಅವಕಾಶ ಕೊಡದೆ ನಾಲ್ಕು ವರ್ಷ ಅಧಿಕಾರ ಇರುವ ಅವಕಾಶದಲ್ಲಿಯಾದರೂ ಕೆಲಸ ಚೆನ್ನಾಗಿ ಮಾಡಿ ನಮ್ಮ ಕನ್ನಡ ನಾಡಿನ ಎರಡೂವರೆ ಕೋಟಿ ಜನತೆಯ ಹಿತದೃಷ್ಟಿಯಿಂದ ಕೆಲಸ ಮಾಡಿ. ಜನರನ್ನು ಉಳಿಸಲಿಕ್ಕೆ ಪ್ರಯತ್ನ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಳೆದ 16 ವರ್ಷಗಳಿಂದ ವಿಫಲರಾಗಿ ದ್ದರೂ ಮುಂದಿನ ನಾಲ್ಕು ವರ್ಷಗಳಲ್ಲಾದರೂ ನಿಮ್ಮ ಕೈಲಾದ ಸಹಾಯವನ್ನು ಜನತೆಗೆ ಮಾಡಿ ಇಲ್ಲದಿದ್ದರೆ ಮುಂದಿನ ಪೀಳಿಗೆಗೆ ಉತ್ತರ ಕೊಡಬೇಕಾದೀತು.

ಇನ್ನು ಅಡ್ಮಿನಿಸ್ಟ್ರೇಷನ್ ವಿಚಾರ ಹೇಳುವುದಾದರೆ ಸಪ್ಲಿಮೆಂಟರಿ ಎಸ್ಟಿಮೇಟ್ 5ನೇ ಪುಟದಲ್ಲಿ ಜೈಲಿಗೆ ಸಂಬಂಧಪಟ್ಟ ಹಾಗೆ ಒಬ್ಬ ಅಧಿಕಾರಿಗೆ ಯಾವುದೋ ಕಾರಣಕ್ಕಾಗಿ ಸಂಬಳ ಕೊಡದೆ ಜಡ್ಜ್‌ಮೆಂಟ್‌ಗಾಗಿ 12 ಸಾವಿರ ರೂಪಾಯಿ ಕೊಡಬೇಕಾಗಿದೆ. 1965ನೇ ಇಸವಿಯಿಂದ 1967ನೇ ಇಸವಿಯವರೆಗೆ ಆ ಅಧಿಕಾರಿ ನೌಕರಿಯಲ್ಲಿ ಕೆಲಸ ಮಾಡುತ್ತಾ ಇರುವಾಗ ಅನ್ಯಾಯವಾಗಿ ಕಳೆದ 12 ವರ್ಷಗಳಿಂದಲೂ ಅವನು ಯಾವ ರೀತಿ ಕೆಲಸ ಮಾಡಿರಬಹುದು ? ನಮ್ಮ ದೇಶದ ಒಂದು ಪೈ ಕೊಡಬೇಕಾದರೂ ಎಷ್ಟು ಕಷ್ಟವಾಗುತ್ತದೆ ಎಂದು ನೋಡಬೇಕು. ಹೀಗಿರುವಾಗ 12 ಸಾವಿರ ರೂಪಾಯಿ ಕೊಡಬೇಕಾದರೆ ಅವನು ಎಷ್ಟು ಕೆಲಸ ಮಾಡಿದ್ದಾನೆ ಎಂದು ನೋಡಬೇಕು. ಅವರಿಗೆ ಇಲ್ಲಿಯವರೆಗೆ ಸಂಬಳ ಕೊಟ್ಟಿದ್ದೂ ಅಲ್ಲದೆ ಹೆಚ್ಚುವರಿಯೂ ಕೂಡ ಕೊಡಬೇಕಾಗಿದೆ. 12 ಸಾವಿರ ಕೊಡಬೇಕಾದರೆ ನಮ್ಮ ದೇಶದ ಜನತೆಗೆ ದ್ರೋಹ ಮಾಡಿದಂತಾಗಿದೆ. ಒಂದು ಕಡೆ ಸಂಬಳ ಕೊಡದೆ ಅಧಿಕಾರಿ ಮನಸ್ಸನ್ನು ನೋಯಿಸುವುದು ಇನ್ನೊಂದು ಕಡೆ ಸಂಬಳ ಕೊಡದೆ ಇರುವುದರಿಂದ ಕೆಲಸ ಮಾಡದೇ ಇರುವುದು. ಈ ರೀತಿ ಮಾಡುವುದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ.

1916-17ನೇ ಇಸವಿಯಲ್ಲಿ ಇಡೀ ಇಂಡಿಯಾ ದೇಶವೆಲ್ಲೆಲ್ಲಾ ಮಲೇರಿಯಾ ರೋಗಬಂದು ಕೈಕಾಲು ಸಣ್ಣಗಾಗುತ್ತಿತ್ತು. ತಲೆ ಏನೂ ಇರಲಿಲ್ಲ. ಹೊಟ್ಟೆ ಡುಬ್ಬಣ್ಣ ಆಗುತ್ತಿತ್ತು. ಅದೇ ರೀತಿ ಮಲೇರಿಯಾ ರೋಗಕ್ಕೆ ಮುಂದಿನ ರೂಪಕ್ಕೆ ಈಗ ಸರ್ಕಾರ ತಾಳತಕ್ಕ ಧೋರಣೆ ಮತ್ತು ಮಾಡತಕ್ಕ ಕೆಲಸ ಕಾರ್ಯಗಳ ದೆಸೆಯಿಂದ ಇಡೀ ದೇಶದ ಬೆನ್ನು ಮೂಳೆ ಆಗಿರತಕ್ಕ ರೈತ ಹಾಗೂ ಕಾರ್ಮಿಕರು ಮಲೇರಿಯಾ ರೋಗಕ್ಕೆ ತುತ್ತಾಗಿ ಮನುಷ್ಯನ ಕಾಲಿನಂತೆ ಕ್ಷೀಣವಾಗಿ ಆಗಿದ್ದಾರೆ.

(ಶ್ರೀ ಎಂ. ಬಸವರಾಜು)

ಸರ್ಕಾರ ನಡೆಸತಕ್ಕ ನೌಕರ ವರ್ಗದವರ ಸರ್ವಿಸ್ ಕಂಡೀಷನ್ಸ್, ಪ್ರಮೋಷನ್ಸ್, ನೆಪೋಟಿಸಮ್, ಫೇವರಿಟಿಸಮ್ ಈ ವೃಷ್ಟಿಯಿಂದ the brain has become inactive. ಈ ಮಧ್ಯದಲ್ಲಿ ಏನಾಗಿದೆ ಎಂದರೆ ದಳ್ಳಾಳಿಗಳು, ಐಶ್ವರ್ಯವಂತರು, ಮನಿಲೆಂಡರ್ಸ್ ಇವರು ಹೊಟ್ಟೆ ಉಬ್ಬಿಕೊಂಡು ಬಿಟ್ಟಿದೆ. ಇಂತಹ ಪರಿಸ್ಥಿತಿ ದೇಶದಲ್ಲಿ ಆಗಿದೆ. ಇಡೀ ದೇಶದ ಭಾರವನ್ನು ಹೊರತಕ್ಕ ರೈತನ ಕೈಕಾಲುಗಳು ಸಣ್ಣವಾಗಿದೆ. ನೌಕರ ವರ್ಗದಲ್ಲಿ ಅತೃಪ್ತಿ ಜಾಸ್ತಿ ಆಗಿದೆ. ಐಶ್ವರ್ಯವಂತ ಮನುಷ್ಯನ ಹೊಟ್ಟೆ ಮಾತ್ರ ಉಬ್ಬಿಹೋಗಿಬಿಟ್ಟಿದೆ. ಇಂತಹ ಪರಿಸ್ಥಿತಿ ದೇಶದಲ್ಲಿ ಇದೆ. ಇದು ಒಳ್ಳೆಯದಲ್ಲ. ಕಳೆದ 20 ವರ್ಷ ಮಾಡಬಾರದವನ್ನೆಲ್ಲಾ ಮಾಡಿಕೊಂಡು ಬಂದಿದ್ದಾರೆ.

ಇನ್ನು ವಿದ್ಯಾಭ್ಯಾಸದ ಕ್ಷೇತ್ರ ತೆಗೆದುಕೊಂಡರೆ, ಒಂದು ಸಾರಿ ಹೇಳುತ್ತೀರಿ ಹಿಂದಿ ಕಡ್ಡಾಯ ತರುತ್ತೇವೆ ಎಂದು; ಇನ್ನೊಂದು ಕಡೆ ಪಾಸ್ ಆಗದೇ ಇದ್ದರೂ ಪಾಸ್ ಮಾಡಿಸುತ್ತೇವೆ ಎಂದು ಒಂದು ಬಾಯಿಯಲ್ಲಿ ಮೂರು ಭಾಷೆಯನ್ನು ಒಪ್ಪಿಕೊಂಡಿದ್ದೇವೆ ಎಂದು ಹೇಳುತ್ತಾರೆ. 3 ಭಾಷೆಯನ್ನು ಒಪ್ಪಿಕೊಂಡಿದ್ದರೆ ಅದನ್ನು ಕಾರ್ಯತಃ ಮಾಡದಿದ್ದರೆ ಅದರಿಂದ ಪ್ರಯೋಜನ ಏನು ? ಈ ನೀತಿ ದಿವಾಳಿತನದ ನೀತಿ ಅಲ್ಲವೇ ? ಇತರ ದೇಶಗಳ ವೈಜ್ಞಾನಿಕ ಅಭಿವೃದ್ಧಿ ಮಟ್ಟಕ್ಕೆ ನಮ್ಮ ದೇಶ ಹೋಗುವುದು ಬೇಡವೇ ? ಇವೊತ್ತಿನ ದಿವಸ ಮಕ್ಕಳು ಉತ್ತಮ ಮಾರ್ಗದಲ್ಲಿ ಆಧುನಿಕ ಪ್ರಪಂಚದಲ್ಲಿ ಮುಂದುವರಿಯಬೇಕಾದರೆ ನಮ್ಮ ವಿದ್ಯಾಭ್ಯಾಸದ ನೀತಿ ಸರಿಯಾದ ಮಟ್ಟದಲ್ಲಿ ಇರಬೇಕು. ವಿದ್ಯಾಭ್ಯಾಸದ ಕ್ಷೇತ್ರದಲ್ಲೂ ಕೂಡ ನಮ್ಮ ಸರ್ಕಾರ ವಿಫಲವಾಗಿದೆ.

ಇನ್ನು ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಬಗ್ಗೆ ಒಂದು ವಿಚಾರ ಹೇಳುತ್ತೇನೆ. ದರಖಾಸ್ತಿನ ಮೇಲೆ ಭೂಮಿ ಕೊಡುತ್ತಾರೆ. ಸ್ವಾತಂತ್ರ್ಯ ಬರುವ ಮುಂಚಿನಿಂದಲೂ ಭೂಮಿ ಉಳುವವನನ್ನು ಭೂಮಿಯ ಒಡೆಯನನ್ನಾಗಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಮ್ಮ ದೇಶ ಬಿಟ್ಟು ಹೊರಗೆ ಹೋದರೆ ಭೂಮಿ ಉಳುವವನು ಭೂಮಿ ಒಡೆಯನಾಗಿದ್ದಾನೆ ಮುಂದುವರಿದ ರಾಷ್ಟ್ರದಲ್ಲಿ, ಅಂದರೆ ಸಮಾತಾವಾದ ಸಮಾಜವಿರುವ ದೇಶಗಳಲ್ಲಿ ಸೋಷಿಯಲಿಸ್ಟ್ ಕಂಟ್ರೀಸ್ ದೇಶದ ಆಸ್ತಿ ಸರ್ಕಾರದ ಆಸ್ತಿ, ಇಡೀ ದೇಶದ ಜನತೆಗೆ ಸೇರಬೇಕೆಂದು ಹೇಳುತ್ತಿದ್ದಾರೆ. ನಮ್ಮ ಆಡಳಿತ ಪಕ್ಷ 1947ರಿಂದ ಇವೊತ್ತಿನವರೆಗೂ ಈ ತತ್ವವನ್ನು ಬಾಯಿಯಲ್ಲಿ ಹೇಳಿಕೊಂಡು ಬಂದಿದೆ. ಆದರೆ ಕಳೆದ 20 ವರ್ಷಗಳಿಂದ ಸಾಧಿಸಿರುವುದಾದರೂ ಏನು ? ಇದರಲ್ಲೂ ಪೂರ್ಣವಾಗಿ ವಿಫಲರಾಗಿದ್ದಾರೆ. ಲಕ್ಷಾಂತರ ಎಕರೆಗಳನ್ನು ಭೂಹೀನರಿಗೆ ಕೊಡುತ್ತೇವೆ ಎಂದು ಹೇಳಿ 100-100 ಎಕರೆ ಬೇಸಾಯ ಮಾಡುವುದಕ್ಕೆ ಕೊಟ್ಟಿದ್ದಾರೆ. ಹೀಗೆ 100 ಎಕರೆ ಸರ್ಕಾರಿ ಭೂಮಿಯನ್ನು ತೆಗೆದುಕೊಂಡು 50 ಸಾವಿರ ರೂಪಾಯಿ ಸಾಲವನ್ನೂ ತೆಗೆದುಕೊಂಡು ಬಿಲ್ಡಿಂಗ್ ಕಟ್ಟಿ, ಎಸ್ಟೇಟ್ ಓನರ್ ಆಗಿದ್ದಾರೆಯೇ ಹೊರತು ವ್ಯವಸಾಯದಲ್ಲಿ ನವೀನತೆ ಬರಲಿಲ್ಲ, ಬೇಸಾಯ ಮಾಡಲಿಲ್ಲ. ಭೂಮಿ ಇಲ್ಲದ ರೈತನಿಗೆ ಭೂಮಿ ಕೊಡುತ್ತೇವೆ ಎಂದು ಹೇಳುತ್ತೀರಿ. ಹಾಗೆ ಕೊಟ್ಟ ಭೂಮಿಯನ್ನು ಯಾರು ಇಟ್ಟುಕೊಂಡಿದ್ದಾರೆ ? ಉದಾಹರಣೆಗೆ ಹಾಸನ ಜಿಲ್ಲೆಯಲ್ಲಿ ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ಕೊಟ್ಟಿದ್ದೀರಿ. 50 ಜನ ಹರಿಜನರಿಗೆ ಸಾಲ ಕೊಟ್ಟು ಸ್ಥಳವನ್ನು ಮಾಡಿ ಬಾವಿ ತೆಗೆದು ಮನೆಯನ್ನು ಕಟ್ಟಿ, ಭೂಮಿ ಕೊಟ್ಟಿದ್ದೀರಿ. ಈವೊತ್ತು ಒಂದು ಒಕ್ಕಲೂ ಅಲ್ಲಿ ವಾಸ ಇಲ್ಲ. ಇನ್ನು ಮನೆ ಕಟ್ಟಿದ್ದಾರೆ. ಗೋಡೆ ಮಾತ್ರ ನಿಂತಿದೆ. ಮರದ ಸಾಮಾನು, ಹೆಂಚು ಇಲ್ಲ ಈಗ ಏನಾಗಿದೆ ಎಂದರೆ, ಯಾವುದೋ ಒಂದು ಪ್ಲಾನ್ ಬಂದಿದೆ, ಯಾವುದೋ ಮನೆಗಳನ್ನು ಕಟ್ಟಿಕೊಟ್ಟಿದ್ದೇವೆ, ಭೂಮಿ ಕೊಟ್ಟಿದ್ದೇವೆ, 50 ಒಕ್ಕಲು ಇಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ ಮುಂದಿನ ಹೆಜ್ಜೆಯನ್ನು ಆ ಪ್ಲಾನಿನಲ್ಲಿ ಇಟ್ಟುಕೊಂಡಿರುವುದಿಲ್ಲ. ನಾಲ್ಕಾರು ವರ್ಷಗಳ ಕಾಲದಲ್ಲಿ ಸ್ಕೇರ್ಸಿಟಿ ಬಂದರೆ ಅಥವಾ ಯಾವುದಾದರೂ ತೊಂದರೆ ಬಂದರೆ ಭೂಮಿ ಎಲ್ಲಾ ಪಾಳು ಬಿದ್ದರೆ ಹೆಂಚು, ಗಳುಗಳು ಯಾವುದೂ ಅಲ್ಲಿ ಇರುವುದಿಲ್ಲ. ಹೀಗಾಗಿ ನೀವು ಮಾಡಿದ ಪ್ಲಾನಿನಿಂದ ಯಾರೂ ಉಪಯೋಗ ಹೊಂದಿಲ್ಲ.

ಇನ್ನು law and order ಪ್ರಶ್ನೆ ತೆಗೆದುಕೊಂಡರೆ ಇದು ಎಲ್ಲರಿಗೂ ಗೊತ್ತಿದೆ. ಈ ಸಭೆ ಇಲ್ಲಿ ಸೇರಿದಮೇಲೆ ಈ ವಿಷಯದಲ್ಲಿ ಬೇಕಾದಷ್ಟು ಚರ್ಚೆಯಾಗಿದೆ.

ಇನ್ನು ನಿರುದ್ಯೋಗ ಮತ್ತು ಕಾರ್ಮಿಕರ ಹಿತರಕ್ಷಣೆ ವಿಚಾರ. ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕೆಗಳಿಗಾಗಿ ಕೋಟಿಗಟ್ಟಲೆ ಹಣ ಖರ್ಚು ಮಾಡಿದ್ದೀರಿ. ಇಷ್ಟೊಂದು ಹಣ ಖರ್ಚು ಮಾಡಿ ನಮ್ಮ ದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡಿದ್ದರೂ ಇವೊತ್ತು ನಮ್ಮ ಕೈಗಾರಿಕೆ ಸ್ಥಿತಿ ಏನಾಗಿದೆ ಎನ್ನುವುದನ್ನು ಸಭೆಯ ಸದಸ್ಯರು ಈ ಸಭೆಯಲ್ಲಿ ಈಗಾಗಲೇ ಹೇಳಿದ್ದಾರೆ.

ಒಂದೇ ಒಂದು ಉದಾಹರಣೆ ಕೊಟ್ಟು ಹೇಳುತ್ತೇನೆ ಮೈಸೂರಿನಲ್ಲಿ ಜಾವಾ ಸ್ಕೂಟರ್ ಕಂಪೆನಿ ಇದೆ 300 ಜನಕ್ಕೆ ಮೇಲ್ಪಟ್ಟು ಕೆಲಸಗಾರರನ್ನು ಅಲ್ಲಿ ತೆಗೆದುಕೊಂಡಿದ್ದರು, ಯಾವುದೇ ಕಾರಣಗಳನ್ನೂ ಕೊಡದೆ ಅವರನ್ನು ತೆಗೆದುಹಾಕಿದ್ದಾರೆ, ಅವರ ಪರಿಸ್ಥಿತಿ ಏನಾಗಬೇಕು ? ಹೋಗಲಿ ಇನ್ನೆಲ್ಲಾದರೂ ಹೊಸ ಕಾರ್ಖಾನೆ ಮಾಡಿದ್ದೀರಾ ಎಂದರೆ ಯಾವ ಹೊಸ ಕೈಗಾರಿಕೆಯನ್ನು ಸ್ಥಾಪನೆ ಮಾಡಿಲ್ಲ, ಆ ಮುನ್ನೂರು ಕುಟುಂಬದವರ ಗತಿ ಏನು ? ಅವರು ಯಾವ ರೀತಿ ಜೀವನ ಮಾಡಬೇಕು ? ಇಂತಹ ಶೋಚನೀಯ ಪರಿಸ್ಥಿತಿಗೆ ಕಾರಣ ಇದು ರಿಸಿಷನ್ ಪೀರಿಯಡ್ ಅಂತ ಹೇಳುತ್ತಾ ಇದ್ದೀರಿ, ಪ್ರಪಂಚದಲ್ಲಿರತಕ್ಕ developed ಮತ್ತು undeveloped countries ತೆಗೆದುಕೊಂಡರೆ ಆರ್ಥಿಕ ಕ್ಷೇತ್ರದಲ್ಲಿ, ವಿದ್ಯಾಭ್ಯಾಸದ ಕ್ಷೇತ್ರದಲ್ಲಿ, ವೈಜ್ಞಾನಿಕ ಕ್ಷೇತ್ರದಲ್ಲಿ, ನಾವು ಇನ್ನೂ ಬಹಳ ಶೈಶವಾವಸ್ಥೆಯಲ್ಲಿದ್ದೇವೆ. ಅಮೆರಿಕಾ, ರಷ್ಯಾ ದೇಶಗಳು ಬಹಳ ಮುಂದುವರಿದ ದೇಶಗಳು, ಇನ್ನುಳಿದ 30 ದೇಶಗಳಲ್ಲಿ 21 ದೇಶಗಳು ಮಾತ್ರ ಡೆವಲಪ್ ಆಗಿವೆ ಇನ್ನುಳಿದ ದೇಶ ಗಳು ಅಷ್ಟು ಡೆವಲಪ್ ಆಗಿಲ್ಲ ಎಂದು ಹೇಳುತ್ತಾರೆ. ವೈಜ್ಞಾನಿಕ ಕ್ಷೇತ್ರದಲ್ಲಿ ಅಮೆರಿಕಾ ಶೇಕಡ 70ರಷ್ಟು ಮುಂದುವರಿದಿದೆ, ನಮ್ಮ ದೇಶ ಶೇಕಡ 20ರಷ್ಟು ಮಾತ್ರ ಮುಂದುವರಿದಿದೆ ಎಂದು ತಿಳಿದುಬರುತ್ತದೆ. ಈ ರೀತಿ ಪ್ರಗತಿಯಾದರೆ ಒಂದು ಯೋಜನೆಯನ್ನು ಕಾರ್ಯಗತ ಮಾಡಬೇಕಾ ದರೆ 200-300 ವರ್ಷಗಳು ಬೇಕಾಗಬಹುದು. ಆಗ ಇನ್ನೂ 300 ಕೋಟಿ ಜನಸಂಖ್ಯೆ ಹೆಚ್ಚಾಗ ಬಹುದು. ಜನ ಜೀವನಕ್ಕೆ ಅವಶ್ಯಕವಾದ ಸ ಲಭ್ಯಗಳನ್ನು ಒದಗಿಸುವುದರಲ್ಲಿ ಸರ್ಕಾರ ಖಂಡಿತ ವಾಗಿಯೂ ಪೂರ್ಣವಾಗಿ ವಿಫಲಗೊಂಡದ್ದೇ ಆದ ಪಕ್ಷದಲ್ಲಿ ಅದು ಜನತೆಯ ಆಕ್ರೋಶಕ್ಕೆ ಗುರಿ ಯಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—The House stands adjourned. We shall meet again at 3.00 P.M.

The House rose at Thirty Minutes past Twelve of the Clock and to re-assemble at Three of the Clock.

The House re-assembled at Three of the Clock.

[MR. DEPUTY SPEAKER in the Chair]

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ವಿರೋಧ ಪಕ್ಷದ ನಾಯಕರು ಈ ಮಂತ್ರಿಮಂಡಲದ ಮೇಲೆ ತಂದಿರತಕ್ಕ ಅವಿಶ್ವಾಸ ನಿರ್ಣಯವನ್ನು ನಾನು ಸಮರ್ಥನೆ ಮಾಡುತ್ತಾ ಕೆಲವು ಮಾತುಗಳನ್ನು ಇಲ್ಲಿ ಆಡುತ್ತೇನೆ.

ಯಾವ ಮಂತ್ರಿಮಂಡಲ ಇವೊತ್ತು ನಮಗೆ ಇದೆ ಆ ಮಂತ್ರಿಮಂಡಲದಲ್ಲಿ ನಾವು ಏನಾ ದರೂ ಸಮಾಜ ವಾದವಾಗಲೀ ಸಮತಾ ವಾದವಾಗಲೀ ಅಥವಾ ಸುಖೀ ರಾಜ್ಯಗಳನ್ನು ಸಾಧಿಸು ತ್ತೇವೆ ಎಂದಾಗಲಿ ತಿಳಿದುಕೊಂಡಿದ್ದರೆ ಅದು ಖಂಡಿತ ತಪ್ಪಾಗುತ್ತದೆ. ಇವೊತ್ತು ನಮ್ಮ ಜನ ಅನ್ನಕ್ಕೋಸ್ಕರ, ನೀರಿಗೋಸ್ಕರ ವಾಸಕ್ಕೋಸ್ಕರ ಬಟ್ಟೆಗೋಸ್ಕರ ಪಡತಕ್ಕ ಒಂದು ದಾರುಣ ಪರಿ ಸ್ಥಿತಿಗಳನ್ನು ಹಾಗೂ ವರದಿಗಳನ್ನು ನಮ್ಮ ಮಂತ್ರಿಮಂಡಲದವರು ನಿಜವಾಗಿಯೂ ಗಮನಿಸಿದರೆ ಈ ಮಂತ್ರಿಮಂಡಲ ಪ್ರಜಾಪ್ರಭುತ್ವದ ಹೆಸರಿನಲ್ಲಿ ಇರತಕ್ಕ ಮಂತ್ರಿಮಂಡಲವಲ್ಲ ಎನ್ನುವ ಭಾವನೆ ಇಂದು ಬೆಳೆದುಬರುತ್ತಿದೆ. ಇಂದು ಮಂತ್ರಿಮಂಡಲದಲ್ಲಿರುವ ಮಂತ್ರಿಗಳು ಒಂದೊಂದು ಜಿಲ್ಲೆಯ ಪಾಳೇಗಾರರುಗಳಾಗಿರುತ್ತಾರೆ. ಮೈಸೂರು ಜಿಲ್ಲೆಗೆ ಶ್ರೀಮಾನ್ ಪುಟ್ಟಸ್ವಾಮಿಯವರು ಪಾಳೇಗಾರರು, ಶ್ರೀಮಾನ್ ನಾರಾಯಣಗೌಡರು ಕೋಲಾರ ಜಿಲ್ಲೆಯ ಪಾಳೇಗಾರರು, ಹೀಗೆ ಈ ಮಂತ್ರಿಮಂಡಲದ ಮಂತ್ರಿಗಳು ಪಾಳೆಯಗಾರಿಕೆಯನ್ನು ಬೆಳೆಸುತ್ತಾ ಬರುತ್ತಿರುವ ಈ ಮಂತ್ರಿ ಗಳು ನಾಚಿಕೆಗೇಡಿನ ಮಂತ್ರಿಗಳು ಹಾಗೂ ನಾಲಾಯಕ್ಕಾದ ಮಂತ್ರಿಗಳು. ಇವರಿಗೇನಾದರೂ ಗೌರವ ಹಾಗೂ ನಾಚಿಕೆ ಇದ್ದರೆ ಈ ಮೈಸೂರು ಮಂತ್ರಿ ಮಂಡಲದಲ್ಲಿ ಒಂದು ದಿನವೂ ಮಂತ್ರಿ ಗಳಾಗಿ ಇರಲು ಅವರಿಗೆ ಅಧಿಕಾರವಿಲ್ಲ.

ಮೈಸೂರು ಜಿಲ್ಲೆಗೆ ಪಾಳೆಯಗರರಾಗಿರುವ ಶ್ರೀಮಾನ್ ಪುಟ್ಟಸ್ವಾಮಿಯವರು ಮೈಸೂರಿ ನಲ್ಲಿ ಈಚೆಗೆ ಮುನಿಸಿಪಾಲಿಟಿಗೆ ಚುನಾವಣೆಗಳನ್ನು ನಡೆಸಿದಾಗ ಇವರು ಮೂರು ದಿನ ಮೈಸೂರಿ

(ಶ್ರೀ ವಾಟಾಳ್ ನಾಗರಾಜ್)

ನಲ್ಲ ಟಿ. ಬಿ. ಯಲ್ಲಿ ಕ್ಯಾಂಪು ಮಾಡಿಕೊಂಡು ತಮಗೆ ಬೇಕಾದವರು ಅಲ್ಲಿಗೆ ಆರಿಸಿ ಬರಬೇಕು ಎಂದು ಯಾವ ಯಾವ ರೀತಿಯಾಗಿ ಆಲ್ಲಿ ನಾಟಕವಾಡಿದರು ಎನ್ನುವುದು ನನಗೂ ಗೊತ್ತು. ನಾನು ಆ ಸಂದರ್ಭದಲ್ಲಿ ಮೈಸೂರಿನಲ್ಲೇ ಇದ್ದೆ. ಇವರು ಮಾಡಿದಂತಹ ನಾಟಕಗಳೆಲ್ಲಾ ನನಗೆ ಪೂರ್ಣವಾಗಿ ಗೊತ್ತಿದೆ. ಅಲ್ಲದೆ ಈಚೆಗೆ ಒಂದು ಸಂದರ್ಭದಲ್ಲಿ ನಾನು ಕೋಲಾರದ ಜಿಲ್ಲೆಗೆ ಹೋಗಿದ್ದೆ. ಅಂದು ಕೋಲಾರದಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಸುಮಾರು ಇಪ್ಪತ್ತು ಸಾವಿರ ಜನ ಸೇರಿದ್ದರು. ಆ ಸಭೆಯಲ್ಲಿ ನಾನು ಇದ್ದೆ. ಅಂದು ಅಲ್ಲಿನ ಜನ ಇಂದು ಮಂತ್ರಿಗಳಾಗಿರುವ ಶ್ರೀಮಾನ್ ನಾರಾಯಣಗೌಡರ ಬಗ್ಗೆ ಯಾವ ರೀತಿ ಹೇಳಿದರು ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ಈ ಮಂತ್ರಿಗಳನ್ನು ಅಲ್ಲಿನ ಜನ ಯಾವ ರೀತಿಯಾಗಿ ಬಯ್ಯುತ್ತಿದ್ದರು ಎನ್ನುವುದು ಈ ಮಂತ್ರಿ ಮಂಡಲಕ್ಕೆ ಇನ್ನೂ ಗೊತ್ತಾಗದೆ ಇರಬಹುದು. ಇದನ್ನು ನೋಡಿದರೆ ಇಂದಿನ ಸರಕಾರದಲ್ಲಿ ದಕ್ಷತೆಯಿಲ್ಲ ಮತ್ತು ಆಡಳಿತ ನಡೆಸಲಿಕ್ಕೆ ಇವರಿಗೆ ಹಕ್ಕಿಲ್ಲ. ಮೊದಲು ಈ ಸರಕಾರವನ್ನು ಬಿಟ್ಟು ರಾಜೀನಾಮೆ ಕೊಡುವುದು ಅವರ ಮುಖ್ಯ ಕರ್ತವ್ಯ. ಈ ಮಂತ್ರಿಮಂಡಲದಲ್ಲಿ ರಾಜ್ಯದ ಬಗ್ಗೆ ಯಾವ ರೀತಿಯಾಗಿ ಸಮತಾವಾದ ನಡೆಯುತ್ತಿದೆ ಎಂದರೆ ಜಾತೀಯತೆಯ ಬಗ್ಗೆ ಸಮಾಜವಾದದ ಕಾರ್ಯ ನಡೆಯುತ್ತಿದೆ. ಯಾವುದೇ ರೀತಿಯಿಂದಲೂ ಜನತೆಗೆ ಸೌಕರ್ಯಗಳನ್ನು ಮಾಡುವುದರಲ್ಲಿ ಈ ಮಂತ್ರಿ ಮಂಡಲ ವಿಫಲವಾಗಿದೆ ಎಂದು ಘಂಟಾ ಘೋಷವಾಗಿ ಹೇಳುತ್ತೇನೆ. ನಿಮ್ಮ ಎದೆಯನ್ನು ಮುಟ್ಟಿ ನೋಡಿಕೊಂಡು ನಿಮ್ಮ ಆತ್ಮ ಸಾಕ್ಷಿಯಾಗಿ ನೀವು ನಡೆದುಕೊಳ್ಳುತ್ತಿದ್ದೀರಾ ಎನ್ನುವುದನ್ನು ವಿಚಾರ ಮಾಡಿ. ಇವೊತ್ತು ಮಾನ್ಯಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿಯವರ ನೇತೃತ್ವದಲ್ಲಿರುವ ಆರೋಗ್ಯ ಇಲಾಖೆಯಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ನೋಡಿದರೆ ಇಡೀ ರಾಜ್ಯದಲ್ಲಿರುವ ಎಲ್ಲ ಮಂತ್ರಿಗಳೂ ಮೊದಲು ಸರಕಾರಕ್ಕೆ ರಾಜೀನಾಮೆ ಕೊಡುವುದು ಅವರ ಮುಖ್ಯ ಕರ್ತವ್ಯ. ಮೈಸೂರು ರಾಜ್ಯಕ್ಕೆಲ್ಲಾ ಮಂತ್ರಿಗಳಾಗಿರುವ ಶ್ರೀ ಪುಟ್ಟಸ್ವಾಮಿಯವರು ಬರೀ ಮೈಸೂರು ಸಿಟಿಯ ಮಂತ್ರಿಗಳಾಗಿದ್ದಾರೆ. ಬೇರೆ ಕಡೆ ಇವರ ಗಮನವೇ ಇಲ್ಲ. ಇದರಿಂದ ನೀವು ನಿಮ್ಮ ಆತ್ಮಸಾಕ್ಷಿಯಾಗಿ ಇಲ್ಲಿ ಸರಿಯಾಗಿ ಕೆಲಸ ಮಾಡುತ್ತಿದ್ದೀರಾ, ಇದಕ್ಕಾಗಿ ಕಾಂಗ್ರೆಸ್ಸಿನವರು ನಿಮಗೇನಾದರೂ ಕಟ್ಟುನಿಟ್ಟಾದ ನಿಯಮವನ್ನೇನಾದರೂ ಹಾಕಿದ್ದಾರೆಯೇ ಎಂದು ಕೇಳುತ್ತೇನೆ ಅಲ್ಲದೆ ನೀವು ಕಾಂಗ್ರೆಸ್ ಪಕ್ಷಕ್ಕೆ ಈಗ ಹೋಗಿ ಸೇರಿದ್ದೀರಿ. ನಿಮಗೆ ಒಳ್ಳೆಯ ಶಿಕ್ಷಣ ಹಾಗೂ ತರಬೇತಿಗಳನ್ನು ಕೊಟ್ಟ ಶ್ರೀಮಾನ್ ಎಸ್. ಚನ್ನಯ್ಯನವರಿಗೇ ನೀವು ದ್ರೋಹ ಬಗೆದು ಇಂದು ಕಾಂಗ್ರೆಸು ಪಕ್ಷಕ್ಕೆ ಹೋಗಿ ಸೇರಿಕೊಂಡಿದ್ದೀರಿ. ಅಲ್ಲದೆ ಹಿಂದೆ ನಿಮ್ಮ ಗುರುಗಳಾಗಿದ್ದ ಶ್ರೀಮಾನ್ ಟಿ. ಮರಿಯಪ್ಪನವರಿಗೂ ದ್ರೋಹ ಮಾಡಿದ್ದೀರಿ. ಹೀಗೆ ನಿಮ್ಮ ಗುರುಗಳ ಗರಡಿಯಲ್ಲೇ ತಯಾರಾಗಿದ್ದಂತಹವರು ಇಂದು ಶ್ರೀ ಸಿದ್ಧವೀರಪ್ಪನವರ ಬಗ್ಗೆ ಇಲ್ಲಿ ಹೇಳಿದ ಮಾತುಗಳು ಸರಿಯಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ನನ್ನಮೇಲೆ ಟೀಕೆ ಮಾಡುತ್ತಿದ್ದಾರೆ. ಅದರ ಬಗ್ಗೆ ನಾನು ಇಲ್ಲಿ ಉತ್ತರ ಕೊಡುವಾಗ ಅವರ ಆಕ್ಷೇಪಣೆಗಳಿಗೆ ಉತ್ತರ ಹೇಳುತ್ತೇನೆ. ಆದರೆ ನಿನ್ನೆ ಮಾತಾಡಿದ ಸದಸ್ಯರು ಎಂದರೆ ಶ್ರೀ ಕೆ. ಎಂ. ಪುಟ್ಟಸ್ವಾಮಿಯವರು ಅವರಿಗೂ ಇದರ ಬಗ್ಗೆ ಲಕ್ಷ್ಯವಿರಬೇಕು.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಮಂತ್ರಿಗಳ ಬಗ್ಗೆ ನಿಮ್ಮವರು, ಎಂದರೆ ಕಾಂಗ್ರೆಸ್ಸಿನವರು ಏನೇನೋ ಮಾತನಾಡುತ್ತಾರೆ. ಆದ್ದರಿಂದ ಸಚಿವರ ಬಗ್ಗೆ ಸ್ವಲ್ಪ ನಾವು ಹೇಳಬೇಕಾಗುತ್ತದೆ. ಹಿಂದೆ ನಾನು ಹೇಳಿದ್ದೆ, ಈ ಸರ್ಕಾರ ಎಂದರೆ, ನಿಜಲಿಂಗಪ್ಪನವರ ಸರ್ಕಾರ ಒಂದು ವರ್ಷ ಉಳಿಯಬಹುದೆಂದು. ನನ್ನ ಭವಿಷ್ಯದ ಪ್ರಕಾರ ಅದು ಒಂದು ತೀರ್ಮಾನಕ್ಕೆ ಬಂದಿದೆ. ಅವರು ಹೊರಟು ಹೋಗಲಿ ನನ್ನದೇನೂ ಅಭ್ಯಂತರವಿಲ್ಲ. ಇವೊತ್ತಿನ ದಿವಸ ಮುಂದೆ ಆಗತಕ್ಕಂಥ ಮುಖ್ಯ ಮಂತ್ರಿಗಳು ಯಾರು ಎನ್ನುವ ಒಂದು ಪ್ರಶ್ನೆ ಬಂದಿದೆ. ಶ್ರೀಮಾನ್ ವಿರೇಂದ್ರ ಪಾಟೀಲರು ಶ್ರೀಮಾನ್ ಜತ್ತಿಯವರು ಮತ್ತು ಇನ್ನೂ ಇತರ ಹೆಸರುಗಳು ಕೇಳಿಬರುತ್ತಿವೆ. ಶ್ರೀಮಾನ್ ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಬೇಕೆಂದು ರಾಜ್ಯದ ಬೊಕ್ಕಸವನ್ನು ಲೂಟಿ ಮಾಡತಕ್ಕ ಕಂಟ್ರಾಕ್ಟರುಗಳು ಸೇರಿಕೊಂಡಿದ್ದಾರೆ. ಒಂದೊಂದು ವೋಟಿಗೆ 25 ಸಾವಿರ ರೂಪಾಯಿಗಳಾದರೂ ಚಿಂತೆಯಿಲ್ಲ, ಕೆರೆಕಟ್ಟದಿದ್ದರೂ ಚಿಂತೆಯಿಲ್ಲ. ರಸ್ತೆಗಳನ್ನು ಮಾಡದೇ ಇದ್ದರೂ ಚಿಂತೆಯಿಲ್ಲ. ಜನಗಳಿಗೆ ನೀರು ಕೊಡದಿದ್ದರೂ ಚಿಂತೆಯಿಲ್ಲ, ವೀರೇಂದ್ರ ಪಾಟೀಲರನ್ನು ಮುಖ್ಯ ಮಂತ್ರಿಗಳನ್ನಾಗಿ ಮಾಡಬೇಕೆಂದು ಕಂಟ್ರಾಕ್ಟರುಗಳ ಗುಂಪು ಬೆಳೆಯುತ್ತಿದೆ. ಇದಕ್ಕೆ ಅನೇಕ ಜನ ಇಂಜಿನಿಯರೂ ಕೂಡ ಸಹಕಾರ ನೀಡುತ್ತಿದ್ದಾರೆ.

Sri S. D. KOTHAVALE.—On a point of order. The hon'ble member is talking with imagination attributing some motives. Under the rules it is illegal to say that so much amount is going to be given and all that. Under the rules no motives could be attributed. Everebody is supposed to speak on facts and no mala files should be attributed.

Mr. DEPUTY SPEAKER.—I will give a ruling afterwards.

ಶ್ರೀ ವಾಟಳ್ ನಾಗರಾಜ್.—ಸ್ವಾಮಿ, ಶ್ರೀ ಕೊತಾವಲೆಯವರೇ ಶ್ರೀಮಾನ್ ನಿಜಲಿಂಗಪ್ಪನವರು ನಿಮ್ಮನ್ನು ಮಂತ್ರಿಗಳಾಗಿ ಮಾಡಿಕೊಳ್ಳಲಿಲ್ಲ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ಹಡಗಲಿ).—ಮಾನ್ಯ ಸದಸ್ಯರು ಹೇಳುವ ಮಾತಿಗೆ ಏನಾದರೂ ಆಧಾರವಿದೆಯೇ? ಸುಮ್ಮನೆ ಕಲ್ಪನೆ ಮಾಡಿಕೊಂಡು ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಈಗ ಸಭೆಯ ಮುಂದೆ ಇರತಕ್ಕ ನಿರ್ಣಯದಮೇಲೆ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಅವಿಶ್ವಾಸ ನಿರ್ಣಯ ಮಂತ್ರಿಮಂಡಲದ ಮೇಲೆ ಇದೆ. ಯಾವ ಯಾವ ಮಂತ್ರಿಗಳು ಏನೇನು ಮಾಡುತ್ತಿದ್ದಾರೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಇವೊತ್ತು ಮಂತ್ರಿಮಂಡಲದವರು ಏನೇನು ಮಾಡುತ್ತಿದ್ದಾರೆಯೋ ಅದರಲ್ಲಿ ಯಾವುದರಲ್ಲಿಯೂ ಭ್ರಷ್ಟಾಚಾರವಿಲ್ಲ, ಅಸತ್ಯವಿಲ್ಲ ಎಲ್ಲಾ ಸತ್ಯವಾಗಿದೆ ಎಂದು ಅವರು ಹೇಳುವುದಾದರೆ ನಾನು ಇವೊತ್ತು ಹೇಳುತ್ತೇನೆ—ಒಂದು ಜುಡಿಷಿಯಲ್ ಎನ್‌ಕ್ವೈರಿಯನ್ನು ನಡೆಸಿ, ಆಗ ನಿಮ್ಮ ಸತ್ಯಸಂಧತೆಯೆಲ್ಲಾ ಗೊತ್ತಾಗುತ್ತದೆ. ಸತ್ಯವಂತರು, ನೀತಿವಂತರು ಎಂದು ಹೇಳಿಕೊಳ್ಳತಕ್ಕವರು ಈ ಸಭೆಗೆ ರಾಜೀನಾಮೆಯನ್ನು ನೀಡಿ ಮತ್ತೆ ಚುನಾವಣೆಯನ್ನು ನಡೆಸಿ ನೀವು ಚುನಾವಣೆಗೆ ನಿಂತುಕೊಳ್ಳಿ, ನಾವೂ ನಿಂತುಕೊಳ್ಳುತ್ತೇವೆ. ಆಗ ಜನತೆಯೇ ನಿಮ್ಮ ಸತ್ಯಸಂಧತೆಯನ್ನು ನಿರ್ಧರಿಸುತ್ತಾರೆ. ಇವರಿಗೆ ಧೈರ್ಯವಿದ್ದರೆ ನನ್ನ ಛಾಲೆಂಜ್‌ಅನ್ನು ಒಪ್ಪಿಕೊಳ್ಳಲಿ. ನಾನು ವೈಯ್ಯಕ್ತಿಕವಾಗಿ ಹೇಳುತ್ತೇನೆ. ಇವರು ಸತ್ಯವಂತರು ಮತ್ತು ಸತ್ಯಹರಿಶ್ಚಂದ್ರನ ಮೊಮ್ಮಕ್ಕಳು, ಧರ್ಮರಾಯರು ಎಂದು ಹೇಳಿಕೊಳ್ಳತಕ್ಕವರೆಲ್ಲ ತಮ್ಮ ತಮ್ಮ ಆತ್ಮಶೋಧನೆಯನ್ನು ಮಾಡಿಕೊಳ್ಳಲಿ. ಈ ಮಂತ್ರಿಮಂಡಲದವರು ಜನಸಾಮಾನ್ಯರಿಗೆ, ಸಾಮಾನ್ಯ ಮನಷ್ಯರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳತಕ್ಕ ಶಕ್ತಿ ಧೈರ್ಯ ಇವರಿಗೆ ಇದೆಯೇ? ಶ್ರೀಮಾನ್ ನಿಜಲಿಂಗಪ್ಪನವರು ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಹೋಗುವುದರಿಂದ ಅವರ ಒಂದು ಗುಂಪು ಹೊರಟುಹೋಗುತ್ತದೆ. ಇನ್ನುಮುಂದೆ ಲವಕುಶರ ಗುಂಪು ಬರುತ್ತದೆಂದು ಶ್ರೀಮಾನ್ ಕಂಠಿಯವರು ಹೇಳಿದ್ದಾರೆ. ಇವೊತ್ತು ರಾಜ್ಯಭಾರ ಮಾಡತಕ್ಕ ಕಾಂಗ್ರೆಸ್ಸಿನವರು ಸಮಾಜವಾದದ ತತ್ವದ ಪ್ರಕಾರ ನಾವು ಆಡಳಿತವನ್ನು ನಡೆಸುತ್ತೇವೆ, ಎಂದು ಹೇಳುತ್ತಿದ್ದಾರೆ. ಸಮಾಜವಾದದಲ್ಲಿ ನಂಬಿಕೆಯಿರತಕ್ಕ ಯಾವ ಮಂತ್ರಿಮಂಡಲ ಇವೊತ್ತು ಜನಗಳಿಗೆ ಯಾವ ಅನುಕೂಲ ಮಾಡಿಕೊಡುತ್ತಿದೆ? ಈ ಮಂತ್ರಿಮಂಡಲದವರು ದೇಶದಲ್ಲಿ ಜನಗಳಿಗೆ ಯಾವ ಅನುಕೂಲವನ್ನೂ ಮಾಡಿಕೊಡುತ್ತಿಲ್ಲ. ಈ ರಾಜ್ಯದಲ್ಲಿ ಯಾವ ಮೂಲೆ ಮೂಲೆಯಲ್ಲಿ ನೋಡಿದರೂ ಅನ್ನದ ಹಾಹಾಕಾರ, ನೀರಿನ ಹಾಹಾಕಾರ, ನಿರುದ್ಯೋಗ ಸಮಸ್ಯೆಗಳು ತಾಂಡವವಾಡುತ್ತಿವೆ. ಸುಖೀ ರಾಜ್ಯವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದಂತಹ ಕಾಂಗ್ರೆಸ್ಸಿನವರು ಇವೊತ್ತು ಇಂಥಾ ಒಂದು ಅವ್ಯವಸ್ಥೆಯನ್ನು ಈ ರಾಜ್ಯದಲ್ಲಿ ಉಂಟುಮಾಡಿದ್ದಾರೆ. ಇದು ಸುಖೀ ರಾಜ್ಯದ ಆದರ್ಶವೇ ಎಂದು ನಾನು ಈ ಮಂತ್ರಿಮಂಡಲದವರನ್ನು ಕೇಳುತ್ತೇನೆ. ನಿಮ್ಮಲ್ಲಿ ಒಂದು ನೀತಿಯಿಲ್ಲ, ನಿಯಮವಿಲ್ಲ, ಈ ನಿಮ್ಮ ರಾಜ್ಯಾಡಳಿತದಲ್ಲಿ ಯಾವುದೇ ಒಂದು ವಿಚಾರವನ್ನು ನಾವು ತೆಗೆದುಕೊಂಡರೂ ಕೂಡ, ರಾಜ್ಯದ ಗಡೀ ಪ್ರಶ್ನೆಯಾಗಲೀ, ನೀರಿನ ಪ್ರಶ್ನೆಯಾಗಲೀ, ಆಹಾರದ ಪ್ರಶ್ನೆಯಾಗಲೀ ಯಾವುದನ್ನೂ ಸಹ ಬಗೆಹರಿಸತಕ್ಕಂಥ ಒಂದು ದಿಟ್ಟತನ ನಿಮಗೆ ಇಲ್ಲ. ಕೇಂದ್ರ ಸರ್ಕಾರದವರನ್ನು ನಡುಗಿಸಿ, ಅವರಮೇಲೆ ಪ್ರಭಾವ ಬೀರಿ ನಮ್ಮ ರಾಜ್ಯದಲ್ಲಿ ಆಗಬೇಕಾಗಿರತಕ್ಕಂಥ ಕೆಲಸಗಳನ್ನು ಮಾಡಿಸತಕ್ಕ ದಕ್ಷ ನಾಯಕತ್ವ ನಮ್ಮಲ್ಲಿ ಇಲ್ಲ. ಕೇಂದ್ರದವರು ನಮ್ಮ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ಯಾವುದನ್ನು ಕೇಳಿದರೂ ಅದಕ್ಕೆ ಅವರು 'ಎಸ್' ಎಂದು ಹೇಳುತ್ತಾರೆ. ಈ ಗಡೀ ಸಮಸ್ಯೆಗೆ ಸಂಬಂಧಪಟ್ಟಂತೆ ಏಕಸದಸ್ಯ ಆಯೋಗವನ್ನು ನೇಮಕ ಮಾಡಕೂಡದೆಂದು ನಾವು ಹಾಗೂ ಜನತೆ ಗಲಾಟೆ ಮಾಡಿದೆವು. ನಾವು ಅದನ್ನು ಒಪ್ಪುವುದಿಲ್ಲ ಎಂದು ಹೇಳಿದೆವು. ಕೇಂದ್ರ ಸರ್ಕಾರದವರು ಶ್ರೀಮಾನ್ ನಿಜಲಿಂಗಪ್ಪನವರನ್ನು ಘೇರಾವೋ ಮಾಡಿ ತಮ್ಮ ಬಲೆಗೆ

(ಶ್ರೀ ವಾಟಾಳ್ ನಾಗರಾಜ್)

ಹಾಕಿಕೊಂಡರು. ಆಗ ಏಕಸದಸ್ಯ ಆಯೋಗದ ನೇಮಕಕ್ಕೆ ಇವರು 'ಎಸ್' ಎಂದು ಹೇಳಿದರು. ಮೊನ್ನೆ ಈ ಮಹಾಜನ್ ಕಮಿಷನ್ ವರದಿಯ ಬಗ್ಗೆ ದೆಹಲಿಯಲ್ಲಿ ಶ್ರೀಮಾನ್ ಚವಾನ್ ಅವರು ವಿರೋಧಪಕ್ಷದ ಎಲ್ಲಾ ನಾಯಕರ ಅಭಿಪ್ರಾಯವನ್ನು ಪಡೆಯುತ್ತಿದ್ದಂತಹ ಸಂದರ್ಭದಲ್ಲಿ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ದೆಹಲಿಯಲ್ಲಿ ಇದ್ದರು. ಆದರೂ ಕೂಡ ಅವರು ಆ ಬಗ್ಗೆ ಲಕ್ಷ್ಯವನ್ನು ಕೊಟ್ಟಿಲ್ಲ. ಈ ಏಕಸದಸ್ಯ ಆಯೋಗದ ಬಗ್ಗೆ ರಾಷ್ಟ್ರದ ಅನೇಕ ವಿರೋಧಪಕ್ಷದ ನಾಯಕರುಗಳು ಯಾರು ಯಾರು ಏನು ಹೇಳುತ್ತಾರೆ ಎನ್ನುವ ಬಗ್ಗೆ ತಮ್ಮ ಲಕ್ಷ್ಯವನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರದವರು ನಮ್ಮ ಕರ್ನಾಟಕವನ್ನು, ಕನ್ನಡ ರಾಜ್ಯದ ಜನತೆಯನ್ನು ಒಂದು ಕೊನೆಯ ರಾಜ್ಯವಾಗಿ ಕಾಣುತ್ತಿದ್ದಾರೆ. ಕನ್ನಡ ರಾಜ್ಯದಲ್ಲಿ ಕರ್ನಾಟಕದಲ್ಲಿ ಶಕ್ತಿಯುತವಾದ ನಾಯಕತ್ವ ಇಲ್ಲ ಎಂದು ನಾನು ಹೇಳುತ್ತೇನೆ. ಇವೊತ್ತು ಕರ್ನಾಟಕದ ಪರವಾಗಿ ಕನ್ನಡ ಜನತೆಯ ಪರವಾಗಿ ಶ್ರೀಮಾನ್ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರ ಹುದ್ದೆಗೆ ಹೋಗುವವರಾಗಿದ್ದಾರೆ. ಆದ್ದರಿಂದ ನದಿ ನೀರಿನ ಬಗ್ಗೆ ಗಡೀ ಸಮಸ್ಯೆಯ ಬಗ್ಗೆ ಕೇಂದ್ರ ಸರ್ಕಾರದವರು ಎಲ್ಲಿಯವರೆಗೆ ನಮಗೆ ನ್ಯಾಯವನ್ನು ದೊರಕಿಸುವುದಿಲ್ಲವೋ ಅಲ್ಲಿಯ ವರೆಗೆ ನಾನು ಕಾಂಗ್ರೆಸ್ ಅಧ್ಯಕ್ಷರ ಗಾದಿಗೆ ಹೋಗುವುದಿಲ್ಲ ಎಂದು ನಿಜಲಿಂಗಪ್ಪನವರು ಚಳುವಳಿ ಮಾಡಲಿ. ನಮಗೆ ಬರಬೇಕಾದ್ದನ್ನು ಪಡೆಯಲಿ, ನಮ್ಮ ರಾಜ್ಯವನ್ನು ಶಕ್ತಿಯುತವಾದ ರಾಜ್ಯವನ್ನಾಗಿ ಮಾಡಲಿ ಎಂದು ನಾನು ಹೇಳುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರಾಗಲೀ, ಶ್ರೀಮಾನ್ ಕಾಮರಾಜನಾಡರಾಗಲೀ ಹೇಳಿದ್ದಕ್ಕೆಲ್ಲಾ ಎಸ್ ಎನ್ನುವ ಅಭ್ಯಾಸವನ್ನು ನಮ್ಮ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ಬಿಡಬೇಕು. ರಾಜ್ಯದ ಬಗ್ಗೆ, ಜನತೆಯ ಬಗ್ಗೆ ಮತ್ತು ಕನ್ನಡ ನಾಡಿನ ಬಗ್ಗೆ ಈ ಮಂತ್ರಿಮಂಡಲದವರ ಆದರ್ಶ ಸರಿಯಾದ್ದಲ್ಲ. ಮತ್ತು ಈ ಮಂತ್ರಿ ಮಂಡಲದವರಿಂದ ಸಾಮಾನ್ಯ ಜನಗಳಿಗೆ ಯಾವ ವಿಧವಾದ ಅನುಕೂಲಗಳೂ ಆಗಿಲ್ಲ. ಇದು ಅಕ್ಷಮ್ಯ ಅಪರಾಧ. ಈ ದೃಷ್ಟಿಯಿಂದ ಈ ಮಂತ್ರಿಮಂಡಲದವರನ್ನು ನಾನು ಘಂಟಾಘೋಷವಾಗಿ ವಿರೋಧ ಮಾಡುತ್ತೇನೆ.

ಸ್ವಾಮಿ, ಈ ರಾಜ್ಯದ ಕಾಂಗ್ರೆಸ್ ಸರ್ಕಾರ ಒಂದು ಬಿಟ್ಟು, ನೆರೆ ರಾಜ್ಯಗಳಾದ ಕೇರಳಾ, ಮದ್ರಾಸ್ ಮತ್ತು ಇನ್ನಿತರ ಅನೇಕ ರಾಜ್ಯಗಳಲ್ಲಿ ಅಲ್ಲಿರತಕ್ಕಂಥ ಬಡನೌಕರರಿಗೆ ಕೇಂದ್ರದ ತುಟ್ಟಿಭತ್ಯ ಕೊಟ್ಟಿದ್ದಾರೆ. ಆದರೆ ನಮ್ಮ ಸರ್ಕಾರದವರು ಇನ್ನೂ ಆಲೋಚನೆ ಮಾಡುತ್ತಿದ್ದೇವೆ; ವಿಚಾರ ಮಾಡುತ್ತಿದ್ದೇವೆಂದು ಶ್ರೀಮಾನ್ ರಾಮಕೃಷ್ಣ ಹೆಗ್ಡೆಯವರು ಉತ್ತರ ಕೊಡುತ್ತಿದ್ದಾರೆ. ಆದರೆ ಇದೇ ಸಭೆಯಲ್ಲಿ ಮಂತ್ರಿಗಳ ಮತ್ತು ಶಾಸಕರ ಸಂಬಳ ಜಾಸ್ತಿ ಮಾಡುವಾಗ ಇಡೀ ವಿರೋಧ ಪಕ್ಷದವರು ವಿರೋಧ ಮಾಡಿದಾಗ್ಯೂ ಕೇವಲ ಎರಡು ದಿವಸಗಳಲ್ಲಿ ಪಾಸ್ ಮಾಡಿಬಿಟ್ಟರು.

ಶ್ರೀ ಡಿ. ಎಸ್. ಗೌಡ.—ಇಷ್ಟ ಇಲ್ಲದವರು ಹೆಚ್ಚಿನ ಸಂಬಳವನ್ನು ತೆಗೆದುಕೊಳ್ಳದಿರುವಂತೆ ಆ ಮಸೂದೆಯಲ್ಲಿ ತಿದ್ದುಪಡಿ ಮಾಡಿದೆ. ತಾವು ಏತಕ್ಕೆ ಹೆಚ್ಚಿನ ಸಂಬಳ ತೆಗೆದುಕೊಳ್ಳುತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್.—ಈ ಸರ್ಕಾರದವರಿಗೆ ಬಡ ನೌಕರರ ಬಗ್ಗೆ ಕನಿಕರವಿಲ್ಲ, ಸಾಮಾನ್ಯ ಜನರ ಬಗ್ಗೆ ಕನಿಕರವಿಲ್ಲ. ಕೇವಲ ನಾವು ಈ ವಿಧಾನಸಭೆಯಲ್ಲಿ ಭಾಷಣ ಮಾಡಿದರೆ ಈ ಸರ್ಕಾರ ಬಗ್ಗುವುದಿಲ್ಲ. ಇಡೀ ದೇಶದ ಜನ ದಾಳಿಯೆದ್ದು ವಿಧಾನಸೌಧಕ್ಕೆ ನುಗ್ಗುವುದೊಂದೇ ಉಳಿದಿರುವ ಮಾರ್ಗ. ಈ ಮಂತ್ರಿಮಂಡಲವನ್ನು ಉರುಳಿಸುವುದಕ್ಕೆ ಇದೊಂದೇ ಮಾರ್ಗ. ಗೋರ್ಕಲ್ಲ ಮೇಲೆ ಮಳೆ ಸುರಿದರೆ ಯಾವ ರೀತಿ ಪ್ರಯೋಜನವಿಲ್ಲವೋ, ಅದರಂತೆ ಈ ಕಲ್ಲು ಸರ್ಕಾರವನ್ನು ಕರಗಿಸುವುದಕ್ಕೆ ಇಲ್ಲಿ ಸಾಧ್ಯವಾಗುತ್ತಿಲ್ಲ. ನಿಮ್ಮದು ಕಲ್ಲು ಸರ್ಕಾರ. ಈ ಕಲ್ಲು ಸರ್ಕಾರವನ್ನು ಕರಗಿಸುವುದಕ್ಕೆ ಇಡೀ ರಾಜ್ಯದ ಎಲ್ಲ ಜನರೂ ಸಿದ್ಧರಾಗಬೇಕಾಗಿದೆ. ಕನ್ನಡ ಜನತೆಯ ಹಿತರಕ್ಷಣೆಯನ್ನು ಈ ಸರ್ಕಾರದವರು ಮಾಡುತ್ತಿಲ್ಲ. ಈ ಕನ್ನಡ ನಾಡಿನ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ, ಕನ್ನಡ ನಾಡಿನ ಸಂಸ್ಕೃತಿಯ ಬಗ್ಗೆ ಮತ್ತು ಕನ್ನಡಿಗರ ಬಗ್ಗೆ ಈ ಸರ್ಕಾರದವರು ಯಾವ ರೀತಿಯ ಪ್ರೋತ್ಸಾಹವನ್ನೂ ಸಹ ಕೊಡುತ್ತಿಲ್ಲ. ನಮ್ಮ ಮುಖ್ಯಮಂತ್ರಿಗಳು ಇವತ್ತು ರಾಜ್ಯದ ಮತ್ತು ರಾಷ್ಟ್ರದ ಭಾವೈಕ್ಯತೆಯ ಬಗ್ಗೆ ಹೇಳುವುದರಲ್ಲಿ ಮುಂದಾಗಿದ್ದಾರೆ. ಕೇರಳಾ, ಮದ್ರಾಸ್ ಮತ್ತು ಆಂಧ್ರ ರಾಜ್ಯಗಳಲ್ಲಿ ಆ ರಾಜ್ಯಗಳ ಪ್ರಗತಿಯ ಬಗ್ಗೆ ಹೋರಾಟ ನಡೆಯುತ್ತಿದ್ದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವ ಒಂದು ಪ್ರಗತಿಯ ಹೋರಾಟವೂ ನಡೆಯುತ್ತಿಲ್ಲ. ಇದಕ್ಕೆ ಕಾರಣ ನಮ್ಮ ಮುಖ್ಯಮಂತ್ರಿಗಳು ಭಾವೈಕ್ಯತೆಯ ಬಗ್ಗೆ ಭಾಷಣ ಮಾಡುತ್ತಿರುವುದು. ಕರ್ನಾಟಕದ ಹಿತವನ್ನು ಇವರು ಮರೆತಿದ್ದಾರೆ.

ಶ್ರೀ ರಾಮಕೃಷ್ಣಹೆಗಡೆ.—ಮಾನ್ಯ ಸದಸ್ಯರು ಬಹಳ ಶಕ್ತಿ ಖರ್ಚು ಮಾಡಿ ಮಾತನಾಡು ತ್ತಿದ್ದಾರೆ. ಮೆಲ್ಲಗೆ ಮಾತನಾಡಿದರೂ ಸಹ ನಮಗೆ ಕೇಳುತ್ತದೆ. ಇಲ್ಲಿ ಯಾರು ಕಿವುಡರು ಇಲ್ಲ.

ಶ್ರೀ ವಾಟಲ್ ನಾಗರಾಜ್.—ಭಾವೈಕ್ಯತೆಯ ಬಗ್ಗೆ ಒಂದು ಉದಾಹರಣೆಯನ್ನು ಹೇಳು ತ್ತೇನೆ :

ಉಪಾಧ್ಯಕ್ಷರು.—ಜಾಗ್ರತೆ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ತೋಳ ಕುರಿಮರಿಗೆ ಹೇಳಿದಂತೆ, ನಾನು ನಿನ್ನನ್ನು ತಿಂದು ಬಿಡುತ್ತೇನೆ, ನಂತರ ನೀನು ನನ್ನ ಹೊಟ್ಟೆಯೊಳಗೆ ಸುಖವಾಗಿರಬಹುದು ಎಂದು. ಅದರಂತೆ ನಮ್ಮ ರಾಜ್ಯದ ಮತ್ತು ಕೇಂದ್ರಸರ್ಕಾರದ ಸಂಪರ್ಕ ನಡೆದುಕೊಂಡು ಬಂದಿದೆ. ಇವರ ಭಾವೈ ಕ್ಯತೆ ಎನ್ನುವುದು ನಿರ್ವೀರ್ಯವಾಗಿದೆ. ಇವರು ಗಂಡಸರೂ ಅಲ್ಲ, ಹೆಂಗಸರೂ ಅಲ್ಲ. ನಾವು ಎಷ್ಟು ಹೇಳಿದರೂ ಸಹ ಇವರ ತಪ್ಪನ್ನು ತಿದ್ದುಕೊಳ್ಳುವುದಿಲ್ಲ. ಮಾನ್ಯ ಸಿದ್ದವೀರಪ್ಪನವರು ಹೇಳಿದರು, ರಾಜ್ಯದಲ್ಲಿ ಒಬ್ಬರು ಹರಿಜನರು ಮುಖ್ಯಮಂತ್ರಿಗಳಾಗಲಿ ಎಂದು. ನಾನು ಇದೇ ಮಾತನ್ನು 15 ದಿವಸಗಳ ಹಿಂದೆಯೇ ಹೇಳಿದ್ದೆ. 25 ಜನರು ನಮ್ಮ ಕಡೆಗೆ ಬಂದರೆ ಒಬ್ಬರು ಹರಿಜನರನ್ನು ಮುಖ್ಯ ಮಂತ್ರಿಗಳನ್ನಾಗಿ ಮಾಡುತ್ತೇವೆಂದು.

ಶ್ರೀ ಡಿ. ಎಸ್. ಗೌಡ.—ಇದು ಭ್ರಷ್ಟಾಚಾರವಲ್ಲವೆ ?

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ನಿಜಲಿಂಗಪ್ಪನವರು ಬೇಕಾದರೆ ಹರಿಜನರೊಬ್ಬರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಲಿ, ನಾನು ಒಪ್ಪುತ್ತೇನೆ. ಏಕೆಂದರೆ ಹಿಂದುಳಿದ ಜನಾಂಗ ದವರೊಬ್ಬರು ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಬೇಕು ಎಂಬುದಾಗಿ ನಾನು ಧೈರ್ಯದಿಂದ ಹೇಳುತ್ತೇನೆ. ಈಗಿರತಕ್ಕಂಥ ಮಂತ್ರಿಗಳು ರಾಜ್ಯದ ಹಿತವನ್ನು ಮರೆತಿದ್ದಾರೆ. ಈ ರಾಜ್ಯ ಸರ್ಕಾರದವರು ಕನ್ನಡದ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದ್ದೇವೆ ಅನ್ನತಕ್ಕಂಥ ದೃಷ್ಟಿಯಲ್ಲಿ ಅವರು ಮಾತ ನಾಡುತ್ತಿದ್ದಾರೆ. ಆದರೆ ಇವತ್ತಿನ ದಿವಸ ವಿಧಾನಸೌಧದಿಂದ ಹಿಡಿದು ಎಲ್ಲಾ ವರ್ಗದ ಕಛೇರಿ ಗಳಲ್ಲೂ ಇಂಗ್ಲೀಷ್‌ನಲ್ಲೇ ವ್ಯವಹಾರಗಳು ನಡೆಯುತ್ತಿವೆ. ನಮ್ಮ ರಾಜ್ಯದಲ್ಲಿರತಕ್ಕಂಥ ಕೇಂದ್ರ ಸರ್ಕಾರದ ಅಧೀನದಲ್ಲಿ ನಡೆಯುತ್ತಿರುವ ಕಾರ್ಖಾನೆಗಳಲ್ಲಿ ಮದ್ರಾಸ್ ಮತ್ತು ಕೇರಳದವರು ಕೆಲಸ ಮಾಡುತ್ತಿದ್ದಾರೆ. ಕನ್ನಡದ ಜನರಿಗೆ ಈ ಕಾರ್ಖಾನೆಗಳಲ್ಲಿ ಕೆಲಸ ಸಿಗುತ್ತಿಲ್ಲ. ಇದಕ್ಕೆ ಈ ಮಂತ್ರಿ ಮಂಡಲದವರೇ ಕಾರಣವೆಂದು ಹೇಳುತ್ತೇನೆ. ಈ ರಾಜ್ಯದ ಮಂತ್ರಿಗಳಿಗೆ ಕನ್ನಡಿಗರ ಬಗ್ಗೆ ಯಾವುದೇ ವಿಧವಾದಂಥ ಅಭಿಮಾನವಾಗಲೀ, ಆದರ್ಶವಾಗಲೀ ಇಲ್ಲ. ನಾನು ಇವತ್ತು ಹೇಳುತ್ತಿದ್ದೇನೆ, ನಿಮ್ಮಲ್ಲಿ ನಿಜವಾಗಿಯೂ ರಾಜ್ಯವಾಳುವ ಶಕ್ತಿಯಿಲ್ಲ. ನಿಮ್ಮ ಭ್ರಷ್ಟಾಚಾರಕ್ಕೆ, ನಿಮ್ಮ ಅಕ್ರಮ ನಡೆವಳಿಕೆಗೆ ಒಂದೇ ಮಾರ್ಗ, ಏನೆಂದರೆ, ನೀವು ಮಧ್ಯವರ್ತಿ ಚುನಾವಣೆಗೆ ನಿಲ್ಲುವುದು. ಮಧ್ಯವರ್ತಿ ಚುನಾವಣೆಯಲ್ಲಿ ನೀವುಗಳು ಜಯಶೀಲರಾದರೆ, ನಿಮ್ಮ ಪಕ್ಷವೇ ಅಧಿ ಕಾರಕ್ಕೆ ಬಂದರೆ, ನಾನು ನನ್ನ ಜನ್ಮವಿರುವವರೆಗೂ ರಾಜಕೀಯಕ್ಕೆ ಬರುವುದಿಲ್ಲವೆಂದು ಶ್ರೀಮಾನ್ ನಿಜಲಿಂಗಪ್ಪನವರಿಂದ ಹಿಡಿದು ಶ್ರೀಮಾನ್ ಕೆ. ಎಂ. ಪುಟ್ಟಸ್ವಾಮಿಯವರೆಗೂ ಹೇಳುತ್ತೇನೆ. ಶ್ರೀಮಾನ್ ಶಿವಪ್ಪನವರು ತಂದಿರತಕ್ಕಂಥ ಈ ನಿರ್ಣಯವನ್ನು ನಾನು ಪ್ರಬಲವಾಗಿ ಸಮರ್ಥಿಸು ತ್ತೇನೆ. ಈ ಮಂತ್ರಿಮಂಡಲವು ಶ್ರೀ ಶಿವಪ್ಪನವರು ತಂದಿರತಕ್ಕ ನಿರ್ಣಯಕ್ಕೆ ಯೋಗ್ಯವಾಗಿದೆ. ನಾವುಗಳು ಹೇಳುತ್ತಿರುವುದು ಸರಿಯಲ್ಲವೆಂದು ನೀವು ಹೇಳುವುದಾದರೆ, ನಮ್ಮ ಮಾತಿಗೆ ನೀವು ಬೆಲೆ ಕೊಟ್ಟು ರಾಜಿನಾಮೆ ಕೊಡದಿದ್ದರೆ, ನಾವುಗಳು ಈ ಶಾಸನಸಭೆಯನ್ನು ಬಿಟ್ಟು ಹೊರಗಡೆ ಬಂದು ಇಡೀ ಕರ್ಣಾಟಕದ ಜನತೆಯಲ್ಲಿ ಕ್ರಾಂತಿ ಮಾಡಿಸುತ್ತೇವೆ. ಆಗಲಾದರೂ ನೀವು ರಾಜಿನಾಮೆ ಕೊಡಬೇಕಾಗುತ್ತದೆಂದು ಖಂಡತುಂಡವಾಗಿ ಹೇಳುತ್ತೇನೆ.

ಉಪಾಧ್ಯಕ್ಷರು.—ಜಾಗ್ರತೆ ಮುಗಿಸಿ, ನಿಮ್ಮ ಸಮಯ ಮುಗಿಯಿತು.

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ರಾಮಕೃಷ್ಣಹೆಗಡೆಯವರು ಈ ರಾಜ್ಯದಲ್ಲಿ ಜನರಿಗೆ ಹೆಂಡ ಕುಡಿಸುವುದಕ್ಕೆ ಏರ್ಪಾಡು ಮಾಡಿದರು. ಗಾಂಧಿವಾದಿಗಳೆಂದು ಹೇಳಿಕೊಳ್ಳುತ್ತಾರೆ. ಶ್ರೀಮಾನ್ ರಾಮಕೃಷ್ಣಹೆಗ್ಡೆಯವರು ಬಹಳ ಸುಂದರವಾಗಿದ್ದಾರೆ, ಚಲನಚಿತ್ರಗಳಲ್ಲಿ ಆಸಕ್ತಿ ಹೊಂದಿದ್ದಾರೆ, ಇವರ ಬಗ್ಗೆ ಹೇಳಬೇಕಾದುದು ಇತ್ತು, ಈಗ ಸಮಯವಿಲ್ಲ. ಈ ನಿರ್ಣಯವನ್ನು ಸಮರ್ಥನೆ ಮಾಡಿ, ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

ಶ್ರೀ ಎಸ್ ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಉಪಾಧ್ಯಕ್ಷರೇ, ಈ ಮಂತ್ರಿಮಂಡಲದಲ್ಲಿ ಈ ಮನೆಗೆ ವಿಶ್ವಾಸವಿಲ್ಲ ಎಂಬ ಸೂಚನೆಯನ್ನು ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಮತ್ತು ಕಾರಣಗಳನ್ನು ಅವರು ಭಾಷಣದಲ್ಲಿ ತಿಳಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ರಾಜ್ಯದ ಮುಖ್ಯ ಮಂತ್ರಿ ಪದವಿ ಬಿಡುತ್ತಾ ಇದ್ದಾರೆ ಎನ್ನುವ ಸಂದರ್ಭದಲ್ಲಿ ನಾವು ಈ ನಿರ್ಣಯವನ್ನು ಈ ಸೂಚನೆಯನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆ. ಬೆಳಿಗ್ಗೆ ಶ್ರೀಮಾನ್ ನಿಜಲಿಂಗಪ್ಪನವರು ಶ್ರೀಮಾನ್ ಶಿದ್ದವೀರಪ್ಪನವರ ಭಾಷಣ ಕೇಳಿದ್ದಾರೆ ಬಹುಶ: ಅವರು ಈಗಲೇ ರಾಜೀನಾಮೆ ಕೊಡುತ್ತಿದ್ದರೋ ಏನೋ ? ಹಿರಿಯರಾದ ಶ್ರೀಮಾನ್ ಸಿದ್ದವೀರಪ್ಪನವರು ರಾಜ್ಯ 1956 ರಲ್ಲಿ ಯಾವ ರೀತಿ ನಡೆದುಕೊಂಡು ಹೋಗುತ್ತಾ ಇದೆ, ಶ್ರೀಮಾನ್ ಸಿದ್ದವೀರಪ್ಪನವರು ಮಂತ್ರಿಯಾಗಿದ್ದಾಗ ರಾಜ್ಯದ ಆರ್ಥಿಕ ಸ್ಥಿತಿ ಏನು ಇತ್ತು, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಏನು ಇತ್ತು, ಇದನ್ನು ಅಂಕಿಅಂಶಗಳಿಂದ ಹೇಳಿದ್ದಾರೆ. ಮತ್ತು ಏಕೀಕರಣವಾದನಂತರ ಶ್ರೀಮಾನ್ ನಿಜಲಿಂಗಪ್ಪನವರ ಯುಗ ಆರಂಭವಾಗಿ 1967 ರಲ್ಲಿ ಇನ್ನೂ ಮುಕ್ತಾಯವಾಗುತ್ತಾ ಇದೆ, ಈ ಅವಧಿಯಲ್ಲಿ ರಾಜ್ಯ ಯಾವ ದಿಶೆಯಲ್ಲಿ ಮುನ್ನಡೆದಿದೆ, ಸಾಲ ಎಷ್ಟು ಕೋಟಿ ರೂಪಾಯಿ ಹೆಚ್ಚಾಗಿದೆ ಈ ವಿಷಯಗಳನ್ನು ಅಂಕಿ ಅಂಶಗಳೊಡನೆ ಕೊಟ್ಟಿದ್ದಾರೆ. ಅವರು ಕನ್ನಡದಲ್ಲಿಯೇ ಮಾತನಾಡಿದರು. ನನಗೆ ನಿಜವಾಗಿಯೂ ಕಣ್ಣು ಹನಿ ತುಂಬಿ ಬಂತು, ಗಂಟಲು ಬಿಗಿದಿತ್ತು. ಅದಕ್ಕೆ ಕಾರಣ ಗೊತ್ತಿಲ್ಲ ಅವರು ಸತ್ಯವನ್ನೇ ನುಡಿದಿದ್ದಾರೆ ಎನ್ನುವುದು ಬಹುಶಃ ಕಾರಣವಿರಬಹುದು. ಈ ರಾಜ್ಯದ ಹಿತದ ಬಗ್ಗೆ ಮಾತನಾಡಿದ್ದಾರೆ ಇವತ್ತು ಯಾವ ರೀತಿ ರಾಜ್ಯದ ಹಿತಕ್ಕೆ ಧಕ್ಕೆ ಬಂದಿದೆ ಎನ್ನುವುದನ್ನು ಅವರು ಮನ ಮುಟ್ಟುವಂತೆ ಹೇಳಿದ್ದಾರೆ. ಕೆಲವರು ಮಾನ್ಯ ಸ್ನೇಹಿತರು, ಆಳುವ ಪಕ್ಷದವರು ಎದ್ದು ನಿಜಲಿಂಗಪ್ಪನವರ ಉಪ್ಪು ತಿಂದಿಲ್ಲ ಆ ರೀತಿ ಹೇಳಬೇಡಿ ಎಂದು ಎದ್ದು ನಿಂತು ಹೇಳಿದರು. ರಾಜಕಾರಣದಲ್ಲಿ ನಿಯಮಗಳು ಮತ್ತು ಶಿಸ್ತು ಇರುವುದರಿಂದ ಅನೇಕ ಸಲ ಆತ್ಮವಂಚನೆ ಮಾಡಿದರೂ ಕೂಡ ಸತ್ಯ ನುಡಿಯದೇ ಇರತಕ್ಕಂಥ ಅನಿವಾರ್ಯ ಪರಿಸ್ಥಿತಿ ಇದೆ ಎಂದು ನಾನು ಮನಗಂಡಿದ್ದೇನೆ. ಆ ಕಾರಣಕ್ಕಾಗಿ ಶ್ರೀಮಾನ್ ಶಿವಪ್ಪನವರು ತಂದಿರತಕ್ಕಂಥ ಸೂಚನೆಗೆ ಧೈರ್ಯವಾಗಿ ಸತ್ಯ ಎತ್ತಿ ಹಿಡಿಯುತ್ತೇನೆ ಎಂಬ ಮನವರಿಕೆಯಿಂದ ನಂಬಿಕೆಯಿಂದ ಕೈ ಎತ್ತಲಾರರು ಎಂಬ ಸಂಶೇಹ ನಮಗೆ ಇದೆ. ನಾವು ಅಷ್ಟೇನೂ ದಡ್ಡರಲ್ಲ. ಆದರೆ ಅವರ ಮಾತುಗಳನ್ನು ಕೇಳಿದಂತೆ ಸದಸ್ಯರಿಗೆ ಅವರಿಗೆ ಆ ಸಂದರ್ಭದಲ್ಲಿ ಅವರ ಮನಸ್ಸಿನಲ್ಲಿ ಹೊಟ್ಟೆಯೊಳಗೆ ತೊಳಸುವುದು ಎಂದು ಹೇಳುವ ಹಾಗಾಗುತ್ತದೆ. ಪ್ರತಿಕ್ರಿಯೆ ನೋಡಿದರೆ ಅವರ ಮಾತುಗಳನ್ನು ಅಕ್ಷರಶಃ ಒಪ್ಪಿದಂತೆ ಎಂದು ಕಾಣುತ್ತಿತ್ತು. ಏನೇ ಇರಲಿ ಅವಿಶ್ವಾಸ ನಿರ್ಣಯ ಮಂಡಿಸತಕ್ಕಂಥ ಸಂವಿಧಾನಾತ್ಮಕವಾಗಿತರತಕ್ಕಂಥ ಹಕ್ಕು ದುರುಪಯೋಗ ಪಡಿಸಿದ್ದಲ್ಲ. ಮಹಾಚುನಾವಣೆಗಳಾದ ಮೇಲೆ ಈ ವರ್ಷ ಶ್ರೀಮಾನ್ ನಿಜಲಿಂಗಪ್ಪ ನವರು ಒಪ್ಪಿಕೊಂಡ ಹಾಗೆ ಕಾಂಗ್ರೆಸ್ ಸೋಲಿಗೆ ಕಾರಣ ಗೊತ್ತಿದೆ. ಅವರು ಸ್ವಾಗತಿಸುವ ರೀತಿಯಲ್ಲಿ ಹೇಳಿದ್ದಾರೆ. ಬಹಳ ಸಂಕ್ಷೇಪದ ವಿಷಯ. ಕೆಲವೊಮ್ಮೆ ಅವರು ನಿಜವನ್ನೂ ಹೇಳಬೇಕಾಗುತ್ತದೆ. ನಮ್ಮ ರಾಜ್ಯದಮಟ್ಟಿಗೆ ಹೇಳಬೇಕು ಅಂದರೆ, ಶ್ರೀಮಾನ್ ಶಿದ್ದವೀರಪ್ಪನವರು ಒಂದು ಮಾತು ಹೇಳಿದರು. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ಮುಂದುವರಿದರೆ ಇಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಚರಮಗೀತೆ ಬೇಗ ಹಾಡಲು ಸಾಧ್ಯವಾಗುವುದು ಎಂದು ಹೇಳಿದರು ; ಸ್ಫೂರ್ತಿ ಬರುತ್ತದೆ ಎಂದು ಹೇಳಿದರು. ನಾನಾದರೂ ಭಾವಿಸುತ್ತೇನೆ ಅಖಿಲ ಭಾರತ ಮಟ್ಟದಲ್ಲಿ ಶ್ರೀ ನಿಜಲಿಂಗಪ್ಪನವರ ಕಾಲದಲ್ಲಿ ಕಾಂಗ್ರೆಸ್ ಆಡಳಿತ ಚರಮಗೀತೆ ಹಾಡಲಾಗುತ್ತದೆ, ಅದಕ್ಕಾಗಿ ಹೋಗುತ್ತಾರೆ ಎಂದು ನನಗೆ ಅನಿಸುತ್ತದೆ. ಈ ಮಾತು ಹೇಳುವಾಗ ನನಗೆ ಸಂತೋಷವಾಗುವುದಿಲ್ಲ. ಕರ್ನಾಟಕದ ಒಬ್ಬ ನಾಯಕ ಅಖಿಲಭಾರತ ಮಟ್ಟದಲ್ಲಿ ಯಾವುದೇ ಸಂಸ್ಥೆ ನಾಯಕನಾಗಿ ಆಯ್ಕೆಯಾಗಿದ್ದಾರೆ ಅಂದರೆ ಸ್ವಾಭಾವಿಕವಾಗಿ ನಮಗೆ ಹೆಮ್ಮೆ, ಸಂತೋಷವಾಗುತ್ತದೆ. ಸ್ವಾಭಾವಿಕವಾಗಿ ಅವರಿಗೆ ಶುಭ ಕೋರುವುದು ನಮಗೆ ಒಂದು ಸಾಮಾನ್ಯವಾದ ಕೆಲಸ. ಇವತ್ತು ಇದನ್ನು ಮಾಡಲಾರದ ಸ್ಥಿತಿಗೆ ನಾವು ನಿಜಲಿಂಗಪ್ಪನವರನ್ನು ಕರೆದುಕೊಂಡು ಬಂದುಬಿಟ್ಟಿದ್ದೇವೆ. ಇದು ವ್ಯಸನಕರ ವಿಷಯ. ಅದನ್ನು ನಾವು ವಿಷಾದದಿಂದ ಹೇಳಬೇಕಾಗಿದೆ. ಕಾರಣ ಏನೇನೋ ಇದ್ದರೂ ವೈಯಕ್ತಿಕವಾಗಿ ಇಲ್ಲವಲ್ಲ. ಯಾರಾದರೂ ಇದು ವೈಯಕ್ತಿಕವಾಗಿ ಇದೆ ಎಂದು ತಿಳಿದುಕೊಂಡಿದ್ದರೆ ಅದು ದೊಡ್ಡ ತಪ್ಪು ಅಭಿಪ್ರಾಯ. ಇಲ್ಲಿ ನಮ್ಮ ಅವರ ಮಧ್ಯೆ ವ್ಯವಹಾರ ನಡೆದಿಲ್ಲ. ಅವರ ಆಸ್ತಿ ನಮ್ಮ ಆಸ್ತಿಪಾಲು ಹಿಸ್ಸೆ ಆಗಿಲ್ಲ. ಏನಾದರೂ ಅನುಚಿತವಾದ ಪರಸ್ಪರ ವರ್ತನೆ ನಡೆದಿಲ್ಲ. ಅದೇ ರೀತಿ ಮಂತ್ರಿಮಂಡಲದಲ್ಲಿಯ ಬೇರೆ ಮಂತ್ರಿಗಳ ಬಗ್ಗೆ ಕೂಡ. ಇಲ್ಲಿ ನಮ್ಮ ಕರ್ತವ್ಯ ಮಾಡಬೇಕಾಗಿದೆ. ಸರಕಾರ ಮಾಡತಕ್ಕಂಥ ಕೆಲಸ ವಿರೋಧ ಪಕ್ಷದವರಾದ

ನಾವು ಆರಿಸಿ ಬಂದು ಈ ರಾಜ್ಯದ ಹಿತಾಸಕ್ತಿ ಎತ್ತಿ ಹಿಡಿಯತಕ್ಕಂಥ ಹೊಣೆ, ಕರ್ತವ್ಯ ಸರಕಾರದ ಮೇಲೂ ನಮ್ಮ ಮೇಲೂ ಇರುತ್ತದೆ. ಇದೆ. ಇಲ್ಲಿ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲದ ಮೇಲೆ ಹಿಂದೆ ನಾವು ಆಪಾದನೆ ಪಟ್ಟಿ ಕಳಿಸಿದ್ದೆವು. ಇಲ್ಲ ಆಗ್ಗೆ ಗುಲಜಾರಿ ಲಾಲ ನಂದಾ ಅವರು ಬೆಂಗಳೂರಿಗೆ ಬಂದಿದ್ದರು. ಅವರಿಗೆ ಕೊಟ್ಟು ಬಿಟ್ಟೆವು. ಆಗ್ಗೆ ಅವರು ಕೇಂದ್ರದಲ್ಲಿ ಗೃಹಮಂತ್ರಿಗಳಾಗಿದ್ದರು. ಅದು ಆದಮೇಲೆ ಕೇಂದ್ರದಲ್ಲಿ ರಾಷ್ಟ್ರಾಧ್ಯಕ್ಷರನ್ನು ಹಿಡಿದು ಎಲ್ಲ ಜವಾಬ್ದಾರ ಸ್ಥಾನದಲ್ಲಿರತಕ್ಕಂಥ ಜನರಿಗೆ ಕೊಟ್ಟಿದ್ದೇವೆ. ಅದು ಒಂದು ದೃಷ್ಟಿಯಿಂದ ತಪ್ಪೂ ಆಗಬಹುದು. ಯಾವ ದೃಷ್ಟಿಯಿಂದ ಎಂದರೆ, ಏನೇ ತಪ್ಪು ನಡೆಯು ತ್ತಿರಲಿ, ದುಷ್ಕೃತ್ಯಗಳೇ ನಡೆಯುತ್ತಿರಲಿ, ರಾಜ್ಯದ ಹಿತದೃಷ್ಟಿಯಿಂದ ಎಲ್ಲರೂ ಒಂದಾಗಿ ಕೇಂದ್ರದವರಿಂದ ಹಣವನ್ನು ತೆಗೆದುಕೊಂಡು ಅವರನ್ನು ಹೆದರಿಸುವುದು ಅವರಿಂದ ನಾವು ಕೆಲಸ ತೆಗೆದುಕೊಳ್ಳುವುದು, ಇಂಥ ಒಗ್ಗಟ್ಟು ಇರಬೇಕು ಎಂದು ಬಹಳ ಸಲ ಹೇಳುತ್ತಾರೆ. ಆ ಒಗ್ಗಟ್ಟಿಗೆ ನೀವು ಕೊಟ್ಟ ಆಪಾದನೆ ಪಟ್ಟಿ ಅಡ್ಡಿಯಾಯಿತು, ಅವರ ದೃಷ್ಟಿಯಲ್ಲಿ ನಾವು ತಪ್ಪಿತಸ್ಥರಾದೆವು, ನಾವು ಹತ್ತಿರ ಏನೂ ಕೇಳುವುದಕ್ಕೆ ಆಗಲಿಲ್ಲ, ಅದನ್ನೇ ಅವರು ಒಂದು ಅಸ್ತ್ರವನ್ನಾಗಿ ನಮ್ಮ ಮೇಲೆ ಪ್ರಯೋಗ ಮಾಡುತ್ತಿದ್ದಾರೆ ಎನ್ನುವ ಮಾತುಗಳನ್ನು ಬೇರೆ ಕಡೆಯಿಂದ ಹೇಳಿದ್ದಾರೆ, ಹೀಗೆ ಆಗಬಾರದಾಗಿತ್ತು ಎಂದು. ವಾಸ್ತವವಾಗಿ ಇವತ್ತು ದೇಶದಲ್ಲಿ ಶ್ರೀ ನಿಜಲಿಂಗಪ್ಪನವರಿಗೆ ಏನು ನಡೆದಿದೆ, ನಡೆಯುತ್ತಿದೆ ಎನ್ನುವುದು ಕಾಣುತ್ತಿಲ್ಲ, ಕೇಳುತ್ತಿಲ್ಲ ಎನ್ನುವಷ್ಟು ದೂರ ನಾನು ಹೋಗುವುದಿಲ್ಲ. ಬಹುಶಃ ಅವರು ಅದನ್ನು ತಿಳಿದೂ ತಡೆಗಟ್ಟಲಿಕ್ಕೆ ಅಸಮರ್ಥರೂ ಆಗಿರಬಹುದು. ಆದರೆ ಶ್ರೀಮಾನ್ ಸಿದ್ದವೀರಪ್ಪನವರು ಏನು ಹೇಳುತ್ತಾರೋ ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ರೀತಿ ಮಾಡುವಂಥದ್ದೇ ಸರಿ ಎನ್ನುವ ತೀರ್ಮಾನಕ್ಕೆ ಬಂದು ಹಾಗೆ ಮಾಡುತ್ತಿದ್ದಾರೋ ಏನೋ ಎನ್ನುವ ಶಂಕೆ ಬರುತ್ತದೆ. ಎಚ್ಚರಿಕೆ ಇಲ್ಲದವನನ್ನು ಎಚ್ಚರಿಸಬಹುದು. ನಿದ್ರೆ ಬಂದಿರುವವನಂತೆ ನಟಿಸುವವನನ್ನು ಎಚ್ಚರಿಸುವುದು ಸಾಧ್ಯವಿಲ್ಲ. ಹೀಗೆ ಆಗಿರಬಹುದು ಎನ್ನುವುದು ನಮಗೆ ಈಗ ದೊಡ್ಡ ಅನುಮಾನ, ಸಂದೇಹ ಬಂದಿದೆ. ಈ ಆಪಾದನೆ ಪಟ್ಟಿಗಳಲ್ಲಿ ಹುರುಳಿಲ್ಲ ಎಂದು ಹೇಳಿದರು. ಅದನ್ನು ವಿಚಾರಣೆ ಮಾಡಿಸುವುದಕ್ಕೆ ಏನೂ ಹೆಚ್ಚು ಖರ್ಚಾಗುವುದಿಲ್ಲ. ಎಷ್ಟೋ ಕೋಟಿ ರೂಪಾಯಿಗಳು ಯಾವ ಯಾವುದಕ್ಕೋ ಖರ್ಚಾಗುತ್ತವೆ. ವಿಚಾರಣೆ ಮಾಡಿಸಬೇಕಾದ್ದು, ಆ ಆಪಾದನೆ ಯಾರಮೇಲೆ ಹೊತ್ತಿರುತ್ತದೋ ಅವರ ಹಿತದೃಷ್ಟಿಯಿಂದಲೇ ಬಹಳ ಅಗತ್ಯ. ರಾಮನ ಹೆಂಡತಿ ಸೀತೆಯ ಬಗ್ಗೆ ಒಬ್ಬ ಅಗಸ ಎಲ್ಲೋ ಒಂದು ಕಡೆ ಸ್ವಲ್ಪ ಮೂದಲಿಸಿ ಮಾತನಾಡಿದ್ದನ್ನೇ ಕೇಳಿ ರಾಮ ಸೀತೆಯನ್ನು ಅಗ್ನಿಪರೀಕ್ಷೆಗೆ ಗುರಿಪಡಿಸುತ್ತಾನೆ ಮತ್ತು ಕಡೆಗೆ ಕಾಡಿಗೆ ಅಟ್ಟುತ್ತಾನೆ, ಕೊಂದುಬಿಟ್ಟು ಬಾ ಎಂದು ಲಕ್ಷ್ಮಣನಿಗೆ ಆಜ್ಞೆ ಮಾಡುತ್ತಾನೆ. ಗಾಂಧೀಜಿಯವರು ರಾಮ ರಾಜ್ಯದ ಕನಸು ಈ ನ್ಯಾಯ ನಿಷ್ಠುರತೆ ನಮ್ಮಲ್ಲಿ ಬರಬೇಕು ಎನ್ನುವುದನ್ನು ಸಾರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆಯೇ ನಿಜಲಿಂಗಪ್ಪನವರು, ಸೀಜರನ ಪತ್ನಿ ಯಾವಾಗಲೂ ಅನುಮಾನಕ್ಕೆ ಗುರಿಯಾಗಬಾರದು, ಅದಕ್ಕೆ ಅವಕಾಶವನ್ನೇ ಕೊಡಬಾರದು ಎನ್ನುವ ಮಾತು ಏನಿದೆ ಹಾಗೆ ನಿಜಲಿಂಗಪ್ಪನವರೂ ರಾಜ್ಯವನ್ನು ನಡೆಸಬೇಕು ಎನ್ನುವುದೇ ನಮ್ಮ ಅಭಿಪ್ರಾಯ. ನಡೆಸಬೇಕಾಗಿತ್ತು ; ಏಕೆಂದರೆ ಅದು ಭೂತಕಾಲಕ್ಕೆ ಸೇರಿಹೋಯಿತು. ಆದುದರಿಂದ ಈ ಆಪಾದನೆ ಗಳಲ್ಲಿ ಹುರುಳಿಲ್ಲ ಎಂದು ಯಾರು ಯಾರಿಂದಲೋ ಸರ್ಟಿಫಿಕೇಟುಗಳನ್ನು ತಂದು ಬೆಳಕಿಗೆ ಬಿಟ್ಟರು. ಆದರಿಂದ ಏನಾಯಿತು ಎಂದರೆ, ಶರಾವತಿಯಲ್ಲಿ ನಡೆದಿದ್ದರ ಹತ್ತು ಪಾಲು ಭ್ರಷ್ಟಾಚಾರ ನಡೆಸುವುದಕ್ಕೆ ಎಲ್ಲರಿಗೂ ರಹದಾರಿ ಸಿಕ್ಕಿದಂತಾಯಿತು. ಅದೇ ರಹದಾರಿ. ಆಪಾದನೆ ಪಟ್ಟಿಯ ನಂತರ ನಮ್ಮ ರಾಜ್ಯದಲ್ಲಿ ಆ ಆಪಾದನೆಯ ಪಟ್ಟಿಯಲ್ಲಿ ಆಪಾದಿಸಲ್ಪಟ್ಟ ರೀತಿಯ ಘಟನೆಗಳು ಇನ್ನೂ ಹೆಚ್ಚು ರೂಪದಲ್ಲಿ ನಡೆದಿವೆ.

ಸ್ವಾಮಿ, ಶ್ರೀಮಾನ್ ನಿಜಲಿಂಗಪ್ಪನವರಲ್ಲಿ ನಾನು ಕೇಳುತ್ತೇನೆ, ಈ ಬಾಗಲಕೋಟೆ ಪ್ರಕರಣವಿದೆಯಲ್ಲ, ಇನ್ನಾದರೂ ವಿಚಾರಣೆಯಾಗುತ್ತದೆ, ಆಗಬೇಕು. ಬಾಗಲಕೋಟೆ ಪ್ರಕರಣ ಈ ದಶಕದಲ್ಲಿ ನಡೆದಿರಬಹುದಾದ ಅವ್ಯವಹಾರಗಳಲ್ಲಿ ಬಹಳ ದೊಡ್ಡದು. ಸೆಷನ್ಸ್‌ನಲ್ಲಿರುವ ಕೇಸುಗಳನ್ನು ಕೂಡ ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಅತ ಡೈರಿಯಲ್ಲಿ ಬರೆದಿದ್ದಾನೆ, ಅದರಲ್ಲಿ ಶ್ರೀ ಎಸ್. ಕೆ. ಪಾಟೀಲರ ಹೆಸರಿದೆ, ಶ್ರೀ ಮನೂಭಾಯಿ ಷಾ ಅವರ ಹೆಸರಿದೆ, ಶ್ರೀಮಾನ್ ನಿಜಲಿಂಗಪ್ಪನವರ ಹೆಸರಿದೆ. ಅದು ಕೋರ್ಟಿನ ಮುಂದೆ ಹಾಜರುಪಡಿಸಿದಂಥ ಡೈರಿ. ಒಂದು ಲಕ್ಷಕ್ಕೆ ಮೇಲ್ಪಟ್ಟು ಹಣ ಕೊಟ್ಟಿದ್ದಾರೆ. ಶ್ರೀಮಾನ್ ಜತ್ತಿ ಅವರಿಗೆ ಇದೆಲ್ಲ ಗೊತ್ತು, ಚೆನ್ನಾಗಿ ಗೊತ್ತು. ಅವರು ಗೃಹ ಮಂತ್ರಿಗಳೂ ಆಗಿದ್ದರು. ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳು ವುದರ ಬಗ್ಗೆ ಎಷ್ಟೊಂದು ಒತ್ತಡ ಮೇಲಿನಿಂದ ಬಂದಿದೆ, ಹೇಗೆ ಅವರು ವಾಪಸ್ಸು ತೆಗೆದುಕೊಂಡರು ಎನ್ನುವುದು ಒಂದು ದೊಡ್ಡ ಕರ್ಮಕಾಂಡ. ಇದು ನಡೆಯುತ್ತಿದ್ದಾಗಲೇ 10 ಲಕ್ಷ ರೂಪಾಯಿ

(ಶ್ರೀ ಎಸ್. ಗೋಪಾಲಗೌಡ)

ಗಳಷ್ಟು ಷೇರುಗಳನ್ನು ಕೊಂಡು, ಯಾರಮೇಲೆ ಅಪಾದನೆ ಹೊತ್ತಿತ್ತೋ ಆತನನ್ನೇ ಪುನಃ ಡೈರೆಕ್ಟರ್ ಮಾಡುವುದಕ್ಕೆ ಸಹಾಯ ಮಾಡಿದರು. ಈಗ ವಿಚಾರಣೆ ನಡೆಯುತ್ತಿದೆ. ಅವರು ಡೈರೆಕ್ಟರಾಗಿಲ್ಲ. ಈಗ ಕೂಡ ನಾನು ಬಹಳ ಕೇಳಿದ್ದೇನೆ, ಈ ಒಂದು ಕೇಸನ್ನೂ ವಾಪಸ್ಸು ಪಡೆಸುವುದರಲ್ಲಿದ್ದಾರೆ. ಶ್ರೀ ನಿಜಲಿಂಗಪ್ಪನವರಿಗೂ ಗೊತ್ತಿದೆ. ಐದು ಲಕ್ಷ ರೂಪಾಯಿಗಳ ತನಕ ಆತ ಕೊಟ್ಟಿದ್ದಾನೆ. ಯಾರಿಗೋ ಎಂದು ನಾವು ಕೇಳುತ್ತೇವೆ. ಇಂಥದ್ದು ಎಷ್ಟೋ. ಏಕೆಂದರೆ, ಸರ್ಕಾರದವರು ಸಿಬ್ಬಂದಿಯನ್ನು ಹಾಕಿ, ಪೋಲೀಸ್ ಅಧಿಕಾರಿಯನ್ನು ಹಾಕಿ ತಪ್ಪುಗಳನ್ನು ಹುಡುಕಿ ಚಾರ್ಜ್‌ಷೀಟು ಹಾಕಿದ್ದಾರೆ ಮತ್ತು ಅದಕ್ಕೆ ನಾವು ಹಣವನ್ನು ಬಜೆಟ್ಟಿನಿಂದ ಕೊಟ್ಟಿದ್ದೇವೆ. ಸ್ಪೆಷಲ್ ಇನ್‌ವೆಸ್ಟಿಗೇಷನ್ ನಡೆದಿದೆ. ಬಹುಶಃ ಹಿಂದೆ, ಆ ಕಾಲದಲ್ಲಿ ಇದ್ದ ಗೃಹಮಂತ್ರಿಗಳಿಗೆ ಕೆಲಸ ಹೋಗುವುದಕ್ಕೂ ಅದೇ ಕಾರಣವೆಂದು ಕಾಣುತ್ತದೆ. ಇದು ಒಂದು ಪ್ರಕರಣ. ಆದರ ಬಗ್ಗೆ ವಿಚಾರಣೆ ಮಾಡಬೇಕು. ಅದರ ಬಗ್ಗೆ ಶ್ರೀ ನಿಜಲಿಂಗಪ್ಪನವರು ಮತ್ತು ಅವರ ಮಂತ್ರಿ ಮಂಡಲದವರು ಏನೂ ಕೈವಾಡ ಮಾಡಿಲ್ಲ ಎನ್ನುವುದನ್ನು ಲೋಕಕ್ಕೆ ಸಾಬೀತುಪಡಿಸಿ ಕೊಡಬೇಕು. ನಾವು ಇಲ್ಲಿ ಮನರಂಜನೆಗಾಗಿ ಇದನ್ನೆಲ್ಲ ಪ್ರಸ್ತಾಪ ಮಾಡುತ್ತಿಲ್ಲ. ನೀವು ಯಾವ ಗಾಜಿನ ಮನೆಯಲ್ಲಿದ್ದೀರೋ ಅದೇ ಗಾಜಿನ ಮನೆಯಲ್ಲಿ ನಾನೂ ಇದ್ದೇನೆ. ನೀವು ಯಾವ ಬೆಂಕಿಯಲ್ಲಿ ಪ್ರವೇಶ ಮಾಡಬಹುದೋ ಅದೇ ಬೆಂಕಿಯಲ್ಲಿ ಪ್ರವೇಶಮಾಡುವುದಕ್ಕಾಗಿ ಇದ್ದೇನೆ. ನಮಗೂ ತ್ರಿಕರಣಗಳಿವೆ. ಸ್ವಚ್ಛತೆ ಎಲ್ಲಿಂದ ಆರಂಭವಾಗಬೇಕು ಕಾನ್‌ಸ್ಟೇಬಲ್‌ನಿಂದಲೋ, ಐ. ಜಿ. ಪಿ. ಅವರಿಂದಲೋ, ಗೃಹಮಂತ್ರಿಗಳಿಂದಲೋ ? ಸ್ವಚ್ಛತೆ ಎಲ್ಲಿಂದ ಆರಂಭವಾಗಬೇಕು ? ಆ ಒಂದು ತಲೆಕೆಳಗು ವ್ಯವಹಾರವೇ ದೇಶವನ್ನು ಈ ದುರ್ಗತಿಗೆ ತಂದು ಬಿಟ್ಟಿರತಕ್ಕದ್ದು. ಶ್ರೀ ನೆಹರೂ ಅವರು ಅದನ್ನು ಅಖಂಡವಾಗಿ 18 ವರ್ಷ ಮುಂದೆ ತಳ್ಳಿಕೊಂಡು ಬಂದರು. ಅದರಿಂದ ಏನಾಯಿತು ಇವತ್ತು ಎಂದರೆ, ಯಾರನ್ನು ನಂಬಬೇಕು ಎನ್ನುವ ಪ್ರಶ್ನೆ ಬಂದಿದೆ. ವಿಶ್ವಾಸವನ್ನು ಕಳೆದುಕೊಳ್ಳುವಷ್ಟು ರೀತಿಯಲ್ಲಿ ಭ್ರಷ್ಟಾಚಾರ. ಭ್ರಷ್ಟಾಚಾರ ಎಂದರೆ ಕಾಂಗ್ರೆಸ್ ಆಡಳಿತಕ್ಕೆ ಒಂದು ಬೇರೆ ಹೆಸರು. ಭ್ರಷ್ಟಾಚಾರ ಎಂದರೆ ಅದರ ಅನರ್ಥನಾಮ ಕಾಂಗ್ರೆಸ್. ಅಲ್ಲವೇ ಸ್ವಾಮಿ ? 20 ವರ್ಷಗಳ ಅವಧಿಯಲ್ಲಿ ಎಷ್ಟು ವೇಗವಾಗಿ ನೀವು ಈ ಅಧಃಪತನ ಮುಟ್ಟಿರಬಹುದು ? ಏಕೆಂದರೆ, ಎಷ್ಟು ಪುಣ್ಯ ಮಾಡಿ ಬಂದದ್ದು ಇಷ್ಟು ಬೇಗ ನಷ್ಟವಾಗಬೇಕಾದರೆ ಎಷ್ಟು ಇಂಥ ಕರ್ಮ ಕಾಂಡಗಳು ನಡೆದಿರಬಹುದು ಸಾರ್ವಜನಿಕ ಕ್ಷೇತ್ರದಲ್ಲಿ. ಇದು ಒಂದು ಬಹಳ ಪವಿತ್ರವಾದ ಕ್ಷೇತ್ರ ಎಂದು ತಿಳಿದುಕೊಳ್ಳಬೇಕು. ಇದು ಇಲ್ಲದೆ ಹೋದರೆ ಹೇಗೆ ಈ ದೊಡ್ಡ ದೊಡ್ಡ ಹೊಣೆಗಳನ್ನು ನಿರ್ವಹಿಸುವುದಕ್ಕೆ ಆಗುತ್ತದೆ ? ಇದು ಬಹಳ ಮೂಲ ಪ್ರಶ್ನೆ. ಇದನ್ನು ನಾವು ಇವತ್ತು ಈ ಮಂತ್ರಿ ಮಂಡಲದ ಎದುರು ಇಟ್ಟು ಸಾಬೀತು ಮಾಡುವುದಕ್ಕೆ ಸಿದ್ಧರಿದ್ದೇವೆ. ಇಂಥ ಪ್ರಕರಣದ ಬಗ್ಗೆ ವಿಚಾರಣೆ ಮಾಡಬೇಕು.

ಇನ್ನು ಹೆಗ್ಗಡೆಯವರು ಪ್ರವಾಸದ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ, ಇದು ಬಹಳ ಗಂಭೀರ ವಾಗಿರುವ ವಿಷಯ. ಅವರಿನ್ನೂ ಮುಂದೆ ಬರುವವರು, ಭವಿಷ್ಯವಿರುವವರು. ಮಾನ್ಯ ಮಿತ್ರರು ಹೇಳಿದ ಪ್ರಕಾರ ನಡೆದಿದ್ದರೆ ಬಹಳ ತಪ್ಪಾಗುತ್ತದೆ, ಸರಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. 17ನೆಯ ತಾರೀಖು ಕೇಳಿದ ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ 15ನೆಯ ತಾರೀಖು ಹೊರಟ ಆಜ್ಞೆಯ ಉಲ್ಲೇಖವಿಲ್ಲ; ಅದಿಲ್ಲದೆ ಒಂದು ರೀತಿಯ ತಪ್ಪು ಸೇರಿಸಿದ್ದಾರೆ. ಬಹಳ ದೊಡ್ಡ ಕಷ್ಟದ ಕೆಲಸ ಇದೆಲ್ಲಾ. ತಾರೀಖು ಮುಂತಾದ್ದನ್ನೆಲ್ಲಾ ಹೇಳಿದ್ದಾರೆ, ಓದಿದ್ದಾರೆ. ದೆಹಲಿಗೆ ಹೋದರೆ ಅಶೋಕ ಹೋಟಲಿನಲ್ಲಿಯೇ ಉಳಿಯುತ್ತಾರೆ, ಹಣ ಖರ್ಚುಮಾಡುತ್ತಾರೆ. ಸ್ವತಃ ಅವರಿಗೆ ಶಕ್ತಿಯಿದೆ, ಉಳಿಯಬಹುದು. ಸರಕಾರದ ಹಣ ಖರ್ಚುಮಾಡಿದ್ದರೆ ಅದು ಸೂಕ್ಷ್ಮವಾದ ವಿಷಯ. ತಮಗೆಲ್ಲಾ ಸೂಕ್ಷ್ಮವಾದ ವಿಷಯಗಳು ಅರ್ಥವಾಗುತ್ತವೆ. ಆದುದರಿಂದ ಸೂಕ್ಷ್ಮವಾಗಿಯೇ ಹೇಳುತ್ತೇನೆ. ದೇಶದಲ್ಲಿ ಅವಮಾನಕರ ಸ್ಥಿತಿ ಇದೆ. ತಾಳಗುಪ್ಪೆಗೆ ಹೋಗಿ ಮೂರನೆ ದರ್ಜೆ ಡಬ್ಬ ನೋಡಿ, 20 ವರ್ಷದ ಇತಿಹಾಸವೇನಿದೆ, ಎಷ್ಟು ಜನರು ಕೂಡಬೇಕಾದ ಕಡೆ ಎಷ್ಟು ಜನರು ಕೂಡುತ್ತಾರೆ ಎಂಬುದನ್ನು ನೋಡಬೇಕು, ಈಗ ಒಂದಕ್ಕೆ ಮೂರರಷ್ಟು ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಹಿಂದೂಸ್ಥಾನದ ಏರ್‌ಪೋರ್ಟಿಗೆ ಹೋಗಿ ನೋಡಿ. ನಾನು ಹಳ್ಳಿಗಳಲ್ಲಿ ಭಾಷಣ ಮಾಡುವಾಗ ಏರೋಪ್ಲೇನಿನವ ಬಳಿ ನೂಕುನುಗ್ಗಲು, ಬಸ್ ಸ್ಟ್ಯಾಂಡಿನಲ್ಲಿರುವುದಕ್ಕಿಂತ ಜಾಸ್ತಿ ಇರುತ್ತದೆ, 3 ದಿವಸ ಮುಂಚೆಯೇ ಸೀಟನ್ನು ಕಾದಿರಿಸಿಕೊಳ್ಳಬೇಕು ಎಂದು ಹೇಳುತ್ತೇನೆ. ಇಂಗ್ಲೆಂಡಿಗೆ ನಮ್ಮ ಜನರು ಹೋಗುವುದು ಬರುವುದು ಜಾಸ್ತಿಯಾಗಿದೆ ಎಂದು ಯಾರೋ ಬರೆದಿರುವುದನ್ನು ಸಿದ್ಧವೀರಪ್ಪನವರು ಹೇಳಿದರು. ಈ ದಿವಸ ರೈಲುವೆ ಇಲಾಖೆಯ ಒಬ್ಬ ಫೋಟಾ

ಅಧಿಕಾರಿ ಸೆಲೂನಿನಲ್ಲಿ ಹೋಗುತ್ತಾ ಅಲ್ಲಿ ಎಲ್ಲ ಸೌಕರ್ಯವನ್ನೂ ಪಡೆಯುತ್ತಾನೆ. ಹಿಂದೆ ರಾಜರು ಹಾಗೆ ಹೋಗುತ್ತಿದ್ದರು. ಹೀಗೆ ಒಬ್ಬ ಛೋಟಾ ಅಧಿಕಾರಿಗೆ ರೈಲ್ವೆಯಲ್ಲಿ ದೊಡ್ಡ ಗಾಡಿ ಕೊಡುತ್ತಾರೆ ನಮ್ಮ ರಾಜ್ಯದಿಂದ ಎಷ್ಟೋ ಡೈರೆಕ್ಟರುಗಳು, ಮ್ಯಾನೇಜಿಂಗ್ ಏಜೆಂಟರು, ಮ್ಯಾನೇಜರುಗಳು, ಡೆಪ್ಯುಟಿ ಡೈರೆಕ್ಟರು ವಿಮಾನದಲ್ಲಿ ಪ್ರಯಾಣ ಮಾಡುತ್ತಾರೆ. ಪ್ರತಿಯೊಬ್ಬರಿಗೂ ಯಾವುದೋ ಮೀಟಿಂಗಿಗೋ, ಸಮ್ಮೇಳನಕ್ಕೋ ಹೋಗಬೇಕಾದ ಕೆಲಸವಿರುತ್ತದೆ, ಜಾಗ್ರತೆ ಹೋಗಬೇಕು, ಹೋಗುತ್ತಾರೆ. ನಿಮ್ಮ ಕಣ್ಣು ಎಲ್ಲಿದೆ, ಆಕಾಶದ ಕಡೆಯೋ ಅಥವಾ ಭೂಮಿಯ ಕಡೆಯೋ? ನಿಮ್ಮ ಜನರು ಯಾರು, ಅವರ ಸ್ಥಿತಿಗತಿಯೇನು, ಜೀವನಮಟ್ಟ ಎಂಥಾದ್ದು ಎಂಬುದನ್ನು ತಿಳಿದುಕೊಳ್ಳಬೇಕು. ಕೆಲವರಿದ್ದಾರೆ, ಅವರ ಮನೆಗೆ ಯಾರಾದರೂ ನೆಂಟರು ಹೋದರೆ ಅವರಿಗೆ ಹೊದೆಯುವುದಕ್ಕೆ ಕೊಡಲು ಒಂದು ಕಂಬಳಿ ಕೂಡ ಅವರ ಬಳಿ ಇರುವುದಿಲ್ಲ, ಇರುವುದನ್ನು ಅವರಿಗೆ ಕೊಟ್ಟರೆ ಗಂಡ ಹೆಂಡತಿ ಸೀರೆ ಹೊದ್ದುಕೊಂಡು ಮಲಗಬೇಕು. ಇಂಥ ಸ್ಥಿತಿ ಇದೆ. ಈಗಲೂ ನೋಡಬಹುದು. 20 ವರ್ಷ ನಿಮ್ಮ ರಾಜ್ಯಭಾರವಾದರೂ ಅವರ ಸ್ಥಿತಿ ಸುಧಾರಿಸಲಿಲ್ಲ. ಪೆಟ್ರೋಲ್ ಬಂಕ್ ಮುಂತಾದುವನ್ನು ಇಟ್ಟುಕೊಂಡು ಅನುಕೂಲಸ್ಥರಾಗಿರುವ ಬಂಧುಗಳ ವಿಚಾರ ನಾನು ಹೇಳುತ್ತಿಲ್ಲ. ಅಂಥವರು ಒಳ್ಳೆಯ ಅನುಕೂಲ ಸ್ಥಿತಿಯಲ್ಲಿದ್ದಾರೆ, ಅವರನ್ನು ನೋಡಿದರೆ ತಲೆ ತಿರುಗುತ್ತದೆ. ಅದೇ ಹಳ್ಳಿಗಳಿಗೆ ಹೋದರೆ ಹೋದ 2 ದಿವಸಗಳಮೇಲೆ ನಮಗೆ ಅಂದಾಜಾಗುವುದು, ಇಲ್ಲಿದ್ದರೆ ಗೊತ್ತಾಗುವುದಿಲ್ಲ. ಇದು ಅಲ್ಲಿನ ಸ್ಥಿತಿ. ನಿಜಲಿಂಗಪ್ಪನವರು ಮಂತ್ರಿಮಂಡಲದಿಂದ ಹೋಗಿ ಅಲ್ಲಿಗೆ ಬೇರೊಬ್ಬರು ಬರುವ ಕಾಲದಲ್ಲಿ ಈ ಮಾತನ್ನು ನಾವು ಹೇಳಬೇಕು. ಶ್ರೀಮಾನ್ ಸಿದ್ಧವೀರಪ್ಪನವರು ಬಹಳ ಸುಂದರವಾಗಿ ಹೇಳಿದ್ದಾರೆ.

ಈ 20 ವರ್ಷಗಳಲ್ಲಿ ಪ್ರತಿಯೊಂದು ಇಲಾಖೆಯವರೂ ಕೂಡ ತಮ್ಮ ಜೀವನವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಇದಕ್ಕೆ ಯಾವ ಇಲಾಖೆಯೂ ಹೊರತಾಗಿಲ್ಲ. ಯಾವ ಅಂಗಡಿಯಲ್ಲಿ ಸರಕಾರ ಔಷಧಿ ಕೊಳ್ಳಬೇಕು ಎಂದು ಕೂಡ ನಿರ್ಧಾರವಾಗಿದೆ, ಹಾಗಿಲ್ಲದೆ ಬೇರೆ ಅಂಗಡಿಗಳಲ್ಲಿ ಕೊಂಡರೆ ತಲೆಹೋಗುತ್ತವೆ. ನಾರಾಯಣಗೌಡರೂ ವಿಚಾರಮಾಡಿ ನೋಡಬಹುದು. ಇಂಥ ಕಂಪೆನಿಯಲ್ಲೇ ಪವರ್ ಟಿಲ್ಲರ್ ತೆಗೆದುಕೊಳ್ಳಬೇಕು, ಇಂಥ ಕಡೆ ಗೊಬ್ಬರ ಪಡೆಯಬೇಕು, ಕಮಿಷನ್ ಅದಕ್ಕೆಷ್ಟು ಎಂಬುದೆಲ್ಲಾ ನಿಗದಿಮಾಡಿದೆ, ಇದೆಲ್ಲಾ ಬಹಳ ಚೆಂದಾಗಿದೆ. ಹೀಗೆ ಜನರನ್ನು ಶೋಷಣೆಮಾಡಿ ಸರಕಾರದ ಹಣದಲ್ಲಿ ಬೇಕಾದಷ್ಟು ಸಿಬ್ಬಂದಿ ನೇಮಕ ಮಾಡುತ್ತಾರೆ. ಜನತಾ ಬಜಾರುಗಳನ್ನು ತೆರೆಯುವುದು, ಲಕ್ಷಾಂತರ ಖರ್ಚುಮಾಡಿ ಕಮಿಷನ್ ಪಡೆಯುವುದು ಇದೆಲ್ಲಾ ನಡೆಯುತ್ತಿದೆ, ಎಲ್ಲಾ ಇಲಾಖೆಗಳಲ್ಲೂ ಇದಿದೆ.

ಜತ್ತಿಯವರ ವ್ಯವಹಾರ ದೊಡ್ಡದು, ವ್ಯಾಪಾರಕ್ಕೆ ಬೊಕ್ಕಸದಿಂದ 27 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ನೋಡಿದರೆ ಭಯವಾಗುತ್ತದೆ. ಕಂಟ್ರೋಲ್ ಕಾಲದಲ್ಲಿ ಸುಮಾರು 9 ಕೋಟಿ ರೂಪಾಯಿಗಳಿಗೆ ಲೆಕ್ಕ ಸಿಕ್ಕದೆ ಒಬ್ಬ ಅಧಿಕಾರಿ ನೇಮಕಮಾಡಿ 2-3 ವರ್ಷವಾದಮೇಲೆ ಸಾಧ್ಯವಿಲ್ಲವೆಂದು ಕೈಬಿಡಲಾಯಿತು ಈಗ 2 ವರ್ಷಗಳಲ್ಲಿ ಲಾಭ ಬಂದಿದೆ, ಮಂತ್ರಿಗಳು ಹೇಳುವುದು ಲಾಭವೂ ಇಲ್ಲ, ನಷ್ಟವೂ ಇಲ್ಲ ಎಂದು. ಇಲಾಖೆ ಬೆಳೆಯುತ್ತಲೇ ಇದೆ, ಡೈರೆಕ್ಟರ ಮೇಲೆ ಡೈರೆಕ್ಟರು, ಸಿಬ್ಬಂದಿಯಮೇಲೆ ಸಿಬ್ಬಂದಿ ಬೆಳೆಯುತ್ತಲೇ ಇದೆ. ನೀವು 47 ರೂಪಾಯಿಗಳಿಗೆ ಬತ್ತ ಕೊಂಡು 99 ಪೈಸೆಗೆ ಒಂದು ಕಿಲೋ ಕೆಟ್ಟ ಅಕ್ಕಿಯನ್ನು ಕೊಡುತ್ತೀರಿ, ಅದಕ್ಕೆ ಸೇಲ್ಸ್ ಟ್ಯಾಕ್ಸ್ ಬೇರೆ ಇದೆ. ಆದರೂ ಬೊಕ್ಕಸಕ್ಕೆ ಲಾಭ ತುಂಬಿಲ್ಲ. ಲಾಭ ಬಂದಿದೆ, ಮೊನ್ನೆ ಲೆಕ್ಕ ಕೊಟ್ಟಿದ್ದಾರೆ. ಎಷ್ಟೇ ಲಾಭ ಬಂದರೂ ಒಂದೇ ರೀತಿ ನಡೆಸುತ್ತಿದ್ದಾರೆ. ರೈತರ ಮನೆಗೆ ನುಗ್ಗಿ ಧಾನ್ಯವನ್ನು ನೀವು ಗೊತ್ತುಮಾಡುವ ಬೆಲೆಗೆ ತೆಗೆದುಕೊಳ್ಳುತ್ತೀರಿ. ಮಳೆಬೆಳೆಯಿಲ್ಲದಿದ್ದರೆ ಲೆವಿ ಇಲ್ಲ ಎಂದು ಸಚಿವರು ಹೇಳುವುದು ಬಲು ಚಂದ. ಸಣ್ಣ ರೈತರ ಹತ್ತಿರ ಹೋಗಿ ಅವರಿಗೆ ಎಷ್ಟೇ ಬೆಳೆಯಾದರೂ ಕೊಡಲೇಬೇಕೆಂದು ನಿರ್ಬಂಧಮಾಡಿ ತೆಗೆದುಕೊಂಡು ದೊಡ್ಡವರನ್ನು ಬಿಟ್ಟುಬಿಡುತ್ತಾರೆ. ಅವರ ಹತ್ತಿರ ಹೋಗುವುದಿಲ್ಲ. ಇಂಥ ಕಿರುಕುಳದ ಮತ್ತು ದಬ್ಬಾಳಿಕೆಯ ಲೇವಿ ನೀತಿಯನ್ನು ಅನುಸರಿಸುತ್ತಿರುವುದರಿಂದ ಈ ಸರಕಾರದಲ್ಲಿ ನಮಗೆ ವಿಶ್ವಾಸವಿಲ್ಲ, ಇದನ್ನು ಕೈಬಿಡಬೇಕು ಎಂದು ಹೇಳಲು ನಾನು ನಿಂತಿರುವುದು. ಇದೇ ರೀತಿ ಭೂಕಂದಾಯದ ವಿಚಾರವನ್ನು ರಾಜ್ಯಪಾಲರ ಬಾಯಿನಲ್ಲಿ ಹೇಳಿಸಿದ್ದಾರೆ. ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ. ಅನಂತರದಲ್ಲಿ ಆದರೂ ಮಾಡಿದ್ದಾರೆಯೇ ಎಂದರೆ ಅದೂ ಇಲ್ಲ. 60 ರೂಪಾಯಿಗಳ ಕಂದಾಯ ಕೊಡುತ್ತಿದ್ದುದು ಇವತ್ತು 460 ರೂಪಾಯಿಗಳ ಕಂದಾಯ ಕೊಡುವಹಾಗೆ ಹೆಚ್ಚಿಸಿದ್ದಾರೆ. ಬಾಕಿ ಇರುವುದನ್ನು ವಸೂಲುಮಾಡಿ ಒಂದು ದೊಡ್ಡ ರೀತಿಯಲ್ಲಿ ಅದನ್ನು ತುಂಬಬೇಕು ಎಂಬುದಾಗಿ ಹೇಳುತ್ತಾರೆ ಇದು ಇವರ ಕೈಲಿ ಶಕ್ಯವಿಲ್ಲ. ಆ ರೀತಿ ಮಾಡಕೂಡದು ಎಂದು ಹೇಳುವ ಮಾತಿನಲ್ಲಿ ವಚನಭ್ರಷ್ಟರಾಗಿದ್ದಾರೆ. ಒಟ್ಟಿನಲ್ಲಿ ಭೂಕಂದಾಯವನ್ನು ರದ್ದುಮಾಡಬೇಕು.

(ಶ್ರೀ ಎಸ್. ಗೋಪಾಲಗೌಡ)

4-00 P.M.

ಇನ್ನು ಭೂಸುಧಾರಣೆ ಬಗ್ಗೆ ಸುಮಾರು 20 ವರ್ಷಗಳಿಂದಲೂ ರೈತನ ಮೂಗಿಗೆ ತುಪ್ಪ ಹಚ್ಚಿ ಅವನನ್ನು ಇವತ್ತು ಕಾರಾಗೃಹಕ್ಕೆ ಪೋಲೀಸರು ಕರೆದುಕೊಂಡು ಹೋಗುವಂಥ ಕಾನೂನು ಗಳು ದೇಶದಲ್ಲಿವೆ. ಚುನಾವಣೆಗಳು ಆದಮೇಲೆ ಹೊಸದನ್ನು ಈ ರಾಜ್ಯಕ್ಕೆ ಏನು ಕೊಟ್ಟಿದ್ದಾರೆ ? ಈಗ ಅದೇ ಜನರು ಇರಬಹುದು ನೀವು ಕೊಟ್ಟ ಭರವಸೆ ಏನಾಯಿತು ? ಮಾನ್ಯ ಶ್ರೀ ಸಿದ್ಧ ವೀರಪ್ಪನವರು ಹೇಳಿದಂತೆ, ಅಮೃತಮಹಲ್ ಇತ್ಯಾದಿ ದೊಡ್ಡ ದೊಡ್ಡ ಕಾವಲುಗಳನ್ನು ಮಾರಾಟ ಮಾಡಿ ಹೆಚ್ಚಿಗೆ ದುಡ್ಡು ಮಾಡಿಕೊಂಡು ನಿಮ್ಮ ಕೆಲಸ ಮುಂದುವರಿಸಬೇಕು ಎಂದು ಇದ್ದೀರಿ. ಸಣ್ಣ ಪುಟ್ಟ ಕಂಟ್ರಾಕ್ಟರುಗಳಿಂದ ಸಿಗುವುದಿಲ್ಲ. ಮೋರಿ, ಮತ್ತು ಬಾವಿ ಕೆಲಸಗಳಿಂದ ಅಷ್ಟಾಗಿ ಸಿಗುವುದಿಲ್ಲ. 5, 10, 15 ಕೋಟಿ ರೂಪಾಯಿಗಳ ಕೆಲಸಕ್ಕೆ ಹೊಸಬ ಬಂದನೆಂದರೆ, ನೀವು ಹೇಳಿದಹಾಗೆ ಪರ್ಮಿಟ್ ಅವನಿಗೆ, ಅವನು ಹೇಳಿದ ಟರ್ಮ್ಸ್ ನಿಮಗೆ. ಬಾಕಿಯವರೂ ಹತ್ತಿರ ಯಾರೂ ಬರುವಹಾಗೆ ಇಲ್ಲ. 50 ಅಣೆ ಕಟ್ಟುವುದು ಇದೆಯೇ ಎಂದರೆ, ಹೌದು ಎಂದು ಹೇಳುತ್ತಾರೆ. ಆ ರೀತಿ ಕೇಳುವಂತಹವನನ್ನೇ ಆ ಕೆಲಸಕ್ಕೆ ಬಿಡುತ್ತಾರೆ. ಏಕೆ ಅಂದರೆ ಆ 5 ಕೋಟಿಯಲ್ಲಿ ಒಂದೂವರೆ ಕೋಟಿಯಾದರೂ ಇವರು ಹೊಡೆಯಬಹುದು. ಅದಕ್ಕೆ ಸಂಬಂಧಪಟ್ಟ ಕಾಗದಗಳನ್ನು ಬಂದೋ ಬಸ್ತುಮಾಡಿ ಪತ್ರ ಸಮೇತ ಕೊಡಬಹುದು. ಸಣ್ಣಪುಟ್ಟ ಕೆಲಸಗಳು ಕಣ್ಣಿಗೆ ಬೀಳುವುದಿಲ್ಲ. ಸಣ ಬಾವಿ, ಸಣ್ಣ ಸ್ಕೂಲು, ಸಣ್ಣ ಮೋರಿ ಕೆಲಸಗಳನ್ನು ಮಾಡುವುದಕ್ಕೆ ಇವರಿಗೆ ಆಗದು, ಸಣ್ಣ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲವೆಂದು ಹೇಳುತ್ತಾರೆ. ಇದನ್ನು ಹೇಳಲು ನನಗೆ ನಗುಬರುತ್ತದೆ. ಇವತ್ತು ಬಿರ್ಲಾರವರ ಏಜೆನ್ಸೀಸ್ ನಮ್ಮ ಮೈಸೂರು ಸಂಸ್ಥಾನದಲ್ಲಿ ಬೇಕಾದಷ್ಟು ಇವೆಯೆಂದು ನಾನು ಹೇಳಬೇಕಾಗಿದೆ. ತಾವು ಹೇಳಿದಿರಿ, ವಿಚಾರಣೆಯಾದರೆ ಇದು ಗೊತ್ತಾಗುತ್ತದೆಂದು. ಕೆಲವೊಂದು ಕೈಗಾರಿಕೆಗಳನ್ನು ಸ್ಥಾಪನೆಮಾಡಿಕೊಂಡು ಕೈಗಾರಿಕೆಗಳ ಪ್ರಗತಿಗೆ ಇಲ್ಲಿ ಧಕ್ಕೆ ತಂದಿರುವ ಜನಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಿಂದ ಕೊಟ್ಟುದುರ ಫಲವಾಗಿ ಇಲ್ಲಿ ಬೇರೆ ಯಾವ ಕೈಗಾರಿಕೆಗಳೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಇಲ್ಲಿರತಕ್ಕ ಎಚ್. ಎಂ.ಟಿ.ಯಲ್ಲಿ ಸಣ್ಣ ಕೈಗಾರಿಕೆಗಳು ಅವರ ಆಶ್ರಯದಲ್ಲಿ ಬೆಳೆಯುವ ಹಾಗಿಲ್ಲ. ಏಕೆಂದರೆ ಅವರ ನಿಯಂತ್ರಣದಿಂದ ಇದರ ಮಾರ್ಕೆಟನ್ನು ತಯಾರುಮಾಡಬೇಕು. 16 ಕೋಟಿ ರೂಪಾಯಿ ಗಳನ್ನು ನೀವು ಈಗ ಅವರಿಗೆ ಕೊಟ್ಟಿದ್ದೀರಿ. ಕ್ಷಯರೋಗ ಪೀಡಿತರಾದವರಿಗೆ ಏನು ಕೊಟ್ಟಿದ್ದೀರಿ ? ಏನೂ ಕೊಟ್ಟಿಲ್ಲ. ಅಲ್ಲಿನ ರೋಗಿಗಳು ನಾಳೆ ಸಾಯುತ್ತಾರೆ. ಅಂತಹವರಿಗೆ ಯಾವ ರೀತಿಯ ಸಹಾಯವೂ ಇಲ್ಲ. ಆದ್ದರಿಂದ ಇದು ಕೈಗಾರಿಕೆ ನೀತಿಯಲ್ಲ. ಮಾನ್ಯ ಶ್ರೀ ನಿಜಲಿಂಗಪ್ಪನವರು ಇಲ್ಲಿದ್ದರೆ ನಮಗೆ ಒಂದು ಸ್ಫೂರ್ತಿ. ಅವರ ಸಣ್ಣಕಾರು ಕತೆ ಏನಾಯಿತು ಎಂದು ಕೇಳುತ್ತೇನೆ. ಕೃಷ್ಣಾ ಮೇಲ್ದಂಡೆ ಕತೆ ಕೇಳಬೇಕೆಂದಿದೆ. ಮತ್ತು ಕಾವೇರಿ ನೀರನ್ನು ಉಪಯೋಗಿಸುವುದು ಎಲ್ಲಿಗೆ ಬರುತ್ತದೆಂದು ಕೇಳಬೇಕೆಂದಿದ್ದೆ. ಕೆಲವರು ಕೃಷ್ಣಾ ನದಿ ಹಾಗೂ ಗೋದಾವರಿ ನೀರಿನ ಪಾಲಿನ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಶ್ರೀ ನಿಜಲಿಂಗಪ್ಪ ನವರು ಅಧಿಕಾರದಲ್ಲಿರುವ ಹಿತದೃಷ್ಟಿಯಿಂದ ಶ್ರೀ ಕೆ.ಎಲ್. ರಾವ್ ಅವರಿಗೆ ಬೇಸರ ಬಾರದಂ , ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಬೇಸರವಾಗದಂತೆ, ಕೇರಳ ಮಂತ್ರಿಗಳಿಗೆ ಬೇಸರ ಬಾರದಂತೆ, ಇಂದಿರಾಗಾಂಧಿ ಮತ್ತು ನಮ್ಮ ಮುಖ್ಯ ಮಂತ್ರಿಗಳದು ಶ್ರೀ ಕೃಷ್ಣ ತುಲಾಭಾರವಾಯಿತು. ಆದಾದಮೇಲೆ ಚವಾಣರ ರಾಜ್ಯವಾಗಿತ್ತು. ಈಗ ಬ್ರಹ್ಮಾನಂದರೆಡ್ಡಿಯವರ ರಾಜ್ಯ. ಮಧ್ಯೆ ಸಿಕ್ಕಿದಂಥ ಜನರು ಬಿಜಾಪುರ ಮತ್ತು ಗುಲ್ಬರ್ಗಾದವರು. ಈ ಪ್ರದೇಶಗಳ ಜನರಿಗೆ ನೀವು ದ್ರೋಹ ಬಗೆದಿಲ್ಲವೇ ಎಂದು ಹೇಳುತ್ತೇನೆ. ಈ ಪರಿಸ್ಥಿತಿಯಾಗಿ ಅಲ್ಲಿ ನೀರು ಹೋಗುವಂಥ ಪರಿಸ್ಥಿತಿ ಬಂದರೆ ಈ ರಾಜ್ಯದ ಇತಿಹಾಸದಲ್ಲಿ ಕರಾಳ ಅಧ್ಯಾಯವಾಗುತ್ತದೆ. ಮತ್ತೆ ಅದನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಶ್ರೀ ಚನ್ನಬಸಪ್ಪನವರು ಮತ್ತು ಶ್ರೀ ನಂಜೇಗೌಡರು ಕೂಗಿದ್ದೇ ಕೂಗಿದ್ದು, ಇವರು ಉತ್ತರ ಕೊಟ್ಟಿದ್ದೇ ಕೊಟ್ಟಿದ್ದು. ಇದೇ ಮಂತ್ರಿಮಂಡಲ ಹೀಗೆಯೇ ಮುಂದುವರೆದರೆ ಈ ರಾಜ್ಯದ ಪರಿಸ್ಥಿತಿ ನಿಜವಾಗಿ ಹಾಗೂ ಶಾಶ್ವತವಾಗಿ ಅಪಾಯಕ್ಕೆ ತುತ್ತಾಗುತ್ತದೆ. ಆದ್ದರಿಂದ ನಿಮ್ಮ ನೀತಿಯನ್ನು ಬದಲಾಯಿಸಬೇಕು, ದುಂದಾಟವನ್ನು ನಿಲ್ಲಿಸಬೇಕೆಂಬುದಾಗಿ ಹೇಳುತ್ತೇನೆ. ಈಗಾಗಲೇ ಮಾನ್ಯ ಶ್ರೀ ರಾಮರಾವ್ ಅವರು ರಾಜೀನಾಮೆಯನ್ನು ಕೊಟ್ಟು ಹೋಗಿದ್ದಾರೆ. ನಾವು ನಿಮ್ಮನ್ನು ರಾಜಿನಾಮೆ ಕೊಡಿ ಎಂಬುದಾಗಿ ಕೇಳುವುದು ಹಾಸ್ಯಾಸ್ಪದ ಉಂಟುಮಾಡಿದಂತಾಗುತ್ತದೆ. ಮನುಷ್ಯತ್ವ ಇದ್ದಪಕ್ಷದಲ್ಲಿ ನಾವು ಪದೇ ಪದೇ ಹೇಳುವುದರಿಂದ ಒಂದಲ್ಲ ಒಂದುಸಾರಿ

ಮನುಷ್ಯರಂತೆ ವರ್ತಿಸುತ್ತೇವೆ. ಮಾನ್ಯ ಶ್ರೀ ರಾಮರಾವ್ ಅವರು ರಾಜೀನಾಮೆ ಕೊಡುತ್ತಾರೆಂಬುದು ಮೊದಲೇ ನಮಗೆ ಕಂಡುಬಂದಿದ್ದರೆ ನಾವು ಮಧುಗಿರಿಗೆ ಹೋಗುತ್ತಿರಲಿಲ್ಲ, ಆ ರೀತಿಯಾಗಿ ಒತ್ತಾಯವನ್ನೂ ಸಹ ಮಾಡುತ್ತಾ ಇರಲಿಲ್ಲ. ಮಾನ್ಯ ಶ್ರೀ ನಿಜಲಿಂಗಪ್ಪನವರು ಮಾನ್ಯ ಶ್ರೀ ಸಿದ್ಧವೀರಪ್ಪನವರ ಮಾತನ್ನು ಕೇಳಿದ್ದು ನನ್ನ ಕಣ್ಣೆದುರಿಗೆ ಬಂದಂತಾಗಿತ್ತು. ಅಂದಾಕ್ಷಣಕ್ಕೆ ನಾವೇನು ಗಂಡಹೆಂಡಿರೆ? ಏನೋ ಒಂದು ತತ್ವ ಇದು. ಅದನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರು ಗ್ರಹಿಸಿದ್ದರೆ ಅವರು ಇಂದೆ ರಾಜೀನಾಮೆ ಕೊಡುತ್ತಿದ್ದರು. ನಾವೇನೂ ಶಾಶ್ವತವಾಗಿ ಗೂಟ ಹೊಡೆದುಕೊಂಡು ಇರುವುದಿಲ್ಲ ಜಗತ್ತೇನೋ ಇರುತ್ತದೆ. ನಾವೆಲ್ಲರೂ ಬೇಗ ಬೇಗ ಹೋಗುತ್ತೇವೆ. ಆದರೆ ನಾವು ನಡೆದ ದಾರಿ ಆದರ್ಶವಾಗಿರಬೇಕು. ನಿಮಗೆ ಎಷ್ಟು ಕಾಲ ಹೇಳುವುದು, ಎಷ್ಟು ಸಲಹೆ ಹೇಳುವುದು, ಅಷ್ಟೂ ನಿಮಗೆ ಸಾಮಾನ್ಯ ವಿಷಯವಾಗಿದೆ. ಇದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಇಂತಹ ಅವ್ಯವಹಾರಗಳು ಇಂತಹ ನೀತಿ, ಸರ್ಕಾರದ ಬೊಕ್ಕಸವನ್ನು ಸೂರೆಮಾಡುವ ಕ್ರಮ, ಮತ್ತು ಬಡದೇಶದ ಬೊಕ್ಕಸದ ಬಗ್ಗೆ ಅಜಾಗರೂಕತೆಯಿಂದ ನೋಡುವ ಕ್ರಮ- ಇವುಗಳ ಬಗ್ಗೆ ನಾನು ಎಚ್ಚರಿಕೆ ಕೊಡುವುದಕ್ಕೆ ನಿಂತಿದ್ದೇನೆ. ಕೊನೆಯದಾಗಿ ಮತ್ತೊಂದುಸಾರಿ ಎಚ್ಚರಿಕೆ ಕೊಡುತ್ತೇನೆ. ಶ್ರೀಮಾನ್ ಸಿದ್ಧವೀರಪ್ಪನವರು ಜನತೆಗೆ ಈಗಾಗಲೇ ಕರೆ ಕೊಟ್ಟಿದ್ದಾರೆ. ಇವತ್ತು ಹತ್ತಿ ಉರಿಯುತ್ತಿದೆ ಬಂಗಾಳದಲ್ಲಿ, ಮದ್ರಾಸಿನಲ್ಲಿಯೂ ಉರಿಯುತ್ತಿದೆ. ಅದು ನಮ್ಮನ್ನು ಸುಡದೆ ಬಿಡುವುದಿಲ್ಲ. ಆದ್ದರಿಂದ ಕಾಲ ಮೀರುವುದಕ್ಕೆ ಮುನ್ನ ನೀವು ಜಾಗ್ರತರಾಗಬೇಕು. ಹೆಚ್ಚಿನ ಜವಾಬ್ದಾರಿಯನ್ನು ವಹಿಸಬೇಕು. ಈಗಾಗಲೇ ನೀವು ಮಾಡುತ್ತಿರುವ ತಪ್ಪುಗಳನ್ನು ತಿದ್ದಿಕೊಳ್ಳಬೇಕು. ಅವ್ಯವಹಾರಗಳನ್ನು ನಿಲ್ಲಿಸಬೇಕು.

ಕೊನೆಯದಾಗಿ ಸ್ಟೀಲ್ ಕೋಟಾ ಒಂದನ್ನು ಕೊಟ್ಟರಿ. 10 ಸಾವಿರ ರೂಪಾಯಿಗಳ ಕೋಟಾ ಅವನ ಹತ್ತಿರ ಇದ್ದರೆ ಸಾಕು. ಅವನು ಯಾವ ಸ್ಟೀಲ್ ವ್ಯಾಪಾರ ಮಾಡುವವನಾಗಿರಬೇಕಾಗಿಲ್ಲ, ಈ ಸ್ವಾಮಿಗಳ ಕೃಪೆ ಇದ್ದರೆ ಸಾಕು, ಸ್ಟೇನ್‌ಲೆಸ್ ಸ್ಟೀಲ್ ಪರ್ಮಿಟ್ ಬಂದು ಬಿಡುತ್ತದೆ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಮಾತನಾಡುತ್ತಾ ಸಾಮಾನ್ಯವಾಗಿ ಒಬ್ಬ ರೈತ 10 ಸಾವಿರ ರೂಪಾಯಿಗಳನ್ನು ದುಡಿಯಬೇಕಾದರೆ, ಎಷ್ಟು ಸಾವಿರ ಎಕರೆಯನ್ನು ಮಾಡಬೇಕು. ಎಷ್ಟು ಹಣವನ್ನು ಬಂಡವಾಳ ಹಾಕಬೇಕು ಎಂದು ಹೇಳಿದರು. ನಿಮ್ಮಲ್ಲಿ ಸ್ಟೇನ್‌ಲೆಸ್ ಸ್ಟೀಲ್ ಕೋಟಾ ಇದೆ, ನಿಮ್ಮ ಹತ್ತಿರ ಇನ್ನೂ ಏನೇನೋ ಇದೆಯೆಂದು ಹೇಳುತ್ತಾ ಈ ದೇಶದ ಆಸ್ತಿ ನಿಮ್ಮ ಆಸ್ತಿಯಾಗಿದೆ. ನಿಮಗೆ ಅನುಕೂಲವಾದ ಕಾನೂನುಗಳು, ಆಜ್ಞೆಗಳು, ನೀತಿ ನಿಯಮಗಳನ್ನು ಹೊರಡಿಸುವುದಕ್ಕೆ ತಕ್ಕ ಅಧಿಕಾರಿಗಳೂ ಇದ್ದಾರೆ. ಸ್ಟೇನ್‌ಲೆಸ್ ಸ್ಟೀಲಿನಲ್ಲಿ ಕೆಲಸ ಮಾಡತಕ್ಕ ಯಾವ ಕೆಲಸಗಾರನು ಇಲ್ಲದಿದ್ದರೂ ಅಂಥಾ ಒಬ್ಬ ವ್ಯಕ್ತಿಗೆ ಒಂದು ಹತ್ತು ಸಾವಿರ ರೂಪಾಯಿನ ಒಂದು ಸ್ಟೇನ್‌ಲೆಸ್ ಸ್ಟೀಲಿನ ಕೋಟ ಕೊಡುವುದು. ಯಾರಿಗೆ ಅಂದರೆ ಈ ಮಂತ್ರಿಮಂಡಲಕ್ಕೆ ಯಾರ ಮೇಲೆ ಇವರ ಒಂದು ಸಹಾನುಭೂತಿ ಇದೆಯೋ ಅಂಥಾ ವ್ಯಕ್ತಿಗೆ. ಕಾರಣ ಏನೆಂದರೆ ದೇಶದಲ್ಲಿರತಕ್ಕ ಆಸ್ತಿಯೆಲ್ಲಾ ಈ ಮಂತ್ರಿ ಮಂಡಲದ್ದೇ ಆಗಿದೆ, ಮೇಲಾಗಿ ಇವರಿಗೆ ಸರಿಯಾಗಿ ತಾಳ ಹಾಕತಕ್ಕ ಅಧಿಕಾರಿಗಳೂ ಇದ್ದಾರೆ. ಇವರು ಹೇಳಿದಂತೆ ಅವರು ಆರ್ಡರನ್ನು ಹೊರಡಿಸುತ್ತಾರೆ. ಆದರೆ ಈಗಾಗಲೇ ನನ್ನ ಮಾನ್ಯ ಮಿತ್ರರೊಬ್ಬರು ಹೇಳಿದಂತೆ ಇನ್ನು ಈ ಆಡಳಿತ ದೇಶದಲ್ಲಿ ಬಹಳ ದಿನ ಇರುವುದಿಲ್ಲ. ಈ ಯುಗ ಕಳೆದ ಕೂಡಲೇ ಬರತಕ್ಕ ಯುಗ ಏನಿದೆ ಅದು ವಿಚಾರಣೆಯ ಯುಗ. ಅದನ್ನು ಅರಿಯದೆ ಈ ದಿವಸ ನಾನು ಮುಖ್ಯ ಮಂತ್ರಿ, ಈ ಸ್ಟೇನ್‌ಲೆಸ್ ಸ್ಟೀಲ್ ಇತ್ಯಾದಿ ಕೋಟಗಳೆಲ್ಲಾ ಇರುವುದು ಕೇವಲ ನನ್ನ ಅಣ್ಣ, ನನ್ನ ತಮ್ಮ, ನನ್ನ ಬಂಧುಬಳಗಕ್ಕೇ ಎಂದು ಅವರು ಅವನ್ನೆಲ್ಲಾ ಯಾರು ಯಾರಿಗೆ ಬೇಕೋ ಅವರಿಗೇ ಕೊಡಲಿ. ಆದರೆ ಮುಂದೆ ಬರತಕ್ಕ ವಿಚಾರಣೆಯ ಯುಗದಲ್ಲಿ ಈ ವಿಚಾರಗಳ ಬಗ್ಗೆ ಒಂದು ಆಯೋಗವನ್ನು ನೇಮಕ ಮಾಡಿ, ಆ ಕಾಲಕ್ಕೆ ಇವರಿಲ್ಲದಿದ್ದರೆ ಇವರ ಸಂತತಿ ಯಾರಾದರೂ ಇದ್ದರೆ, ಅವರನ್ನೇ ಎಳೆದು ಗಲ್ಲಿಗೆ ಹಾಕಿ ನೀವು ಇಷ್ಟರಿಂದಲೇ ಸಮಾಧಾನ ಪಟ್ಟು ಕೊಳ್ಳಬೇಕೆಂದು ಆ ಹಳ್ಳಿಯ ಜನರಿಗೆ ಹೇಳುವಂಥಾ ಒಂದು ಕಾಲ ಬೇಗನನ್ನಿಹಿತವಾಗುತ್ತದೆ. ಇವರೇ ಇನ್ನೂ ಆಡಳಿತದಲ್ಲಿದ್ದರೆ ನಿಮ್ಮ ಅಂಗೀ ಬಟ್ಟೆಯನ್ನೂ ಸಹಾ ತೆಗೆದುಕೊಂಡ ಹೋಗುತ್ತಾರೆಂದು ಹೇಳಿದರು. ಅಷ್ಟೇ ಅಲ್ಲ ನಾನು ಹೇಳುತ್ತೇನೆ ಇವರು, ಜನರ ಚರ್ಮವನ್ನು ಸಹಾ ಸುಲಿದುಕೊಂಡು ಹೋಗುತ್ತಾರೆ ಎಂದು. ಇವರ ಕಾಲದಲ್ಲಿ ಫೈಲುಗಳಿಗೆ ಬೆಂಕಿಯನ್ನು ಹಚ್ಚಿಸಿದ್ದಾರೆ. ಅನೇಕ ಫೈಲುಗಳನ್ನು ಗೈರುಹಾಜರಿ ಮಾಡಿದ್ದಾರೆ, ಸೆಷನ್ ಕೋರ್ಟಿಗೆ ಹಾಜರ್ಮಾಡಿದ್ದ ಫೈಲನ್ನೇ ಪರಾರಿಯಾಯಿತು ಅನ್ನುವಾಗ ಇವರ ಕಾಲದಲ್ಲಿ ಇನ್ನು ಯಾವುದಕ್ಕೆತಾನೆ ಸುರಕ್ಷತೆ ಇದೆ? ಮನೆಯವರ ಮಾನದ ವಿಚಾರ, ನಮ್ಮ ಮಾನದ ವಿಚಾರ, ಹಾಗೂ ನಮ್ಮ ಆಸ್ತಿಪಾಸ್ತಿಗಳ ರಕ್ಷಣೆಯ ವಿಚಾರದಲ್ಲಿ ಇಂದಿನ ಸರ್ಕಾರ ಒಂದು ರಕ್ಷಣೆಯನ್ನು ನೀಡುತ್ತದೆ ಎಂಬ ಭರವಸೆ—ವಿಶ್ವಾಸ ಈ ದಿವಸ ಯಾರಲ್ಲೂ ಉಳಿದಿಲ್ಲ, ಈ ವಿಚಾರವನ್ನು ತಿಳಿಸಲು

(ಶ್ರೀ ಎಸ್ ಗೋಪಾಲಗೌಡ)

ನಾವೀದಿವಸ ಈ ಅವಿಶ್ವಾಸದ ಠರಾವನ್ನು ಇಲ್ಲಿ ಮಂಡಿಸಿದ್ದೇವೆ. ಈ ದಿವಸ ನಾವು ಒಂದು ಸೌಜನ್ಯಕ್ಕೆ ಹೆದರಿ ಹೇಳಬೇಕಾಗಿದ್ದ ಇನ್ನೂ ಎಷ್ಟೋ ವಿಷಯಗಳನ್ನು ಹೇಳದೆ ಕೆಲವನ್ನು ಮಾತ್ರ ಹೇಳಿದ್ದೇವೆ. ಹೀಗೆ ತಮ್ಮ ಸೌಜನ್ಯಕ್ಕೆ ಕಟ್ಟುಬಿದ್ದು ಶ್ರೀಮಾನ್ ಸಿದ್ಧವೀರಪ್ಪನವರು ನನ್ನ ಕೈಲಿ ಹೇಳಿದ್ದ ಎಷ್ಟೋ ವಿಷಯಗಳನ್ನು ಅವರು ಈ ಸಭೆಯಲ್ಲಿ ಈ ದಿವಸ ಹೇಳದೆ ಕೈ ಬಿಟ್ಟಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರಿಗೆ ಬೆಂಬಲವಿತ್ತ ಜನತೆ ಈ ದಿವಸ ಇವರ ಆಡಳಿತ ದೇಶದಲ್ಲಿ ಯಾರಿಗಾಗಿ ನಡಿಯುತ್ತಿದೆ, ಇವರು ರಾಜ್ಯಕಾಗಿ ಕಷ್ಟಪಡುತ್ತಿದ್ದಾರೆಯೇ, ರಾಷ್ಟ್ರಕ್ಕಾಗಿ ಕಷ್ಟ ಪಡುತ್ತಿದ್ದಾರೆಯೇ ಎಂಬುದನ್ನೆಲ್ಲಾ ಆಲೋಚಿಸತಕ್ಕ ಕಾಲ ಬಂದಿದೆ. ಜನರು ಬಹಳ ಕಷ್ಟದಲ್ಲಿ ಕಣ್ಣೀರಿಡುತ್ತಿದ್ದಾರೆ. ಅದಿಕಾರ ಯಾರಿಗೂ ಶಾಶ್ವತವಾದ್ದಲ್ಲ. ನಿಮಗೇನಾದರೂ ಆ ಜನರ ಬಗ್ಗೆ ಕಿಂಚಿತ್ ಕರುಣೆ ಇದ್ದರೆ ಅವರ ಬವಣೆಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿ ಅವರಿಗೆ ಒಳ್ಳೆಯ ವಿದ್ಯಾಬುದ್ಧಿಗಳನ್ನು ಕೊಡಲಿ, ಅವರಲ್ಲಿ ಕಷ್ಟ ಕಣ್ಣೀರಿಡುವುದನ್ನು ಒರೆಸಲಿ ಎಂದು ಅವರು ಇವರಿಗೆ ಬೆಂಬಲ ಕೊಟ್ಟಿರುತ್ತಾರೆ. ಅದನ್ನು ಅರಿತು ನಡೆಯಬೇಕೆಂದು ನಾವು ಒತ್ತಿ ಒತ್ತಿ ಹೇಳಿದ್ದಾಯಿತು.

[MR. SPEAKER in the Chair]

ಜನರ ಕಷ್ಟಸುಖಗಳೇನೆಂಬುದನ್ನು ನಾವು ಇಷ್ಟು ಹೇಳಿದಾಗ್ಯೂ ಶ್ರೀಮಾನ್ ಜತ್ತಿಯವರು ನಾವು ಲೆವಿ ಹಾಕಿದ್ದೇ ಸೈ ಎಂದು ಅವರು, ಶ್ರೀಮಾನ್ ರಾಚಯ್ಯನವರು ನಾವು ಕಂದಾಯ ಹಾಕಿದ್ದೇ. ಸೈ ಎಂದು ಅವರೂ ಮತ್ತು ಶ್ರೀಮಾನ್ ಹೆಗ್ಗಡೆಯವರು ನಾವು ಟ್ಯಾಕ್ಸನ್ನು ಹಾಕಿದ್ದೇ ಸೈ ಎಂದು ಅವರು ಹೇಳುತ್ತಾ ಹೋದರೆ ದೇಶದಲ್ಲಿ ಮುಂದೇನಾಗುತ್ತದೆಂಬುದನ್ನು ನಾನು ಈಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಈ ದಿವಸ ಇರತಕ್ಕ ಮಂತ್ರಿಮಂಡಲಕ್ಕೆ ರಾಜ್ಯದ ಜನತೆಯ ಹಿತವನ್ನೂ ಬದುಕಿಸಿ, ತಾವೂ ಬದುಕಬೇಕೆಂಬ ಕೆಲಸ ಕಾರ್ಯಗಳನ್ನು ಮಾಡತ್ತಾರೆಂಬ ವಿಶ್ವಾಸ ಜನತೆಗೆ ಈ ಮಂತ್ರಿಮಂಡಲದಲ್ಲಿಲ್ಲ ಅಂಥಾ ವಿಶ್ವಾಸವಿಲ್ಲ—ವಿಶ್ವಾಸವಿಲ್ಲ—ವಿಶ್ವಾಸವಿಲ್ಲ ಎಂದು ಮೂರು ಸಾರಿ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಸ್. ಗೌಡ (ದೇವನಹಳ್ಳಿ). —ಮಾನ್ಯ ಅಧ್ಯಕ್ಷರೇ, ಈ ದಿವಸ ವಿರೋಧ ಪಕ್ಷದವರು ತಂದಿರತಕ್ಕ ಹುರುಳಿಲ್ಲದ-ತಿರುಳಿಲ್ಲದ ಈ ನಿರ್ಣಯವೇನಿದೆ ಇದು ಒಟ್ಟಾರೆ ತಿರಸ್ಕಾರ ಮಾಡುವುದಕ್ಕೆ ಒಂದು ಯೋಗ್ಯವಾದ ನಿರ್ಣಯವಾಗಿದೆಯೆಂದು ನನ್ನ ಹಲವು ಮಿತ್ರರು ಹೇಳುತ್ತಿರುವ ವಿಷಯವನ್ನು ನಾನು ಕೇಳಿದ್ದೇನೆ, ಇವರು ಮಂಡಿಸಿರತಕ್ಕ ನಿರ್ಣಯದಲ್ಲಿ ಏನಿದೆ ಏನಿಲ್ಲ ಅನ್ನುವುದೇ ಅರ್ಥವಾಗುತ್ತಿಲ್ಲ. ಅದಕ್ಕಾಗಿ ನಮ್ಮ ಪಕ್ಷದ ಸದಸ್ಯರಲ್ಲಿ ಈ ಬಗ್ಗೆ ಮಾತನಾಡಲು ಯಾರಲ್ಲೂ ಒಂದು ಉತ್ಸಾಹವೇ ಕಾಣುತ್ತಿಲ್ಲ. ನಮ್ಮ ಸ್ನೇಹಿತರನೇಕರು ಹೇಳುತ್ತಿರುವಂತೆ ಈ ಹಿಂದೆ ವಿರೋಧಪಕ್ಷದ ಸದಸ್ಯರುಗಳು ಏನೇನು ಮಾತನಾಡಿದ್ದರೋ ಅದೇ ವಿಚಾರಗಳನ್ನು ಮತ್ತೆ ಈ ಅವಿಶ್ವಾಸ ನಿರ್ಣಯದ ಮೇಲೂ ಮಾತನಾಡುತ್ತಿದ್ದಾರೆ. ಕೆಲವು ಸ್ನೇಹಿತರು ಹೇಳುವ ಹಾಗೆ ಈ ನಿರ್ಣಯದಲ್ಲ ನಾವು ಅಂಥಾ ಯಾವ ಮಹತ್ತರವಾದ ಒಂದು ವಿಷಯವನ್ನೂ ಕಾಣುತ್ತಿಲ್ಲ. ಇವರು ಮಾಡತಕ್ಕ ವಾವದಲ್ಲಿ ಒಂದು ಎದ್ದು ಕಾಣತಕ್ಕ ವಿಚಾರ ಎಂದರೆ, ಅದು ಆ ಮಧುಗಿರಿಗೆ ಸಂಬಂಧಪಟ್ಟ ವಿಷಯ. ಆದರೆ ಕೇರಳ, ಮದ್ರಾಸ್, ಉತ್ತರ ಪ್ರದೇಶ ಇತ್ಯಾದಿ ಕಡೆಗಳಲ್ಲಿ ಅನೇಕ ಮಹತ್ತರವಾದ ಘಟನೆಗಳು ನಡೆದಿವೆ. ಅಲ್ಲಿಯ ಸರ್ಕಾರಗಳು ಅದಕ್ಕೆ ಕಿವಿಗೊಡಲಿಲ್ಲ. ಕೇರಳದಲ್ಲಿ ಮಹಾಜನ್‌ರವರ ವರದಿ ಹೊರಬಿದ್ದ ನಂತರ ಅಲ್ಲಿ ಗಲಭೆ ನಡೆದು ಫೈರಿಂಗಾಯಿತು. ಅದರಲ್ಲಿ ಇಬ್ಬರು ವಿದ್ಯಾರ್ಥಿಗಳು ಗುಂಡಿನಬಾಯಿಗೆ ತುತ್ತಾದರು. ಅಂಥ ಸಂದರ್ಭದಲ್ಲೂ ಕೂಡ ಅಲ್ಲಿನ ಕೇರಳ ಸರ್ಕಾರ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕ ಮಾಡಲಿಲ್ಲ. ಅಲ್ಲಿಯ ಸರ್ಕಾರ ನ್ಯಾಯದ ಕೂಗಿಗೆ ಕಿವಿಗೊಡಲಿಲ್ಲ. ಆದರೆ ನಮ್ಮ ಸರ್ಕಾರ ಇಲ್ಲಿ ಆ ಮಧುಗಿರಿಯಲ್ಲಿ ನಡೆದಿರತಕ್ಕ ಸತ್ಯಾಂಶವೇನೆಂಬುದನ್ನು ತಿಳಿಯಲು ಒಂದು ಜುಡಿಷಿಯಲ್ ಎನ್‌ಕ್ವೈರಿ ಕಮಿಟಿಯನ್ನು ನೇಮಕಮಾಡುವುದಾಗಿ ಒಪ್ಪಿದೆ. ಇನ್ನು ಆದನ್ನು ಬಿಟ್ಟರೆ ಮತ್ತೆ ಭೂಕಂದಾಯವನ್ನು ತೆಗೆಯುತ್ತೇವೆಂದು ಹೇಳಿದ್ದವರು ತೆಗೆಯಲಿಲ್ಲ ಎಂದು ಅದನ್ನೇ ಒಂದು ದೊಡ್ಡ ಪೆಡಂಭೂತವನ್ನಾಗಿ ಮಾಡಿದ್ದಾರೆ. ಅವಿಶ್ವಾಸದ ಕೂಗುಗಳಲ್ಲಿ ಇದೂ ಕೂಡ ಒಂದಾಗಿದೆ. ಜನರು ಭೂಕಂದಾಯವನ್ನು ಕೊಡುವುದಕ್ಕೆ ತಯಾರಾಗಿದ್ದರೂ, ವಿರೋಧ ಪಕ್ಷದವರು ಕಂದಾಯವನ್ನು ಕೊಡಬಾರದೆಂದು ಹೇಳುತ್ತಿದ್ದರೂ ಜನರು ಒಂದಕ್ಕೆ ಎರಡುಪಟ್ಟು ಕಂದಾಯ ಕೊಡಲು ಸಿದ್ಧರಾಗಿದ್ದಾರೆ. ನಾವು ಕಂದಾಯ ಕೊಡುವುದಿಲ್ಲವೆಂದು ಹೇಳತಕ್ಕ ಜನರು ಯಾರೂ ಇಲ್ಲ. ಇನ್ನು ಇವರು ಎತ್ತಿರುವ ಕೂಗಿನಲ್ಲಿ ಅಭಾವ ಪರಿಸ್ಥಿತಿ ಒಂದಾಗಿದೆ. ದೇಶ

ದಲ್ಲಿ ಇಲ್ಲಿಯವರೆಗೂ ಮಳೆಗಾಲ, ಛಳಿಗಾಲ ಮತ್ತು ಬೇಸಿಗೆ ಕಾಲ ಎಂದು ಮೂರು ಕಾಲಗಳಿದ್ದುದು ಹೋಗಿ ಈಗ ಕಾಂಗ್ರೆಸ್ಸಿನವರ ಕಾಲ ಎಂಬುದೊಂದು ಕಾಲ ಬಂದಿದೆ ಎಂದು ಹೇಳಿದ್ದಾರೆ ಶ್ರೀ ಗೋಪಾಲ ಗೌಡರು. ಆದರೆ ದೇಶದಲ್ಲಿ ಈ ಬರಗಾಲ ನಮಗಾಗಿ ಬಂದಿಲ್ಲ ಇದು ಹಿಂದೆಯೂ ಇತ್ತು, ಈಗಲೂ ಇದೆ.

ನಮ್ಮ ಸ್ನೇಹಿತರುಗಳು ಒಂದು ಕಡೆ ಹಾಗೆ ಹೇಳುತ್ತಾರೆ, ಇನ್ನೊಂದು ಕಡೆ ಹೀಗೆ ಹೇಳುತ್ತಾರೆ. ಇವರು ತಂದಿರತಕ್ಕ ಅವಿಶ್ವಾಸ ನಿರ್ಣಯ ಎಷ್ಟರಮಟ್ಟಿಗೆ ಹಾಸ್ಯಾಸ್ಪದವಾಗುತ್ತದೆ. ಎನ್ನುವುದಕ್ಕೆ ನಮ್ಮ ಸ್ನೇಹಿತರು ಹೇಳಿರುವುದನ್ನೇ ತೆಗೆದುಕೊಂಡು ಹೇಳುತ್ತೇನೆ. ಅವರು ಒಂದು ಕಡೆ ಆಡಳಿತದ ವಿಚಾರವನ್ನು ಹೇಳುತ್ತಾರೆ. ಈ ಆಡಳಿತ 15—20 ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಕೇವಲ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿರುವ ಕಾಲದಲ್ಲಿ ಆದದ್ದು ಹೆಚ್ಚಾಗಿಲ್ಲ. ಒಂದೇ ಕಾಲದಲ್ಲಿ ಎಲ್ಲವನ್ನೂ ಪರಿಪೂರ್ಣ ಮಾಡತಕ್ಕ ಮಟ್ಟದ್ದೂ ಅಲ್ಲ. ಶ್ರೀ ವಾಟಾಳ್ ನಾಗರಾಜ್ ಅವರು ಮುಖ್ಯ ಮಂತ್ರಿಗಳಾದರೆ ಇಷ್ಟು ದಿನದಲ್ಲಿ, ಇಷ್ಟು ಗಂಟೆಗಳಲ್ಲಿ, ರಾಮ ರಾಜ್ಯ ಸ್ಥಾಪಿಸುತ್ತೇವೆ ಎಂದು ಹೇಳಲಿ. ಯಾವ ಪಕ್ಷವೇ ಆಗಲಿ ಅದು ಆರ್ಥಿಕ ಸಾಮಾಜಿಕ ರಾಜಕೀಯ ಗುರಿಗಳನ್ನು ಇಟ್ಟುಕೊಂಡು ಜನಗಳಿಗೆ ಅನುಕೂಲವಾಗಬೇಕು ಎನ್ನುವ ಆದರ್ಶ ಆಡಳಿತವನ್ನು ನಿರ್ವಹಣೆ ಮಾಡಿಕೊಂಡು ಹೋಗಬೇಕು. ಕೇವಲ ಶ್ರೀಮಾನ್ ನಿಜಲಿಂಗಪ್ಪನವರ ಸಂಬಂಧಿಗಳು ಇಡೀ ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಇಲ್ಲ. ಈ ಮನೆಯ ಕಾಂಗ್ರೆಸ್ ಮತ್ತು ವಿರೋಧ ಪಕ್ಷದ ಎಲ್ಲ ಸದಸ್ಯರಿಗೂ ಸೇರಿದಂಥ ಸಂಬಂಧೀಕರು, ಸ್ನೇಹಿತರು ಎಲ್ಲ ಇಲಾಖೆಗಳಲ್ಲಿಯೂ ಇದ್ದಾರೆ. ಅಲ್ಲೊಬ್ಬ ಇಲ್ಲೊಬ್ಬ ಯಾವನೋ ಕಂಟ್ರಾಕ್ಟ್ ಕೆಲಸ ಮಾಡುತ್ತಿರಬಹುದು. ಆದರೆ ಶ್ರೀಮಾನ್ ನಿಜಲಿಂಗಪ್ಪನವರ, ಲೋಕೋಪಯೋಗಿ ಮಂತ್ರಿಗಳ, ರಾಮಕೃಷ್ಣ ಹೆಗಡೆಯವರ ಅಥವಾ ಇತರ ಮಂತ್ರಿಗಳ ಸಂಬಂಧೀಕರಿಗೆ ಹೆಚ್ಚಿನ ಅನುಕೂಲವನ್ನು ಕಲ್ಪಿಸಿಕೊಡುವುದೇನೂ ಇಲ್ಲ. ಯಾವ ಸದಸ್ಯರೇ ಆಗಲೀ, ತಮ್ಮ ಸಂಬಂಧೀಕರು, ಮಕ್ಕಳು, ಸ್ನೇಹಿತರು, ಒಂದು ಸಿನಿಮಾ ನಡೆಸುವುದು ಒಂದು ವ್ಯಾಪಾರ ಮಾಡುವುದು, ಒಂದು ಉದ್ಯಮದಲ್ಲಿ ತೊಡಗಿರುವುದು, ಹೀಗೆ ಇರುವಾಗ ಅದನ್ನು ತಡೆಗಟ್ಟಿ ನಿಲ್ಲಿಸುವುದಕ್ಕೆ ಯಾರೂ ಹೋಗುವುದಕ್ಕಾಗುವುದಿಲ್ಲ. ಇಂಥ ಸಾಮಾನ್ಯ ವಿಷಯವನ್ನು ತೆಗೆದುಕೊಂಡು ಒಂದು ಮಂತ್ರಿಮಂಡಲದಮೇಲೆ ಆದಾಗಿಲ್ಲ, ಇದಾಗಿಲ್ಲ, ಎಂದು ಹೇಳುವುದು ಸರಿಯಲ್ಲ. ಶ್ರೀ ವಾಟಾಳ್ ನಾಗರಾಜ್ ಅವರೂ, ನಾನೂ ನಿನ್ನೆ ಮೊನ್ನೆಯವರು. ನನಗೆ 30 ವರ್ಷ ವಯಸ್ಸಾಗಿದೆ. 20 ವರ್ಷಗಳ ಕೆಳಗೆ ಈ ರಾಜ್ಯ ಹೇಗೆ ಇತ್ತು, ಯಾವ ಮಟ್ಟದಲ್ಲಿ ಆರ್ಥಿಕ ಪರಿಸ್ಥಿತಿ ಇತ್ತು, ಯಾವ ಮಟ್ಟದಲ್ಲಿ ಅಭಿವೃದ್ಧಿಗೆ ಬರಬೇಕಾಗಿತ್ತು, ಈ 20 ವರ್ಷಗಳಲ್ಲಿ ಭಾರತ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಎಷ್ಟು ಅಭಿವೃದ್ಧಿಯಾಗಿದೆ, ಯಾವ ಮಟ್ಟದಲ್ಲಿ ಅಭಿವೃದ್ಧಿಗೆ ಬಂದಿದೆ ಎನ್ನುವ ವಿಷಯ ನನಗಾಗಲೀ, ಶ್ರೀ ವಾಟಾಳ್ ನಾಗರಾಜ್ ಅವರಿಗಾಗಲೀ ಗೊತ್ತಿರುವುದಕ್ಕಿಂತ ಹೆಚ್ಚಾಗಿ ನಿಮ್ಮಂಥ ಹಿರಿಯರಿಗೆ ಗೊತ್ತಿದೆ. 30 ಕೋಟಿ ಇದ್ದ ಜನಸಂಖ್ಯೆ ಈ 20 ವರ್ಷಗಳಲ್ಲಿ 55 ಕೋಟಿಗೆ ಏರಿದೆ. ಇದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರಾಗಲೀ ಅಥವಾ ಬೇರೆ ಕಾಂಗ್ರೆಸ್ಸಿನವರಾಗಲೀ ಕಾರಣರೇ ? ಇಂಥ ಸಂದರ್ಭದಲ್ಲಿ ವಿದ್ಯಾಭ್ಯಾಸವನ್ನು ಕೊಡುವುದು ತಪ್ಪೇ ? ಬೃಹದಾಕಾರವಾಗಿ ನಿರುದ್ಯೋಗಿಗಳಾಗಿರುವ ಇಂಜನಿಯರುಗಳಿದ್ದಾರೆ, ಡಾಕ್ಟರುಗಳಿದ್ದಾರೆ, ಒಪ್ಪಿಕೊಳ್ಳೋಣ.

ಶ್ರೀ ಎಸ್. ಗೋಪಾಲಗೌಡ.—ಜನಸಂಖ್ಯೆ ಜಾಸ್ತಿಯಾಗುತ್ತಿದೆ ಎಂದು ಹೇಳುತ್ತಾರೆ ಮಾನ್ಯ ಆರೋಗ್ಯ ಮಂತ್ರಿಗಳಾದ ಪುಟ್ಟಸ್ವಾಮಿಯವರು ಮಾಡಿರುವ ಒಂದು ಒಳ್ಳೆಯ ಕೆಲಸವೆಂದರೆ ಬೀಜ ಒಡೆಸುವುದು.

ಶ್ರೀ ಡಿ. ಎಸ್. ಗೌಡ.—ಇಂಥ ಸಂದರ್ಭದಲ್ಲಿ ಎಲ್ಲರಿಗೂ ಸೇರಿದಂಥ ಜನಸಂಖ್ಯೆ ವಿಷಯ, ಇಂಥವಕ್ಕೆ ಎಲ್ಲರೂ ಗಮನವನ್ನು ಹರಿಸತಕ್ಕುದು ಮುಖ್ಯವಾದುದು. ಇದರಿಂದ ದೇಶದಲ್ಲಿ ಆರ್ಥಿಕ, ಸಾಮಾಜಿಕ, ನಿರುದ್ಯೋಗ ಮುಂತಾದ ಎಲ್ಲ ಸಮಸ್ಯೆಗಳೂ ಬೃಹದಾಕಾರವಾಗಿ ಎದ್ದು ನಿಲ್ಲುತ್ತವೆ. ಇದು ಎಲ್ಲರನ್ನೂ ಕಾಡತಕ್ಕ ಒಂದು ಭೂತ ಎನ್ನುವುದನ್ನು ಎಲ್ಲರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ನಾನು ಒಂದು ರೈತ ಕುಟುಂಬದಿಂದ ಬಂದಿರುವವನು. ನಾನು ಇಡೀ ದೇಶವನ್ನು ಸುತ್ತಿ ಬಂದಿಲ್ಲ, ಅಷ್ಟೊಂದು ಪರೀಕ್ಷೆ ಮಾಡಿಲ್ಲ. ನನ್ನ ತಾಲ್ಲೂಕಿನಲ್ಲಿ ನನಗೆ ತಿಳಿದಮಟ್ಟಿಗೆ ಹಿಂದೆ ಹೇಗಿತ್ತು ಈಗ ಹತ್ತಿಪ್ಪತ್ತು ವರ್ಷಗಳಲ್ಲಿ ಯಾವ ಮಟ್ಟದಲ್ಲಿ ಅಭಿವೃದ್ಧಿಗೆ ಬರುತ್ತಿದೆ, ಸರ್ಕಾರದಿಂದ ಬರತಕ್ಕ ಯಾವ ಅಭಿವೃದ್ಧಿಯನ್ನು ಪಡೆದು ಜನ ಮೇಲ್ಮಟ್ಟಕ್ಕೆ ಬರುತ್ತಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ದೇವನಹಳ್ಳಿ ತಾಲ್ಲೂಕು ಮಲೆನಾಡಿನಂತೆ ಮಳೆ ಬೀಳತಕ್ಕ ಪ್ರದೇಶ , ಮಳೆ ಕಾಣ

(ಶ್ರೀ ಡಿ. ಎಸ್. ಗೌಡ)

ದಂಥ ಪ್ರದೇಶವೂ ಅಲ್ಲ. ಅದು ಮಧ್ಯಮ ವರ್ಗದ ಸ್ಥಳ. ಅಂಥ ಕಡೆ ಯಾವ ಮಟ್ಟದಲ್ಲಿ ರೈತರು ಮೇಲೆ ಬರುತ್ತಿದ್ದಾರೆ, 20 ವರ್ಷಗಳ ಹಿಂದೆ ಹೇಗೆ ಇತ್ತು ಇದನ್ನೆಲ್ಲ ನೂರು ವರ್ಷ ವಯಸ್ಸಾಗಿರುವ ನಮ್ಮ ತಾತನವರಿಂದ ಹೇಳಿಸುತ್ತೇನೆ, ಯಾರು ಬೇಕಾದರೂ ಬನ್ನಿ. ಯಾವ ಮಟ್ಟದಲ್ಲಿ ದೇಶ ಪ್ರಗತಿಗೆ ಬರುತ್ತಿದೆ ಎನ್ನುವುದನ್ನು ಯಾರೂ ಮುಚ್ಚಿಡುವುದಕ್ಕಾಗುವುದಿಲ್ಲ. ಶರಾವತಿ ಪ್ರಕರಣ, ಮತ್ತೊಂದು, ಮಗದೊಂದು, ಹೀಗೆ ರಾಜಕೀಯ ಕಾರಣದಿಂದ ಯಾರು ಏನೇ ಹೇಳಲಿ, ಶರಾವತಿ ಪ್ರಾಜೆಕ್ಟ್, ತುಂಗಭದ್ರ ಪ್ರಾಜೆಕ್ಟ್, ಕಾವೇರಿ ಪ್ರದೇಶ ಈ ಅಚ್ಚುಕಟ್ಟು ಪ್ರದೇಶದಲ್ಲಿ ವಾಸ ಮಾಡತಕ್ಕ ಸಾಮಾನ್ಯ ರೈತರುಗಳು ಬರೀ ಕಾಂಗ್ರೆಸಿನ ರೈತರಲ್ಲ. ಜನಸಾಮಾನ್ಯರು ನಮಗೂ ಓಟು ಕೊಡುತ್ತಾರೆ, ನಿಮಗೂ ಓಟು ಕೊಡುತ್ತಾರೆ. ಅವರನ್ನು ಕೇಳಿದರೆ ಸತ್ಯಾಂಶವನ್ನು ಹೇಳುತ್ತಾರೆ. ಐದು ಹತ್ತು ವರ್ಷಗಳಲ್ಲಿ ಇದ್ದಂಥ ಈ ಸರ್ಕಾರ, ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ಅಥವಾ ಉಳಿದ ಮಂತ್ರಿಗಳು ಎಲ್ಲ ಸೇರಿ ಇವತ್ತು ದೇಶದಲ್ಲಿ ಬೃಹದಾಕಾರವಾಗಿರತಕ್ಕ ಸಮಸ್ಯೆಗಳನ್ನೆಲ್ಲಾ ಎದುರಿಸಿ ಆದಷ್ಟುಮಟ್ಟಿಗೆ ನೂರಕ್ಕೆ ನೂರರಷ್ಟು ಜನತೆಯ ಕ್ಷೇಮವನ್ನು ಸಾಧಿಸಿದೆ ಎಂದು ಘಂಟಾಘೋಷವಾಗಿ ನಾನು ಹೇಳುತ್ತೇನೆ.

ಮಹಾಜನ್ ವರದಿಯ ವಿಷಯವಾಗಿ ಮಾತನಾಡುತ್ತ ಕೆಲವರು ಹೇಳಿದು, ಚವಾಣ್ ಅವರು ವರದಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳದಂತೆ ಮಾಡುತ್ತಿದ್ದಾರೆ, ಹೆಚ್ಚಿನ ಪ್ರಭಾವವನ್ನು ಕೇಂದ್ರದಲ್ಲಿ ನಮ್ಮ ಸರ್ಕಾರ ಅಥವಾ ನಮ್ಮ ನಾಯಕರಾದ ನಿಜಲಿಂಗಪ್ಪನವರು ಬೀರುವುದಕ್ಕೆ ಸಾಧ್ಯವಿಲ್ಲದೆ ನಪುಂಸಕರಾಗಿದ್ದಾರೆ ಎಂದು ಹೇಳುವಮಟ್ಟಕ್ಕು ಹೋಗಿದ್ದಾರೆ. ಮಹಾಜನ್ ಆಯೋಗವನ್ನು ನೇಮಿಸಿದಾಗ ಅದನ್ನು ಮಹಾರಾಷ್ಟ್ರದ ಜನತೆ ಸ್ವಾಗತಿಸಿತು, ಮೈಸೂರಿನ ಜನತೆ ವಿರೋಧಿಸಿತು. ಆದರೂ ಆಯೋಗವನ್ನು ನೇಮಕ ಮಾಡಿದ್ದರಿಂದ ಆಗಿರುವ ಪರಿಣಾಮ, ಫಲಿತಾಂಶ ಎಲ್ಲರಿಗೂ ಗೊತ್ತಿದೆ. ಈಗಲಾದರೂ ಅಷ್ಟೇ ಮುಂದೆ ಚವಾಣರು ಏನೇ ಪ್ರಯತ್ನ ಮಾಡಿದರೂ, ಅದರ ಬಗ್ಗೆ ನ್ಯಾಯವಾದ ತೀರ್ಮಾನವಾಗುತ್ತದೆ ಎಂದು ಹೇಳಬಹುದು. ಅದರ ಬಗ್ಗೆ ಮುಂದೆ ಕಾದು ನೋಡೋಣ.

ಇಷ್ಟು ಅಂಶಗಳನ್ನು ಸಭೆಯ ಮುಂದೆ ಇಟ್ಟು, ಈಗ ತಂದಿರಕಕ್ಕ ಅವಿಶ್ವಾಸ ನಿರ್ಣಯದಲ್ಲಿ ಯಾವ ಮಹತ್ತರವಾದ ವಿಷಯವೂ ಇಲ್ಲ. ಒಬ್ಬ ಮಾನ್ಯ ಸದಸ್ಯರು ಹೇಳಿದಂತೆ ನೀವೂ, ನಾವೂ ಪಕ್ಷದ ವಿಷಯ ಹೇಳಿಕೊಳ್ಳುವುದು ಬೇಡ. ಇವತ್ತು ಅವಿರೋಧವಾಗಿ ನಮ್ಮ ನಾಯಕರಾದ ನಿಜಲಿಂಗಪ್ಪನವರು ರಾಷ್ಟ್ರದ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವುದು ನಮ್ಮ ಕರ್ಣಾಟಕಕ್ಕೇ ಒಂದು ಸುಯೋಗ ಒದಗಿಬಂದಿದೆ ಎಂದು ಹೇಳಬಹುದು. ಹೀಗಿರುವಾಗ ಅವರ ವ್ಯಕ್ತಿತ್ವಕ್ಕೆ ಒಂದು ಕಳಂಕ ತರೋಣ ಎನ್ನುವ ದೃಷ್ಟಿಯಿಂದಲೂ ತಂದಿರತಕ್ಕ ಅವಿಶ್ವಾಸ ನಿರ್ಣಯವೇ ಹೊರತು ಇನ್ನು ಯಾವ ದೃಷ್ಟಿಯಿಂದಲೂ ತಂದದ್ದಲ್ಲ. ಆದುದರಿಂದ ಈ ಸಂದರ್ಭದಲ್ಲಾದರೂ ಎಲ್ಲ ವಿರೋಧ ಪಕ್ಷಗಳವರೂ, ಮುಖ್ಯವಾಗಿ ಎಲ್ಲ ನಾಯಕರಲ್ಲಿಯೂ ಪ್ರಾರ್ಥಿಸಿಕೊಳ್ಳುವುದು ಏನೆಂದರೆ, ಹುರುಳಿಲ್ಲದ, ತಿರುಳಿಲ್ಲದ ಮತ್ತು ಹಾಸ್ಯಾಸ್ಪದವಾದ ಈ ಅವಿಶ್ವಾಸ ನಿರ್ಣಯವನ್ನು ವಾಪಸು ತೆಗೆದುಕೊಂಡು, ಜನಕ್ಕೆ ಏನು ಮಾಡಿಕೊಡುತ್ತೇವೆಂದು ಕಂಕಣ ತೊಟ್ಟು ನಾವೂ, ನೀವೂ ಎಲ್ಲ ಬಂದಿದ್ದೇವೆ ಅದರ ಕಡೆಗೆ ಗಮನ ಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳೋಣ. ಮಳೆ ಇಲ್ಲ, ಬೆಳೆ ಇಲ್ಲ, ಜನಗಳಿಗೆ ಅನ್ನ ಬೇಕು, ಬಟ್ಟೆಬೇಕು, ವಸತಿಬೇಕು, ಉದ್ಯೋಗ ಬೇಕು, ಇಂಥ ವಿಷಯಗಳಲ್ಲಿ ರಚನಾತ್ಮಕವಾದ ಸಲಹೆಗಳಿದ್ದರೆ, ಅಂಥ ಸಲಹೆಗಳನ್ನು ಕೊಟ್ಟು ದೇಶವನ್ನು ಕಟ್ಟುವುದಕ್ಕೆ ನೆರವಾಗೋಣ.

ಒಬ್ಬ ಸ್ನೇಹಿತರು ಹೇಳಿದರು, 25 ಜನ ಹರಿಜನರು ರಾಜಕೀಯ ಭ್ರಷ್ಟಾಚಾರಕ್ಕೆ ತಯಾರಾದ್ದರೆ ಹರಿಜನರಲ್ಲಿ ಒಬ್ಬರನ್ನು ಮುಖ್ಯಮಂತ್ರಿಯನ್ನಾಗಿ ಮಾಡುತ್ತೇವೆಂದು ಹೇಳಿದರು. ಇಡೀ ಭಾರತದ ಜನತೆಗೆ, ಸಂಸ್ಕೃತಿಗೆ ಎಷ್ಟರಮಟ್ಟಿಗೆ ವಿರೋಧವಾದ ಮಾತನ್ನು ಅವರು ಆಡುತ್ತಿದ್ದಾರೆನ್ನುವುದನ್ನು ಇದರಲ್ಲಿ ಕಾಣಬಹುದು. ಜಾತ್ಯತೀತದೇಶ ಎಂದು ಸಾರುವ ದೇಶದಲ್ಲಿ, ಜಾತಿವಾರು ಸಮಾಜವನ್ನು ನಿರ್ಮಾಣ ಮಾಡುವಂಥ ಕೆಲಸಗಳನ್ನು ಮಾಡಲು ರಾಜಕೀಯ ಭ್ರಷ್ಟಾಚಾರವನ್ನು ಮಾಡಲು ಹೊರಟಿದ್ದಾರೆ. ಇದು ಸರಿಯಲ್ಲ.

ಇನ್ನು ಹೆಚ್ಚು ಹೇಳುವುದು ಬೇಡ. ವಿರೋಧ ಪಕ್ಷದ ನಾಯಕರು ಮಂಡಿಸಿರುವ ಅವಿಶ್ವಾಸ ನಿರ್ಣಯದಲ್ಲಿ ಯಾವ ಮಹತ್ತರವಾದ ವಿಷಯಗಳೂ ಇಲ್ಲ, ಅದರಲ್ಲಿ ಹುರುಳಿಲ್ಲ, ತಿರುಳಿಲ್ಲ, ಇಂಥ ಹಾಸ್ಯಾಸ್ಪದವಾದ ನಿರ್ಣಯವನ್ನು ಈಗಲಾದರೂ ವಾಪಸು ತೆಗೆದುಕೊಳ್ಳಬೇಕೆಂದು ಹೇಳಿ, ಶ್ರೀಮಾನ್ ನಿಜಲಿಂಗಪ್ಪನವರ ನಾಯಕತ್ವದಲ್ಲಿರುವ ಮಂತ್ರಿಮಂಡಲದಲ್ಲಿ ವಿಶ್ವಾಸವನ್ನು ಸೂಚಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

4-30 P.M.

† ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ಅಧ್ಯಕ್ಷರೇ, ಈ ಅವಿಶ್ವಾಸ ನಿರ್ಣಯ ಎರಡು ದಿವಸಗಳಿಂದಲೂ ಚರ್ಚೆಯಾಗುತ್ತಾ ಇದೆ. ನಮ್ಮಲ್ಲಿ ವಿಶ್ವಾಸವಿಲ್ಲವೆಂದು ಅತ್ತ ಕಡೆ ಎದ್ದು ಎದ್ದು ಹೇಳುತ್ತಿದ್ದಾರೆ, ನಾವು ಏನೂ ಅಪರಾಧಮಾಡಿಲ್ಲ. ಈ ದೇಶದಲ್ಲಿ ಜನಗಳಲ್ಲಿ ನಂಬಿಕೆ ಇದೆಯೋ ಈ ಮಂತ್ರಿಮಂಡಲಲ್ಲಿ ಎಂಬುದು ಮುಖ್ಯ ಪ್ರಶ್ನೆ. ನಮಗೇನೋ ಇವರಲ್ಲಿ ನಂಬಿಕೆ ಇಲ್ಲವೆಂದು ಹೇಳಿದ್ದೇವೆ. ನೀವು ರಾಜಕೀಯ ವಿರೋಧಿಗಳು, ಆದ್ದರಿಂದ ನೀವು ಹೇಳುವುದು ಸ್ವಾಭಾವಿಕ ಎಂದು ನಮ್ಮ ಮೇಲೆ ಅವರ ವಾದ. ಈಗ ಪ್ರಶ್ನೆ ಇರತಕ್ಕದ್ದು ಈ ಸರ್ಕಾರದ ವಿಷಯದಲ್ಲಿ, ಅವರ ನಡೆವಳಿಕೆ ವಿಷಯದಲ್ಲಿ, ಹಾಗೂ ಅವರ ಆಡಳಿತ ವಿಷಯದಲ್ಲಿ ಜನ ಏನು ಅಭಿಪ್ರಾಯ ಪಡುತ್ತಾರೆಂಬುದು. ಅದೇ ಈಗ ಹೊರಗಡೆ ಇರುವಂಥ ಪ್ರಶ್ನೆ ಜನಗಳಿಗೆ ಬೇಕಾದ್ದು ಏನು, ಈ ದೇಶದ ಆಡಳಿತವನ್ನು ಶ್ರೀ ನಿಜಲಿಂಗಪ್ಪನವರಾದರೂ ನಡೆಸಲಿ, ಅಥವಾ ಶ್ರೀ ಸಿದ್ಧವೀರಪ್ಪನವರಾದರೂ ನಡೆಸಲಿ, ಸತ್ಸಂಪ್ರದಾಯವುಳ್ಳಂಥ ಸರ್ಕಾರ ಬೇಕು. ಸತ್ಯ, ಧರ್ಮಗಳಿಂದ ಕೂಡಿ ಕೆಲಸಮಾಡುವ ಸರ್ಕಾರ ಬೇಕು, ದಕ್ಷತೆಯಿಂದ ಆಡಳಿತ ನಡೆಸುವ ಸರ್ಕಾರ ಬೇಕು, ನ್ಯಾಯ ನಿಷ್ಠೆಯಿಂದ ಕೆಲಸ ಮಾಡತಕ್ಕ ಸರ್ಕಾರ ಬೇಕು ; ಈ ದೇಶದಲ್ಲಿ ಬಡ ಜನಗಳಿಗೆ ರಕ್ಷಣೆ ಕೊಡತಕ್ಕಂಥ ಸರ್ಕಾರ ಬೇಕು. ಮುಖ್ಯವಾಗಿ ನೇರವಾಗಿ ಸತ್ಸಂಪ್ರದಾಯ ಅನುಸರಿಸುವ ಸರ್ಕಾರ ನಮಗೆ ಬೇಕು. ಶ್ರೀ ನಿಜಲಿಂಗಪ್ಪನವರೇ ಆಗಲೀ, ಶ್ರೀ ಜತ್ತಿಯವರೇ ಆಗಲೀ ಅಥವಾ ಶ್ರೀ ಸಿದ್ಧವೀರಪ್ಪನವರೇ ಆಗಲೀ ಇವರು ಜನಗಳಿಗೆ ಮುಖ್ಯವಲ್ಲ. ಈಗ ನಾವು ನಿಮ್ಮಲ್ಲಿ ನಂಬಿಕೆ ಇದೆಯೆಂದು ಹೇಳಬೇಕಾದರೆ ಜನತೆ ಸಂತುಷ್ಟಿಯಿಂದ ಇರಬೇಕು. ಅದು ಒರೆಗಲ್ಲು. ಹಾಗಿದ್ದಪಕ್ಷದಲ್ಲಿ ನಿಮ್ಮ ವಿಷಯದಲ್ಲಿ ನಂಬಿಕೆ ಇದೆಯೇ? ನಾನು ನೋಡಿದ ಹಾಗೆ ಆಡಳಿತದಲ್ಲಿ ಲೋಪದೋಷಗಳು ಅನೇಕ ಇವೆ. ಅವನ್ನು ಈಗ ಪ್ರಸ್ತಾಪ ಮಾಡುವುದಿಲ್ಲ. ಸುಮಾರು 5—6 ವರ್ಷಗಳಿಂದ ನಾವು ಆಕಡೆ ಇದ್ದಾಗಲೂ ಅಷ್ಟೇ, ಈ ಕಡೆ ಇದ್ದಾಗಲೂ ಅಷ್ಟೇ. ಒಂದೇ ಸಮನೆ ಈ ಆಡಳಿತದಲ್ಲಿರತಕ್ಕ ಮಹತ್ತರ ಲೋಪ ದೋಷಗಳನ್ನು ಎತ್ತಿ ಹಿಡಿದು ಅವುಗಳಮೇಲೆ ಬೆಳಕು ಚೆಲ್ಲಿ ನಿಮಗೆ ಚುಚ್ಚುವಂತೆ ಹೇಳಿ ಈ ದೇಶದಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಅನೇಕ ವಿಷಯಗಳನ್ನು ಅಂಕಿಅಂಶಗಳ ಆಧಾರದಿಂದ ಪ್ರಸ್ತಾಪ ಮಾಡಿದ್ದೇವೆ. 1967ನೇ ಇಸವಿ ಜೂನ್–ಜುಲೈ ತಿಂಗಳಲ್ಲಿ ನಡೆದಂಥ ಮೀಟಿಂಗ್‌ನಲ್ಲಿ ಬಹುಮುಖ್ಯವಾದಂಥ ಲೋಪದೋಷಗಳು ಅಂದರೆ, ಇಡೀ ಪ್ರಜಾಸತ್ತೆಗೆ ಧಕ್ಕೆ ತರುವ ಲೋಪ ದೋಷಗಳ ಬಗ್ಗೆ ಶಾಶ್ವತವಾಗಿ ನಮ್ಮ ವಿಷಯದಲ್ಲಿ ಕರಾಳವಾದಂಥ ಅಭಿಪ್ರಾಯ ಜನಗಳಿಗೆ ಮೂಡಲಿಕ್ಕೆ ಕಾರಣವೇನೆಂದು ಅನೇಕ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತಿಳಿಸಿದ್ದೇನೆ. ನಾನು ಈಗ ಅವನ್ನು ಪುನಃ ಇಲ್ಲಿ ಹೇಳಲಿಕ್ಕೆ ಬಯಸುವುದಿಲ್ಲ. ಒಂದು ವ್ಯಸನಕರವಾದ ಅಂಶ ವೇನೆಂದರೆ, ಇದುವರೆಗೆ ಸರ್ಕಾರದ ಮೇಲೆ ಚಾರ್ಜ್‌ಷೀಟ್ ಹಾಕುತ್ತಿದ್ದೆವು. ನಿಮ್ಮಲ್ಲಿ ಅನೇಕರು ನನ್ನ ಮಿತ್ರರು, ಸಹಪಾಠಿಗಳು. ಆದರೂ ದೇಶದ ದೃಷ್ಟಿಯಿಂದ ನೀವು ಮಾಡುವ ಅನೇಕ ಅತ್ಯಾಚಾರಗಳನ್ನು ಎತ್ತಿ ಹಿಡಿದಿದ್ದೇನೆ. ನೀವು ದಕ್ಷರಾಗಿದ್ದೀರಿ ಎಂಬುದಾಗಿ ನೀವು ಯಾವತ್ತೂ ಹೇಳಲಿಲ್ಲ, ನಿಮ್ಮ ದಕ್ಷತೆ ಜನಗಳಿಗೆ ಅರಿವು ಆಗಿಲ್ಲ : 1967ನೇ ಜೂನ್–ಜುಲೈ ತಿಂಗಳಲ್ಲಿ ಮೀಟಿಂಗ್ ನಡೆದಾಗ ಪ್ರಜಾಸತ್ತೆಗೆ ಧಕ್ಕೆ ಬರುವ ಅಂಕಿ ಅಂಶಗಳನ್ನು ನಿಮಗೆ ಎತ್ತಿ ತೋರಿಸಿದಕ್ಕೆ ಅದರಿಂದ ನನಗೆ ಒಂದು ಪ್ರತೀತಿ ಸಿಕ್ಕೀತು ಎಂದಿದ್ದೆ. ಈ ಸರ್ಕಾರದ ವಿಷಯದಲ್ಲಿ ಜನಗಳಿಗೆ ನಂಬಿಕೆ ಇಲ್ಲ. ಅಪದ್ಧವನ್ನು ನುಡಿಯತಕ್ಕ ಸರ್ಕಾರವಿದು. ಅನೇಕ ಭ್ರಷ್ಟಾಚಾರ ಹಾಗೂ ಅತ್ಯಾಚಾರಗಳಿಂದ ಕೂಡಿದ ಸರ್ಕಾರವಿದು ಎನ್ನುವುದನ್ನು ಮಾಯ ಮಂತ್ರಗಳಿಂದ ಹೇಳಲಿಲ್ಲ, ಮಾಟದಿಂದೇನೂ ಹೇಳಲಿಲ್ಲ. ಕಾಗದ ಪತ್ರಗಳನ್ನು ಈ ಸಭೆಯ ಮುಂದೆ ಇಟ್ಟು ನೀವು ಹೇಳಿದ್ದನ್ನೇ ನಿಮ್ಮ ಕೈಗೆ ಕೊಟ್ಟು ನೀವು ಇನ್ನು ಮುಂದೆ ಅಧಿಕಾರದಲ್ಲಿರುವುದಕ್ಕೆ ಲಾಯಕ್ಕಿಲ್ಲವೆಂದು ಪ್ರೂವ್ ಮಾಡಿಕೊಟ್ಟೆ ನಿಮ್ಮ ಮೇಲೆ ನನಗೇನೂ ಆಕ್ರೋಶವಿಲ್ಲ. ಈ ದೇಶದ ಜನಗಳಿಗೆ ತೊಂದರೆಯಾಗುತ್ತದೆಂದು ಹೇಳಿದೆ. ಇಷ್ಟಾದರೂ ಮಾನ್ಯ ಶ್ರೀ ಶಿವಪ್ಪನವರು ಇಲ್ಲಿಯವರೆಗೂ ಇವರನ್ನು ಆಡಳಿತದಲ್ಲಿ ಮುಂದುವರಿಸು ವುದಕ್ಕೆ ಯಾವ ರೀತಿಯಲ್ಲಿ ಅವಕಾಶವನ್ನು ಮಾಡಿಕೊಟ್ಟರು ಎಂದು ನಾನು ಅವರ ಮೇಲೆ ಈಗ ಚಾರ್ಜ್‌ಷೀಟನ್ನು ಹಾಕಬೇಕಾಗಿದೆ. ಅವರೂ ಸಹ ವಿರೋಧಪಕ್ಷದವರಲ್ಲಿ ಕ್ಷಮಾಪಣೆ ಕೇಳಬೇಕು. (ನಗು) ಅದು ಇರಲಿ.

ಇನ್ನು ಪಿ.ಡಬ್ಲ್ಯು.ಡಿ. ಮಂತ್ರಿಗಳ ವಿಚಾರವನ್ನು ಎತ್ತಿಕೊಂಡರೆ 1963ನೇ ಇಸವಿಯಲ್ಲಿ ಏನು ಹೇಳಿದ್ದರೋ ಅದನ್ನು 1967ನೇ ಇಸವಿ ಜೂನ್ ತಿಂಗಳ ಮೀಟಿಂಗ್‌ನಲ್ಲಿ ಇಲ್ಲವೆಂದು ಹೇಳು ತ್ತಿದ್ದಾರೆ. ಇಂತಹ ಒಂದು ಅಪದ್ಧವನ್ನು ಹೇಳುತ್ತಾರೆ. ಅದಕ್ಕಾಗಿ ಇವರು ಅಧಿಕಾರವನ್ನು ಬಿಟ್ಟು ತೊಲಗಬೇಕು. ಅದು ಪ್ರಜಾಸತ್ತಾತ್ಮಕವಾದ ನಡೆವಳಿಕೆ, ಗೌರವಯುತವಾದ ನಡೆವಳಿಕೆ? ನನಗೆ ಮೆಜಾರಿಟಿ ಬೆಂಬಲವಿದೆ, ನಾನೇಕೆ ರಾಜೀನಾಮೆ ಕೊಡಬೇಕು ಎಂದು ಹೇಳಿದರೆ ಹೇಗೆ? ನನ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಸ್ನೇಹಿತರು ಹೇಳಿದಂತೆ ಇವರಲ್ಲಿ ಮನುಷ್ಯತ್ವವಿದೆಯೋ ಎಂಬುದನ್ನು ಅವರಿಗೇ ಬಿಟ್ಟಿದ್ದೇನೆ. ತಮಗೆಲ್ಲರಿಗೂ ಜ್ಞಾಪಕವಿರಬಹುದು. ಹಿಂದೆ ಇಂಗ್ಲೆಂಡಿನಲ್ಲಿ ಲಾರ್ಡ್ ಪ್ರೊಫ್ಯೂಮೊ ಎಂಬ ಒಬ್ಬ ಮಂತ್ರಿ ಒಂದು ಅಪದ್ಧವಾದ ಮಾತನ್ನು ಪಾರ್ಲಿಮೆಂಟಿನಲ್ಲಿ ಹೇಳಿದರು. ಆ ಸಂದರ್ಭದಲ್ಲಿ ಯಾರೂ ಅವರನ್ನು ರಾಜೀನಾಮೆ ಕೊಡಬೇಕು ಎಂಬುದಾಗಿ ಕೇಳಲಿಲ್ಲ. ಪರಿಣಾಮ ಏನಾಯಿತು, ಅವರು ತಮ್ಮಿಷ್ಟಕ್ಕೆ ತಾವೇ ಮುಂದೆ ಬಂದು ರಾಜೀನಾಮೆ ಕೊಟ್ಟಿದ್ದಾರೆ. ಆಗ ಇದ್ದಂಥ ಮ್ಯಾಕ್‌ಮಿಲನ್ ಸರ್ಕಾರ ಪತನವಾಯಿತು. ಕೇವಲ ಒಂದು ಸುಳ್ಳು ಅಥವಾ ಆಪದ್ಧ ಹೇಳಿದ್ದಕ್ಕೆ ಅಷ್ಟಾಯಿತು. ನಿಮಗೇನಾದರೂ ಪ್ರಜಾಸತ್ತೆಯಲ್ಲಿ ನಿಜವಾಗಿ ನಂಬಿಕೆ ಇದೆಯೇ? ನಿಜವಾಗಿ ಪ್ರಜಾಸತ್ತೆಯಲ್ಲಿ ನಿಮಗೆ ಗೌರವವಿಲ್ಲವೆಂಬುದು ಅವತ್ತೇ ಪ್ರದರ್ಶನವಾಯಿತು. ಅಪದ್ಧ ನುಡಿದು ಕುರ್ಚಿಗಳಿಗೆ ಅಂಟಿಕೊಳ್ಳುವ ಈ ಸರ್ಕಾರ ಇವರ ನೀತಿ ನಿಯಮಗಳಲ್ಲಿ ಖಂಡಿತವಾಗಿಯೂ ಯಾವ ಎತಿಕಲ್ ಸ್ಟ್ಯಾಂಡರ್ಡ್ ಇಲ್ಲ. ಅವೆಲ್ಲವನ್ನೂ ಗಾಳಿಗೆ ತೂರಿದ್ದಾರೆ. ನಮಗೆ ಇರುವುದು ಒಂದೇ ಗುರಿ, ನಮಗೆ ಈಗ ಬೇಕಾಗಿರುವುದು ಅಧಿಕಾರ ಮತ್ತು ದುಡ್ಡು, ಅವನ್ನು ಸಂಪಾದನೆ ಮಾಡುವುದೇ ನಮ್ಮ ಗುರಿ, ಬಂದದ್ದು ಬರಲಿ, ಹೋಗಿದ್ದು ಹೋಗಲಿ ಎಂಬುದಾಗಿ ನೀವು ಹೇಳುವುದು ಇಡೀ ಪ್ರಪಂಚಕ್ಕೆ ಗೊತ್ತಿದೆ. ಈ ವಿಷಯ ಬರೀ ಮೈಸೂರು ರಾಜ್ಯದಲ್ಲಿ ಅಲ್ಲ, ಇಡೀ ಭರತಖಂಡದಲ್ಲಿರುವ ರಾಜ್ಯಗಳಲೆಲ್ಲಾ ಪ್ರಚಾರವಾಗಿ ನಿಮಗೆ ಒಂದು ದೊಡ್ಡ ರೆಪ್ಯುಟೇಷನ್ ಸಿಕ್ಕಿದೆ. ಇಂತಹ ರೆಪ್ಯುಟೇಷನ್ ಇರುವ ನಿಜಲಿಂಗಪ್ಪನವರ ಸರಕಾರದ ಮೇಲೆ ನಮ್ಮ ಮಾನ್ಯ ನಾಯಕರಾದ ಶ್ರೀ ಶಿವಪ್ಪನವರು ಇಂತಹ ನೋ ಕಾನ್‌ಫಿಡೆನ್ಸ್ ಮೋಷನ್‌ನ್ನು ಹೇಗೆ ತಂದರು?

It is an insult that Sri Sivappa has done today by birnging a no-confidence motion when the Government itself is enjoying a very wide reputation for inefficiency, a very wide reputation for corruption and a very wide reputation for saying falsehood to earn money and to retain power at all costs. This is the charge I have levelled against Sri Sivappa.

Sri H. SIDDAVEERPPA.—He now pleads guilty.

Sri H. M. CHANNABASAPPA.—I want him to plead guilty. Why did you allow this Government to continue which enjoys a wide reputation for its unethicals tandards?

ಇದನ್ನು ತಂದು ನನಗೂ ಅವಮಾನ ಮಾಡಿದರು. ನಿಮಗೆ ಹೇಳಲು ಏನು ವಿಷಯಗಳಿವೆ, ಎಲ್ಲ ಹಳೇ ವಿಚಾರಗಳಲ್ಲವೇ ಎಂದು ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಅನ್ನದಾನಪ್ಪ ದೊಡ್ಡಮೇಟಿಯವರು ಪ್ರಶ್ನೆ ಮಾಡಿದರು. ಈಗ ಪ್ರಶ್ನೆ ಇರತಕ್ಕದ್ದು ನೀವೇ ರಾಜ್ಯ ಮಾಡಲಿ ಅಥವಾ ಇನ್ನೊಬ್ಬರು ಮಾಡಲಿ ಜನಗಳಿಗೆ ಮುಖ್ಯವಾಗಿ ಒಳ್ಳೆಯದಾಗುವ ಯಾವ ಕಾರ್ಯವನ್ನು ಈ ಸರಕಾರದಿಂದ ನೀವು ಮಾಡಿದ್ದೀರಿ? ಅಂತಹ ಕೆಲಸಗಳನ್ನು ಮಾಡಿದ್ದೇವೆ ಎಂದು ನಿಮ್ಮ ಆತ್ಮಕ್ಕೆ ಮನವರಿಕೆಯಾಗಿದ್ದರೆ ಖಂಡಿತ ನೀವು ಏನೊಂದು ಅಡೆತಡೆ ಇಲ್ಲದೆ ಇರತಕ್ಕದ್ದು ನ್ಯಾಯ. ಈ ರಾಜ್ಯದಲ್ಲಿ ಸ್ಟೇಬಲ್ ಗವರ್ನಮೆಂಟು ಆಗಿ ಇರಬೇಕು ಮತ್ತು ಈಗ ಬೇರೆ ಕಡೆ ಇರುವ ಕಾಂಗ್ರೆಸೇತರರ ರಾಜ್ಯಗಳಲ್ಲಿ ಯಾವ ರೀತಿಯಾಗಿ ಆಡಳಿತ ನಡೆಯುತ್ತಿದೆ ಎನ್ನುವ ವಾದಕ್ಕೆ ಒಂದೇ ಒಂದು ಸುಳ್ಳಿನ ವಾದ ಎಂದು ತಿಳಿದಾಗ ಇಂಗ್ಲೆಂಡಿನಲ್ಲಿದ್ದ ಮಾಕ್‌ಮಿಲನ್ ಕ್ಯಾಬಿನೆಟ್ಟಿನಲ್ಲಿ ಇದ್ದ ಮಂತ್ರಿಗಳಾದ ಲಾರ್ಡ್ ಪ್ರೊಫುಮಾ ರಾಜೀನಾಮೆ ಕೊಟ್ಟ ಕಾಲದಲ್ಲಿ ಅವರಿಗೆ ಎಲ್ಲರ ಪೂರ್ಣ ಬೆಂಬಲವೂ ಇತ್ತು. ಆದರೆ ಮಾರಲ್‌ಸ್ಟ್ರೆಂಗ್ತ್ ಹೋಯಿತು, ಅಷ್ಟೇ. ಈಗ ನಾನು ತಮಗೆ ಹೇಳಬೇಕಾದುದು ಅದನ್ನೇ. ಇಲ್ಲಿ ನಮಗೆ ಫಿಸಿಕಲ್ ನಂಬರುಗಳ ಸಂಖ್ಯೆಯಲ್ಲಿ ಬೆಂಬಲವಿದೆ ಎನ್ನಬಹುದು. ಇಷ್ಟು ಫಿಸಿಕಲ್ ಸಂಖ್ಯೆಯ ನಂಬರುಗಳು ಇದ್ದಂತಹ ಎಷ್ಟೋ ರಾಜ್ಯಗಳು ಇದುವರೆಗೂ ಎಲ್ಲಿಯೂ ಉಳಿದಿಲ್ಲ. ಯಾರೂ ಬೌದ್ಧಿಕ ಬೆಂಬಲವನ್ನೇ ಪ್ರಧಾನವಾಗಿ ಹೊಂದಿ ರಾಜ್ಯಭಾರ ಮಾಡಲು ಸಾಧ್ಯವಿಲ್ಲ. ಸತ್ಯ ಶೀಲತೆ, ಸತ್ಯಸಂಧತೆ ನೈತಿಕ ಮಟ್ಟವೇ ಆಧಾರ. ಅಸತ್ಯ ಅನ್ಯಾಯಗಳಿಂದ ರಾಜ್ಯವಾಳುವುದು ಎಂದರೆ ಬಹಳ ಕಷ್ಟವಾಗುತ್ತದೆಯೇ ವಿನಾ ಮತ್ತೆ ಬೇರೇನೂ ಇಲ್ಲ.

ಇಲ್ಲಿ ಈಗ ಪಿ. ಡಬ್ಲ್ಯು. ಡಿ. ಮಿನಿಷ್ಟರು ಇಲ್ಲ. ಮೂರು ವರ್ಷಗಳಿಂದ ಅವರು ಹೇಳುತ್ತಾ ಬಂದಿರುವುದು ಸುಳ್ಳು ಎಂದು ನಾನು ಕೆಲವು ಅಂಶಗಳನ್ನು ದೃಷ್ಟಾಂತವಾಗಿ ತೋರಿಸಿ ಅವುಗಳಲ್ಲಿ ಕೆಲವಂಶವಾದರೂ ಸತ್ಯವೆಂದು ತೋರಿದರೂ ಅವರು ಇನ್ನೂ ರಾಜೀನಾಮೆ ಕೊಡಲಿಲ್ಲ. ಈ ಸಂದರ್ಭದಲ್ಲಿ hats off to Sri Rama Rao ! ಶ್ರೀ ರಾಮರಾಯರು ಪ್ರಜಾಪ್ರಭುತ್ವದಲ್ಲಿ ವಿಚಾರಣೆ ಅಗತ್ಯವಿಲ್ಲ ಎಂದು ಅಭಿಪ್ರಾಯ ಬರುವ ರೀತಿಯಲ್ಲಿ ಹೇಳಿದರು. ಆದರೆ ನಮ್ಮ ಚೀಫ್ ಮಿನಿಸ್ಟರಾದ ಶ್ರೀ ನಿಜಲಿಂಗಪ್ಪನವರು ನಾನು ಮಾಡಿಬಿಡುತ್ತೇನೆ ಎಂದು ಹೇಳಿದರು. ವಿಚಾರಣೆ ನಡೆಸದೇ ಇರುವುದಕ್ಕೆ ಏನು ಕಾರಣವೋ ಅವರು ಹೇಳಲಿಲ್ಲ. ಅಲ್ಲದೆ ವಿಧಿ ನಿಯಮ ಗಳಿಗನುಸಾರವಾಗಿ ಇಲ್ಲಿ ವಿಚಾರಣೆ ಮಾಡಬೇಕು ಎಂದು ಹೇಳಿದಾಗ ಅವರು ಪ್ರಜಾಪ್ರಭುತ್ವದ ತತ್ವಕ್ಕೆ ಅನುಸಾರವಾಗಿ ರಾಜೀನಾಮೆ ಕೊಟ್ಟಿದ್ದಾರೆ. ಅದಕ್ಕಾಗಿ ನನಗೂ ಸಂತೋಷವಾಯಿತು. ಇದೇನೂ ಅಷ್ಟು ಪ್ರಾಮುಖ್ಯವಲ್ಲ. ಮಾನ್ಯ ಪಿ. ಡಬ್ಲ್ಯು. ಡಿ. ಮಿನಿಸ್ಟರವರು ನನ್ನ ಹಳೆಯ ಸ್ನೇಹಿತರು. ಆದರೆ ಇಲ್ಲಿ ಪುನಃ ರಾಮರಾಯರನ್ನು ಅಧಿಕಾರದಲ್ಲೇ ಉಳಿಸಬೇಕೆಂದು ಮಾಡುವು ದಾದರೆ ನೀವು ರಾಜಕೀಯ ಕೊಲೆ ಮಾಡುತ್ತಿದ್ದೀರಿ. ನಾನು ಮಂತ್ರಿಯಾಗಿದ್ದ ಕಾಲದಲ್ಲಿ ಒಂದು ಸಾರಿ ಇಂತಹ ಸಂಧರ್ಭ ಬಂದಿತ್ತು. ಇದು ಮಾನ್ಯ ಜತ್ತಿಯವರಿಗೂ ಗೊತ್ತು. ಅವರ ಸಹೋದ್ಯೋಗಿಯಾಗಿ ಅವರ ಮಂತ್ರಿ ಮಂಡಲದಲ್ಲಿದ್ದೆ. ಆಗ ಒಂದು ಸಂದರ್ಭದಲ್ಲಿ ರಾಜೀನಾಮೆ ಕೊಟ್ಟಿದ್ದೆ; ಅವರಿಗೂ ಗೊತ್ತು. ಯಾವುದೋ ಕಾಲದಲ್ಲಿ ಅವರಿಗೂ ನನಗೂ ಭಿನ್ನಾಭಿಪ್ರಾಯ ಬಂದಿತ್ತು. ಅವರು ನನ್ನನ್ನು ಕನ್‌ಸಲ್ಟ್ ಮಾಡದೇ ಒಂದು ಆಜ್ಞೆಯನ್ನು ಮಾಡಿದರು. ಅದನ್ನು ಮಾಡಿದರು ಎಂದು ತಿಳಿದ ಮರು ದಿನವೇ ನಾನು ಅವರಿಗೆ ರಾಜೀನಾಮೆ ಪತ್ರವನ್ನು ಕಳುಹಿಸಿ ಕೊಟ್ಟೆ. ಆದರೆ ಅವರು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದಾಗ ಅವರ ಆಜ್ಞೆಯನ್ನು ವಾಪಸು ಹಿಂತೆಗೆದುಕೊಳ್ಳಬೇಕು ಎಂದೆ. ಅದರಂತೆ ಆ ಆರ್ಡರು ಕ್ಯಾನಸಲ್ ಆಯಿತು. ಅವರಿಗೂ ಗೊತ್ತಿತ್ತು ನಾನು ನಿಜಲಿಂಗಪ್ಪ ಅಲ್ಲ, ಉಕ್ಕಿನ ಕಡಲೆಯಂತಹ ಮನುಷ್ಯ, ಅಷ್ಟು ಸುಲಭವಾಗಿ ಅರಗತಕ್ಕ ವ್ಯಕ್ತಿ ಅಲ್ಲ ಎಂದು ; ಈ ಪ್ರಶ್ನೆ ಹಾಗಿರಲಿ.

ಆದುದರಿಂದ ಇದು ಆತ್ಮಗೌರವದ ಪ್ರಶ್ನೆ. ಹಿಂದಿನದೆಲ್ಲ ಹಳೆಯ ಕತೆಯಾಯಿತು. ನಾವು ಏನೂ ಹೊಸ ಕತೆಯನ್ನು ಹೇಳುತ್ತಿಲ್ಲ ಎಂದು ಹೇಳಬಹುದು. ನಮ್ಮ ಮಾನ್ಯ ನಿಜಲಿಂಗಪ್ಪನವರು ಶರಾವತಿ ಯೋಜನೆಯಿಂದ ಕೋಟ್ಯಾಂತರ ರೂಪಾಯಿಗಳಷ್ಟು ಬರುತ್ತದೆ, ಇಂತಹ ದೊಡ್ಡ ಯೋಜನೆ ಗಳನ್ನು ಮಾಡುವಾಗ ಕೇವಲ ಐವತ್ತು ಲಕ್ಷ ರೂಪಾಯಿಗಳಷ್ಟು ಹೆಚ್ಚು ಖರ್ಚಾಗಿರಬಹುದು ಅದನ್ನು ಯಾರು ತಿಂದರು ಎನ್ನುವುದು ಇದರಲ್ಲಿ ಹೇಳಲಿಲ್ಲ. ಪ್ರಜಾಸತ್ತೆಯ ಮಾರ್ಗದಲ್ಲಿ ಒಂದು ಅಥವಾ ಒಂದೂ ಕಾಲೂ ಕೋಟಿಯಷ್ಟು ಖರ್ಚು ಮಾಡುವಾಗ ಒಂದರ್ಧ ಕೋಟಿ ನಷ್ಟವಾಗಬಹುದು. ಆದರೆ ನಷ್ಟ ಅರ್ಧ ಕೋಟಿಯೇ ಆಗಿರಲಿ ಅಥವಾ ಅರ್ಧ ಸಾವಿರವೇ ಆಗಿರಲೀ ಅದು ಯಾವರೀತಿ ಯಾಗಿದೆ ಎನ್ನುವುದಕ್ಕಾಗಿ ವಿಚಾರಣೆ ಮಾಡಬೇಕೆಂದು ಹೇಳಿದರೂ ಅದಕ್ಕೆ ಯಾವ ವಿಚಾರಣೆಯೂ ಅನಗತ್ಯ ಎಂದು ಹೇಳಿದರೆ ಅದರಲ್ಲಿ ಇನ್ನೂ ಲೋಪದೋಷಗಳಿವೆ. ಎನ್ನುವ ಅನುಮಾನ ಖಂಡಿತ ಬರುತ್ತದೆ. ಇದರಿಂದ ಜನರಲ್ಲಿ ನಂಬಿಕೆ ಹೋಗಿಬಿಡುತ್ತದೆ. ಇದು ಹಳೆಯದು ಬಿಡಿ ಎಂದು ಹೇಳಬಹುದು. ಹಾಗೇನಿಲ್ಲ. ಎಲ್ಲ ಹಳೆಯ ಆರ್‌ಗ್ಯುಮೆಂಟ್ಸ್‌ಗಳನ್ನೇ ಪುನಃ ಅವರೂ ಹೇಳು ತ್ತಿದ್ದಾರೆ. ಅವುಗಳಲ್ಲಿ ಯಾವುದಾದರೂ ಸತ್ಯಾಂಶದಿಂದ ಕೂಡಿದ್ದರೆ ನಾವು ಅನುಸರಿಸುತ್ತಿದ್ದೆವು ಎಂದು ಹೇಳಬಹುದು. ಸ್ವಾಮಿ, ನೀವು ಇತ್ತೀಚೆಗೆ ಮಾಡಿರತಕ್ಕಂತಹ ಕೆಲಸಗಳು ದೇಶಕ್ಕೆ ದ್ರೋಹ ಮಾಡಿವಂತಿವೆ ಮತ್ತು ಕಾಂಗ್ರೆಸ್ಸಿನ ನೈತಿಕ ಅಧಃಪತನವನ್ನು ಬಹಿಗೊತ್ತರಿಸಿ ಮಾಡಲು ಏನು ಕಾರಣ ? ನೀವು ಎಲ್ಲಾ ಕಾಂಗ್ರೆಸ್ಸಿಗರೇ ? ಯಾರಾದರೂ ಹೌದು ಎನ್ನುತ್ತೀರಾ ? ಎದ್ದು ಹೇಳಿ.

Mr. SPEAKER.—Are we going to determine that or are we going to determine the confidence or otherwise in the Council of Ministers ? If members go on developing what happened in the past, it becomes very embarrassing.

(*Interruptions*)

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀ ಜತ್ತಿಯವರೇ, ನೀವು ಕಾಂಗ್ರೆಸ್ಸಿಗರೇ ? ಇಂತಹ ಭ್ರಷ್ಟಾಚಾರದಿಂದ ಕಾಂಗ್ರೆಸ್ಸಿನಲ್ಲೇ ಉಳಿಯುವವರೇ ?

(*Interruptions*)

(ಶ್ರೀ ಎಚ್. ಎಂ. ಚನ್ನಬಸಪ್ಪ)

ಸ್ವಾಮಿ, ಈಗ ಹೊಸದಾಗಿ ಕಾಂಗ್ರೆಸ್ಸಿನಲ್ಲಿ ಒಂದು ಧ್ಯೇಯ ಧೋರಣೆಗಳಿಗನುಸಾರವಾಗಿ ಮೂಲತತ್ವಗಳಲ್ಲಿ ಈ ಪ್ರೊಹಿಬಿಷನ್ ಎಂದರೆ ಪಾನನಿರೋಧವನ್ನು ಮಾಡಬೇಕೆಂದಿತ್ತು. ಈ ತತ್ವಕ್ಕೆ ನೀವೆಲ್ಲ ಬದ್ಧರು, ನಾವೆಲ್ಲ ಬದ್ಧರು. ಇದರ ಆಧಾರವಾಗಿಯೇ ನೀವೆಲ್ಲರೂ ಚುನಾಯಿತರಾಗಿ ಬಂದಿರತಕ್ಕವರು. ಇದಕ್ಕಾಗಿ ನೀತಿಗಳನ್ನು ಪ್ರಚಾರ ಮಾಡಿ ನಂಬಿಕೆಗಳನ್ನು ತರುತ್ತೇವೆ ಎಂದು ಹೇಳಿದುದರಿಂದ ಜನ ನಿಮಗೆ ವೋಟು ಕೊಟ್ಟಿರುತ್ತಾರೆ. ಅದೇ ಜನಕ್ಕೆ ಇಂದು ಮೋಸ ಮಾಡಿ ಈ ಪಾನ ನಿರೋಧವನ್ನು ಜಾರಿಗೆ ಕೊಟ್ಟು ಯಶಸ್ವಿಯಾಗಿ ಮಾಡುತ್ತೇವೆ ಎಂದು ಹೇಳುವುದು ಇದು ನಿಮ್ಮ ನೀತಿಯೇ ? ಇದಕ್ಕಾಗಿ ಜನರಲ್ಲಿ ಪ್ರಚಾರ ಮಾಡಿ ಆ ವೋಟುಗಳನ್ನು ತೆಗೆದುಕೊಂಡು ಬಂದು ಈಗ ಆಡಳಿತದಲ್ಲಿ ಅಧಿಕಾರವನ್ನು ತೆಗೆದುಕೊಂಡಮೇಲೆ ಕತ್ತಿ ತೆಗೆದು ಕೊಂಡು ಬಂದು ಹಿಂದಕ್ಕೆ ಹೊಡೆಯುತ್ತೀರಿ.

ಒಬ್ಬ ಮಾನ್ಯ ಸದಸ್ಯರು.—ನೀವು ಎಷ್ಟು ವರ್ಷ ಕಾಂಗ್ರೆಸ್ ಸಂಸ್ಥೆಯಲ್ಲಿ ದುಡಿದಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನೂ ಹೆಚ್ಚುವರ್ಷಗಳಕಾಲ ಕಾಂಗ್ರೆಸ್ಸಿನಲ್ಲಿ ದುಡಿದಿದ್ದೇನೆ. ಈ ಪಾನನಿರೋಧ ತತ್ವವನ್ನು ಜಾರಿಗೆ ತಂದಾಗ ಲಕ್ಷಾಂತರ ಜನರು ಜೈಲುವಾಸವನ್ನು ಅನುಭವಿಸಿ ದರು. ಇವೊತ್ತು ಸರ್ಕಾರದವರೇ ಪಾನ ನಿರೋಧ ನೀತಿಯನ್ನು ಬದಲಾವಣೆ ಮಾಡಿ, ಪಾನ ನಿರೋಧ ಕಾನೂನನ್ನು ಸಡಿಲಮಾಡಿ ಜನಗಳು ಹೆಂಡ ಕುಡಿಯುವುದಕ್ಕೆ ಅವಕಾಶ ಮಾಡಿಕೊಟ್ಟಿ ದ್ದಾರೆ. Disgraceful. You don't deserve to be called Congressmen. You don't deserve to rule the country.

ನಾನು ಹಿಂದೆ ಗೃಹಶಾಖೆಯ ಮಂತ್ರಿಯಾಗಿದ್ದಾಗ ಮಂಗಳೂರಿನಲ್ಲಿ ಪಾನನಿರೋಧ ಕಾನೂ ನನ್ನು ಜಾರಿಗೆ ತಂದಾಗ ಯಾರು ಹೆಂಡದ ಶೀಶೆಯನ್ನು ಹಿಡಿದುಕೊಂಡು ಹೆದರಿಸುತ್ತಿದ್ದರೋ ಅಂಥವರನ್ನೂ ಕೂಡ ನಾವು ಹೆದರಿಸಿದ್ದೇವೆ. ಸೀಮೆ ಎಣ್ಣೆ ಬುಡ್ಡಿಯನ್ನು ತೆಗೆದುಕೊಂಡು ಹೋಗಿ ನಾವು ಅವರನ್ನು ಹೆದರಿಸಿದ್ದೇವೆ.

ಶ್ರೀ ಬಿ. ವಿಠಲ್‌ದಾಸ್‌ಶೆಟ್ಟಿ (ಪುತ್ತೂರು).—ನೀವು ಬರಿ ಬಾಯಲ್ಲಿ ಮಾತ್ರ ಹೆದರಿಸುತ್ತಿದ್ದಿರಿ, ಕೊನೆಗೆ ಮಂಗಳೂರಿನಲ್ಲಿ ಒಬ್ಬರನ್ನೂ ಹಿಡಿಯಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಹೆದರಿಸಿ ಹಿಡಿದಂತಹ ಅಪರಾಧಿಯನ್ನು ನೀವು ಬಿಡಿಸುತ್ತಿದ್ದಿರಿ.

Mr. SPEAKER.—They are diverting your mind.

Sri H. M. CHANNABASAPPA.--If you are true Congressmen you must resign on this account. You have promised throughout the country that you are enforcing prohibition. ಪ್ರೊಹಿಬಿಷನ್ ಏನಾಯಿತು ? ನಿಮಗೆ ದುಡ್ಡು ಬೇಕು ಎಂದು ಜನಗಳಿಗೆ ಹೆಂಡವನ್ನು ಕುಡಿಸುತ್ತಿದ್ದೀರಿ, ಮತ್ತೆ ಇದನ್ನು ಜಾರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಯಾರು ಪಾನನಿರೋಧವನ್ನು ಜಾರಿಗೆ ತಂದರೋ ಅವರೇ ಇವೊತ್ತು ಅಂಗಡಿಗಳನ್ನು ತೆರೆದು ಬಡ ಜನಗಳಿಗೆ ಹೆಂಡವನ್ನು ಮಾರಾಟ ಮಾಡಿಸುತ್ತಿದ್ದಾರೆ. ನಿಮಗೆ ಯಾರಲ್ಲಿ ಪಾನನಿರೋಧ ದಲ್ಲಿ ನಂಬಿಕೆ ಇದೆ ಎಂದು ನಾನು ಈಗ ಕೇಳಬೇಕಾಗಿದೆ.

Sri K. PUTTASWAMY. On what locus standi has the Hon'ble member is demanding resignation ? ಆಗಿನ ಕಾಲದ ಸಂದರ್ಭಕ್ಕನುಗುಣವಾಗಿ ತಯಾರು ಮಾಡಿಕೊಂಡಿತ್ತು. ಈಗ ಈಗಿನ ಕಾಲಕ್ಕೆ ಅನುಗುಣವಾಗಿ ಕಾಂಗ್ರೆಸ್ಸಿನವರು ತಮ್ಮ ಧ್ಯೇಯ ಧೋರಣೆಗಳನ್ನು ಬದಲಾವಣೆ ಮಾಡಬಾರದು ಎಂದು ತಾವು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಕಾಂಗ್ರೆಸ್ಸಿನ ಅಧಿಕೃತ ಸಭೆಯಲ್ಲಿ ಎ. ಐ. ಸಿ. ಸಿ.ಯಲ್ಲಿ ಹೆಂಡ ಮಾರತಕ್ಕದ್ದು ಯೋಗ್ಯ ಎಂದು ತೀರ್ಮಾನ ಮಾಡಿದರೆ ನೀವು ಮಾಡತಕ್ಕದ್ದು ಸರಿ. ಈಗ ಮಾಡಿರು ವುದು ಮಹಾ ಅಪರಾಧ. ದೇಶಕ್ಕೂ ಅಪರಾಧ. I am provoked by these people. I should not be allowed to be provoked.

Sri B. D. JATTI.—You are amenable to provocation.

Sri H. M. CHANNABASAPPA.—You make me to amenable. ಒಟ್ಟಿನಲ್ಲಿ ಒಂದೇ ಮಾತನ್ನು ಹೇಳುವುದಾದರೆ, ಕಣ್ಣು ಇಲ್ಲದ, ಕಿವಿಯಿಲ್ಲದೆ ಇರುವ, ಹೃದಯವಿಲ್ಲದೇ ಇರುವ, ಮಾನ ಮರ್ಯಾದೆ ಇಲ್ಲದಿರುವ ಈ ಸರ್ಕಾರದ ಮುಂದೆ ನಾನು ಯಾವ ಮಾತನ್ನು ಆಡುವುದಿಲ್ಲ. ನಾವು ಅವರಿಗೆ ಎಷ್ಟು ಹೇಳಿದರೂ ಕೂಡ ಅವರಿಗೆ ಜವಾಬ್ದಾರಿಯಿಲ್ಲ. Democracy is in danger. The democracy is being practically subotaged everywhere whether there is Congress Government or Non-Congress Government. Are you here to sabotage the democracy or to stabilize and protect the democracy and give good Government ?

Sri R. DAYANANDA SAGAR (Deputy Minister for Sericulture).—Why are you so excited ?

Mr. SPEAKER.—My difficulty is, I am getting excited.

5-00 P.M.

Sri H. M. CHANNABASAPPA.—It is for the Government I have been telling. They have been my friends for such a long time. They are good friends and they do not want to have a bad name. I want them to bring a good name to the country. If they are able to, let them respond. I am not saying all this with a view to condemn any of my friends. I am telling them they are taking the country in a wrong way and they are killing democracy. Stand up and give a go bye to the politics that have crept in. Otherwise you will not only ruin yourself, you will ruin us and ruin the country and ruin democracy. Therefore I say beware, beware and take early lesson from this.

MLA

†ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಅಧ್ಯಕ್ಷರೇ, ಈಗಾಗಲೇ ಈ ವಿಷಯದಲ್ಲಿ ಬಹಳ ಜನ ಮಾತನಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಅನೇಕ ಜನಸದಸ್ಯರು ಸ್ವಾತಂತ್ರ್ಯ ಸಮಯದಲ್ಲಿ ಭಾಗವಹಿಸಿ ಕಾಂಗ್ರೆಸ್ ತತ್ವಗಳಿಗೆ ಮಣಿದು ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿದವರಿಗೆ, ಆ ಪಕ್ಷದ ಶಿಸ್ತಿನಿಂದ ಕೆಲವರಿಗೆ ಇವತ್ತಿನದಿವಸ ಸತ್ಯವನ್ನು ಹೇಳುವುದಕ್ಕೆ ಹಿಂತೆಗೆಯುತ್ತಿದ್ದಾರೆ, ಸತ್ಯವನ್ನು ಹೇಳುವುದಕ್ಕೆ ಕಷ್ಟವಾಗುತ್ತಿದೆ ಎನ್ನುವ ಮಾತನ್ನು ಶ್ರೀಮಾನ್ ಗೋಪಾಲಗೌಡರು ಮಾತನಾಡುತ್ತಾ ಹೇಳಿದರು, ಶ್ರೀಮಾನ್ ಡಿ. ಎಸ್. ಗೌಡರು ಈ ವರ್ಗಕ್ಕೆ ಸೇರಿದವರಲ್ಲ. ಈ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ರಾಜ್ಯ ಪುನರ್ವಿಂಗಡನೆಯ ಕಾಲದಲ್ಲಿ ಹಳೆಯ ಮೈಸೂರು ಭಾಗದ ಜನ ಅನೇಕ ರೀತಿಯ ಭಯವನ್ನು ವ್ಯಕ್ತಪಡಿಸಿದರು. ಈ ವಿಚಾರದಲ್ಲಿ ಶ್ರೀಮಾನ' ಸಿದ್ಧವೀರಪ್ಪನವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಆ ವಿಷಯದಲ್ಲಿ ಅವರು ಹೇಳಿದ್ದಕಿಂತ ಹೆಚ್ಚು ತಿಳಿಸುವುದು ಕಷ್ಟವಾಗುತ್ತದೆ. ಶ್ರೀಮಾನ್ ಸಿದ್ಧವೀರಪ್ಪನವರ ಬಾಯಿಯಲ್ಲೇ ಹೇಳಿಸಿದರೆ ಸಮಂಜಸವಾಗುತ್ತದೆ. ಆ ವಿಚಾರವಲ್ಲಿ ನಾನು ಹೇಳಿದರೆ ಬೇರೆ ಅರ್ಥ ಕಲ್ಪಿಸುವುದಕ್ಕೆ ಅವಕಾಶವಾಗುತ್ತದೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂಥ ಅನೇಕ ಸೇವಕರ ಪೈಕಿ ನಾನು ಸಹ ಅಲ್ಪ ಸೇವೆಯನ್ನು ಮಾಡಿರುವುದರಿಂದ, ಈ ವಿಷಯದಲ್ಲಿ ಅಗ ಇದ್ದಂಥ ಭಯ ಈ ದಿವಸ ರುಜುವಾತಾಗಿದೆ. ಅನೇಕ ಜನಗಳ ಮನಸ್ಸಿಗೆ ಬಹಳ ನೋವು ಉಂಟು ಮಾಡಿದೆ. ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ, ಇಂತಹ ವಿಷಯಗಳು ಬಂದಾಗ ಅಧಿಕಾರದಲ್ಲಿರತಕ್ಕಂಥವರು ಬಹಳ ಎಚ್ಚರಧಿಂದ ಇರಬೇಕು. ಶ್ರೀಮಾನ್ ಗೋಪಾಲ ಗೌಡರು ಒಂದು ಉದಾರಣೆಯನ್ನು ಕೊಟ್ಟರು. ರಾಮಾಯಣ ಕಾಲದಲ್ಲಿ ಆಡಳಿತವನ್ನು ನಡೆಸುತಿದ್ದವರು ಜನಾಭಿಪ್ರಾಯವನ್ನು ದೂತರಿಂದ ತಿಳಿದುಕೊಂಡು, ನಂತರ ಅವಶ್ಯಕವಾದ ಬದಲಾವಣೆ ಮಾಡಿಕೊಂಡು ಆಡಳಿತವನ್ನು ನಡೆಸುತ್ತಿದರು. ಇದು ಹಿಂದಿನಿಂದ ಬಂದಿರುವುದು ಒಂದು ಪದ್ಧತಿ. ಈಗ ಆಡಳಿತ ನಡೆಸುತ್ತಿರುವರು ಹಿಂದಿನಂತೆ ಜನಾಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಒಂದು ಪಕ್ಷ ಪ್ರಯತ್ನ ಮಾಡಿದರೆ, ಜನಾಭಿಪ್ರಾಯವನ್ನು ನಿಮಗೆ ತಿಳಿಸುವವರು ಎಂಥವರು ಎಂದರೆ, ಜನರೆಲ್ಲರೂ ಸುಖವಾಗಿದ್ದಾರೆ, ನಿಮ್ಮ ಸಮಾನ ನಡಳಿತ ನಡೆಸುವವರು ಯಾರೂ ಇಲ್ಲ, ನಿಮ್ಮಿಂದ ಸ್ವರ್ಗ ಸುಖವನ್ನೇ ಅನುಭವಿಸುತ್ತಿದ್ದೇವೆ, ಸ್ವರ್ಗಲೋಕಕ್ಕೆ ಹೋಗಲು ಹಗ್ಗ ಮತ್ತು ಏನೇನು

(ಶ್ರೀ ಎನ್. ಹುಚ್ಚಮಾಸ್ತಿ ಗೌಡ)

ಬೇಕೋ ಅದನ್ನೆಲ್ಲ ತಂದುಕೊಡುತ್ತಿದ್ದೀರಿ ಎನ್ನುವ ಹೊಗಳುಭಟರು ನಿಮ್ಮಲ್ಲಿದ್ದಾರೆ. ಅದರಿಂದಾಗಿ ನಿಮ್ಮ ಆಡಳಿತ ಎಷ್ಟೊಂದು ಅಧೋಗತಿಗೆ ಬರುತ್ತಿದೆಯೆಂದು ಹೇಳುವುದಕ್ಕೆ ನಮ್ರತೆಯಿಂದ ಇಷ್ಟ ಪಡುತ್ತೇನೆ. ಇನ್ನು ಈ ವಿಷಯದಲ್ಲಿ ಕೆಲವು ಸದಸ್ಯರುಗಳ ಮನಸ್ಸಿನಲ್ಲಿ ಏನಿರುತ್ತದೆ, ಅದನ್ನು ಅವರು ಹೇಳುವುದಕ್ಕೆ ಇಷ್ಟಪಡಲಿಲ್ಲ, ಕಾರಣ, ಹೇಳಿದರೆ ಇತರರು ಏನು ಅರ್ಥ ಕಲ್ಪಿಸಿಕೊಳ್ಳುತ್ತಾರೋ ಎಂದುಕೊಂಡು ತಮ್ಮ ಅಭಿಪ್ರಾಯಗಳನ್ನು ನುಂಗಿಕೊಂಡಿರುವುದನ್ನು ನಾವು ಕಾಣಬಹುದು. ಆಡಳಿತ ನಡೆಸುತ್ತಿರುವವರು ಇದನ್ನೆಲ್ಲಾ ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಅದರಿಂದಾಗಿ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಜಾತೀಯತೆ, ಸ್ವಜನಕ್ಷಪಾತ ತುಂಬಿ ತುಳುಕಾಡುತ್ತಿರುವುದನ್ನು ಕಾಣಬಹುದು. ಒಂದು ರಾಜ್ಯದ ಮುಖ್ಯಮಂತ್ರಿಗಳಾದವರಿಗೆ ಲೋಕಾಪವಾದಕ್ಕೆ ಹೆದರತಕ್ಕಂಥ ಮನಸ್ಸಿರಬೇಕು. ಆಡಳಿತದಲ್ಲಿ ಏನಾದರೂ ಒಂದು ತಪ್ಪಾದರೆ ಜನ ಆ ವಿಷಯದಲ್ಲಿ ಏನು ಹೇಳಿಯಾರು ಎಂಬ ಭಯವಿರಬೇಕು. ನಮ್ಮ ಮುಖ್ಯ ಮಂತ್ರಿಗಳಲ್ಲಿ ಆ ಭಯವಿಲ್ಲದೆ ಇರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಜಾತಿವಾದವನ್ನು ಎಲ್ಲಾ ಮೂಲೆಗಳಲ್ಲೂ ಸಹ ಕಾಣುತ್ತಿದ್ದೇವೆ. ಈ ವಿಚಾರದಲ್ಲಿ ಜನರು ಏನು ಅಭಿಪ್ರಾಯ ಕೊಡುತ್ತಿದ್ದಾರೆ ಎಂಬುವುದನ್ನು ನಾವು ತಿಳಿದುಕೊಳ್ಳಬಹುದಾಗಿದೆ. ಈ ವಿಷಯದಲ್ಲ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕಾಂಗ್ರೆಸ್ ಪಕ್ಷದ ಶ್ರೀಮಾನ್ ಕೊಠಾವಳೆಯವರು ಮಾತನ್ನಾಡುತ್ತಾ, ನಮ್ಮದೇ ಆದಂತಹ ಒಂದು ಸಮಾಜವನ್ನು ಜಾರಿಗೆ ತರುತ್ತಿದ್ದೇವೆಂದು ಹೇಳಿದರು. ಅವರು ತರುತ್ತಿರುವ ಸಮಾಜವಾದ ಯಾವುದೆಂದರೆ ಮೈಗೆ ಬಟ್ಟೆ, ಹೊಟ್ಟೆಗೆ ಅನ್ನ ಇಲ್ಲದವರ ಹತ್ತಿರ ಕಂದಾಯ ವಸೂಲುಮಾಡುವುದು, ಜಮೀನಿನಲ್ಲಿ ಬೆಳೆಯಾಗಲೀ ಅಥವಾ ಆಗದಿರಲ್ಲಿ ಲೆವಿಯನ್ನು ವಸೂಲು ಮಾಡುವುದು, ಇದು ಅವರ ಸಮಾಜವಾದ. ಬೇರೆ ಉದ್ಯೋಗಗಳಲ್ಲಿ ಅಂದರೆ ಸರ್ಕಾರಿ ನೌಕರರು, ವ್ಯಾಪರಸ್ಥರು. ಕೈಗಾರಿಕೆಗಳನ್ನು ನಡೆಸುವವರು, ಲಾಯರ್‌ಗಳು ಮುಂತಾದವರಿಗೆ ವರ್ಷಕ್ಕೆ 3,600 ರೂಪಾಯಿಗಳಿಗಿಂತ ಹೆಚ್ಚು ಆದಾಯ ಬಂದರೆ ಅಂತಹವರು ಸರ್ಕಾರಕ್ಕೆ ತೆರಿಗೆಯನ್ನು ಕೊಡಬೇಕೆಂದು ರೂಲ್ಸ್ ಇದೆ. ಆದರೆ ರೈತರಿಂದ ಅವರ ದಿನದ ಜೀವನಕ್ಕೆ ಸಾಲದಿದ್ದರೂ ಸಹ ಎಕರೆಗೆ ಇಷ್ಟು ಎಂದು ತರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ತಾಲ್ಲೂಕ್‌ಬೋರ್ಡಿಗೆ ಇಷ್ಟು ಕೊಡುತ್ತೇವೆ, ಪಂಚಾಯತಿಗಳಿಗೆ ಇಷ್ಟು ಕೊಡುತ್ತೇವೆ, ನಿಮ್ಮ ಹಳ್ಳಿಗೆ ಬಾವಿ ತೋಡಿಸುತ್ತೇವೆ. ರಸ್ತೆ ಮಾಡಿಸುತ್ತೇವೆ, ಆ ಕೆಲಸ ಮಾಡಿಸುತ್ತೇವೆ, ಈ ಕೆಲಸ ಮಾಡಿಸುತ್ತೇವೆಂದು ರೈತರಿಗೆ ಆಶೆ ತೋರಿಸಿ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಅನಕ್ಷರಸ್ಥರಾದ ರೈತರಿಂದ ಈ ರೀತಿ ಆಶೆ ತೋರಿಸಿ, ಬಹಳ ಬುದ್ಧಿವಂತಿಕೆಯಿಂದ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಈ ರೀತಿ ಸಮಾಜವಾದವನ್ನು ನಡೆಸುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆ. ಇದು ಒಂದು ಹೊಸ ಸಮಾಜವಾದ ಎಂಬುದನ್ನು ನಾವು ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಒಂದು ವಿಷಯವನ್ನು ನಾವು ಆಲೋಚನೆ ಮಾಡಬೇಕಾಗಿದೆ: ಈ ದೇಶದಲ್ಲಿ ಬಹಳಕಡೆ ಅಭಾವ ಪರಿಸ್ಥಿತಿ ಉಂಟಾಗಿದೆ. ಅನೇಕ ಜನರಿಗೆ ಅನ್ನ ಸಿಗುತ್ತಿಲ್ಲ. ಬಹಳ ಕಷ್ಟಪರಿಸ್ಥಿತಿಯಲ್ಲಿದ್ದಾರೆ. ಕೆಲವರಿಗೆ ಕಂದಾಯ ಕೊಡುವುದಕ್ಕೂ ಸಾಧ್ಯವಾಗುತ್ತಿಲ್ಲ. ಈ ಸುಗ್ಗಿಯಕಾಲ ಬರುತ್ತಿದ್ದರೂ ಸಹ ಅವರಲ್ಲಿ ಸಾಕಷ್ಟು ಧಾನ್ಯವಿಲ್ಲ. ಇನ್ನು ಅವರು ಜೀವನ ಮಾಡುವುದು ಹೇಗೆ? ಇಂತಹ ಪರಿಸ್ಥಿತಿಯಲ್ಲಿರುವ ಪ್ರದೇಶದಲ್ಲಿ ಕ್ಷಾಮ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳಲು ಸರ್ಕಾರದವರು ಒಂದು ಡಿವಿಜನ್‌ಗೆ 5 ಲಕ್ಷ ರೂಪಾಯಿಗಳನ್ನು ಒದಗಿಸುತ್ತಾರೆ. ಆದಕ್ಕಿಂತ ಹೆಚ್ಚುಕೊಡುವುದಕ್ಕೆ ಸರ್ಕಾರದ ಹತ್ತಿರ ಹಣವಿಲ್ಲವೆಂದು ಹೇಳುತ್ತಾರೆ. ಒಂದು ವರ್ತಮಾನ ಕೇಳಿದೆ, ನಮ್ಮ ಸರ್ಕಾರದವರು ಸೌದಿಅರೇಬಿಯದಲ್ಲಿ ಅಲ್ಲಿಗೆ ಹೋಗುವ ಯಾತ್ರಿಕರಿಗೆ ಅನುಕೂಲವಾಗುವಂತೆ ಒಂದು ಕಟ್ಟಡವನ್ನು ಕಟ್ಟಿಸುವುದಕ್ಕೆ 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆಂದು. ಅಲ್ಲಿ ಒಂದು ಚದರಗಮೈಲಿಗೆ 2 ಸಾವಿರ ರೂಪಾಯಿಗಳಂತೆ; ಕಟ್ಟಡಕ್ಕೆ ಬೇಕಾಗುವ ಸೈಟನ್ನು ಗೊತ್ತುಮಾಡಿಕೊಂಡು ಬರಲು ನಮ್ಮ ರಾಜ್ಯದ ಒಬ್ಬರು ಉಪಮಂತ್ರಿಗಳು ಸರ್ಕಾರದ ಖರ್ಚಿನಲ್ಲಿ ಹೋಗುತ್ತಾರೆಂದು ತಿಳಿದುಬಂತು. ಇದು ನಿಜವೇ ಎಂಬುದನ್ನು ಹೇಳಬೇಕು. ನಮ್ಮ ಸರ್ಕಾರದವರು ಅನುಸರಿಸತಕ್ಕಂಥ ಆರ್ಥಿಕ ನೀತಿ ಇದಾಗಿದೆ. ದಿಲ್ಲಿಯಲ್ಲಿ ಮೈಸೂರು ಭವನ ಆಗಬೇಕು ಇನ್ನೊಂದು ಊರಿನಲ್ಲಿ 30 ಲಕ್ಷ ರೂಪಾಯಿ ವೆಚ್ಚಮಾಡಿ ಕಟ್ಟಡ ಆಗಬೇಕು ಎಂದು ಹೇಳುತ್ತಾರೆ. ಪರ ರಾಷ್ಟ್ರದಲ್ಲಿ ಕಟ್ಟತಕ್ಕಂಥ ಕಟ್ಟಡದ ವೆಚ್ಚವನ್ನು ಕೇಂದ್ರ ಸರಕಾರ ಮಾಡಲಿ. ಸೌದಿ ಅರೇಬಿಯಾದಲ್ಲಿ ಮೆಕ್ಕಾಕ್ಕೆ ಭೇಟಿ ನೀಡುವ ರಾಜ್ಯದ ಮುಸ್ಲಿಂ ಯಾತ್ರಿಕರಿಗಾಗಿ ಒಂದು ಕಟ್ಟಡ ಕಟ್ಟಿಸುವ ಯೋಚನೆ ಸರಕಾರ ಮಾಡಿರುವುದು ಇಂದಿನ ಮೈಸೂರು ಸರಕಾರದ ಹಣಕಾಸಿನ ಪರಿಸ್ಥಿತಿಗೆ ತಕ್ಕುದಾಗಿಲ್ಲ. ಇಂದು ಮೈಸೂರು ಸರಕಾರ ಹಣಕಾಸಿನ ಬಗ್ಗೆ ಇಷ್ಟು ಕಷ್ಟದ ಪರಿಸ್ಥಿತಿಯಲ್ಲಿ ಇರುವಾಗ 30 ಲಕ್ಷ ರೂಪಾಯಿ ಒಂದು ಕಟ್ಟಡಕ್ಕೆ ಸೌದಿ

ಅರೇಬಿಯಾದಲ್ಲಿ ಖರ್ಚು ಮಾಡುತ್ತೇವೆ, ಇದಕ್ಕಾಗಿ ಸೂಕ್ತ ನೀವೇಶನ ಆಯ್ಕೆ ಮಾಡಲು ರಾಜ್ಯದ ಉಪಮಂತ್ರಿಗಳೊಬ್ಬರು ಅಲ್ಲಿಗೆ ಹೋಗಲಿದ್ದಾರೆ ಎಂದು ಹೇಳುವುದು ಇದಕ್ಕಿಂತಲೂ ನಾಚಿಕೆಗೇಡು ಪರಿಸ್ಥಿತಿ ಯಾವುದು ? ಆದುದರಿಂದ ಕಾರಣವಿಲ್ಲದೆ ಹಣ ಖರ್ಚು ಮಾಡುವುದನ್ನು ಸರಕಾರ ಕೂಡಲೇ ನಿಲ್ಲಿಸಬೇಕು. ಈರೀತಿ ಮಾಡುತ್ತಾ ಹೋದರೆ ಅಧಿಕಾರದಲ್ಲಿದ್ದು ಸರಕಾರ ನಡೆಸಲು ಇವರಿಗೆ ಅಧಿಕಾರವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಇನ್ನು ಹೆಚ್ಚಿಗೆ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಲೋಕೋಪಯೋಗಿ ಮಂತ್ರಿಗಳು ಕಳೆದ ಒಂದು ಒಂದೂವರೆ ವರ್ಷದಿಂದ ಹತ್ತು ಸಾವಿರ ರೂಪಾಯಿ ವೆಚ್ಚದ ಕಾಮಗಾರಿಗಳನ್ನು ಮಂಜೂರು ಮಾಡುವ ಅಧಿಕಾರ ಇಟ್ಟುಕೊಂಡಿದ್ದಾರೆ. ಚೀಫ್ ಎಂಜಿನಿಯರ್ ಎಗ್ಸಿಕ್ಯೂಟಿವ್ ಎಂಜಿನಿಯರ್ ಇವರಿಗೆ ಈ ಅಧಿಕಾರವಿಲ್ಲ. ಯಾವ ಕೆಲಸ ಮಂಜೂರು ಮಾಡಬೇಕಾದರೂ, ಯಾವ ಕೆಲಸ ತೆಗೆದುಕೊಳ್ಳಬೇಕಾದರೂ ಅದು ಲೋಕೋಪಯೋಗಿ ಮಂತ್ರಿಗಳ ಕಡೆಗೆ ಬರಬೇಕು, ಅವರೇ ಅದಕ್ಕೆ ಸರ್ವಾಧಿಕಾರಿಗಳು. ನಮ್ಮ ಕ್ಷೇತ್ರದಲ್ಲಿ ಇಂಥ ಕೆಲಸವಾಗಬೇಕು ಎಂದು ತಿಳಿಸಲು ಸಣ್ಣ ಅಧಿಕಾರಿಗಳ ಬದಲು ಅವರನ್ನು ನೋಡಬೇಕು. ಇದೇನೂ ಅಂಥ ಗೌರವದ ಮಾತು ಎಂದು ಹೇಳುವುದಿಲ್ಲ. ಸಾಮಾನ್ಯವಾಗಿ ಇಂಥ ಅಧಿಕಾರ ಬೇರೆಯವರು ಹೊಂದಿದ್ದರೆ ಕೆಲಸ ಸುಲಭವಾಗಿ ಆಗುತ್ತದೆ. ಸುಲಭವಾಗಿ ಕೆಲಸವಾಗಲು ಅವಕಾಶವಾಗುತ್ತದೆ. ಮಂತ್ರಿಗಳು ಇಂಥ ಅಧಿಕಾರ ತೆಗೆದುಕೊಂಡರೆ ಕೆಲಸ ನಡೆಯುವುದಿಲ್ಲ. ನನ್ನ ಅನುಭವ ಹೇಳುತ್ತೇನೆ. ಇದರಲ್ಲಿ ರಾಜಕೀಯ ಇದೆ. ಯಾವ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಯಾವ ಕ್ಷೇತ್ರದ ಕೆಲಸ ಮಾಡಬಾರದು ಆದರಿಂದ ಏನು ಫಲವಿದೆ ಇದನ್ನು ಲೆಕ್ಕ ಹಾಕಿ ಮಾಡುತ್ತಾರೆ. ಈ ರೀತಿ ಮನಸ್ಸಿಗೆ ಬಂದಹಾಗೆ ಖರ್ಚು ಮಾಡುವುದಾದರೆ ಇದನ್ನು ತಡೆಗಟ್ಟಲು ಸಾಧ್ಯವೇ ? ಕೆಲಸ ಮಂಜೂರು ಮಾಡುವುದಕ್ಕೂ ಸಹ ರಾಜಕೀಯ ಉಪಯೋಗಿಸಿಕೊಳ್ಳತಕ್ಕಂಥ ದುಸ್ಥಿತಿ ನಮ್ಮ ರಾಜ್ಯದಲ್ಲಿ ಕಾಣುತ್ತದೆ. ಸಾಮಾನ್ಯವಾಗಿ ಕೆರೆ ನೀರನ್ನು ಅಚ್ಚುಕಟ್ಟಿಗೆ ಬಿಡಬೇಕಾದರೂ ಅದಕ್ಕೆ ರಾಜಕೀಯ. ಇಂಥ ಅಚ್ಚುಕಟ್ಟಿಗೆ ನೀರು ಬೇಕೇಬೇಕು ಎಂದು ಹೇಳಿದರೂ ಕೂಡ ನೀರು ಬಿಡುವುದಿಲ್ಲ. ಯಾರಿಗೆ ನೀರು ಬಿಡಬೇಕು ಎಂಬುದನ್ನು ಲೆಕ್ಕ ಹಾಕಿ ಹೇಳುತ್ತಾರೆ. ಇಂದು ಇಂಥ ಪರಿಸ್ಥಿತಿ ಇದೆ. ಇದಕ್ಕೂ ಹೇಯವಾದ ಕೆಲಸ ಯಾವುದು ? ಇಂಥ ಕೆಲಸ ಕಾರ್ಯಗಳು ನಡೆಯಲು ಒಂದು ನೀತಿ ನಿಯಮ ಇರಬೇಕು. ಕೆಲಸ ಕಾರ್ಯಗಳು ನಡೆಯಬೇಕಾದರೆ ಕಾಂಗ್ರೆಸ್ ಪಕ್ಷದವರಿಗೆ ಅನುಕೂಲವಾಗುತ್ತದೆಯೇ ? ಎದುರು ಪಕ್ಷಕ್ಕೆ ಸೇರಿದವರಿಗೆ ಎಷ್ಟು ಅನುಕೂಲವಾಗುತ್ತದೆ ಎನ್ನುವುದನ್ನು ಲೆಕ್ಕ ಹಾಕಿ ಅಭಿವೃದ್ಧಿ ಕಾರ್ಯ ಮಾಡುವುದಾದರೆ ಇದು ಎಷ್ಟರಮಟ್ಟಿಗೆ ಸರಕಾರ ಅಧಿಕಾರದಲ್ಲಿರಲು ಯೋಗ್ಯವಾಗಿದೆ ಎಂಬುದು ತಿಳಿಯುತ್ತದೆ. ದೇಶದಲ್ಲಿ ನಡೆದಿರುವ ಅಭಿವೃದ್ಧಿಕಾರ್ಯಗಳಲ್ಲಿ ಇಂಥ ದೋಷಗಳು ಕಂಡುಬರುತ್ತವೆ. ಈ ರೀತಿ ಕೆಲಸ ಮಾಡುತ್ತಾ ಹೋದರೆ ದೇಶದ ಅಭಿವೃದ್ಧಿಕಾರ್ಯಗಳು ನ್ಯಾಯವಾಗಿ ನೀತಿಯುಕ್ತವಾಗಿ ನಡೆಯುವುದಿಲ್ಲ. ಅನೀತಿ ಮಾರ್ಗ ಅನುಸರಿಸುತ್ತಾ ಹೋದರೆ ಇವರು ಅಧಿಕಾರದಲ್ಲಿ ಇರಲು ಅರ್ಹರಲ್ಲ ಎಂಬುದನ್ನು ಇದು ರುಜುವಾತು ಮಾಡುತ್ತದೆ. ಶ್ರೀಮಾನ್ ಗೋಪಾಲಗೌಡರು ಶ್ರೀಮಾನ್ ಸಿದ್ದವೀರಪ್ಪನವರು ಈ ವಿಷಯ ಪ್ರಸ್ತಾಪ ಮಾಡಿ ಚೆನ್ನಾಗಿ ಹೇಳಿದ್ದಾರೆ. ಆದ್ದರಿಂದ ಅದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿ ಹೋಗುತ್ತಾ ಇದ್ದಾರೆ. ಇವರು ಹೋಗುವುದಕ್ಕೆ ಮುಂಚೆ ನಮ್ಮ ದೇಶದಲ್ಲಿ ಅನೇಕ ವರ್ಷ ರಾಜ್ಯ ಭಾರ ಮಾಡಿ ಇವರು ಏನು ಬಿಟ್ಟು ಹೋಗುತ್ತಿದ್ದಾರೆ ಅಂದರೆ ಎಲ್ಲಿ ನೋಡಿದರೂ ಲಂಚ ಇರುವುದು ಕಾಣುತ್ತದೆ. ಮೇಲಿನ ಮಟ್ಟದಿಂದ ಸಾಮಾನ್ಯ ನೌಕರನವರೆಗೆ ಯಾವ ಕಚೇರಿಗೆ ಹೋದರೂ ಲಂಚವಿಲ್ಲದೆ ಕೆಲಸ ನಡೆಯುತ್ತಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಶ್ರೀಮಾನ್ ನಿಜಲಿಂಗಪ್ಪನವರ ಗಮನಕ್ಕೆ ತಂದರೆ ಇದನ್ನು ಬಹಳ ಉತ್ಪ್ರೇಕ್ಷೆ ಮಾಡಿ ಹೇಳುತ್ತೇವೆ ಎಂದು ಅನ್ನುತ್ತಾರೆ ಮುಖಕ್ಕೆ ಮಸಿ ಬಳಿಯಲು ಹೇಳುತ್ತೀರಿ ಎಂದು ಅನ್ನುತ್ತಾರೆ. ಇದರ ದೋಷ ತೋರಿಸಿಕೊಟ್ಟರೆ ನೀವು ಹೇಳುವುದು ಸರಿಯಲ್ಲ ಎಂದು ಹೇಳುತ್ತಾರೆ. ನಾನು ಹೇಳುವುದು ಇಷ್ಟೇ. ಇವರಿಗೆ ಕಣ್ಣು ಕಾಣುವುದಿಲ್ಲ, ಕಿವಿ ಕೇಳುವುದಿಲ್ಲ, ಸತ್ಯಾಂಶಕಂಡುಬರುವುದಿಲ್ಲ. ನ್ಯಾಯ ಗೊತ್ತಾಗುವುದಿಲ್ಲ. ಇಂದು ದೇಶದಲ್ಲಿ ಆಹಾರ ಅಭಾವ ಉಂಟಾಗಿದೆ, ನಿರುದ್ಯೋಗ ಬೆಳೆದಿದೆ ಲಂಚ ಎಲ್ಲ ಕಡೆಗೂ ಇದೆ. ಮಧುಗಿರಿ ತಾಲ್ಲೂಕಿನಲ್ಲಿ ಅನ್ಯಾಯ ನಡೆದಿದೆ. ಇದನ್ನು ಈ ಶಾಸನ ಸಭೆಯಲ್ಲಿ ಹೇಳಿದರೂ ಕೂಡ ಇವರು ಸುಮ್ಮನೆ ಕುಳಿತಿದ್ದಾರೆ. ಇಂದು ದೇಶದಲ್ಲಿ ಸುಳ್ಳು ಅಪ್ರಾಮಾಣಿಕತೆ ನಡೆಕೊಂಡು ಹೋಗುತ್ತಾ ಇದೆ. ಇದು ಆಡಳಿತದ ವೈಖರಿ. ಇಂಥ ಆಡಳಿತ ನಮಗೆ ಕೊಟ್ಟುಬಿಟ್ಟು ಶ್ರೀಮಾನ್ ನಿಜಲಿಂಗಪ್ಪನವರು ಮುಂದೆ ಹೋಗುತ್ತಿದ್ದಾರೆ.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇನ್ನು ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಈ ದಿವಸ ಕಾಂಗ್ರೆಸ್‌ಮಂತ್ರಿಮಂಡಳ ಕೆಲಸ ಮಾಡುತ್ತಾ ಇರತಕ್ಕಂಥ ರೀತಿಯನ್ನು ಜನ ಸಾಮಾನ್ಯರು ಅರಿತುಕೊಂಡಿದ್ದಾರೆ. ಅದು ಎಷ್ಟು ಬೇಗ ಗೊತ್ತಾಗುತ್ತದೆ ಅಂದರೆ ಮುಂದಿನ ಮಹಾ ಚುನಾವಣೆವರೆಗೆ ಕಾಯಬೇಕಾದ ಅಗತ್ಯವಿಲ್ಲ. ದೇಶದಲ್ಲಿ ದುಸ್ಥಿತಿ ಉಂಟಾಗಿದೆ. ಅಂಗೀ ಕಿತ್ತುಕೊಂಡು ಹೋಗುತ್ತಾರೆ ಅಂದರೆ ಚರ್ಮ ಸುಲಿಯುತ್ತಿದ್ದಾರೆ. ಇನ್ನು ಮುಂದೆ ಕಷ್ಟ ನಷ್ಟ ಅನುಭವಿಸಬೇಕಾಗಿದೆ. ದ್ವೇಷಗಳನ್ನು ಸ್ಪಷ್ಟವಾಗಿ ತಿಳಿಸಿ ಹೇಳಿ ರುಜುವಾತು ಮಾಡಿದರೂ ಕೂಡ ಅದನ್ನು ಗಮನಕ್ಕೆ ತೆಗೆದುಕೊಳ್ಳುವ ಶಕ್ತಿ ಸಾಮರ್ಥ್ಯ ಇಲ್ಲ. ಇವರಿಗೆ ಮನಸ್ಸು ಇಲ್ಲ. ಎಷ್ಟು ಹೇಳಿದರೂ ಅಷ್ಟೇ. ಇವರಿಗೆ ಯಾರ ಭೀತಿ ಇಲ್ಲ. ಜನರು ಕಾಡು ಪಾಲು ಆಗುವ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ನಾವು ವ್ಯಥೆ ಪಡ ಬೇಕಾಗಿದೆ. ಆದುದರಿಂದ ನೀವು ಆ ಜಾಗ ಖಾಲಿ ಮಾಡಬೇಕು. ಇದಕ್ಕಾಗಿ ಈ ಅವಿಶ್ವಾಸ ನಿರ್ಣಯ ಸೂಚಿಸಿದ್ದೇವೆ ಎಂದು ಈ ಎರಡು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಶ್ರೀನಿವಾಸ (ಸಾಗರ).—ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಅವಿಶ್ವಾಸ ನಿರ್ಣಯದಮೇಲೆ ನಡೆದಂಥ ಚರ್ಚೆಯನ್ನು ನಾನು ಸಾಧ್ಯವಿದ್ದಷ್ಟು ತಾಳ್ಮೆಯಿಂದ ಕೇಳಿದೆ. ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ನಡೆದ ಕಾಲದಲ್ಲಿ ಅನೇಕ ಮಾತುಗಳು ಕೇಳಿ ಬರುತ್ತಾ ಇದ್ದವು. ಸರಕಾರದ ಮೇಲೆ ಅಂದರೆ ಮಂತ್ರಿ ಮಂಡಳದ ಮೇಲೆ ಅನೇಕ ರೀತಿಯ ಆರೋಪಗಳು ಕೂಡ ಮಾಡಲ್ಪಟ್ಟಿವೆ. ಈ ಎಲ್ಲ ಆರೋಪಗಳಿಗೆ ಉತ್ತರ ಕೊಡತಕ್ಕಂಥ ಜವಾಬ್ದಾರಿ ಹಾಗು ಸಾಮರ್ಥ್ಯ ನನ್ನ ಹತ್ತಿರವಿಲ್ಲ. ಆದರೆ ಆ ಜವಾಬ್ದಾರಿ ಮತ್ತು ಸಾಮರ್ಥ್ಯವಿರತಕ್ಕವರು ಅದನ್ನು ನಿರ್ವಹಿಸುತ್ತಾರೆನ್ನುವ ದೃಡ ನಂಬಿಕೆ ಯಿಂದಲೇ ನನ್ನ ಮಾತುಗಳನ್ನು ಕೂಡ ನಾನು ಸಭೆಯಲ್ಲಿ ಪ್ರಸ್ತುತಗೊಳಿಸುತ್ತಿದ್ದೇನೆ. ನಿನ್ನೆ ಮಾತ ನಾಡುತ್ತ ನನ್ನ ಸ್ನೇಹಿತರು ವಿರೋಧ ಪಕ್ಷದ ಮಿತ್ರರೊಬ್ಬರು ಹೇಳಿದರು, ಕಾಂಗ್ರೆಸ್ಸಿನಲ್ಲೂ ಸಹ ಅನೇಕ ಜನ ಪ್ರಗತಿಪರವಾಗಿ ಯೋಚನೆ ಮಾಡತಕ್ಕವರು ಇದ್ದಾರೆ, ಅವರೆಲ್ಲ ಈ ಪಕ್ಷದ ಶಿಸ್ತಿಗೆ ಒಳ ಪಟ್ಟು ನಮಗೆ ಬೆಂಬಲ ಕೊಡದೆ ಇರಬಹುದು, ಆದರೆ ಅವರೆಲ್ಲ ವಿಶ್ವಾಸವಿಲ್ಲ ಎನ್ನುವ ಮಾತನ್ನು ಹೇಳಿದರು ಎಂದು. ಆ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಆದರೆ ಒಂದು ವಿಷಯ ನನ್ನ ಗಮನಕ್ಕೆ ಬಂದಿದೆ. ಕನಿಷ್ಠಪಕ್ಷ ಒಬ್ಬರಾದರೂ ವಿರೋಧ ಪಕ್ಷದ ಮಿತ್ರರು ನಿನ್ನೆಯ ದಿವಸ ತಮಗೆ ಈ ಅವಿಶ್ವಾಸ ನಿರ್ಣಯದಲ್ಲಿ ವಿಶ್ವಾಸವಿಲ್ಲ ಎಂದು ರೈಲು ಹತ್ತಿ ಊರಿಗೆ ಹೋದರು. ಅವರ ಹೆಸರು ಮತ್ತು ವಿಳಾಸ ಬೇಕಾದರೆ ನಾನು ಅಜೀಜ್ ಸೇಟ್‌ರವರಿಗೆ ಕೊಡುತ್ತೇನೆ. ಈ ಅವಿಶ್ವಾಸ ನಿರ್ಣಯ, ಇದರ ಉದ್ದೇಶ ಸರ್ಕಾರವನ್ನು ತಕ್ಷಣ ಕೆಳಗೆ ಇಳಿಸಿ ಅದರ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳತಕ್ಕುದಲ್ಲ ಎನ್ನುವುದನ್ನು ನೇರವಾದ ಮಾತಿನಲ್ಲಿ ಹಾಗೂ ಪರೋಕ್ಷವಾದ ನುಡಿಗಳಲ್ಲಿ ಬಹಳ ಜವಾಬ್ದಾರಿ ಇರತಕ್ಕ ವಿರೋಧ ಪಕ್ಷದ ಕೆಲವು ಮುಖಂಡರು ಹೇಳಿದ್ದಾರೆ. ನಾವು ಹೇಳುತ್ತಿರತಕ್ಕ ವಿಷಯವನ್ನು, ಏನು ಲೋಪದೋಷಗಳನ್ನು ನಾವು ಎತ್ತಿ ತೋರಿಸುತ್ತಿದ್ದೇವೆ ಅದರ ಬಗ್ಗೆ ಸರ್ಕಾರ ಸಾಕಷ್ಟು ಗಮನ ಕೊಡಬೇಕು ಮತ್ತು ತನ್ನನ್ನು ತಾನು ತಿದ್ದಿಕೊಳ್ಳಲಿಕ್ಕೆ, ಇನ್ನೂ ಉತ್ತಮವಾದ ಆಡಳಿತವನ್ನು ಕೊಡುವುದಕ್ಕೆ ಶ್ರಮಿಸಬೇಕು ಎಂದು ಸೂಚಿಸುವುದೇ ನಮ್ಮ ಪ್ರಾಮುಖ್ಯವಾದ ಉದ್ದೇಶ ಎನ್ನುವುದನ್ನು ಕೂಡ ಬಹಳ ಸ್ಪಷ್ಟವಾಗಿ ಹೇಳುತ್ತಾರೆ. ಇದೂ ಅಲ್ಲದೆ ಕಾಂಗ್ರೆಸ್‌ನಲ್ಲಿ ಮಾಡಿದಂಥ ಸೇವೆಯ ಬಗ್ಗೆ, ಇವತ್ತಿನವರೆಗೂ ನಮ್ಮ ದೇಶದ ರಾಜಕೀಯ ನಡೆದುಬಂದ ದಾರಿಯ ಬಗ್ಗೆ ಅನೇಕ ಮಾತುಗಳು ಆಗಿದ್ದಾವೆ. ಈ ಕ್ಷೇತ್ರಕ್ಕೆ ಹೊಸದಾಗಿ ಕಾಲಿಟ್ಟಿರುವ ನನಗನ್ನಿಸುತ್ತಿರುವುದು ಒಂದು. ಪಾರ್ಲಿಮೆಂಟರಿ ಪ್ರಜಾ ಸತ್ತೆಯ ಇತಿಮಿತಿಗಳನ್ನು ನಾವು ಅರ್ಥಮಾಡಿಕೊಳ್ಳುವುದಕ್ಕೆ ಸಾಕಷ್ಟು ಎಷ್ಟು ಅಪೇಕ್ಷಣೀಯವೋ ಅಷ್ಟು ಪ್ರಯತ್ನ ಪಡಲಿಲ್ಲವೋ ಏನೋ ಅನಿಸುತ್ತದೆ. ಹಾಗೂ ಈ ಪ್ರಜಾಪ್ರಭುತ್ವ ಸರ್ಕಾರದಲ್ಲಿ, ಅಲ್ಲಲ್ಲಿ ಅಷ್ಟೇ ಅತ್ಯುತ್ತಮವಾದ, ಪ್ರಾಮಾಣಿಕನಾದ ವ್ಯಕ್ತಿ ಇರಬಹುದು. ಆದರೆ ಇಡೀ ಪ್ರಜೆಗಳ ಬೆಂಬಲದಿಂದ ಬಂದಿರತಕ್ಕಂಥ ನಾಯಕರಿಂದ, ನಾಯಕರು ಎಂದರೆ ಕೇವಲ ರಾಜಕೀಯಕ್ಕೆ ಸಂಬಂ ಧಪಟ್ಟವರಲ್ಲ, ಅಧಿಕಾರಿಯೇ ಇರಲಿ, ಶಾಲಾ ಉಪಾಧ್ಯಾಯರೇ ಇರಲಿ, ಅವರನ್ನೆಲ್ಲ ನಾವು ಆ ಅಪಾದನೆಯಿಂದ ಹೋಲಿಸಿ ಇಳಿಸಲಿಕ್ಕೆ ಸಾಧ್ಯವಿಲ್ಲ. ಎಂದರೆ, ಯಾವ ನೀರನ್ನು ನಾವು ಕುಡಿಯು ತ್ತಿರುತ್ತೇವೆ, ಯಾವ ಗಾಳಿಯಲ್ಲಿ ಉಸಿರಾಡುತ್ತಿದ್ದೇವೆ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಕೇವಲ ಗಗನಕುಸುಮ ಸದೃಶವಾದ ಒಂದು ಆದರ್ಶವನ್ನು ಹೋಲಿಸಿದರೆ ಅದರಿಂದ ಯಾವ ತಪ್ಪೂ ಇಲ್ಲ. ಅದನ್ನು ಪದೇ ಪದೇ ಹೋಲಿಸುತ್ತ ಹೋಗುವುದರಿಂದ ನಮ್ಮಲ್ಲಿರುವ ನಂಬಿಕೆಯನ್ನು ನಾವು ಕಳೆದು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಇಷ್ಟು ದಿವಸಗಳ ನಂತರ ನಮ್ಮ ಪ್ರಜಾಪ್ರಭುತ್ವ

ವನ್ನು ನೋಡಿದರೆ ಪಾರ್ಲಿಮೆಂಟ್ ಅಥವಾ ನಮ್ಮ ವಿಧಾನಸಭೆಯನ್ನು ನೋಡಿದರೆ ನನಗೆ ಎಷ್ಟೋ ಬಾರಿ ಇಲ್ಲಿ ಕೂತಾಗ ಇಷ್ಟೆಲ್ಲ ಸುವ್ಯವಸ್ಥಿತವಾದ ಆಸನ ವ್ಯವಸ್ಥೆ, ಧ್ವನಿವರ್ಧಕ ವ್ಯವಸ್ಥೆ ಇವೆಲ್ಲ ಈಗ ನಾವು ಮಾಡುತ್ತಿರುವ ಕಾರ್ಯಕ್ಕೆ ಬಹಳ ಅವಶ್ಯಕವೇ ಎಂದು ಅನ್ನಿಸುತ್ತದೆ. ಒಂದು ಜಮಖಾನ ಹಾಸಿಕೊಂಡು ಮರದ ಕೆಳಗೆ ಕುಳಿತುಕೊಂಡು ಇದಕ್ಕಿಂತ ಅತ್ಯುತ್ತಮವಾದ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಏನೋ ಎಂದು ಅನ್ನಿಸುತ್ತದೆ. ಪ್ರಜಾಪ್ರಭುತ್ವದ ಇತಿಮಿತಿಗಳನ್ನು ಅರಿತುಕೊಳ್ಳದೆ, ಪಾರ್ಲಿಮೆಂಟರಿ ಪ್ರಜಾಸತ್ತೆಯ ಲಿಮಿಟೇಷನ್ಸ್ ಎಂದು ಏನು ಹೇಳುತ್ತಾರೆ ಅದನ್ನು ಅರಿತುಕೊಳ್ಳದೆ, ಇದ್ದಕ್ಕಿದ್ದ ಹಾಗೆ ಓಟು ಗಳಿಸುವುದಕ್ಕೆ ಪ್ರಯತ್ನಪಟ್ಟರೆ ಅದರಿಂದ ನಾವು ಜನಸೇವೆಯನ್ನು ಮಾಡಿದಂತಾಗುವುದಿಲ್ಲ. ವಿರೋಧ ಪಕ್ಷದ ಒಬ್ಬ ಸದಸ್ಯರು ಕೋಲಾರಕ್ಕೆ ಬನ್ನಿ, ಬಳ್ಳಾರಿಗೆ ಬನ್ನಿ, ಗಾಂಧಿ ಬಜಾರಿಗೆ ಬನ್ನಿ, ಎರಡು ಸಾವಿರ ಜನರನ್ನು ಸೇರಿಸುತ್ತೇನೆ, ವಿಧಾನ ಸೌಧಕ್ಕೆ ಅಲ್ಲಿಂದ ಮೆರವಣಿಗೆ ಹೊರಡಿಸುತ್ತೇನೆ ಎಂದು ಹೇಳಿದರು. ಜನ ಸೇರಿಸುವುದು ಬಹಳ ಕಷ್ಟವೆಂದು ಹೇಳುವುದಿಲ್ಲ. ಇವತ್ತು ಯಾವ ಜನ ಬಹಳ ತಾಳ್ಮೆಯಿಂದ ತಮ್ಮ ಮಾತು ಕೇಳುತ್ತಿದ್ದಾರೆಯೋ ಅವರೇ ನಾಳೆ ದಿನ ನಿಮಗೆ ಕಲ್ಲು ಹೊಡೆಯದೆ ಇದ್ದಹಾಗೆ ತಪ್ಪಿಸಿಕೊಳ್ಳುವುದು ಕಷ್ಟವಾಗುತ್ತದೆ. ಜನರ ದೌರ್ಬಲ್ಯವನ್ನು ಉಪಯೋಗಿಸಿಕೊಳ್ಳುವುದು ಸುಲಭ, ಆದರೆ ಅವರು ಬೆಂಬಲವನ್ನು ಬಳುವಳಿಯಾಗಿ ಕೊಡುವುದಿಲ್ಲ, ಯಾವುದೋ ಆಶೋತ್ತರಗಳಿಂದ ಕೊಡುತ್ತಾರೆ. ಅಂಥ ಆಶೋತ್ತರಗಳನ್ನು ನೆರವೇರಿಸುವುದಕ್ಕೆ ಸಾಧ್ಯವಿಲ್ಲದೆಹೋದರೆ ಅವರು ಎದುರುಬೀಳುತ್ತಾರೆ. ಅದರಿಂದ ಜನಗಳಿಗಾಗಲೀ ನಿಮಗಾಗಲೀ ಯಾವುದೇ ರೀತಿಯಿಂದ ಉಪಯೋಗ ಮಾಡಿದಂತಾಗುವುದಿಲ್ಲ. ಇವತ್ತು ವಿಚಾರಣೆಯ ಯುಗ ಪ್ರಾರಂಭವಾಗುತ್ತಿದೆ, ನಮ್ಮ ಸರ್ಕಾರ ಬಂದರೆ ಆರೀತಿ ಯಾಗುತ್ತದೆ ಎಂದು ವಿರೋಧ ಪಕ್ಷದ ಮುಖಂಡರೊಬ್ಬರು ಅಪ್ಪಣೆ ಕೊಡಿಸಿದರು. ವಿಚಾರಣೆ ಮಾಡುವಾಗ ಯಾರನ್ನು ಬಿಡುತ್ತಾರೆ? ನಾಳೆ ದಿವಸ ಕೇವಲ ಮಾಜಿ ಮಂತ್ರಿಗಳನ್ನಷ್ಟೇ ವಿಚಾರಣೆ ಮಾಡಿದರೆ ಸಾಕಾಗಲಾರದು. ಎಲ್ಲ ಮಾಜಿ ಶಾಸಕರನ್ನು ಅಷ್ಟೇ ಅಲ್ಲ ಮಾಜಿ ರೆವೆನ್ಯೂ ಇನ್‌ಸ್ಪೆಕ್ಟರನಿಂದ ಹಿಡಿದು ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಹೀಗೆ ಪ್ರತಿಯೊಬ್ಬರನ್ನೂ ಕೂಡ ತಾವು ವಿಚಾರಣೆ ಮಾಡಲೇಬೇಕಾಗುತ್ತದೆ. ಕೊನೆಗೆ ಬೇಕಾದರೆ 'ಬೆನಿಫಿಟ್ ಆಫ್ ಡೌಟ್' ಕೊಡಿ. ವಿಚಾರಣೆಯಂತೂ ಆಗಲೇಬೇಕು. ಇದರಿಂದ ಯಾವ ಪ್ರಯೋಜನವಾಯಿತು ? ಕೇವಲ ರಕ್ತ, ಬೆಂಕಿ, ಇವಿಷ್ಟನ್ನು ಮಾತ್ರ ಕಲ್ಪನೆಯಲ್ಲಿಟ್ಟುಕೊಂಡು ಅಂಥ ಯುಗವನ್ನು ಪ್ರಾರಂಭ ಮಾಡಬೇಕೆ ಹೊರತು ತಾವು ಏನು ಆದರ್ಶ ರಾಜ್ಯ, ಉತ್ತಮ ಆಡಳಿತವನ್ನು ಕಲ್ಪಿಸಿಕೊಂಡು ಆ ಯುಗವನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತೀರಿ, ಅದನ್ನು ತಂದುಕೊಡಲಿಕ್ಕೆ ಸಾಧ್ಯವಿಲ್ಲವೆಂದು ಅತ್ಯಂತ ಕಳಕಳಿಯಿಂದ ಅವರಲ್ಲಿ ವಿನಂತಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇನೆ.

ಇನ್ನು ಒಂದೇ ಒಂದು ಮಾತನ್ನು ನಾನು ಬಹಳ ವಿಷಾದದಿಂದ ಹೇಳಬಯಸುತ್ತೇನೆ. 20 ವರ್ಷಗಳ ನಂತರ ಈ ಪಾರ್ಲಿಮೆಂಟರಿ ಪ್ರಜಾಸತ್ತೆ ಎಂದರೆ ಕಾಂಗ್ರೆಸ್ ಏನು ಮಾಡುತ್ತಿದೆ ಅದಲ್ಲ, ಭ್ರಷ್ಟಾಚಾರ ಎಂದು ವಿರೋಧಪಕ್ಷದವರು ಏನು ಹೇಳುತ್ತಾರೆ ಅದಲ್ಲ, ಮಿಥ್ಯಾರೋಪ ಎನ್ನತಕ್ಕ ಸ್ಥಿತಿಯೂ ಅಲ್ಲ. ಇವೊತ್ತು ನಮ್ಮ ಭಾಷಣಗಳನ್ನು ಕೇಳುವುದಕ್ಕೆ ಅಥವಾ ವಾಗ್‌ವಿವಾದಗಳನ್ನು ಕೇಳುವುದಕ್ಕೆ, ಜನ ಗ್ಯಾಲರಿಗಳಿಗೆ ಬರುತ್ತಾರೆ ಎಂದು ನಾನು ಭಾವಿಸುವುದಿಲ್ಲ. ಅವರು ಪ್ರಾಯಶಃ ತಮಾಷೆ ನೋಡಲಿಕ್ಕೆ, ಮನರಂಜನೆ ಮಾಡಿಕೊಳ್ಳಲಿಕ್ಕೆ ಬರುತ್ತಾರೆಯೇ ಹೊರತು ಬೇರೆ ಯಾವ ಕೆಲಸಕ್ಕೋ ಬರುತ್ತಾರೆ ಎಂದು ನನಗನ್ನಿಸುವುದಿಲ್ಲ. ಈ ಒಂದು ಸಂದರ್ಭವನ್ನು ಲಕ್ಷಿಸಿದರೆ ಈ ಪ್ರಜಾಪ್ರಭುತ್ವ ಎನ್ನತಕ್ಕುದು ಕೇವಲ ಭ್ರಷ್ಟಾಚಾರವೂ ಅಲ್ಲ, ಮಿಥ್ಯಾರೋಪವೂ ಅಲ್ಲ ಎನ್ನುವುದನ್ನು ಸಿದ್ಧಪಡಿಸಬೇಕಾದ್ದು ಈ ಮನೆಯಲ್ಲಿರುವ ಎಲ್ಲ ಸದಸ್ಯರ ಕರ್ತವ್ಯ, ಆಡಳಿತ ಪಕ್ಷದಲ್ಲಿರುವ ಮತ್ತು ವಿರೋಧ ಪಕ್ಷದಲ್ಲಿರುವ ಎಲ್ಲರ ಜವಾಬ್ದಾರಿ, ದೇಶದ ಬಗ್ಗೆ ಜವಾಬ್ದಾರಿ ಇರತಕ್ಕ ಮತ್ತು ಹಿರಿಯ ಮುಖಂಡರೆಲ್ಲರ ಕರ್ತವ್ಯ. ಅದನ್ನು ಸಾಧಿಸುವುದಕ್ಕೆ ಈ ಮನೆಯಲ್ಲಿ ಕಷ್ಟವಾದರೆ ಬೇರೆ ಕೋಣೆಯಲ್ಲಿ ಜಮಖಾನ ಹಾಸಿಕೊಂಡು ಕುಳಿತಾದರೂ ಮಾಡಬೇಕು. ಹಾಗೆ ಮಾಡದೆ ಹೋದರೆ ಬೆಂಕಿಯ ಬಗ್ಗೆ ರಕ್ತದ ಬಗ್ಗೆ ಮಾತನಾಡುವುದರಿಂದ ಇವೊತ್ತು ಮಾತನಾಡಿದ್ದನ್ನು ನಾಳೆ ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ. ಈ ಅವಿಶ್ವಾಸ ನಿರ್ಣಯದಿಂದ ಹೆಚ್ಚಿನ ಆತ್ಮಶೋಧನೆಗೆ ನೆರವಾದರೆ ಅದನ್ನು ತಪ್ಪು ಎಂದು ಹೇಳುವುದಿಲ್ಲ. ಆದರೆ ಇದು ಬಹಳ ಲಘುವಾಗಿ ಇಡೀ ಪಾರ್ಲಿಮೆಂಟರಿ ಪ್ರಜಾಸತ್ತೆಯ ಬಗ್ಗೆ, ಅದರ ವ್ಯವಸ್ಥೆಯ ಬಗ್ಗೆ ಜನ ನಗುವಂತೆ ಈ ಸಭೆಯ ಕಾರ್ಯವಾಗುವುದಾದರೆ ಅದರಿಂದ ಹೆಚ್ಚು ಪ್ರಯೋಜನವಿಲ್ಲ ಅದಕ್ಕಿಂತ ಅತ್ಯುತ್ತಮವಾದುದನ್ನು ಯೋಚನೆ ಮಾಡಬೇಕೆಂದು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವಿರೋಧ ಪಕ್ಷದ ನಾಯಕರು ಯಾವ ಉದ್ದೇಶದಿಂದ ಈ ನಿರ್ಣಯವನ್ನು ತಂದಿದ್ದಾರೆಯೋ ಆ ಉದ್ದೇಶ ಈಗಾಗಲೇ ನೆರವೇರಿದೆಯಾದುದರಿಂದ ಅವರು ಈ ನಿರ್ಣಯವನ್ನು ವಾಪಸು ಪಡೆಯಲಿಕ್ಕೆ ಯಾವುದೇ ರೀತಿಯ ಅಭ್ಯಂತರವಿಲ್ಲ ಎಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ ವಿರೋಧ ಪಕ್ಷದ ಮಾನ್ಯ ನಾಯಕರು ತಂದ ಅವಿಶ್ವಾಸ ನಿರ್ಣಯದ ಮೇಲೆ ನಿನ್ನೆಯಿಂದ ತುಂಬಾ ಚರ್ಚೆಯಾಗಿದೆ. ನನ್ನ ಸಹೋದ್ಯೋಗಿಗಳು ಈ ಚರ್ಚೆಗೆ ಸೂಕ್ತ ಉತ್ತರವನ್ನು ಕೊಡುವವರಿದ್ದಾರೆ. ನಾನಾದರೂ ಒಂದೆರಡು ವಿಚಾರಗಳನ್ನು ಮಾತ್ರ ಪ್ರಸ್ತಾಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಸಭೆಯಲ್ಲಿ ನಡೆದ ಭಾಷಣಗಳಲ್ಲಿ ಕೆಲವು ಉತ್ತಮ ದರ್ಜೆಯವಾಗಿದ್ದುವು. ಇದರಲ್ಲಿ ಟೀಕೆಗಳಿದ್ದುವು. ಅವುಗಳಲ್ಲಿ ಕೆಲವಕ್ಕೆ ಆಧಾರವಿರಬಹುದು, ಕೆಲವು ನಿರಾಧಾರವಾಗಿರಬಹುದು. ಅವನ್ನು ಪರಿಶೀಲನೆ ಮಾಡುವುದಕ್ಕೆ ಇನ್ನೂ ಕಾಲವಿದೆ. ನನ್ನ ಸಹೋದ್ಯೋಗಿಗಳು ಆ ವಿಚಾರವನ್ನು ಪ್ರಸ್ತಾಪಿಸುವವರಿದ್ದಾರೆ. ನಾವೂ ಮತ್ತು ಇತರರೂ ಆಡಿದ ಮಾತುಗಳನ್ನು ತುಲನೆಮಾಡಿ ತೀರ್ಮಾನಮಾಡುವ ಜನರು ಹೊರಗಡೆ ಇದ್ದಾರೆ. ಈ ಸಭೆಯಲ್ಲಿ ನುರಿತ ಸದಸ್ಯರು ಅನೇಕರಿದ್ದಾರೆ, ಯುವಕ ಸದಸ್ಯರೂ ಇದ್ದಾರೆ, ಅವರು ಈ ಮನೆಯ ಸದಸ್ಯರಾಗಿರುವುದು ಬಹಳ ಅವಶ್ಯಕವೆಂದು ನಾನು ಭಾವಿಸುತ್ತೇನೆ. ಚರ್ಚೆಮಾಡುವಾಗ ಇನ್ನೂ ಮೇಲ್ಮಟ್ಟದ ಚರ್ಚೆ ನಡೆಸುವುದಕ್ಕೆ ಅವಕಾಶವಿದೆ, ಮಾತು ಆಡಿಹೋಯ್ತು, ಮುತ್ತು ಒಡೆದುಹೋಯ್ತು ಎಂದು ಹೇಳುತ್ತಾರೆ. ಕಠಿಣವಾದ ವಿಷಯಗಳಾದರೂ ಕೂಡ ಒಳ್ಳೆಯ ಮಾತುಗಳಲ್ಲಿ ಅವನ್ನು ಹೇಳುವುದಕ್ಕೆ ಸಾಧ್ಯವಿದೆ. ಉದಾಹರಣೆಗೆ ಹೇಳುವುದಾದರೆ ಅನೇಕರು ಮಾನವಿಲ್ಲ, ಮರ್ಯಾದೆಯಿಲ್ಲ ಎಂದು ಮುಂತಾಗಿ ಕೆಲವರು ಅನೇಕ ಶಬ್ದಗಳನ್ನು ಉಪಯೋಗಿಸಿ ಮಾತನಾಡಿದರು. ಇದನ್ನು ತುಲನೆಮಾಡಿ ನೋಡಲಿ, ಈ ಸಭೆಯ ಯೋಗ್ಯತೆಗೆ ಆ ಮಾತುಗಳು ಅನುಗುಣವಾಗಿವೆಯೇ ಎಂಬುದನ್ನು ಆಲೋಚನೆಮಾಡಿ ನೋಡಲಿ. ಒಂದು ವಿಚಾರ ಮರೆಯಬಾರದು. ಈ ಕಡೆ ಇರುವ ಸದಸ್ಯರಾಗಲಿ ವಿರೋಧ ಪಕ್ಷದ ಸದಸ್ಯರಾಗಲಿ ಎಲ್ಲರೂ ಕೂಡ ಮತದಾರರಿಂದ ಚುನಾಯಿತರಾಗಿ ಬಂದಿರುವವರು, ನಾವು ಹೇಳುವ ವಿಷಯಗಳನ್ನು ಗಂಭೀರವಾಗಿ ಹೇಳುವುದಕ್ಕೆ ಅವಕಾಶವಿದೆ, ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಹೇಳುವುದಕ್ಕೆ ಅವಕಾಶವಿದೆ, ಇದುವರೆಗೆ ವಿಧಾನ ಸಭೆಯಲ್ಲಿ ನಾನು ಕೇಳದ ಒಂದು ವಾದವನ್ನು ಈ ಸಲ ಕೇಳಿದೆ. ಮಾನ್ಯ ಸದಸ್ಯರು ಈ ಸಭೆಯಲ್ಲಿ ಹೇಳುವುದರಿಂದ ಮುಗಿಯುವುದಿಲ್ಲ, ಈ ಸಭೆಯಲ್ಲಿ ಮತ ಪಡೆಯುವುದರಿಂದ ಇರುವ ಪರಿಸ್ಥಿತಿ ಬದಲಾಯಿಸುವುದಿಲ್ಲ, ಇದಕ್ಕೆ ಬದಲಾಗಿ ಬೇರೊಂದು ಪರಿಸ್ಥಿತಿ ಇಲ್ಲಿ ಇದೆ ಎಂದು ಹೇಳಿದರು. ಆ ಪರಿಸ್ಥಿತಿ ಏನೆಂದರೆ ವಿಧಾನಸೌಧಕ್ಕೆ ಸಾರ್ವಜನಿಕರು ನುಗ್ಗಿ ಬರಬೇಕು ಆಗ ಇದು ಸರಿಹೋಗಬೇಕು, ಅವರು ಬಂದು ಅಧಿಕಾರಾರೂಢರಾಗಿರುವ ಮಂತ್ರಿಗಳನ್ನಿರಿಸಬೇಕು ಎಂಬುದು ವಾದ. ವಾದಕ್ಕೆ ಈ ಒಂದು ಮಾರ್ಗವನ್ನು ಒಪ್ಪುವುದಾದರೆ ಹೇಳುತ್ತೇನೆ, ನಾವೂ, ಅವರೂ ಇಲ್ಲಿರುವುದಕ್ಕಾಗುವುದಿಲ್ಲ, ಇದು ಪ್ರಜಾಪ್ರಭುತ್ವಕ್ಕೆ ಮೆರಗುತರುವುದಿಲ್ಲ. ಇನ್ನು ಮೇಲಾದರೂ ಕೂಡ ಇಂಥ ಧೋರಣೆಯನ್ನು ಇಂಥ ಭಾವನೆಯನ್ನು, ಸಾರ್ವಜನಿಕರನ್ನು ಕೆರಳಿಸುವ ಮಾತನ್ನು ಆಡದಿರುವುದು ಒಳ್ಳೆಯದು ಎಂದು ವಿನಂತಿಮಾಡುತ್ತೇನೆ. ಆದರೆ ವಾಕ್ ಸ್ವಾತಂತ್ರ್ಯವಿದೆ, ಈ ಸಭೆಯಲ್ಲಿ ತಮಗೆ ತೋಚಿದ ವಿಚಾರ ಹೇಳುವುದಕ್ಕೆ ಅವಕಾಶವಿದೆ, ಅವಕಾಶಕೊಡದಿರುವಾಗ ಮಾತನಾಡುವುದಕ್ಕಾಗುವುದಿಲ್ಲ, ಆಡಬಾರದು ಎಂದು ಹೇಳುವುದನ್ನು ಆಡುವುದಕ್ಕಾಗುವುದಿಲ್ಲ, ಇಷ್ಟು ಉಳಿದು ಬಾಕಿ ವಿಚಾರಗಳನ್ನು ಹೇಳುವುದಕ್ಕೆ ಅವಕಾಶವಿದೆ. ಈ ವಿಚಾರದಲ್ಲಿ ಹೆಚ್ಚಿಗೆ ಹೇಳಿ ಸಭೆಯ ಅಮೂಲ್ಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಅಪೇಕ್ಷೆಪಡುವುದಿಲ್ಲ.

ಮಾನ್ಯ ಸ್ನೇಹಿತರಾದ ಮೈಸೂರು ನಗರ ಕ್ಷೇತ್ರದಿಂದ ಚುನಾಯಿತರಾಗಿರುವ ಅಜೀಜ್‌ಸೇಠ್‌ರವರು ಕೆಲವು ವಿಚಾರ ಪ್ರಸ್ತಾಪಮಾಡಿದ್ದಾರೆ, ಅವರ ಭಾಷಣದ ಪೂರ್ವಾರ್ಧದಲ್ಲಿ ನಾನು ಇಲ್ಲಿರಲಿಲ್ಲ, ಆ ಸಮಯದಲ್ಲಿ ತಮ್ಮ ಕಛೇರಿಯ ಶೀಘ್ರಲಿಪಿಗಾರರು ಬರೆದುಕೊಂಡಿರುವುದನ್ನು ತರಿಸಿಕೊಂಡಿದ್ದೇನೆ. ಅದರಲ್ಲಿರುವ ಒಂಡೆರಡು ಅಂಶಗಳ ಕಡೆಗೆ ಈ ಸಭೆಯ ಗಮನವನ್ನು ಸೆಳೆಯುತ್ತೇನೆ. ಒಂದು ವಿಚಾರ ಹೇಳಿದ್ದಾರೆ, ಮಾನ್ಯ ಸದಸ್ಯರು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಆಹ್ವಾನ ಕೊಟ್ಟಿದ್ದರು, ಕೆ. ಆರ್. ಮಿಲ್ಸ್ ಪರವಾಗಿ ಒಂದು ಇನ್‌ವಿಟೇಷನ್ ಕಳಿಸಿದ್ದು ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಅಂಗೀಕಾರಮಾಡುತ್ತಾರೆಂದು ಎಣಿಸಿದ್ದರು, ಅವರು ಕಳುಹಿಸಿರಬಹುದು ; ಊಹಿಸಿರುವುದಕ್ಕೆ ಒಂದು ಕಾರಣವುಂಟು. ಪುಟ್ಟಸ್ವಾಮಿಯವರು ಮುಖ್ಯಮಂತ್ರಿಗಳಮೇಲೆ ಇಲ್ಲದಿರುವ ಪ್ರಭಾವ ಬೀರಿ ಅಲ್ಲಿಗೆ ಹೋಗಬಾರದು ಎಂದು ತಿಳಿಸಿದರು, ಅದನ್ನು ಮುಖ್ಯಮಂತ್ರಿಗಳು ಕೇಳಿರಬೇಕು ಎಂದು ಊಹಿಸಿರಬೇಕು. ಮುಖ್ಯಮಂತ್ರಿಗಳಮೇಲೆ ಎಲ್ಲ ಸದಸ್ಯರೂ ಪ್ರಭಾವ ಬೀರುತ್ತಾರೆ. ಆಡಳಿತ ನಡೆಸುವವರ ಸಹಾನುಭೂತಿ ಪಡೆಯಬೇಕು ಎಂದು ಎಲ್ಲರಿಗೂ ಭಾಷಣಮಾಡುವರು. ಚನ್ನಬಸಪ್ಪನವರು ಮಾತನಾಡುವಾಗ ಅದರ ಪರಿಣಾಮ ನಮ್ಮ ಮೇಲಾಗಬೇಕೆಂದು ಮನಸ್ಸುಮಾಡಿ ಮಾತನಾಡುತ್ತಾರೆ; ಶಿವಪ್ಪನವರಮೇಲೆ ಪರಿಣಾಮ

ವಾಗಲಿ ಎಂದು ಮಾಡುವುದಿಲ್ಲ. ಮುಖ್ಯಮಂತ್ರಿಗಳಿಗೆ ಯಾವ ಇನ್‌ವಿಟೇಷನ್ ಕೊಟ್ಟಿರೋ ನನಗೆ ಗೊತ್ತಿಲ್ಲ, ಅವರು ಅದಕ್ಕೆ ಒಪ್ಪಿದ್ದರೋ ಇಲ್ಲವೋ, ಕಾರಣವಿದೆಯೋ ಇಲ್ಲವೋ ಗೊತ್ತಿಲ್ಲ. ಅವರನ್ನೇ ಕೇಳಬೇಕು. ಒಂದೊಂದು ಸಲ ಮುಖ್ಯ ಮಂತ್ರಿಗಳಿಗೆ ಯಾವುದಾದರೂ ಒಂದು ಆಹ್ವಾನ ಬಂದು ಅದನ್ನು ಒಪ್ಪಿಕೊಳ್ಳಲು ವಿಚಾರಮಾಡಬೇಕೆಂದು ಕಂಡರೆ ಆ ಸ್ಥಳದ ಜನರು ಮಂತ್ರಿಯಾಗಿರಬಹುದು ಅಥವಾ ಒಬ್ಬ ಸದಸ್ಯರಾಗಿರಬಹುದು ಅಥವಾ ಬೇರೆಯವರಾಗಿರಬಹುದು—ಅವರನ್ನು ಕೇಳಿ ತಿಳಿಯುವುದಕ್ಕೆ ಅಧಿಕಾರವಿದೆ. ಆದರೆ ಈ ವಿಚಾರದಲ್ಲಿ ಕೇಳಿಲ್ಲ, ಕೇಳಬೇಕಾದ ಪ್ರಮೇಯವಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಇನ್‌ಫರೆನ್ಸ್ ಇಟ್ಟುಕೊಂಡಿರುವುದು ಸರಿಯಲ್ಲ, ನನ್ನನ್ನು ಅವರು ಕೇಳಿದ್ದರೆ ನನಗೆ ಹಿನ್ನಲೆ ಗೊತ್ತಾಗಿದ್ದರೆ ಹೇಳಬಹುದಾಗಿತ್ತು. ನನಗೆ ಅವರು ಇದರ ವಿಚಾರ ಹೇಳಿಲ್ಲ.

ಎರಡನೆಯದಾಗಿ ಇನ್ನೊಂದು ವಿಚಾರ ಹೇಳಿದ್ದಾರೆ, ಕೆ.ಆರ್.ಮಿಲ್ಸ್ ಲೇಬರ್ ಕಾಲೋನಿಗೆ ಅದು ಸಂಬಂಧಪಟ್ಟಿದೆ ಆ ಕಾಲೋನಿ ಮಾಡಿದೆ, ಹಿಂದೆ ನಾನು ಮಂತ್ರಿಯಾಗಿದ್ದಾಗ ವಸತಿ ಇಲಾಖೆ ನನ್ನ ಅಡಳಿತದಲ್ಲಿತ್ತು, ಆ ಕಾಲೊನಿ ನಾನು ಮಾಡಿದೆ ಎಂದು ಹೇಳಿದ್ದಾರೆ. ಇದು ಇಲ್ಲದಿರುವ ಪ್ರಸಂಗ. ಆ ಕಾಲೊನಿ ನಾನು ಮಾಡಿದ್ದಲ್ಲ, ಆದಕ್ಕೆ 1953ನೆಯ ಇಸವಿ ಅಕ್ಟೋಬರಿನಲ್ಲಿ ಅಂದು ಕೇಂದ್ರ ಸರಕಾರದಲ್ಲಿ ಆ ಖಾತೆ ಸಚಿವರಾಗಿದ್ದ ಸ್ವರ್ಣಸಿಂಗರವರು ಬಂದು ಉದ್ಘಾಟನೆ ಮಾಡಿದರು. ಅಲ್ಲಿ ಕಾರ್ಮಿಕರು ವಾಸಮಾಡುತ್ತಿದ್ದಾರೆ, ಕೃಷ್ಣರಾಜ ಗಿರಣಿಯ ಮತ್ತು ಇತರ ಕಾರ್ಮಿಕರು ಅಲ್ಲಿ ವಾಸಮಾಡುತ್ತಿದ್ದಾರೆ, ಎಲ್ಲ ಕಾರ್ಮಿಕರೂ ಅಲ್ಲಿಗೆ ಬಾರದಿದ್ದುದರಿಂದ ಬೇರೆಯವರು, ಅರ್ಹತೆಯಿಲ್ಲದವರು ಕೂಡ ಅಲ್ಲಿ ವಾಸಮಾಡಲು ಅವಕಾಶಕೊಟ್ಟಿದ್ದಾರೆ. ಕಾರಣ ಮನೆ ಕಟ್ಟಿದಾಗ ಬಾಡಿಗೆ ದುಬಾರಿ ಎಂದು ಎಲ್ಲಾ ಕಾರ್ಮಿಕರೂ ಅಲ್ಲಿಗೆ ಹೋಗಲಿಲ್ಲ. ಅಲ್ಲಿ ಸುಮಾರು 500 ಮನೆಗಳಿವೆ, ಸುಮಾರು ಅಲ್ಲಿ ವಾಸಮಾಡುಲು ಅರ್ಹತೆಯಿಲ್ಲದ ನೂರು ಸಂಸಾರದವರು ಅಲ್ಲಿ ವಾಸಮಾಡುತ್ತಿದ್ದಾರೆ, ಅವರನ್ನು ಉಚ್ಚಾಟನೆ ಮಾಡುವುದಕ್ಕೆ ಅವಕಾಶವಿಲ್ಲ. ಕಾರ್ಮಿಕರು ಬರಲಿಲ್ಲವೆಂದು ಅರ್ಹರಲ್ಲದವರಿಗೆ ಕೊಟ್ಟಮೇಲೆ ಏನಾದರೂ ಮಾಡಿದರೆ ಕೊಟ್ಟವರಿಗೆ ತೊಂದರೆಯಾಗುತ್ತದೆ. ಅಲ್ಲಿ ಕೇವಲ 8—10 ರೂಪಾಯಿಗಳ ಬಾಡಿಗೆ ಇದ್ದರೆ, ಇವತ್ತು ಅವರನ್ನು ಉಚ್ಚಾಟನೆಮಾಡಿದರೆ ಅವರು ಹೊರಗಡೆ ಹೋಗಿದ್ದಾದರೆ ಸೌಕರ್ಯ ಇರುವ ಮನೆಗಳಿಗೆ 75—100 ರೂಪಾಯಿಗಳ ಬಾಡಿಗೆ ಕೊಡಬೇಕು. ಈ ಕಾರಣದಿಂದ ಅಲ್ಲಿ ವಸತಿ ಇಲ್ಲವೆಂದು ಬಹಳ ಉದಾರವಾದ ನೀತಿಯನ್ನು ಅನುಸರಿಸಿ ಈ ವರ್ಗದ ಜನರಿಗೆ ಅಂದರೆ ಬಹಳ ಕಡಮೆ ವರಮಾನ ಬರತಕ್ಕ ವರ್ಗದ ಜನರಿಗೆ ಅನುಕೂಲವಾಗುವ ಹಾಗೆ ಸುಮಾರು 95—100 ಮನೆಗಳನ್ನು ಕಟ್ಟಿ ಅದರಲ್ಲಿ ಸುಮಾರು 70 ಸಂಸಾರಗಳಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಟ್ಟಿದೆ. ಈಗ ಆ ಮನೆಗಳನ್ನು ಬಿಡುವುದಕ್ಕೆ ಒಪ್ಪುವುದಿಲ್ಲ. ನಾವು ಆ ಮನೆಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈ ಕಾಲೋನಿ ಹೊಸದಲ್ಲ. ಇವತ್ತು ಸಾಕಷ್ಟು ಜನಗಳು ಬಂದಿಲ್ಲ. ಇದರ ಆಡಳಿತವನ್ನು ಇವತ್ತು ನಡೆಸಿಲ್ಲ 1953ರಿಂದ ಇದು ನಡೆಯುತ್ತಿರುವುದು ಆಗಿದೆ. ಏತಕ್ಕೆ ಈ ವಿಚಾರವನ್ನು ಈಗ ಪ್ರಸ್ತಾಪಮಾಡಬೇಕೋ ಗೊತ್ತಿಲ್ಲ. 13–14 ವರ್ಷಗಳ ಹಿಂದೆ ಈ ಕಾಲೋನಿಯಲ್ಲಿ ವಾಸಮಾಡುತ್ತಿದ್ದವರ ಬಗ್ಗೆ ಇವತ್ತು ಇಲ್ಲಿ ಪ್ರಸ್ತಾಪಮಾಡುವ ಅಗತ್ಯ ಏಕೆ ಬಂತು ಎಂಬುದಾಗಿ ನಾನು ಪ್ರಶ್ನೆಮಾಡುತ್ತೇನೆ. ಇದಕ್ಕೆ ಒಂದು ಹಿನ್ನೆಲೆ ಇದೆಯೆಂಬುದಾಗಿ ನನಗೆ ಸುಮಾರು 2–3 ತಿಂಗಳ ಹಿಂದೆ ಒಂದು ವಿಚಾರ ನನ್ನ ಗಮನಕ್ಕೆ ಬಂದಿದೆ. ಅಲ್ಲಿ ಸುಮಾರು 52ಸಾವಿರ ರೂಪಾಯಿಗಳ ಬಾಕಿ ಇದೆ. ಅಲ್ಲಿರುವವರು ಸಾಧಾರಣವಾಗಿ ಲೇಬರರ್ಸ್. ಅವರಿಗೆ ತಿಂಗಳೊಂದಕ್ಕೆ ಕೂಲಿ ಬರುತ್ತದೆ. ಅವರಿಗೆ ಸಂಬಳದ ಬಿಲ್ಲಿನಲ್ಲಿ ಅವರು ಕೊಡತಕ್ಕ ಬಾಡಿಗೆಯನ್ನು ಹಿಡಿದುಕೊಂಡು ಮಿಕ್ಕದ್ದನ್ನು ಕೊಡುತ್ತಾರೆ. ಅವರಿಗೆ ಎಷ್ಟು ಬಾಡಿಗೆ ಎಂಬುದನ್ನು ವಿಚಾರಮಾಡಿ, ಇರತಕ್ಕ ಕಾರಣಗಳನ್ನು ಚೆನ್ನಾಗಿ ತಿಳಿದು ಹೇಳಬೇಕಾದುದು ನನ್ನ ಕರ್ತವ್ಯ. ಈ ವಿಚಾರದಲ್ಲಿ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ, ಅವರೂ ಸಹ ವಿಚಾರಣೆ ಮಾಡುವುದಕ್ಕೆ ಪ್ರಯತ್ನಮಾಡಿದರು. ಆದರೆ ಅದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಪ್ರಾರಂಭವಾದಮೇಲೆ ಬಹಳ ಸ್ವಾರಸ್ಯಕರವಾದ ವಿಚಾರಗಳು ಹೊರಬಿದ್ದುವು. ಏನು ವಿಚಾರವಾಗಿದೆಯೆಂದರೆ, 7–12-1967ರಲ್ಲಿ ಒಂದು ಇಂಟೆರಿಮ್ ರಿಲೀಫ್ ಕೊಡುವ ಬಗ್ಗೆ ಅಮೂಲಾಗ್ರವಾಗಿ ಹಾಗೂ ತಾತ್ವಿಕವಾಗಿ ಚರ್ಚಿಸುವ ವಿಚಾರ ಬಂದಿದೆ. ಇದೀಗ ಹೊರಬಿದ್ದಿರುವ ಅಂಶ. ಅನೇಕರು ಮೂಲಬಾಡಿಗೆದಾರರು ಅಲ್ಲಿಲ್ಲ. ಅವರು ಕಾರ್ಖಾನೆ ಬಿಟ್ಟಿರಬಹುದು, ಅಥವಾ ಅನೇಕರು ರಿಟೈರ್ ಆಗಿರಬಹುದು, ಅಂತೂ ಆ ಕಾರ್ಖಾನೆಯಲ್ಲಿ ಕೆಲಸಮಾಡುವಂಥ ಕಾರ್ಮಿಕರು ಕೆಲವರು ಇದ್ದಾರೆ. ಅನ್‌ಅತರೈಜ್ಡ್ ಪರ್ಸನ್ಸ್ ನಮ್ಮಿಂದ ಬಾಡಿಗೆಗೆ ಪಡೆಯದೇ ಇರುವವರು ಅಲ್ಲಿ ಬಂದು ಕೂತಿದ್ದಾರೆ, ಮೊದಲಿದ್ದವರು ಬಿಟ್ಟು ಹೋಗುವಾಗ ಬೇರೆಯವರನ್ನು ಕೂರಿಸಿದ್ದಾರೆ. ಅವರು ಏತಕ್ಕೆ ಕೂರಿಸಿದ್ದಾರೆಂಬುದು ಗೊತ್ತಾಗಲಿಲ್ಲ.

(ಶ್ರೀ ಕೆ. ಪುಟ್ಟಸ್ವಾಮಿ)

ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಸಣ್ಣ ಸಂಸಾರ ವಾಸಮಾಡುವ ಮನೆಗೆ ಬೇರೆಯವರು ಬಂದರೆ ಎಷ್ಟೋ ವೇಳೆ ಬಾಡಿಗೆ ವಗೈರೆಯನ್ನು ಹೆಚ್ಚುಮಾಡಿರತಕ್ಕ ಪ್ರಸಂಗ ನಡೆದಿದೆ. ಅದಕ್ಕಾಗಿ ಅನೇಕ ವೇಳೆ ಅವರ ಬಂಧುವರ್ಗದವರಿಗೇ ಕೊಟ್ಟಿದ್ದಾರೆ. ಅದಕ್ಕೆ ಅತಾರಿಟಿ ಯಾವುದು ಎಂಬುದನ್ನು ವಿಚಾರಮಾಡಬೇಕಾಗಿದೆ. ಕೆಲವು ವರ್ಗದ ಕಾರ್ಮಿಕರು ಹೆಚ್ಚು ಬಾಡಿಗೆಯ ಬಾಕಿಯನ್ನು ಇಟ್ಟು ಕೊಂಡಿದ್ದಾರೆ. ಬಾಡಿಗೆ ಬಾಕಿಯಾಗಿರುವವರು ಯಾರು ಅಕ್ರಮವಾಗಿ ಅಲ್ಲಿದ್ದಾರೋ ಅಂತಹವ ರನ್ನು ಬಿಡಿಸಬೇಕಾದುದು ಅಗತ್ಯ. ಅದಕ್ಕೆ ಅಧಿಕಾರಿಗಳೇನಾದರೂ ಅವಕಾಶಮಾಡಿದ್ದಾರೆಯೇ ಎಂಬುದನ್ನು ವಿಶದವಾಗಿ ಇನ್ನೂ ವಿಚಾರಮಾಡಿ ತಿಳಿಯಬೇಕು. ಈ ಕಾರಣದಿಂದ ಮಾನ್ಯ ಸದಸ್ಯರು ಯಾರು ಬಂದು ಈ ವಿಚಾರವನ್ನು ಇಲ್ಲಿ ತಿಳಿಸಿರಬಹುದೋ ಅವರಿಗೆ ಸರಿಯಾದ ಅಂಕಿಅಂಶಗಳು ತಿಳಿದಿದ್ದರೆ ಈ ರೀತಿ ತಪ್ಪು ಅಭಿಪ್ರಾಯ ಬರುವ ರೀತಿಯಲ್ಲಿ ಇಲ್ಲಿ ಮಾತನಾಡುತ್ತಿರಲಿಲ್ಲ.

ಶ್ರೀ ಅಜೀಜ್ ಸೇಟ್.—ನಾನು ಹೇಳಿದ್ದು ಮುಖ್ಯಮಂತ್ರಿಯವರಿಗೆ. ಆಸ್ಪತ್ರೆ ವರ್ಕರ್ಸ್ ಯೂನಿಯನ್ ಆನಿವರ್ಸರಿಗೆ ಪ್ರಿಸೈಡ್ ಮಾಡಿದಾಗ ಅವರಿಗೆ ಹೇಳಿದ ವಿಷಯ. ಕೆ.ಆರ್. ಮಿಲ್ಸ್ ವರ್ಕರ್ಸ್ ಯೂನಿಯನ್ ಎಂಬುದಾಗಿ ನಾನು ಹೇಳಲಿಲ್ಲ. ರಿಪೋರ್ಟಿಂಗ್ ತಪ್ಪಾಗಿರಬಹುದು. ಮಾನ್ಯ ಮುಖ್ಯ ಮಂತ್ರಿಗಳು ಬರುತ್ತೇನೆಂದು ಒಪ್ಪಿಕೊಂಡರು. ನಾನು ಸಹ ಆ ಯೂನಿಯನ್ ಪರವಾಗಿ ಒಂದು ಕಾಗದವನ್ನು ಕೊಟ್ಟಿದ್ದೆನು. ಮಾನ್ಯ ಮುಖ್ಯ ಮಂತ್ರಿಗಳು ಬಂದಕಾರಣ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಅಲ್ಲಿಗೆ ಹೋಗುವುದು ಸರಿಯಲ್ಲವೆಂದು ಅವರು ಅಲ್ಲಿಗೆ ಹೋಗುವುದನ್ನು ನಿಲ್ಲಿಸಿದ್ದಾರೆ. ಅದು ಒಂದು ಮಾಹಿತಿ ಮಾತ್ರ ಇದೆ. ಎರಡನೆಯ ವಿಷಯ. ಲೇಬರ್ ಹೌಸಿಂಗ್ ಕಾಲೋನಿ ಎಂಬುದಾಗಿ ಹೇಳಿದರು. ಅವರು ಮನಸ್ಸಿನಲ್ಲಿ ಏನು ಭಾವಿಸಿಕೊಂಡು ಮಾತನಾಡು ತ್ತಾರೋ ಗೊತ್ತಿಲ್ಲ. ಅಲ್ಲಿ ಏನಾಗಿದೆ ಮಾನ್ಯ ಶ್ರೀ ದೇವರಾಜ್ ಅರಸ್ ಅವರು ಹಿಂದೆ ಹೌಸಿಂಗ್ ಮಿನಿಸ್ಟರ್ ಆಗಿದ್ದರು. ಕೆ.ಆರ್. ಮಿಲ್ಸ್ ವರ್ಕರ್ಸ್ ವಿಷಯ ಹೇಳುವುದಾದರೆ.....

Mr. SPEAKER.—At 6-30 or 6-45 P.M., I have to put it to vote. Please be brief and deal only with the matter that is before the House.

ಶ್ರೀ ಅಜೀಜ್ ಸೇಟ್.—ನಾನು ಹೇಳಿದು ಏನೆಂದರೆ, ಸೆಂಟ್ರಲ್ ಹೌಸಿಂಗ್ ಸಬ್‌ಸಿಡೈಸ್ಡ್ ಕಾಲೋನಿ ವಿಷಯ. ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಹೌಸಿಂಗ್ ಮಂತ್ರಿಯಾಗಿ ಮತ್ತು ಕೆ.ಆರ್. ಮಿಲ್ ವರ್ಕರ್ಸ್ ಸಂಘದ ಅಧ್ಯಕ್ಷರಾಗಿ ಕೇವಲ ಅಲ್ಲಿನ ಕಾರ್ಮಿಕರಿಗೆ ಹಿತರಕ್ಷಣೆ ಮಾಡುತ್ತಿದ್ದಾರೆಯೇ ಹೊರತು ಬೇರೆ ಕಾರ್ಮಿಕರಿಗೆ ಹಿತರಕ್ಷಣೆ ತೋರಿಸುತ್ತಾ ಇಲ್ಲ. ಅಲ್ಲಿ ಎನ್.ಜಿ.ಓ.ಗಳಿದ್ದಾರೆ. ಅದರಿಂದಾಗಿ ಅಲ್ಲಿನ ಒಂದು ಯೂನಿಯನ್ ಅವರಿಗೆ ಮಾತ್ರ ಅಲ್ಲಿ ಕೊಡಬೇಕು, ಬೇರೆ ಯೂನಿಯನ್ ಕೆಲಸಗಾರರಿಗೆ ಕೊಡಬಾರದು ಎಂಬುದಾಗಿ ಡೈರೆಕ್ಟಿವ್ಸ್ ಕೊಟ್ಟಿದ್ದಾರೆ. He has misused the office as a Minister. ಅದರಲ್ಲಿ ಬಹಳ ಸತ್ಯವಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಕ್ಷಮಿಸಬೇಕು. ನಡುವೆ ಮಾನ್ಯ ಸದಸ್ಯರೊಬ್ಬರು ಮಾತನಾಡುವು ದಕ್ಕೆ ಅವಕಾಶ ಕೇಳಿದರೆ ತಾವು ಕೊಡಬೇಕು. ಆದರೆ ನಾನಾದರೂ ಅದು ಒಂದು ಪುಟ್ಟಭಾಷಣ ವೆಂದು ನಾನು ತಿಳಿದುಕೊಂಡಿರಲಿಲ್ಲ. ಇನ್ನೊಂದು ವಿಚಾರವನ್ನು ಜ್ಞಾಪಿಸಿದರು. ನಾನು ಮಾನ್ಯ ಶ್ರೀ ಅಜೀಜ್ ಸೇಟ್ ಅವರಿಗೆ ಕೃತಜ್ಞನಾಗಿರಬೇಕು. ಒಂದು ಮುಖ್ಯ ವಿಚಾರವನ್ನು ಹೇಳುತ್ತೇನೆ. ಮರೆತುಹೋಗುತ್ತಿತ್ತು. ಮಾನ್ಯ ಸದಸ್ಯರು ಕಾಂಗ್ರೆಸ್ ಪಕ್ಷ ಬಿಟ್ಟುಹೋದಮೇಲೆ ನಾನು ಈಗ ಆರೋಗ್ಯ ಮತ್ತು ವಸತಿ ಶಾಖೆಗಳ ಮಂತ್ರಿಯಾದಮೇಲೆ ಅವರು ಇವತ್ತು ಕಾಂಗ್ರೆಸ್ ಪಕ್ಷದಲ್ಲಿಲ್ಲ ವೆಂದು ಹಿಂದೆ ಇದ್ದ ಒಂದು ಸ್ಟೇ ಆರ್ಡರನ್ನು ನಾನು ಬಂದು ರದ್ದುಪಡಿಸಿದ್ದೇನೆಂಬುದಾಗಿ ಹೇಳಿದ್ದಾರೆ.

ಶ್ರೀ ಅಜೀಜ್ ಸೇಟ್.—ನನ್ನ ಭಾಷಣವನ್ನು ಏಕೆ ತೆಗೆದುಕೊಂಡಿರಿ ? ನಾನು ಇನ್ನೂ ತಪ್ಪು ಗಳನ್ನು ಕರೆಕ್ಟ್ ಮಾಡಲಿಲ್ಲ. ಅದನ್ನು ದುರುಪಯೋಗ ಮಾಡಬೇಡಿ. ಆಫೀಸು ಇದಕ್ಕೆ ಅವಕಾಶ ಕೊಡಬಾರದಾಗಿತ್ತು. The Minister need not refer to the speech which I have not corrected. ಇಂತಹ ಸಣ್ಣ ವಿಷಯಕ್ಕೆ ದುರುಪಯೋಗ ಮಾಡಿದರೆ ಇನ್ನು ಎಷ್ಟು ದುರುಪ ಯೋಗ ಮಾಡುತ್ತೀರೋ ತಿಳಿಯದು.

Mr. SPEAKER.—I can never entertain such a request.

Sri B. P. GANGADHAR.—May I know whether any Government is existing? If the Government was existing, they would have checked the unauthorised occupation.

Mr. SPEAKER.—Are we going to have reply or do we simply go on putting questions and disturbing the House? Please hear the reply patiently.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಅಧ್ಯಕ್ಷರೇ, ಮಾನ್ಯಸದಸ್ಯರು ಕೇಳುತ್ತಿರುವ ವಿಚಾರದಲ್ಲಿ ತಾವೇನು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದೇ ಆಖೈರು. ತಾವು ಇನ್ನುಮೇಲೆ ನಾವು ಯಾರೂ ಕರಡು ಪ್ರತಿಗಳನ್ನು ನೋಡಬಾರದೆಂದು ಹೇಳಿದರೆ ನಾನು ಅದನ್ನೂ ಕೈ ಬಿಡುತ್ತೇನೆ.

ಇನ್ನು ಮಾನ್ಯ ಸದಸ್ಯರು ಸ್ಟೇ ಆರ್ಡರಿನ ವಿಚಾರವನ್ನೆತ್ತಿದ್ದಾರೆ. ಮೈಸೂರು ಸಿಟಿಯಲ್ಲಿ ಸ್ಲಂ ಕ್ಲಿಯರೆನ್ಸ್ ನೀತಿಗನುಸಾರವಾಗಿ ಅಲ್ಲಿಯ ಪೌರ ಸಭೆಯವರು ಹೌಸಿಂಗ್ ಬೋರ್ಡಿನಿಂದ ಸಾಲವನ್ನು ತೆಗೆದು ಅಲ್ಲಿ ನೂರಾಒಂದು ಮನೆಗಳನ್ನು ಕಟ್ಟಿಸಿದರು. ಹಾಗೆ ಕಟ್ಟಿಸಿದ ಮನೆಗಳನ್ನು ಅಲಾಟ್ ಮಾಡುವುದಕ್ಕೆ ಮುಂಚೆ ಆ ಮನೆಗಳಲ್ಲಿ 101 ಯಾವುವೋ ಬೇರೆ ಸಂಸಾರಗಳು ಹೋಗಿ ಅಲ್ಲಿ ಕುಳಿತಿವೆ. ಈ ಹಿಂದೆ ಆ ಪೌರ ಸಭೆಯು ಆಡಳಿತ ನನ್ನ ಕೈಲಿದ್ದಾಗ ಯಾರು ಹಾಗೆ ಅಲ್ಲಿ ಅಕ್ರಮ ಸ್ವಾಧೀನದಲ್ಲಿ ಆ ಮನೆಗಳನ್ನು ಇಟ್ಟುಕೊಂಡಿದ್ದರೋ ಅಂಥವರನ್ನು ಹೊರಗೆ ಹಾಕತಕ್ಕ ಕಾಲದಲ್ಲಿ......................

Sri AZEEZ SAIT.—I asked for something, he is saying something else. The point is what you have done for vacating the quarters?

ಶ್ರೀ ಕೆ. ಪುಟ್ಟಸ್ವಾಮಿ.—ಕೆಲವು ಪ್ರಭಾವಶಾಲಿ ಜನರ ಕುಮ್ಮಕ್ಕಿನಿಂದ ಮತ್ತೆ ಅಲ್ಲಿಯೇ ಆ ಪೌರ ಸಭೆಗೆ ಸೇರಿದ ಮನೆಗಳಲ್ಲಿ ಅಕ್ರಮವಾಗಿ ಜನರು ಸೇರಿಕೊಂಡರು. ಈ ವಿಚಾರ ಮುಖ್ಯ ಮಂತ್ರಿಗಳಿಗೆ ಗೊತ್ತಾದಮೇಲೆ ಆ ಸ್ಟೇ ವೆಕೇಟಾಯಿತು. ಆ ಮನೆಗಳಲ್ಲಿ ಸುಮಾರು 500 ಸಂಸಾರಗಳಿವೆ. ಅವರಲ್ಲಿ ಕೆಲವರಿಂದ ತಿಂಗಳಿಗೆ 3-4 ರೂಪಾಯಿಗಳ ಬಾಡಿಗೆಯನ್ನೂ ಸಹಾ ತೆಗೆದುಕೊಳ್ಳತಕ್ಕ ಪ್ರಸಂಗವೂ ಅಲ್ಲಿದೆ. ಅದನ್ನೆಲ್ಲಾ ಬಾಯಿಮುಚ್ಚಿಸಬೇಕೆಂದು ಮಾನ್ಯ ಸದಸ್ಯರು ಅಷ್ಟು ಆತುರವಾಗಿ ಮಾತನಾಡುತ್ತಿದ್ದಾರೆ. ಆದರೆ ಮಾನ್ಯ ಅಜೀಜ್ ಸೇಠವರಿಗೆ ಅಲ್ಲಿನ ವಿಚಾರಗಳೆಲ್ಲ ಸರಿಯಾಗಿ ಗೊತ್ತಿಲ್ಲವೆಂದು ಕಾಣುತ್ತಿದೆ.

ಇನ್ನು ಶ್ರೀ ವಾಟಾಳ್ ನಾಗರಾಜ್ ಅವರು ಮಾತನಾಡುತ್ತಿದ್ದಾಗ, ಅವರಿನ್ನೂ ತರುಣರು, ಉತ್ಸಾಹಶಾಲಿಗಳು, ಅವರಿಗೆ ಭಾಷಣ ಮಾಡತಕ್ಕ ಬಗ್ಗೆ ಬಹಳ ಉತ್ಸಾಹ, ಆದರೂ ಅವರು ವಿಚಾರವನ್ನು ಚೆನ್ನಾಗಿ ಪರಿಶೀಲನೆ ಮಾಡಿ ಮಾತನಾಡುವುದು ಒಳ್ಳೆಯದು. ಅವರು ಭಾಷಣಕ್ಕೆ ಪ್ರಾರಂಭ ಮಾಡಿದಾಗ ಅವರಿಗೆ ಇನ್ಯಾರೂ ಕಣ್ಣಿಗೆ ಬೀಳಲಿಲ್ಲ. ನಾನೇ ಅವರ ಕಣ್ಣಿಗೆ ಬಿದ್ದವನು. ಅವರು ನನ್ನ ಬಗ್ಗೆ ಇವರು ಈ ಪಕ್ಷವನ್ನು ಬಿಟ್ಟು ಬೇರೆ ಪಕ್ಷಕ್ಕೆ ಹೋದವರು ಎಂಬುದಾಗಿ ಹೇಳಿದರು. ಆ ಪಕ್ಷದವರು ಈ ಪಕ್ಷಕ್ಕೂ ಬರುವುದುಂಟು, ಈ ಪಕ್ಷದವರು ಆ ಪಕ್ಷಕ್ಕೂ ಹೋಗುವುದುಂಟು. ಅವರ ಅಭಿಪ್ರಾಯಗಳು ಬದಲಾದಾಗ ಅದಕ್ಕನುಸಾರವಾಗಿ ಪಕ್ಷಗಳನ್ನು ಬದಲಾಯಿಸಿದರೆ ಅದಕ್ಕಾಗಿ ಅವರನ್ನು ಆಕ್ಷೇಪಣೆ ಮಾಡುವುದಕ್ಕಾಗುವುದಿಲ್ಲ. ಆದರೆ ಇತ್ತೀಚೆಗೆ ಚುನಾವಣೆಗಳಾದ ಮೇಲೆ ಆ ಪಕ್ಷದಿಂದ ಈ ಪಕ್ಷಕ್ಕೆ ಯಾರೂ ಬಂದಿಲ್ಲ. ಇನ್ನು ಶ್ರೀ ವಾಟಾಳ್‌ರವರು ಮಾತನಾಡುತ್ತಾ ಪುಟ್ಟಸ್ವಾಮಿಗಳು ಮಂತ್ರಿಯಾಗಿರುವುದು ಬರೀ ಮೈಸೂರು ಜಿಲ್ಲೆಮಾತ್ರ—ಏಕೆಂದರೆ ಅವರಿಗೆ ಇರತಕ್ಕ ಕೆಪ್ಯಾಸಿಟಿ ಅಷ್ಟೇ ಎಂದಿದ್ದಾರೆ. ನನಗಿರತಕ್ಕ ಲಿಮಿಟೇಷನ್ ಇಷ್ಟೇ ಎಂದು ಹೇಳಿದ್ದಾರೆ. ಆ ಮಾನ್ಯ ಸದಸ್ಯರು ಏನೇ ಮಾತನಾಡಿರಲಿ—ಅವರಿಗಿರುವಷ್ಟು ಯೋಗ್ಯತೆ ನನಗಿಲ್ಲ, ಅವರಿಗಿರತಕ್ಕ ಶಕ್ತಿ ಸಾಮರ್ಥ್ಯಗಳೂ ನನಗಿಲ್ಲ. ಯಾರ ಯಾರ ಶಕ್ತಿ ಸಾಮರ್ಥ್ಯಗಳು ಎಷ್ಟೆಷ್ಟಿವೆ ಎಂಬುದು ದೇಶಕ್ಕೇ ಗೊತ್ತಿದೆ. ಆದರೆ ಅವರು ಅಷ್ಟಕ್ಕೆ ಸುಮ್ಮನಾಗದೆ ಅವರ ಭಾಷಣದ ಸ್ಫೂರ್ತಿಯಲ್ಲಿ ನನ್ನನ್ನು ಮೈಸೂರು ಸಿಟಿಗೆ ಮಾತ್ರ ಮಂತ್ರಿಗಳೆಂತಲೂ ಹೇಳಿಬಿಟ್ಟರು. ನಾನು ನನ್ನ ಸಾರ್ವಜನಿಕ ಜೀವನವನ್ನು ಹೆಚ್ಚಾಗಿ ಮೈಸೂರು ನಗರದಲ್ಲೇ ನಡೆಸಿರುವುದರಿಂದ ಅಲ್ಲಿರುವ ಪರಿಸ್ಥಿತಿಯನ್ನು ನಾನು ನೇರವಾಗಿ ಸರ್ಕಾರಕ್ಕೆ ವರದಿ ಮಾಡಲು ಯಾವ ಅಭ್ಯಂತರವೂ ಇಲ್ಲ. ಈ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಏನೇನು ಹಕ್ಕುಬಾಧ್ಯತೆಗಳಿವೆಯೋ ಅವುಗಳೆಲ್ಲಾ ನನಗೂ ಇವೆ. ನಾನು ಎಲ್ಲಿ ಹೆಚ್ಚಿಗೆ ವಾಸಮಾಡುತ್ತೇನೋ ಅಲ್ಲಿನ ವಿಚಾರಗಳನ್ನು ಸರ್ಕಾರಕ್ಕೆ ತಿಳಿಸುವುದು ನನ್ನ ಹಕ್ಕು. ನನ್ನ ಶಕ್ತಿ ಅಷ್ಟಕ್ಕೆ ಸೀಮಿತವಾಗಿದೆ ಎಂದು ಅವರು ಹೇಳುತ್ತಿರುವಾಗ ಅದನ್ನು ಅವರು ಬದಲಾವಣೆ ಮಾಡಿಕೊಳ್ಳಬೇಕು ಅಂದರೆ ಅದು ಹೇಗೆ ಸಾಧ್ಯ? ಇದರ

(ಶ್ರೀ ಕೆ. ಪುಟ್ಟಸ್ವಾಮಿ)

ಬಗ್ಗೆ ನಾನು ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಹೀಗೆ ಅವರಿನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿ ಶ್ರೀ ಜ್ವಾಲನಯ್ಯನವರೂ ಕೂಡ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಕೆಲವು ಜನರು ಲೇಡಿ ಡಾಕ್ಟರುಗಳಿದ್ದಾಗ್ಯೂ ಅವರನ್ನು ಕೆಲಸಕ್ಕೆ ನೇಮಕಮಾಡಿಕೊಳ್ಳತಕ್ಕ ಶಕ್ತಿ ಸರ್ಕಾರಕ್ಕಿಲ್ಲ ಎಂದು ಹೇಳಿದ್ದಾರೆ. ನಮ್ಮಲ್ಲಿ ಇನ್ನೂ 70 ಸ್ಥಾನಗಳಿವೆ. ಅವರು ಆ ಲೇಡೀ ಡಾಕ್ಟರುಗಳು ಎಲ್ಲಿದ್ದಾರೆಂಬುದಕ್ಕೆ ಅಡ್ರೆಸ್ಸನ್ನು ಕೊಟ್ಟರೆ—ಅವರಿಗೆ ಗ್ರೇಡ್ 300—700 ರೂಪಾಯಿಗಳವರೆಗಿದೆ. ಅವರಿಗೆ ಡಿ. ಎ. ಬೇರೆ ಕೊಡುತ್ತೇವೆ. ಅದನ್ನು ಇನ್ನೂ ಹೆಚ್ಚುಮಾಡುವ ಪ್ರಸಂಗವಿದೆ. ಅವರನ್ನು ವಸತಿಸೌಕರ್ಯವಿರುವ ಕಡೆಗೇ ಹಾಕುತ್ತೇವೆ. ನಮ್ಮಲ್ಲಿರತಕ್ಕ ಓಪನ್ ರಿಕ್ರೂಟ್‌ಮೆಂಟ್ ಪಾಲಸಿ ಪ್ರಕಾರ ಪಿ. ಎಸ್. ಸಿ. ಅವರು ಅರ್ಜಿಯನ್ನು ಕರೆಯುತ್ತಾರೆ. ಆ ಪ್ರಕಾರ ಈಗ ಕರೆದಿದ್ದಾರೆ. ಅವರನ್ನು ಕಳುಹಿಸಿದರೆ ನೇಮಕ ಮಾಡಿಕೊಳ್ಳುವುದಕ್ಕೆ ಇನ್ನೂ 15 ದಿನ ಅಥವಾ ಒಂದು ತಿಂಗಳ ಅವಕಾಶ ಕೊಡುತ್ತೇನೆ, ಅವರನ್ನು ಕಳುಹಿಸಲಿ. ಅದೇ ರೀತಿ ಮಾನ್ಯ ಅಜೀಜ್ ಸೇಠರೂ ಕೂಡ ಕೆಲವು ಜನರು ಡಾಕ್ಟರುಗಳಿದ್ದಾರೆಂದು ಹೇಳಿದ್ದಾರೆ. ಇಲ್ಲಿಗೆ 5-6 ತಿಂಗಳಿಂದ ಸುಮಾರು 500–600 ಜನ ಡಾಕ್ಟರುಗಳನ್ನು ನೇಮಕ ಮಾಡಿದೆ ಈ ದಿವಸ ಕೂಡ ಕೆಲವು ಡಾಕ್ಟರನ್ನು ನಾನು ನೇಮಕ ಮಾಡಿದ್ದೇನೆ. 30 ಜನ ಡಾಕ್ಟರನ್ನು ಈ ದಿವಸ ನೇಮಕ ಮಾಡಿದ್ದೇನೆ.

6–00 P.M.

ಇನ್ನೂ ಹೆಚ್ಚು ಜನ ಡಾಕ್ಟರುಗಳಿದ್ದಾರೆ, ನೇಮಕ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಆ ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀಮಾನ್ ಅಜೀಜ್ ಸೇಟ್ ಅವರು ಹೇಳಿದರು, ಇವತ್ತು ಸರ್ಕಾರದವರು ಡಾಕ್ಟರುಗಳಿಲ್ಲ ಎಂದು ಹೇಳುತ್ತಾರೆ, ಎಂಥ ಡಾಕ್ಟರುಗಳು ಬೇಕು ಕೊಡುತ್ತೇನೆ ಎಂದು ಹೇಳಿದರು. ಎಂ.ಬಿ.ಬಿ.ಎಸ್. ಡಾಕ್ಟರುಗಳು ಬೇಕೇ, ಎಂ.ಡಿ. ಪಾಸ್ ಮಾಡಿರುವ ಡಾಕ್ಟರುಗಳು ಬೇಕೇ, ಎಂ.ಎಸ್. ಪಾಸ್ ಮಾಡಿರುವ ಡಾಕ್ಟರುಗಳು ಬೇಕೇ, ಎಫ್. ಆರ್.ಸಿ.ಎಸ್. ಅಥವಾ ಇನ್ನು ಯಾವುದಾದರೂ ಡಿಗ್ರಿಗಳನ್ನು ತೆಗೆದುಕೊಂಡಿರತಕ್ಕ ಡಾಕ್ಟರುಗಳು ಬೇಕೇ, ಬೇಕಾದಷ್ಟು ಜನರನ್ನು ಕೊಡುತ್ತೇವೆ ಎಂದು ಹೇಳಿದರು. ಈ ಸಭೆಯಲ್ಲಿ ನಾನು ಹೇಳುತ್ತೇನೆ, ಮಾನ್ಯ ಸದಸ್ಯರು ಇಂಥ ಡಾಕ್ಟರುಗಳನ್ನು ಒದಗಿಸಿಕೊಟ್ಟರೆ ಬಹಳ ಕೃತಜ್ಞತೆಯಿಂದ ಅವರನ್ನು ನಾನು ನೇಮಕ ಮಾಡಿಕೊಳ್ಳುತ್ತೇನೆ. ಯಾರು ಇಂಥ ಡಾಕ್ಟರುಗಳನ್ನು ಒದಗಿಸಿಕೊಡುತ್ತಾರೆ ಅವರಿಗೆ ನಾನು ಅಭಿನಂದನೆಗಳನ್ನು ಅರ್ಪಿಸುತ್ತೇನೆ, ಸರ್ಕಾರವೂ ಕೃತಜ್ಞವಾಗಿರುತ್ತದೆ ಎಂದು ಹೇಳುತ್ತೇನೆ.

ನಿಮಗೆ ಬೇಕಾದವರು ಬರುತ್ತಿಲ್ಲ, ಅದಕ್ಕಾಗಿ ನೇಮಕ ಮಾಡುತ್ತಿಲ್ಲ ಎಂದು ಹೇಳಿದರು. ನೀವು ನೇಮಕ ಮಾಡುವ ಡಾಕ್ಟರುಗಳನ್ನು ದೂರದ ಹಳ್ಳಿಗಳಿಗೆ ಹಾಕುವುದರಿಂದ ಡಾಕ್ಟರುಗಳು ಬರುವುದಿಲ್ಲ ಎಂದೂ ಹೇಳಿದ್ದಾರೆ. ಬೆಂಗಳೂರು, ಮೈಸೂರು ಅಥವಾ ಹುಬ್ಬಳ್ಳಿ, ತುಮಕೂರು ಇಂಥ ಸ್ಥಳಗಳಿಗೆ ಡಾಕ್ಟರುಗಳ ಅಭಾವವಿಲ್ಲ. ಮಾನ್ಯ ಸದಸ್ಯರು ಆ ರೀತಿ ಭಾವನೆ ಮಾಡಿಕೊಂಡಿರಬಹುದು. ಅವರು ಏನು ನಿರೀಕ್ಷಣೆ ಮಾಡಿಕೊಂಡಿದ್ದಾರೆ, ಆ ಮಟ್ಟದಲ್ಲಿ ಅಭಾವವಿಲ್ಲ. ನಮಗೆ ಕೇವಲ 100 ಡಾಕ್ಟರುಗಳು ಬೇಕು ಅಷ್ಟೆ. ಬಾಕಿ ಎಲ್ಲ ಸ್ಥಾನಗಳೂ ಭರ್ತಿಯಾಗಿವೆ. ಈ ನೂರು ಡಾಕ್ಟರುಗಳೂ ಮೇ ಜೂನ್‌ನಲ್ಲಿ ಅಥವಾ ಮುಂದಿನ ಡಿಸೆಂಬರ್ ಒಳಗಾಗಿ ಬರುತ್ತಾರೆ. ಆದುದರಿಂದ ಡಾಕ್ಟರುಗಳ ಅಭಾವ ಎಷ್ಟರಮಟ್ಟಿಗೆ ಇದೆ ಎಂದು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆಯೋ ಅಷ್ಟು ಇಲ್ಲ. ಡಾಕ್ಟರುಗಳ ಅಭಾವ ಎಲ್ಲಿದೆ ಎಂದರೆ ಗ್ರಾಮಾಂತರದಲ್ಲಿರುವ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಅಭಾವವಿದೆ. ನಾವು ನೇಮಕ ಮಾಡಿಕೊಳ್ಳುವಾಗ ಏನಾದರೂ ಮೈಸೂರು, ಬೆಂಗಳೂರು ನಗರಗಳಲ್ಲಿ ನೇಮಕ ಮಾಡಿಕೊಳ್ಳುತ್ತೇವೆಂದರೆ, ಮೈಸೂರು ಬೆಂಗಳೂರು ನಗರಗಳಿಂದ ಬೇರೆ ಕಡೆಗೆ ವರ್ಗ ಮಾಡುವುದಿಲ್ಲವೆಂದರೆ, ಅಲ್ಲಿಯೇ ಖಾಯಂ ಆಗಿ ಇಟ್ಟಿರುತ್ತೇವೆಂದರೆ ನೂರು ಜನರೂ ತಕ್ಷಣ ಬರುತ್ತಾರೆ. ಮೈಸೂರು ಬೆಂಗಳೂರು ನಗರಗಳಿಗೆ ಡಾಕ್ಟರುಗಳ ಅವಶ್ಯಕತೆ ಇಲ್ಲ. ಸಾಕಷ್ಟು ಪರಿಣತರ ಸಾಮರ್ಥ್ಯಶಾಲಿಗಳೂ ದಕ್ಷರೂ ಇದ್ದಾರೆ. ನಮಗೆ ಬೇಕಾಗಿರುವುದು ಗ್ರಾಮಾಂತರದಲ್ಲಿರುವ ಜನರಿಗೆ ಸೇವೆ ಸಲ್ಲಿಸುವ ಡಾಕ್ಟರುಗಳು. ನಮ್ಮ ಯುವಜನ ವಿದ್ಯಾವಂತ ಡಾಕ್ಟರುಗಳಲ್ಲಿ ನನಗೆ ನಂಬಿಕೆ ಇದೆ; ವಿಶ್ವಾಸವಿದೆ. ನನಗಾಗಲೀ, ಮಾನ್ಯ ಸದಸ್ಯರಿಗಾಗಲೀ ಈ ದೇಶದಮೇಲೆ ಎಷ್ಟು ಪ್ರೇಮ, ಎಷ್ಟು ವಿಶ್ವಾಸ, ರೋಗಿಗಳ ಮೇಲೆ ಏನು ಕರುಣೆ ಇದೆಯೋ ಅಂಥ ಕರುಣೆ ಅಂಥ ವಿಶ್ವಾಸ, ಅಂಥ ಪ್ರೇಮ ನಮ್ಮ ತರುಣ ವಿದ್ಯಾವಂತರಲ್ಲಿದೆ.

ಡಾಕ್ಟರುಗಳು ಬರುತ್ತಾರೆ: ಬಾರದೆ ಹೋಗುವುದಿಲ್ಲ. ಅನೇಕ ಜನ ರೈತರ ಮಕ್ಕಳು, ಹಳ್ಳಿಗಳಿಂದ ಬಂದವರು ಇವತ್ತು ಡಾಕ್ಟರುಗಳಾಗಿದ್ದಾರೆ. ಬಹಳ ಸಂತೋಷ. ಬೆಂಗಳೂರು, ಮೈಸೂರು ನಗರಗಳಲ್ಲಿ ಕೆಲಸ ಕೊಡಿಸುತ್ತೇವೆಂದರೆ, ಹಳ್ಳಿ ಕಡೆ ಹಾಕಿ ಹೋಗುತ್ತೇವೆ ಎಂದು ಹೇಳುವವರು ಕೆಲವರು ಬರುತ್ತಿದ್ದಾರೆ. ಅಂಥ ಬರ ಏನೂ ಡಾಕ್ಟರುಗಳಿಗೆ ಇಲ್ಲ. ಯಾರು ಯಾರೋ ಇದ್ದಾರೆ. ಅವರು ಅಲ್ಲೇ ಇರಬಹುದು. ಅವರಿಗೆ ಬೇಕಾಗಿರುವುದು ಮೈಸೂರು ಮತ್ತು ಬೆಂಗಳೂರು ಮಾತ್ರ. ಬೆಂಗಳೂರು ಮೈಸೂರು ನಗರಗಳಲ್ಲಿ ಡಾಕ್ಟರುಗಳು ಇರಲಿ, ಅವರನ್ನು ಬೇಡ ಎನ್ನುವುದಿಲ್ಲ. ಆದರೆ ಅವರನ್ನು ನೇಮಕ ಮಾಡಿಕೊಳ್ಳುವ ಶಕ್ತಿ ನನಗೆ ಇಲ್ಲ. ಅವರಿಗೆ ಸಾರ್ವಜನಿಕರು ಇದ್ದಾರೆ, ಮೈಸೂರು ಬೆಂಗಳೂರು ನಗರಗಳಲ್ಲಿ ಲಕ್ಷಾಂತರ ಜನರಿದ್ದಾರೆ, ಶ್ರೀಮಂತರಿದ್ದಾರೆ. ಅವರು ಹಣ ಕೊಟ್ಟು ಅವರ ಸೇವೆಯನ್ನು ಪಡೆಯುವ ಶಕ್ತಿ ಉಳ್ಳವರಾಗಿದ್ದಾರೆ. ಆ ವರ್ಗದ ಜನರು ಸರ್ಕಾರಕ್ಕೂ ಬೇಕು. ಮೈಸೂರು ರಾಜ್ಯದಲ್ಲಾಗಲೀ, ಯಾವ ರಾಜ್ಯದಲ್ಲಾಗಲೀ ವೈದ್ಯಕೀಯ ಸೇವೆಯನ್ನು ಸರ್ಕಾರದವರೇ ಎಲ್ಲರಿಗೂ ಸಲ್ಲಿಸುತ್ತಾರೆ ಎನ್ನುವ ಮಟ್ಟದಲ್ಲಿ ನಾವು ಇಲ್ಲ. ಖಾಸಗಿ ವೈದ್ಯರ ಸೇವೆಯನ್ನು ಅವಲಂಬಿಸುವ ಜನರೂ ಬಹು ಸಂಖ್ಯೆಯಲ್ಲಿದ್ದಾರೆ, ಖಾಸಗಿ ವೃತ್ತಿಯನ್ನು ಅವಲಂಬಿಸಿರುವ ಡಾಕ್ಟರುಗಳೂ ಇದ್ದಾರೆ. ಮಾನ್ಯ ಸದಸ್ಯರು ಇಂಥ ಡಾಕ್ಟರುಗಳ ವಿಚಾರ ಹೇಳುತ್ತ ಇರಬಹುದು.

ನಾನು ಇನ್ನು ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ. ನಾನಾಗಲೇ ವಿನಂತಿ ಮಾಡಿಕೊಂಡೆ ಅರ್ಧ ಗಂಟೆಯಲ್ಲಿ ಮುಗಿಸುತ್ತೇನೆ ಎಂದು. ಐದು ನಿಮಿಷ ಹೆಚ್ಚಾಯಿತು. ದಯವಿಟ್ಟು ಕ್ಷಮಿಸಬೇಕು. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಬಹಳ ಕೃತಜ್ಞನಾಗಿದ್ದೇನೆ. ಈ ಅವಿಶ್ವಾಸ ನಿರ್ಣಯದ ಚರ್ಚೆಯಲ್ಲಿ ಭಾಗವಹಿಸುವಾಗ ಏನೇನು ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆಯೋ ಅವುಗಳಲ್ಲಿ ಯಾವ ರೀತಿಯ ಹುರುಳೂ ಇಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. D. JATTI.—Sir, some of the Hon'ble Members have made reference to the system of distribution, levy system, procurement system, and revised sugarcane policy. Sir, all these points have been discussed during this session and proper explanations have been given by me. I do not want to repeat what I have stated during the course of the debate in this session. Only two points are new according to me. One is reduction in the issue price of rice. Sir, an attempt has been made by the Food Department and the Co-operation Department to reduce by one to two rupees per quintal and I hope that will be possible and when it will be approved, the prices will be reduced to that extent. Beyond that, there is no scope according to the present costing sheet which has been prepared and placed on the Table of the House. I have told a number of my hon'ble friends that if there are any items where it is possible for Government to reduce, we are prepared to consider. I expect some suggestions. The second point which is new according to me was raised by my friend Mr. Gopala Gowda. A reference was made today about the huge amounts relating to food operations held under audit objections. The total amount to-date held under audit objections is about Rs. 43 crores. It should be pointed out here that some of the audit objections relate to the year as far back as 1942 and 1943. The principal point here is audit objections of this sort do not necessarily imply financial loss to Government or that public money has been misappropriated, particularly with regard to foodgrains. This is mainly due to the technical defect such as non-furnishing of stock certificate in time and timely submission of vouchers to Head offices. These are continuing processes and the Government will go on giving explanations and statify the Members of the Public Accounts Committee.

(Sri B. D. Jatti)

One or two points have been raised during the discussion relating to Home Department. Those points also have been replied here. Madhugiri incident was discussed in detail. Reference was made to Harihar incident. There also the Deputy Superintendent of Police is investigating the matter and he is going to take action immediately. A reference was made to Jagalur Incident also. There, proper action has been taken by the Superintendent of Police and further investigation will be made and when investigations are comp'ete, all the details will be supplied not only to the Members of this House but also to the persons concerned.

Sri H. B. JWALANIAH (Hassan).—What about Hassan incident?

Sri B. D. JATTI.—In Hassan nothing has happened. There was a match going on and students quarelled amongst themselves and created some trouble and the Police immediately attended to it and disbursed the students who tried to create trouble. Everything is quiet there and nothing is to be worried.

Sri H. B. JWALANIAH.—Were they not arrested and was there not a mild lathi charge?

Sri B. D. JATTI.—Mild lathi charge was used by the Police looking to the students. If there were rowdies, then they would have used other weapons.

Sri H. B. JWALANIAH.—Where is the definition for mild lathi charge?

Sri B. D. JATTI.—There is difference between mild and hard lathi charge.

Sri H. SIDDAVEERAPPA.—Perhaps lathis kissed the boys!

Sri B. D. JATTI.—There is the Ex-Home Minister. He might have better experience. He might have done all these things and perhaps might have forgotten. It is not necessary for me to give definition above these things.

Only one point which I want to refer is about the Labour Department. That was pertaining to Kirloskar Workers who went on strike. I enquired into the whole matter and I have been informed by the Department concerned that necessary action has to be taken and action will be taken as per the advice of the Law Department. The Incident was about 22 workers who were working in Kirloskar factory at Hubli and were removed from service and the workers felt that there must be some reason for their removal. The fact is, they were appointed on a contract basis and after the contract period was over, they were asked to go out and some people are agitating. This will be decided by the Labour Department.

These are the only points raised and I have replied to them. I do not want to take any more time of the House.

ಶ್ರೀ ಬಿ. ಪಿ. ಗಂಗಾಧರ್.—ನಾನು ಪದೇ ಪದೇ ಈ ವಿಚಾರವನ್ನು ಹೇಳುತ್ತಲೇ ಇದ್ದೇನೆ. ನನ್ನ ಕ್ಷೇತ್ರವಾದ ತುಮಕೂರಿನಲ್ಲಿ ಕೆಲವು ಕ್ಷಾಮ ಪ್ರದೇಶಗಳಿವೆ, ಅವುಗಳಲ್ಲಿ ಕೊರಾ, ಬೆಳ್ಳಾವಿ, ಕಸಬಾ ಹೋಬಳಿಗಳು ಮುಖ್ಯವಾದವು. ಅಲ್ಲಿ 8—8 ಹಳ್ಳಿಗಳ ಒಂದು ಗ್ರೂಪ್ ಪಂಚಾಯಿತಿಗಳಿವೆ. ಅವುಗಳಿಗೆ ಈ ಸರ್ಕಾರ ಒಂದು ಚೀಲ ಮೈಲೊ, ಒಂದು ಚೀಲ ಜೋಳ ಕಳುಹಿಸುತ್ತಾರೆ. ಅಲ್ಲಿರುವ ಎಲ್ಲರ ಮನೆಗೆ ಹತ್ತು ಹತ್ತು ಕಾಳನ್ನು ಎಣಿಸಿ ಕೊಡುವುದಕ್ಕೂ ಆಗುವುದಿಲ್ಲ. ಅಂದಮೇಲೆ ನಮ್ಮ ದೇಶದಲ್ಲಿ ಸರ್ಕಾರವಿದೆಯೇ, ಆ ವಿಚಾರದಲ್ಲಿ ಏನು ಮಾಡಿದ್ದೀರಿ? ಏನಾದರೂ ಮಾಡುವುದಕ್ಕೆ ನಿಮಗೆ ಸಾಧ್ಯವಿದೆಯೇ? ಏತಕ್ಕೋಸ್ಕರ ನಿಮ್ಮ ಮೇಲೆ ಅವಿಶ್ವಾಸ ನಿರ್ಣಯ ತರಬಾರದು? ಹೇಳಿ. ಈ ವಿಚಾರವನ್ನು ಪದೇ ಪದೇ ಹೇಳುತ್ತಿದ್ದೇನೆ. ನಮ್ಮ ಕ್ಷೇತ್ರಕ್ಕೆ ಬಂದಾಗಲೂ ಖುದ್ದಾಗಿಯೂ ಎಷ್ಟೋ ಸಾರಿ ಹೇಳಿದ್ದಾಗಿದೆ, ಈ ವಿಚಾರದಲ್ಲಿ ನಿಜವಾಗಿ ಇವರಿಂದೇನೂ ಮಾಡುವುದಕ್ಕಾಗುವುದಿಲ್ಲವೆಂದು ನನಗೆ ಖಂಡಿತವಾಗಿ ಭರವಸೆ ಇದೆ.

Sri B. D. JATTI.—I know that according to me Government is in existance and it is functioning. According to me Government has done every thing that could be done. It is no use making remarks on the floor of the House. If the Hon'ble member finds out the exact areas where there is scarcity and if he points out that there is scarcity of foodgrains, Government is prepared to supply foodgrains, to the satisfaction of the people of that area.

† ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ವಿವರವಾಗಿ ಭಾಷಣ ಮಾಡುವುದಕ್ಕೆ ಬಯಸುವುದಿಲ್ಲ. ಕೇವಲ ಒಂದೆರಡು ವಿಚಾರಗಳಲ್ಲಿ ಸ್ವಲ್ಪಮಟ್ಟಿಗೆ ವಿವರಣೆ ಕೊಡುತ್ತೇನೆ. ಮಾನ್ಯ ಶ್ರೀ ಸಿದ್ಧವೀರಪ್ಪನವರು ದಾವಣಗೆರೆ ಶಂಕರ ಟೆಕ್ಸ್‌ಟೈಲ್ ಮಿಲ್ಸ್—ಈ ಒಂದು ಕಾರ್ಖಾನೆಗೆ 10 ಲಕ್ಷ ರೂಪಾಯಿಗಳನ್ನು ಸಾಲವಾಗಿ ಸರ್ಕಾರದವರು ಶೇಕಡ 5ರಂತೆ ಬಡ್ಡಿ ದರದಲ್ಲಿ ಕೊಟ್ಟಿದ್ದಾರೆ, ಆದರೆ ಮಂಡ್ಯಾ ನ್ಯಾಷನಲ್ ಪೇಪರ್ ಮಿಲ್ಸ್‌ಗೆ ಸೇಕಡ 7ರಂತೆ ಬಡ್ಡಿ ದರವನ್ನು ಹಾಕಿದ್ದಾರೆಂದು ಹೇಳಿ ಸರ್ಕಾರದವರು ಒಂದು ತರಹದ ಡಿಸ್ಕ್ರಿಮಿನೇಷನ್ ಮಾಡಿದ್ದಾರೆ ಅಥವಾ ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ಒಬ್ಬರಿಗೆ ಪಕ್ಷಪಾತ ತೋರಿಸಿದ್ದಾರೆಂಬುದಾಗಿ ಮಾತನಾಡಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಬಡ್ಡಿ ವಿಚಾರವಾಗಿ ಹೇಳಲೇ ಇಲ್ಲ. ಬೇರೆಯವರು ಹೇಳಿರಬಹುದು. ನೀವೆಲ್ಲರೂ ನಾವು ಹೇಳಿದಾಗ ಇಲ್ಲಿದ್ದಿದ್ದರೆ ಈ ರೀತಿ ಆಗುತ್ತಿರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಶಂಕರ ಟೆಕ್ಸ್‌ಟೈಲ್ ಮಿಲ್ಸ್‌ಗೆ ಕೊಟ್ಟಂಥ ಸಾಲ ಮೈಸೂರು ಸ್ಟೇಟ್ ಏಡ್ ಇಂಡಸ್ಟ್ರೀಸ್ ಆಕ್ಟ್ ರೂಲ್ಸ್ ಪ್ರಕಾರ ಕೊಟ್ಟಿದೆ. ಅದರಲ್ಲಿ ಸಾಲವನ್ನು ಕೊಡುವಾಗ ಯಾವ ತರಹದ ಬಡ್ಡಿ ಮೇಲೆ ಕೊಡಬೇಕು ಎಂಬುದನ್ನು ನಮೂದಿಸಿದ್ದಾರೆ. ಅಲ್ಲಿ ಏಳೂವರೆ ಪರ್ಸೆಂಟ್ ಬಡ್ಡಿ "subject to a rebate of 2½% per annum for prompt payment of instalments on or before the due date". ಎಂಬುದಾಗಿ ಒಂದು ಕಂಡೀಷನ್ ಹಾಕಿದ್ದಾರೆ. ಅದು ಈಗ ಸೇಕಡ 5ರಷ್ಟು ಆಯಿತು. ಆದರೂ ಸೇಕಡ 5ರಷ್ಟು ಎಂದು ಹೇಳುವುದಕ್ಕೂ ಆಗುವುದಿಲ್ಲ. ಕಾಲಕ್ಕೆ ಸರಿಯಾಗಿ ಕಂತುಗಳು ಪಾವತಿಮಾಡಿದರೆ ಅವರಿಗೆ ಸೇಕಡ ಎರಡೂವರೆ ರಿಬೇಟ್ ಹೋಗುತ್ತದೆ. ಇದರಿಂದ ಯಾವ ತರಹ ತಾರತಮ್ಯವಿಲ್ಲ. ಗೌರಿಬಿದನೂರು ಸಕ್ಕರೆ ಕಾರ್ಖಾನೆಗೆ ಕೊಟ್ಟಿರುವುದು ಸ್ಟೇಟ್ ಏಡ್ ಇಂಡಸ್ಟ್ರೀಸ್ ಆಕ್ಟ್ ಪ್ರಕಾರವಲ್ಲ. ಅದು ಒಂದು ಸಹಕಾರಿ ಸಂಘ. ಆ ಸಂಘಕ್ಕೆ ಯಾವ ಷರತ್ತಿನಮೇಲೆ ಕೊಟ್ಟಿದ್ದಾರೆಂದರೆ.........

ಶ್ರೀ ಮಹದೇವ್ ಜಿ. ಬಣಕಾರ್ (ಬ್ಯಾಡಗಿ).—ಕೊಟ್ಟ ಹಣ ವಾಪಸ್ಸು ಬಾರದೇ ಇದ್ದರೆ ಸಹಕಾರ ಸಂಘವಾದ್ದರಿಂದ ಕೊಡಬೇಕೆಂದು ಅರ್ಥವೇ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಒಂದು ಮಾತನ್ನು ಗಮನದಲ್ಲಿಡಬೇಕು. ನಮ್ಮ ರಾಜ್ಯದಲ್ಲಿ ಕೈಗಾರಿಕೆ ಉದ್ದಿಮೆ ಹೆಚ್ಚು ಆಗಬೇಕೇ, ಬೇಡವೇ ಎನ್ನುವುದನ್ನು ಅವರೇ ವಿಚಾರ ಮಾಡಿ ನೋಡಬೇಕು. ಕೈಗಾರಿಕೆ ಹೆಚ್ಚಾಗಬೇಕಾದರೆ ಅವುಗಳಿಗೆ ನಾವು ಸಾಕಷ್ಟು ಸಹಾಯ ಮಾಡುವುದು ಅತ್ಯಗತ್ಯವಾಗಿದೆ. ಮಂಡ್ಯಾ ನ್ಯಾಷನಲ್ ಪೇಪರ್ ಮಿಲ್ಲುಗಳಿಗೂ ಕೂಡ ನಾವು strictly speaking ರೂಲ್ಸ್ ಪ್ರಕಾರ ಶಂಕರ ಟೆಕ್ಸ್‌ಟೈಲ್ ಮಿಲ್ಸ್‌ಗೆ ಕೊಟ್ಟಹಾಗೆ ಕೊಟ್ಟಿಲ್ಲ. ಮೈಸೂರು ಸ್ಟೇಟ್ ಏಡ್ ಇಂಡಸ್ಟ್ರೀಸ್ ರೂಲ್ಸ್ ಪ್ರಕಾರ ಏನು ದರವನ್ನು ಅದರಲ್ಲಿ ನಿಗದಿ

(ಶ್ರೀ ರಾಮಕೃಷ್ಣ ಹೆಗಡೆ)

ಮಾಡಿದ್ದಾರೋ ಆ ದರ ಈಗ ಕಡಿಮೆಯಾಗಿದೆ. ಅದನ್ನು ಹೆಚ್ಚುಮಾಡಬೇಕೆಂದು ಹೇಳಿ ಯೋಚನೆ ಮಾಡಿದ್ದೇವೆ. ಏಕೆಂದರೆ ಬ್ಯಾಂಕಿನ ದರ ಹೆಚ್ಚಾಗಿದೆ. ಮಾರ್ಕೆಟ್ ದರ ಬಡ್ಡಿಯೂ ಹೆಚ್ಚಾಗಿದೆ. ಈ ವಿಷಯದಲ್ಲಿ ಸರ್ಕಾರದವರು ಇನ್ನು ಸ್ವಲ್ಪ ದಿವಸಗಳಲ್ಲಿ ಒಂದು ತೀರ್ಮಾನವನ್ನು ತೆಗೆದು ಕೊಳ್ಳುತ್ತಾರೆ.

ಇನ್ನು ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿದಂಥ ವಿಷಯಗಳ ಬಗ್ಗೆ ಮಾತನಾಡುತ್ತೇನೆ. ಅವರು ಈಗ ಈ ಸಭೆಯಲ್ಲಿಲ್ಲ. ಅವರ ಭಾಷಣ ಕೇಳುವುದಕ್ಕೂ, ನೋಡುವುದಕ್ಕೂ ಬಹಳ ಚೆಂದ. ಮೈಮೇಲೆ ಆವೇಶ ಬಂದವರ ಹಾಗೆ, ಕೆಲವು ಸಾರಿ ಯಕ್ಷಗಾನದಲ್ಲಿ ಏನೊಂದು ಅಭಿನಯ ಮಾಡುತ್ತಾರೋ ಆ ಪ್ರಕಾರ ಅವರು ಕೈಕರಣ, ಬಾಯಿಕರಣ ಮಾಡಿ ಭಾಷಣಮಾಡಿದರು. ಅದನ್ನು ಅವರು ಯಾವಾಗಲೂ ಮಾಡುತ್ತಾರೆ. ಅವರು ಒಂದು ಬಹಳ ದೊಡ್ಡ ಕಾರ್ಯವನ್ನು ಸಾಧನೆ ಮಾಡಿ ನಮಗೆ ಹೇಳಿದರು. ಅದೇನೆಂದರೆ, ಈ ಸಾರಿ ಅವಿಶ್ವಾಸನಿರ್ಣಯ ಈ ಸಭೆಯ ಮುಂದೆ ಸರ್ಕಾರದ ವಿರೋಧವಾಗಿ ತರುವುದಕ್ಕೆ ಏನು ಕಾರಣ, ಏನೋ ಅಗಾಧವಾದ ವಿಚಾರವಿರಬಹುದು ಎಂಬುದಾಗಿ ನಾನು ಬಹಳವಾಗಿ ಎದುರು ನೋಡುತ್ತಿದ್ದೆ. ಆಮೇಲೆ ಗೊತ್ತಾಯಿತು, ಅದು ಪಾನನಿರೋಧದ ಸಡಿಲಿಕೆ ಎಂಬುದಾಗಿ. ಈ ಸರ್ಕಾರದವರು ಏನೋ ಪಾನನಿರೋಧವನ್ನು ಸಡಿಲಿಸಿದ್ದಾರೆ, ಆದ್ದರಿಂದ ಈ ಸರ್ಕಾರಕ್ಕೆ ಅಧಿಕಾರದಲ್ಲಿರಲು ಯಾವ ತರಹ ಹಕ್ಕೂ ಇಲ್ಲವೆಂದು ಹೇಳಿದುದು. ಮತ್ತೆ ಕಾಂಗ್ರೆಸ್‌ನ ವಿಚಾರವಾಗಿ ಒಂದು ಒಳ್ಳೆಯ ಮಾತನ್ನು ಇಲ್ಲಿ ಹೇಳಿದರು. ಅವರು ನನಗಿಂತ ಹೆಚ್ಚು ವಯಸ್ಸಾದವರು ಮತ್ತು ಕಾಂಗ್ರೆಸ್‌ನಲ್ಲೇ ಬಹಳ ವರ್ಷಗಳಿಂದ ಇದ್ದವರೂ ಇರಬಹುದು. ಆದರೆ ನಾನು ಅವರು ಕಾಂಗ್ರೆಸ್ಸಿನಲ್ಲಿದ್ದಷ್ಟು ವರ್ಷಗಳು ಇರಲಿಕ್ಕಿಲ್ಲ. ನನ್ನ ಮುಂದಿನ ಪೀಳಿಗೆ ಅಷ್ಟು ದಿನಗಳೂ ಇರಲಿಕ್ಕಿಲ್ಲ. ಅವರು ಹುಟ್ಟಿದಮೇಲೆ ಕಾಂಗ್ರೆಸ್ಸಿಗೆ ಸೇರಿದವರು. ಆದರೆ ನಾನು ಒಂದು ದೃಷ್ಟಿಯಿಂದ ಗರ್ಭದಲ್ಲಿರುವಾಗಲೇ ಕಾಂಗ್ರೆಸ್ಸಿಗನಾಗಿದ್ದೆ. ಕಾಂಗ್ರೆಸ್ಸಿಗೆ ಈಗ ಸೇರಲೇ ಬೇಕಾಗಿರಲಿಲ್ಲ. ಪಾನನಿರೋಧದ ನೀತಿಯ ಬಗ್ಗೆ ಶ್ರೀಮಾನ್ ಅಪ್ಪಣ್ಣನವರು ಮಧ್ಯದಲ್ಲಿ ಎದ್ದು ಇಲ್ಲಿ ಹೇಳಿದಹಾಗೆ ಯಾವುದೇ ಒಂದು ನೀತಿ ಮೊದಲಿಂದ ಇದ್ದರೂ ಅಂತಹ ಒಂದು ನೀತಿಯನ್ನು ಪೂರ್ಣವಾಗಿ ಅನುಸರಿಸಿಯೇ ಯಶಸ್ವಿಯಾಗಿ ಮಾಡುವುದಕ್ಕಾಗುವುದಿಲ್ಲ ಅದು ಸಾಧ್ಯವಾಗುವುದೂ ಇಲ್ಲ. ನೀತಿ ಕಾಲ ಪರಿಸ್ಥಿತಿಗಳಿಗೆ ಅವಶ್ಯಕತೆಗಳಿಗೆ ಅನುಸಾರವಾಗಿ ನಡೆಯಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಜೀವನದಲ್ಲಿ ಎರಡು ತರಹದ ತತ್ವಗಳು ಎಂದರೆ, ಅಬಾಧಿತವಾದ ತತ್ವಗಳು ಇರುತ್ತವೆ. ಅಂತಹ ತತ್ವಗಳೊಳಗೆ ಜನರಿಂದಲೇ ಮಾಡಿದಂತಹ ತತ್ವ, ಇನ್ನೊಂದು ವ್ಯಾವಹಾರಿಕ ವಾಗಿ ನೋಡಬೇಕಾಗುತ್ತದೆ. ಮತ್ತೆ ಪರಿಸ್ಥಿತಿಗೆ ಅನುಸಾರವಾಗಿ ಪಾಠ ಕಲಿತುಕೊಂಡು ತೀವ್ರ ವಾದ ಬದಲಾವಣೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಪಾನನಿರೋಧದ ತತ್ವವನ್ನು ಎಂದೂ ಯಾರೂ ಒಳ್ಳೆಯದಲ್ಲ ಎಂದು ಹೇಳುವುದಿಲ್ಲ. ಪಾನನಿರೋಧವನ್ನು ಎಷ್ಟುಮಟ್ಟಿಗೆ ಕಾಯಿದೆ ಪ್ರಕಾರ ಇಡಲು ಸಾಧ್ಯ ಎನ್ನುವುದನ್ನು ಸುಮಾರು ಇಪ್ಪತ್ತು ಮೂವ್ವತ್ತು ವರ್ಷಗಳಿಂದಲೂ ಪಡೆದ ಅನುಭವದಿಂದ ಕಂಡುಕೊಂಡು ಬಂದಿದ್ದೇವೆ. ಆ ಅನುಭವ ಪಾಠ ಕಲಿತು ಅದರಿಂದಾಗುವ ಅನಾಹುತವನ್ನು ತಪ್ಪುಗಳನ್ನು ಸಡಿಲಿಸುತ್ತಿದ್ದೇವೆ. ಇದೇ ಒಂದು ದೊಡ್ಡ ಕಾರಣದಿಂದ ಈ ಸರಕಾರ ಅಧಿಕಾರದಲ್ಲಿ ಇರಕೂಡದು ಎಂದು ಹೇಳುವುದನ್ನು ನೋಡಿ ನಿಜವಾಗಿಯೂ ನನಗೆ ಬಹಳ ಆಶ್ಚರ್ಯವಾಯಿತು. ನಾವು ಚುನಾವಣೆಗಳಲ್ಲಿ ಅನುಸರಿಸಿದಂತಹ ನೀತಿಯನ್ನೇ ಅನುಸರಿ ಸಿದ್ದೇವೆ. ಮತ್ತು ಈ ಹೊಸ ನೀತಿಯನ್ನು ಅನುಸರಿಸುವುದಕ್ಕೆ ಸುಮಾರು ಒಂದೂವರೆ ಅಥವಾ ಎರಡು ವರ್ಷಗಳ ಹಿಂದೆಯೇ ಸರಕಾರ ಈ ನೀತಿಯನ್ನು ಬಹಿರಂಗಪಡಿಸಿತು. ಇದಾದ ನಂತರದಲ್ಲಿ ಚುನಾವಣೆಯಾಗಿದೆ. ಚುನಾವಣೆಯಲ್ಲಿ ಕಾಂಗ್ರೆಸ್ಸು ಸಂಸ್ಥೆಯೇ ಪುನಃ ಗೆದ್ದು ಬಂದಿದೆ.

ಮಾನ್ಯ ಅಧ್ಯಕ್ಷರೇ, ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿರುವುದು ನೋಡಿ ನನಗೆ ಒಂದು ದೃಷ್ಟಿಯಿಂದ ಆಶ್ಚರ್ಯ ಮತ್ತು ಒಂದು ದೃಷ್ಟಿಯಿಂದ ವಿಷಾದವೂ ಆಗಿದೆ. ಉದಾಹರಣೆ ಯಾಗಿ ಹೇಳುವುದಾದರೆ, ಬೆಂಗಳೂರಿನಲ್ಲಿ ಒಂದು ಫೈವ್‌ಸ್ಟಾರ್ ಹೋಟಲನ್ನು ಸರಕಾರ ಕೋಟಿ ಗಟ್ಟಲೆ ಖರ್ಚುಮಾಡತಕ್ಕದ್ದು ಮತ್ತು ದೆಹಲಿಯಲ್ಲಿರುವ ಮೈಸೂರು ಹೌಸನ್ನು ಕಟ್ಟುವುದು ಇವನ್ನೆಲ್ಲಾ ಸರಕಾರ ಮಾಡುವುದು ಸರಿಯಲ್ಲ ಎಂದು ಹೇಳಿದರು. ಮಾನ್ಯ ಸದಸ್ಯರು ವಿಚಾರಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು ಮಾತನಾಡಿದರೆ ಇಷ್ಟು ಆಶ್ಚರ್ಯವಾಗುವುದಿಲ್ಲ. ಬೆಂಗಳೂರಿನಲ್ಲಿ ಏನು ಒಂದು ಫೈವ್‌ಸ್ಟಾರ್ ಹೋಟಲು ಇದೆ. ಇದನ್ನು ರಾಜ್ಯಸರಕಾರ ಕಟ್ಟುತ್ತಿಲ್ಲ. ರಾಜ್ಯ ಸರಕಾರ ಕೊಡುವುದು ಬರೀ ಜಾಗ ಮಾತ್ರ. ಕೇಂದ್ರ ಸರಕಾರದವರು ಇದಕ್ಕಾಗಿ ರಿವೈಸ್ಡ್ ಎಸ್ಟಿಮೇಟು ಮಾಡಿಸಿ ಸುಮಾರು ಒಂದು ಕೋಟಿಯಷ್ಟು ಆಗುವ ಅಷ್ಟು ಖರ್ಚನ್ನೂ ಅವರೇ

ಕೊಡುತ್ತಾರೆ. ನಮ್ಮ ಊರಿನಲ್ಲಿ ಕಟ್ಟಬೇಡ ಎಂದರೆ ಮದ್ರಾಸಿನಲ್ಲಿ ಕಟ್ಟುತ್ತಿದ್ದರು. ಆಗ ನಮಗೆ ಈ ಅನುಕೂಲಗಳು ಸಿಗುತ್ತಿತ್ತೇ? ಒಂದು ವಿಷಯವನ್ನು ಮಾನ್ಯ ಸದಸ್ಯರಲ್ಲಿ ಕೇಳಬೇಕಾಗಿದೆ. ಬಡ್ಜೆಟ್ಟಿನಲ್ಲಿ ಟೂರಿಸಂ ವಿಚಾರದಲ್ಲಿ ಬೇಡಿಕೆಗಳನ್ನು ಇಟ್ಟಾಗ ಆ ಬೇಡಿಕೆಗಳಿಗೆಲ್ಲಾ ಪೂರ್ಣವಾಗಿ ಒಪ್ಪಿ ವೋಟು ಮಾಡಿದ್ದೀರಿ. ಮತ್ತು ಬೆಂಗಳೂರಿನಲ್ಲಿ ಇಂತಹ ಹೋಟಲುಗಳೇ ಇಲ್ಲ. ಇಂತಹ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಸದಸ್ಯರುಗಳೆಲ್ಲ ಹೇಳಿದರು. ಹಾಗೂ ಯಾರೇ ಬರಲಿ ಬೆಂಗಳೂರಿನಂತಹ ಸುಂದರ ಷಹರ ನಮ್ಮ ಇಡೀ ಹಿಂದೂಸ್ಥಾನದಲ್ಲೇ ಇಲ್ಲ ಎಂದು ನೀವು ಹೇಳದೇ ಇದ್ದರೂ ಬಾಕಿಯವರು ಹೇಳುತ್ತಾರೆ.

ಒಬ್ಬ ಸದಸ್ಯರು.—ಮೈಸೂರು ಹೌಸ್ ಬಗ್ಗೆ ಹೇಳಿದುದು, ಹೋಟಲ್ ಬಗ್ಗೆ ಅಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರೆಲ್ಲರಿಗೂ ನಾನು ಇಲ್ಲಿಂದಲೇ ಆಮಂತ್ರಣವನ್ನು ಕೊಡುತ್ತೇನೆ. ದೆಹಲಿಗೆ ಹೋಗಿ ಈಗ ಕಟ್ಟಿರುವ ಮೈಸೂರು ಹೌಸಿನಲ್ಲಿ ಒಂದೆರಡು ಮೂರು ದಿನಗಳ ಕಾಲ ಇದ್ದು ಬರಬಹುದು.

ಮಾನ್ಯ ಅಧ್ಯಕ್ಷರೇ, ಅವರ ತರ್ಕ, ಅವರ ವಾದ ಸರಣಿ ಇವುಗಳು ಸಾಮಾನ್ಯವಾಗಿ ಯಾವ ವಿವೇಕಿಯ ಕಲ್ಪನೆಗೂ ನಿಲುಕದಂತಾಗಿದೆ ಎನ್ನುವುದನ್ನು ತಾವು ಗಮನಿಸಬೇಕು.

ಇನ್ನು ಅವಿಶ್ವಾಸವನ್ನು ನಿರ್ಣಯವನ್ನು ಪ್ರಸ್ತಾಪಿಸುವುದು ಬಹಳ ದೊಡ್ಡ ಆಯುಧ. ಅದನ್ನು ಅತ್ಯಗತ್ಯ ಸಂದರ್ಭಗಳಲ್ಲಿ ಮಾತ್ರ ಬಳಸಬೇಕು. ಚುನಾವಣೆಯಾಗಿ ಇನ್ನೂ ಒಂದು ವರ್ಷವಾಗಿಲ್ಲ. ಕಳೆದ ಚುನಾವಣೆಯಲ್ಲಿ ಕೂಡ ಈ ದೇಶದಲ್ಲಿ ಒಂದು ಕಾಂಗ್ರೆಸ್ ಸರಕಾರ ಅಸ್ತಿತ್ವದಲ್ಲಿ ಬಂದಿದೆ. ಬೇರೆ ಯಾವ ಸರಕಾರವೂ ಬಂದಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಗಮನದಲ್ಲಿಡಬೇಕು. ಇಂದು ಕಾಂಗ್ರೆಸ್ಸಿನವರ ಕೈಯಲ್ಲಿ ಇದು ಮನಾಪೊಲಿಯಂತೆ ಇದೆ. ಸುಮಾರು 18-20 ವರ್ಷಗಳಿಂದಲೂ ಕಾಂಗ್ರೆಸ್ಸು ಸರಕಾರವೇ ಅಸ್ತಿತ್ವದಲ್ಲಿ ಬರುತ್ತಿವೆ ಮತ್ತು ಎಲ್ಲ ಭಾಗದಲ್ಲಿಯೂ ಇದೆ ಎನ್ನುವ ಪರಿಸ್ಥಿತಿ ಈಗ ಇಲ್ಲ. ಕೆಲವು ಕಡೆಗಳಲ್ಲಿ ಪಿ.ಎಸ್.ಪಿ.ಗಳ, ಎಸ್.ಎಸ್.ಪಿ.ಗಳ ಹಾಗೂ ಸ್ವತಂತ್ರ ಪಕ್ಷಗಳ ಹೀಗೆ ಕೆಲವಾರು ಪಕ್ಷಗಳ ಸರಕಾರಗಳು ಇದ್ದು ಅವರಿಗೆ ಆಡಳಿತದ ಜವಾಬುದಾರಿಗಳನ್ನು ಹೊರುವ ಅವಕಾಶಗಳು ಸಿಕ್ಕಿವೆ. ಈಗ ನಮ್ಮ ಆಡಳಿತದ ಬಗ್ಗೆ ಯಾವ ಮಾತುಗಳನ್ನು ಆಡುತ್ತಿದ್ದಾರೋ ಅವರದೇ ಪಕ್ಷಗಳಿರುವ ಪಾರ್ಟಿಗಳ ಸದಸ್ಯರುಗಳು ಯಾವ ರೀತಿ ಆಡಳಿತ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ ಎನ್ನುವುದನ್ನೂ ನೆನಪಿನಲ್ಲಿಡಬೇಕು. ಇದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಅವಿಶ್ವಾಸವನ್ನು ಪ್ರಸ್ತಾಪಿಸುವುದಕ್ಕೆ ರೂಲ್ಸ್ ಪ್ರಕಾರ ಅವಕಾಶವಿದೆ ಎನ್ನುವುದನ್ನು ನಾನೂ ಒಪ್ಪುತ್ತೇನೆ. ರೂಲ್ಸು ಪ್ರಕಾರ ಇಂತಿಷ್ಟು ಜನ ಸದಸ್ಯರು ನಿಂತುಕೊಳ್ಳಬೇಕೆಂದು ಇದ್ದರೆ ತಾವೂ ಅಧ್ಯಕ್ಷರಾಗಿ ಅದಕ್ಕೆ ಒಪ್ಪಿಗೆ ಕೊಡುತ್ತೀರಿ ಮತ್ತು ಅದರ ಬಗ್ಗೆ ಚರ್ಚೆಯೂ ಆಗುತ್ತದೆ. ಆದರೆ ಯಾವುದಾದರೂ ಒಂದು ವಿಶೇಷ ಪರಿಸ್ಥಿತಿ ನಮ್ಮ ರಾಜ್ಯಕ್ಕಾಗಲೀ ಅಥವಾ ನಮ್ಮ ದೇಶಕ್ಕಾಗಲೀ ಇಲ್ಲಿ ಬಂದಿತ್ತು ಎನ್ನುವುದು ನನಗೇನೂ ಗೊತ್ತಿಲ್ಲ. ಇಂದು ಈ ಅವಿಶ್ವಾಸವನ್ನು ವಿಶ್ಲೇಷಣೆ ಮಾಡುತ್ತಾ ಆಡಳಿತದಿಂದ ಕೆಳಕ್ಕಿಳಿಯಬೇಕೆಂದು ಹೇಳಿದರು. ಇಳಿಯುವ ಪ್ರಸಂಗ ಬಂದರೆ ಇಳಿದೇ ಇಳಿಯುತ್ತೇವೆ. ಅವರಿಗೆಲ್ಲಾ ಒಂದು ಆಶ್ವಾಸನೆ ಕೊಡುತ್ತೇನೆ, ಇಳಿಯುವ ಪ್ರಸಂಗ ಬಂದರೆ ಇಳಿಯಲು ಸಿದ್ಧರಾಗಿದ್ದೇವೆ. ಆದರೆ ವಿರೋಧ ಪಕ್ಷದ ಸದಸ್ಯರು ಕೇಳುತ್ತಾರೆ ಎಂದು ನಾವು ಆಡಳಿತವನ್ನು ಬಿಟ್ಟು ಹೋಗಲಿಕ್ಕೆ ತಯಾರಾಗಿಲ್ಲ. ನಿಜವಾಗಿಯೂ ವಿಶ್ವಾಸ ಹಾಗೂ ಅವಿಶ್ವಾಸ ನಿರ್ಣಯಗಳನ್ನು ತರತಕ್ಕವರು ನಮ್ಮ ರಾಜ್ಯದಲ್ಲಿರುವ ಸುಮಾರು ಎರಡೂವರೆ ಕೋಟಿ ಜನರು. ಅವರು ಇಂದು ನಮ್ಮನ್ನು ಚುನಾಯಿಸಿ ಅಧಿಕಾರವನ್ನು ಕೊಟ್ಟು ಐದು ವರ್ಷದವರೆಗೆ ಇರಬೇಕೆಂದು ನಿರ್ಧಾರ ಮಾಡಿದ್ದಾರೆ.

ಶ್ರೀ ಮಹದೇವ ಜಿ. ಬಣಕಾರ.—ಚುನಾವಣೆಯಲ್ಲಿ ಈಚೆಗೆ ಕಾಂಗ್ರೆಸಿಗೆ ಶೇಕಡಾ 48ರಷ್ಟು ಇತರ ವಿರೋಧ ಪಕ್ಷಗಳಿಗೆ ಶೇಕಡಾ 52ರಷ್ಟು ಮತಗಳು ಬಂದಿವೆ ಎನ್ನುವುದನ್ನೂ ಗಮನಿಸಬೇಕು

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಮಾನ್ಯ ಸದಸ್ಯರು ಒಂದು ವಿಚಾರವನ್ನು ನೆನಪಿನಲ್ಲಿ ಇಡಬೇಕು. ಎಲ್ಲೆಲ್ಲಿ ಕಾಂಗ್ರೆಸ್ ಸರಕಾರವಿದೆಯೋ ಅಲ್ಲೆಲ್ಲಾ ಬಹುಮತ ಇವೊತ್ತು ಬಂದಿರಲಿಕ್ಕಿಲ್ಲ. ಮದ್ರಾಸಿನಲ್ಲಿ ಕಾಂಗ್ರೆಸ್ ಇಂದು ಮೈನಾರಿಟಿ ಪಕ್ಷದಲ್ಲಿದೆ. ಆದರೆ ಮದರಾಸಿನ ಈಚಿನ ಚುನಾವಣೆಗಳಲ್ಲಿ ಶೇಕಡಾ 48ರಷ್ಟು ವೋಟುಗಳು ಕಾಂಗ್ರೆಸ್ಸಿಗೆ ಬಂದಿದೆ. ಅಲ್ಲಿರುವ ಆಡಳಿತ ಪಕ್ಷಕ್ಕೆ ಶೇಕಡಾ 39ರಷ್ಟು ಬಂದಿದೆ. ಮಾನ್ಯ ಸದಸ್ಯರಿಗೆ ಪ್ರಜಾತಂತ್ರ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದರ ಅರಿವು ಇಲ್ಲವೆಂದು ಕಾಣುತ್ತದೆ.

(ಶ್ರೀ ರಾಮಕೃಷ್ಣ ಹೆಗಡೆ)

ಚುನಾವಣೆಯಲ್ಲಿ 43 ಪರ್ಸೆಂಟ್ ಮತ ಬಂದ ಮಾತ್ರಕ್ಕೆ ಕಾಂಗ್ರೆಸ್ ಪಕ್ಷ ಮೈನಾರಿಟಿ ಪಕ್ಷ ಆಗುವುದಿಲ್ಲ. ಆದ್ದರಿಂದ ಈ ಮೂಲಕ ನಾನು ಕಳಕಳಿಯಿಂದ, ನಮ್ರತೆಯಿಂದ ಬಿನ್ನವಿಸಿ ಕೊಳ್ಳುತ್ತೇನೆ. ಈ ಒಂದು ಅವಿಶ್ವಾಸ ನಿರ್ಣಯವೆಂಬ ಆಯುಧ ಏನಿದೆಯೋ ಅದನ್ನು ಪುನಃ ಪುನಃ ಬಳಸಿದಲ್ಲಿ, ಆ ಆಯುಧದ ಮೊನೆ ಅಥವಾ ಹರಿತ ಏನಿದೆಯೋ ಅದು ಹೊರಟುಹೋಗುತ್ತದೆ. ಅದರಿಂದ ಯಾವ ಒಂದು ಪರಿಣಾಮ ಆಗಬೇಕೋ ಆ ಪರಿಣಾಮ ಆಗುವುದಿಲ್ಲ. ಆದ್ದರಿಂದ ಅದಕ್ಕೆ ಪುನಃ ಪುನಃ ಕೈಹಾಕಕೂಡದು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

6.30 P.M.

† ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಶಿವಪ್ಪನವರು ಮಂಡಿಸಿದ ನಿರ್ಣಯದಮೇಲೆ ಮಾತನಾಡುತ್ತಾ ಕೆಲವು ಮಾನ್ಯ ಸದಸ್ಯರು ನನ್ನ ಖಾತೆಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಇದರ ಬಗ್ಗೆ ನಾನು ಇವೊತ್ತು ಪರಿಸ್ಥಿತಿ ಏನಿದೆ ಎನ್ನುವಂಥಾದ್ದನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ಶಿವಪ್ಪನವರು ಮತ್ತು ಇನ್ನೂ ಕೆಲವು ಮಾನ್ಯ ಸದಸ್ಯರು ಹೇಳಿದರು, ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಕೇವಲ ತಮಗೆ ಬೇಕಾದವರಿಗೆ ಕಂಟ್ರಾಕ್ಟ್ ಕೆಲಸ ಕಾರ್ಯಗಳನ್ನು ಸರ್ಕಾರದವರು ಕೊಡುತ್ತಿದ್ದಾರೆ, ಉಳಿದವರಿಗೆ ಕೊಡುವುದಿಲ್ಲ, ಇದರಲ್ಲಿ ಸಾಕಷ್ಟು ಫೇವರಿಟಿಜಮ್ ನಡೆಯುತ್ತಿದೆ ಎಂದು ಹೇಳಿದ್ದಾರೆ. ಶ್ರೀಮಾನ್ ಶಿವಪ್ಪನವರು ಹರಿಹರದ ಹತ್ತಿರ ತುಂಗಭದ್ರಾ ಸೇತುವೆಗೆ ಕೊಟ್ಟಂತಹ ಕಂಟ್ರಾಕ್ಟ್ ಬಗ್ಗೆ ಪ್ರಸ್ತಾಪ ಮಾಡಿ ಅನೇಕ ಸಾರಿ ಹೇಳಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಯಾವುದೇ ಒಂದು ಕೆಲಸವನ್ನು ಕಂಟ್ರಾಕ್ಟ್ ದಾರರಿಗೆ ವಹಿಸಿಕೊಡಬೇಕಾದರೂ ಒಂದು ಪ್ರೊಸೀಜರ್ ಇರುತ್ತದೆ. ರೂಲ್ಸ್ ಇರುತ್ತದೆ, ಆ ಪ್ರಕಾರ ಅವರಿಗೆ ವಹಿಸಿಕೊಡುತ್ತೇವೆ ಎಂದು ನಾನು ಅನೇಕ ಸಾರಿ ಈ ಸಭೆಯಲ್ಲಿ ಹೇಳಿದ್ದೇನೆ. ಹರಿಹರದ ಹತ್ತಿರ ತುಂಗಭದ್ರಾ ಪ್ರಾಜೆಕ್ಟಿಗೆ ಸಂಬಂಧಪಟ್ಟಹಾಗೆ ಒಂದು ಕೆಲಸವನ್ನು 1965ನೇ ಇಸವಿಯಲ್ಲಿ ಕರ್ನಾಟಕ ಟ್ರೇಡರ್ಸ್‌ಗೆ ನಾವು ಕೊಟ್ಟಿದ್ದೇವೆ. That was based on the recommendation of the Chief Engineer, their tender was accepted in February 1965.

Sri H. SIDDAVEERAPPA.—I am sorry. That is wrong. Please see the P. A. C. report.

ಶ್ರೀ ವೀರೇಂದ್ರ ಪಾಟೀಲ್.—1965ನೇ ಇಸವಿಯಲ್ಲಿ ಒಂದು ಕೆಲಸವನ್ನು ನಾವು ಕರ್ನಾಟಕ ಟ್ರೇಡರ್ಸ್ಸಿಗೆ ಕೊಟ್ಟಿದ್ದೇವೆ. ಆ ಕೆಲಸಕ್ಕೆ ನಾವು 13 ಜನ ಕಂಟ್ರಾಕ್ಟರುಗಳಿಂದ ಟೆಂಡರನ್ನು ಇನ್‌ವೈಟ್ ಮಾಡಿದ್ದೆವು. ಯಾವುದು ಲೋಯೆಸ್ಟ್ ಟೆಂಡರು ಇತ್ತೋ ಅವರಿಗೆ ನಾವು ಆ ಕೆಲಸ ವನ್ನು ಒಪ್ಪಿಸಿದ್ದೇವೆ. ಎಂದರೆ ಕರ್ನಾಟಕ ಟ್ರೇಡರ್ಸ್‌ನವರದು ಲೋಯೆಸ್ಟ್ ಟೆಂಡರಾಗಿತ್ತು. ಆದ್ದರಿಂದ ಅವರಿಗೆ ನಾವು ಆ ಕೆಲಸವನ್ನು ಒಪ್ಪಿಸಿದ್ದೇವೆ. ಒಂದು ವೇಳೆ ಕರ್ನಾಟಕ ಟ್ರೇಡರ್ಸ್ ಮುಖ್ಯ ಮಂತ್ರಿಗಳ ಸಂಬಂಧಿಕರಾಗಿದ್ದರೆ, ಮುಖ್ಯ ಮಂತ್ರಿಗಳ ಸಂಬಂಧಿಕರು ಕಂಟ್ರಾಕ್ಟರ್ ಆಗುವುದಕ್ಕೆ ಅರ್ಹತೆಯಿಲ್ಲ ಎಂದು ಪಿ. ಡಬ್ಲ್ಯು. ಕೋಡಿನಲ್ಲಿ ನಾವು ಅಳವಡಿಸಿಕೊಂಡಿಲ್ಲ. ಒಂದು ವೇಳೆ ತಮ್ಮ ಸರ್ಕಾರ, ಎಂದರೆ, ವಿರೋಧಪಕ್ಷದವರ ಸರ್ಕಾರ ಬಂದರೂ ಆ ರೀತಿ ಮಾಡುವುದಿಲ್ಲ. ಪಿ. ಡಬ್ಲ್ಯು. ಕೋಡನ್ನು ಹೊಸದಾಗಿ ಮಾಡಿಲ್ಲ. ಶ್ರೀಮಾನ್ ಸಿದ್ದವೀರಪ್ಪನವರು ಮತ್ತು ಚನ್ನಬಸಪ್ಪನವರ ಕಾಲದಲ್ಲಿ ಯಾವ ಒಂದು ಪ್ರೊಸೀಜರ್ ಇತ್ತೋ ಅದೇ ಪ್ರೊಸೀಜರ್ ಈಗಲೂ ನಡೆದುಕೊಂಡು ಬರುತ್ತಿದೆ. ಅದೇ ಪ್ರೊಸಿಜರನ್ನೇ ನಾವು ಅನುಸರಿಸುತ್ತಿದ್ದೇವೆ. ನಾವು ಹೊಸದಾಗಿ ಯಾವ ಪ್ರೊಸೀಜರನ್ನೂ ಅನುಸರಿಸುತ್ತಿಲ್ಲ. 1965ನೇ ಇಸವಿಯಲ್ಲಿ ಆ ಕೆಲಸಕ್ಕೆ ಟೆಂಡರ್‌ಕರೆದು ಲೋಯೆಸ್ಟ್ ಟೆಂಡರು ಯಾವುದು ಇತ್ತೋ ಅವರಿಗೆ ನಾವು ಕಂಟ್ರಾಕ್ಟ್ ಕೊಟ್ಟಿ ದ್ದೇವೆ. ಆ ಕಂಟ್ರಾಕ್ಟರು ಯಾವ ರೀತಿ ಯಾವ ರೇಟನ್ನು ಕೇಳುತ್ತಾರೆಯೋ ಆ ರೀತಿ ಬಿಲ್ ಮಾಡಿ ಅವರಿಗೆ ಹಣವನ್ನು ಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಏನು ಹೇಳಿದರೋ ಅದು ಸರಿಯಾದ್ದಲ್ಲ. ಆ ಕಂಟ್ರಾಕ್ಟರಿಗೆ ಬಿಲ್ ಕೊಡಬೇಕಾದರೆ ಪೇಮೆಂಟ್ ಮಾಡಬೇಕಾದರೆ ಒಂದು ಅಗ್ರಿಮೆಂಟ್ ಮಾಡಿ ಕೊಂಡಿದ್ದೇವೆ. ಆ ಅಗ್ರಿಮೆಂಟಿನಲ್ಲಿ ಯಾವ ರೇಟಿನ ಪ್ರಕಾರ ಬಿಲ್ ಕೊಡಬೇಕು, ಪೇಮೆಂಟ್ ಮಾಡಬೇಕು ಎಂದು ಇದೆಯೋ ಅದೇ ರೀತಿ ಪೇಮೆಂಟ್ ಆಗುತ್ತಿದೆ. ಅದಕ್ಕಿಂತ ಹೆಚ್ಚಿಗೆ ಪೇಮೆಂಟ್ ಮಾಡುತ್ತಿಲ್ಲ.

ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ನಾವು ಕಂಟ್ರಾಕ್ಟ್ ಇಂಥವರಿಗೆ ಕೊಟ್ಟಿದ್ದಾರೆ ಎಂದು ಹೇಳಲಿಲ್ಲ. ನಾವು ಹೇಳಿದ್ದು See the P. A. C. Report. "Decisions were taken by the officers as demanded by the contractors."

Sri VEERENDRA PATIL.—I am coming to that point.

> " Construction of a Bridge across Tungabhadra—even before the detailed estimates were accepted by the Chief Engineer, on the ground of urgency, tenders were called for the construction of a bridge across Haralahalli and the work entrusted in February 1961..."

ಒಂದೊಂದಾಗಿ ನಾನು ಹೇಳುತ್ತಾ ಬರುತ್ತೇನೆ. ಯಾವುದೂ ನಾವು ಹೆಚ್ಚು ಕೊಟ್ಟಿಲ್ಲ. ಒಂದು ವೇಳೆ ನಾವು ಹೆಚ್ಚಾಗಿ ಕೊಟ್ಟರೆ ಅಕೌಂಟೆಂಟ್ ಜನರಲ್ ಅವರು ಅಬ್ಜಕ್ಷನ್ ಹಾಕುತ್ತಾರೆ. ಆದ್ದರಿಂದ ನಾವು ಯಾರಿಗೂ ಹೆಚ್ಚಿಗೆ ಕೊಟ್ಟಿಲ್ಲ. ಶ್ರೀಮಾನ್ ದುಗ್ಗಪ್ಪನವರು ಮತ್ತು ಶ್ರೀಮಾನ್ ಸಿದ್ಧವೀರಪ್ಪನವರು ಹೇಳುತ್ತಾರೆ, ತುಂಗಭದ್ರಾ ಬ್ರಿಡ್ಜ್ ಎಂದಕೂಡಲೇ ಅವರಿಗೆ ಕರ್ನಾಟಕ ಟ್ರೇಡರ್ಸ್ ನೆನಪಿಗೆ ಬರುತ್ತದೆ. ಇದು ದುರ್ದೈವದ ಸಂಗತಿ. ತುಂಗಭದ್ರಾ ಬ್ರಿಡ್ಜಿನ ಕೆಲಸ ಅನೇಕ ಕಡೆ ನಡೆಯುತ್ತಿದೆ. ಮುನಿರಾಬಾದ್ ಮತ್ತು ಹರಳಳ್ಳಿ ಈ ಪ್ರದೇಶಗಳಲ್ಲಿಯೂ ತುಂಗಭದ್ರ ಸೇತುವೆಯ ಕೆಲಸ ನಡೆಯುತ್ತಿದೆ. ಅದನ್ನೂ ಕೂಡ ಕರ್ನಾಟಕ ಟ್ರೇಡರ್ಸ್‌ಗೆ ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರು ಮನಸ್ಸಿನಲ್ಲಿ ಭಾವನೆ ಮಾಡಿಕೊಂಡಿದ್ದಾರೆ. 1961ನೇ ಇಸವಿಯಲ್ಲಿ ಎಲ್ಲೆಲ್ಲಿ ತುಂಗಭದ್ರಾ ಬ್ರಿಡ್ಜಿನ ಕೆಲಸ ನಡೆಯುತ್ತಿದೆ ಎನ್ನುವುದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯಲ್ಲಿ ಕೊಟ್ಟಂಥಾದ್ದನ್ನು ಶ್ರೀಮಾನ್ ದುಗ್ಗಪ್ಪನವರು ಓದಿದ್ದಾರೆ. ಅದು ನನ್ನ ಹತ್ತಿರವೂ ಇದೆ. ಇದರಲ್ಲಿ ಏನು ಹೇಳುತ್ತಾರೆ ಎಂದರೆ :

> " The Committee are glad that the Government have taken note of these lapses and have gone into the matter and ordered recovery of extra payments from the contractor ".

ಎಂದು ಹೇಳಿದ್ದಾರೆ. 1961ನೇ ಇಸವಿಯಲ್ಲಿ ಈ ತುಂಗಭದ್ರಾ ಬ್ರಿಡ್ಜನ್ನು ಎಲ್ಲೆಲ್ಲಿ ಎಂಟ್ರಸ್ಟ್ ಮಾಡಿದ್ದೇವೆಂದರೆ, ಧಾರವಾಡ ಜಿಲ್ಲೆಯಲ್ಲಿ ಈ ಕೆಲಸವನ್ನು ಎಂಟ್ರಸ್ಟ್ ಮಾಡಿದ್ದೇವೆ. ಆಮೇಲೆ ಹರಳಳ್ಳಿ ಹತ್ತಿರ ಒಂದು ಸೇತುವೆ ಕೆಲಸವನ್ನು 1961ನೇ ಇಸವಿಯಲ್ಲಿ ಟೆಂಡರ್ ಅಂಗೀಕಾರ ಮಾಡಿ ಅದನ್ನು ಕರ್ನಾಟಕ ಟ್ರೇಡರ್ಸ್‌ಗೆ ಕೊಟ್ಟಿದ್ದೇವೆ.

ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಮಂತ್ರಿಗಳು ಹೇಳಿದ್ದು ಸರಿ. ನಾನು ಹೇಳಿದ್ದು ತಪ್ಪು ಎಂದು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್. ಶಿವಪ್ಪ.—ನಾನು ಹೇಳಿದ್ದು ತುಂಗಭದ್ರಾ ಬ್ರಿಡ್ಜಿನ ಕೆಲಸವನ್ನು ಹರಿಹರದ ಹತ್ತಿರ ಕರ್ನಾಟಕ ಟ್ರೇಡರ್ಸ್‌ಗೆ ಕೊಟ್ಟಿದ್ದೀರೆಂದು. ಇದನ್ನು ಪಬ್ಲಿಕ್ ಅಕೌಂಟ್ಸ್ ವರದಿಯಲ್ಲಿ ರೆಫರ್ ಮಾಡಿದೆ. ಇನ್ನೊಂದು ಪಾಲಿಟೆಕ್ನಿಕ್ ಬಿಲ್ಡಿಂಗ್ ಕಂಟ್ರಾಕ್ಟ್ ಕೊಟ್ಟಿರುವ ವಿಷಯ ಈ ಎರಡಕ್ಕೂ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕಾಗಿ ಮಾನ್ಯ ಸಿದ್ಧವೀರಪ್ಪನವರು ಹೇಳಿದ್ದನ್ನು ನಾನು ನೋಟು ಮಾಡಿಕೊಂಡಿದ್ದೇನೆ. ಅದರಲ್ಲಿ ಕೆಲವು ವಿಷಯಗಳಿಗೆ ಉತ್ತರವನ್ನು ಹೇಳಿದ್ದೇನೆ. ಶ್ರೀಮಾನ್ ದುಗ್ಗಪ್ಪನವರು ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆಯೋ ಅದಕ್ಕೆ ನಾನು ಆಮೇಲೆ ಉತ್ತರವನ್ನು ಹೇಳುತ್ತೇನೆ. ಈಗ ಶ್ರೀಮಾನ್ ಶಿವಪ್ಪನವರು ಹೇಳಿದಂತಹ ವಿಚಾರಗಳನ್ನು ತೆಗೆದುಕೊಂಡರೆ 1965ನೇ ಇಸವಿಯಲ್ಲಿ ತುಂಗಭಧ್ರಾ ಬ್ರಿಡ್ಜಿನ ಒಂದು ಕೆಲಸವನ್ನು ಕರ್ನಾಟಕ ಟ್ರೇಡರ್ಸ್‌ಗೆ ಕೊಟ್ಟಿದ್ದೇವೆ. 1961ನೇ ಇಸವಿಯಲ್ಲಿ ಹರಿಹರದ ಹತ್ತಿರ ಅವರಿಗೆ ಆ ಕೆಲಸವನ್ನು ಕೊಟ್ಟಿಲ್ಲ. ಹರಳಳ್ಳಿ ಸೇತುವೆಯ ವಿಷಯವನ್ನು ನಾನು ಹೇಳಿದ್ದೇನೆ. ಈ ಸೇತುವೆಯ ವಿಷಯದಲ್ಲಿ ನಾವು ಆಕ್ಷನ್ ತೆಗೆದುಕೊಂಡಿದ್ದೇವೆ. ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಯಾರಿಗೇ ಆಗಲೀ ಫೇವರ್ ಮಾಡಿದ್ದೇವೆಂದು ತಿಳಿಯಬಾರದು. ತುಂಗಭದ್ರಾ ಪ್ರಾಜೆಕ್ಟ್ ಹರಿಹರದಲ್ಲಿ ಚೆನ್ನಾಗಿ ನಡೆಯುತ್ತಿದೆ. ಕ್ರ್ಯಾಕ್ ಬಿಟ್ಟಿದೆಯೆಂದು ಕೆಲವು ಸದಸ್ಯರುಗಳು

(ಶ್ರೀ ವೀರೇಂದ್ರ ಪಾಟೀಲ್)

ಹೇಳಿದರು, ಅದು ಸರಿಯಲ್ಲ. ಯಾವ ರೀತಿಯ ತೊಂದರೆಯೂ ಇಲ್ಲದೆ ಪ್ರಾಜೆಕ್ಟ್ ಕೆಲಸ ಚೆನ್ನಾಗಿ ನಡೆಯುತ್ತಿದೆ. ಇನ್ನು ಕೆಲವು ದಿವಸಗಳಲ್ಲಿ ಪ್ರಾಜೆಕ್ಟ್ ಕೆಲಸ ಮುಗಿಯುವ ಪರಿಸ್ಥಿತಿಯಲ್ಲಿದೆ. ಯಾವ ರೀತಿಯಿಂದಲೂ ನಾವು ನಮ್ಮ ಸ್ಪೆಸಿಫಿಕೇಷನ್‌ಗೆ ವಿರುದ್ಧವಾಗಿ ನಡೆಯುತ್ತಿಲ್ಲ.

ಇನ್ನು ಇಂಡಿಯಾ ಹೋಟೆಲ್ ಬಗ್ಗೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹೇಳಿದ್ದಾರೆ. ಆ ಬಗ್ಗೆ ವಿಶೇಷವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಈ ಹೋಟೆಲ್ ಕಟ್ಟಿಸುತ್ತಿರುವವರು ಟೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅವರು. ಪಬ್ಲಿಕ್ ಸೆಕ್ಟಾರ್‌ನಲ್ಲಿ ಕಟ್ಟಿಸುತ್ತಿದ್ದಾರೆ. ಇಡೀ ಇಂಡಿಯಾ ದೇಶದಲ್ಲಿ ಮೊದಲಿಗೆ ಬೆಂಗಳೂರಿನಲ್ಲಿ ಕಟ್ಟಿಸುತ್ತಿದ್ದಾರೆ. ಈ ಹೋಟೆಲನ್ನು ಇಡೀ ಇಂಡಿಯಾಕ್ಕೆ ಮಾದರಿಯಾಗಿರುವಂತೆ ಕಟ್ಟಿಸಬೇಕೆಂದು ಮೊದಲಿನ ಅಂದಾಜು ವೆಚ್ಚದಂತೆ 50 ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆಯೆಂದು ಟೂರಿಸ್ಟ್ ಕಾರ್ಪೊರೇಷನ್ ಅವರು ತಿಳಿಸಿದ್ದಾರೆ. ಅದರಂತೆ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಇದನ್ನು ಕಟ್ಟುತ್ತಿರುವ ಕಂಟ್ರಾಕ್ಟರ್ ನಮಗೆ ಸಂಬಂಧಿಯಲ್ಲ. ಕೆಲವು ಸದಸ್ಯರುಗಳು ತಮಗೆ ಬೇಕಾದವರಿಗೆ ಈ ಕೆಲಸವನ್ನು ಕೊಟ್ಟಿದ್ದಾರೆಂದು ಹೇಳಿದರು, ನನಗೆ ತಿಳಿದಮಟ್ಟಿಗೆ ಈ ಹೋಟೆಲ್‌ನ ಕಂಟ್ರಾಕ್ಟನ್ನು ವಹಿಸಿಕೊಡುವುದರಲ್ಲಿ ಯಾವ ತರಹದ ಹಸ್ತಕ್ಷೇಪವೂ ನಡೆದಿಲ್ಲ. ಕೇಂದ್ರಸರ್ಕಾರದ ಟೂರಿಸ್ಟ್ ಕಾರ್ಪೊರೇಷನ್ ಅವರು ಒಂದು ಹೈ ಪವರ್ ಕಮಿಟಿಯನ್ನು ಮಾಡಿಕೊಂಡಿದ್ದಾರೆ. ಆ ಕಮಿಟಿಯವರು ಒಬ್ಬರು ಎಕ್ಸಿಕ್ಯೂಟಿವ್ ಇಂಜನಿಯರ್ ಮತ್ತು ಒಂದು ಡಿವಿಜನ್ ಬೇಕೆಂದು ಕೇಳಿದ್ದರು, ಅದರಂತೆ ಕೊಟ್ಟಿದ್ದೇವೆ. ಈ ಹೋಟೆಲ್ ಬಗ್ಗೆ ಟೆಂಡರ್ ಕರೆಯುವ ಅಧಿಕಾರ ಆ ಕಮಿಟಿಗೆ ಸಂಬಂಧಪಟ್ಟಿದ್ದು. ಸರ್ಕಾರಕ್ಕೆ ಯಾವ ರೀತಿಯೂ ಸಂಬಂಧವಿಲ್ಲ.

ಶ್ರೀ ಎಸ್. ಶಿವಪ್ಪ.—ಮಲ್ಟಿಸ್ಟೋರಿಡ್ ಬಿಲ್ಡಿಂಗ್ ಕಟ್ಟಿದ ಕಂಟ್ರಾಕ್ಟರ್ ತಾನೆ ಈ ಹೋಟೆಲ್ ಕಂಟ್ರಾಕ್ಟನ್ನು ತೆಗೆದುಕೊಂಡಿರುವುದು ?

ಶ್ರೀ ವೀರೇಂದ್ರ ಪಾಟೀಲ್.—ಹೌದು, ಮಲ್ಟಿಸ್ಟೋರಿಡ್ ಬಿಲ್ಡಿಂಗ್ ಕಟ್ಟಿದ ಕಂಟ್ರಾಕ್ಟರ್ ಅವರಿಗೇ ಈ ಕೆಲಸವನ್ನು ವಹಿಸಿಕೊಡಲಾಗಿದೆ. ಟೆಂಡರ್ ಕರೆದಾಗ ಇವರು ಲೋಯೆಸ್ಟ್ ರೇಟನ್ನು ಕೊಟ್ಟಿದ್ದರಿಂದ ಈ ಕೆಲಸವನ್ನು ಸಹ ಅವರಿಗೇ ಕೊಡಲಾಗಿದೆ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ಕೃಷ್ಣಾ ಮತ್ತು ಗೋಧಾವರಿ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನೆನ್ನೆದಿವಸ ನಾನು ಎಲ್ಲ ವಿರೋಧಪಕ್ಷದ ನಾಯಕರೊಡನೆ ಚರ್ಚೆ ಮಾಡಿದ್ದೇನೆ. ಇದು ಒಂದು ಪಕ್ಷಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಈಗಾಗಲೆ ಎರಡು ಸಾರಿ ವಿರೋಧಪಕ್ಷದ ನಾಯಕರನ್ನು ಕರೆಸಿಕೊಂಡು ಮುಚ್ಚುಮರೆಯಿಲ್ಲದೆ ಎಲ್ಲಾ ವಿಚಾರಗಳನ್ನು ತಿಳಿಸಿದ್ದೇನೆ. ವಿರೋಧಪಕ್ಷದ ಎಲ್ಲಾ ನಾಯಕರ ವಿಶ್ವಾಸವನ್ನು ತೆಗೆದುಕೊಂಡು ಈಗ ಏನು ನಡೆಯುತ್ತಿದೆ, ನಮ್ಮ ಸಮಸ್ಯೆಗಳೇನಿವೆ ಎಂಬುದನ್ನು ಸಂಪೂರ್ಣವಾಗಿ ತಿಳಿಸಿದ್ದೇನೆ. ಅವರು ಸಹ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಮೇರೆಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಅಲ್ಲದೆ ಈ ಬಗ್ಗೆ ಲಾ ಸೆಕ್ರೆಟರಿಯವರೊಡನೆ ಮತ್ತು ಅಡ್ವೊಕೇಟ್ ಜನರಲ್ ಅವರೊಡನೆ ಚರ್ಚೆ ಮಾಡಿದ್ದೇವೆ. ಸರಿಯಾದ ಸಲಹೆಗಳನ್ನು ಜಾಗ್ರತೆ ಕೊಡಬೇಕೆಂದು ಅವರಿಗೆ ತಿಳಿಸಿದ್ದೇವೆ. ಅವರ ಒಂದು ಮಾರ್ಗದರ್ಶನದಂತೆ ಮುಂದೆ ಹೋಗಬೇಕೆಂದು ತೀರ್ಮಾನ ಮಾಡಿದ್ದೇವೆ.

ಇನ್ನು ಕಬಿನಿ ಪ್ರಾಜೆಕ್ಟ್ ಕೆಲಸ ನಿಧಾನವಾಗಿ ನಡೆಯುತ್ತಿದೆಯೆಂದು ಕೆಲವು ಸದಸ್ಯರುಗಳು ಹೇಳಿದರು. ಈ ಪ್ರಾಜೆಕ್ಟ್ ಕೆಲಸ ವೇಗದಿಂದ ನಡೆಯುತ್ತಿದೆಯೆಂದು ನಾನೂಸಹ ಹೇಳುವುದಿಲ್ಲ. ಇದುವರೆಗೆ ಈ ಪ್ರಾಜೆಕ್ಟ್ ಬಗ್ಗೆ 2 ಕೋಟಿ 85 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಪ್ರಾಜೆಕ್ಟ್ ಕೆಲಸವನ್ನು ಆದಷ್ಟು ತೀವ್ರವಾಗಿ ಮುಗಿಸಬೇಕೆಂದು ಪ್ರತ್ಯೇಕ ಕಾರ್ಯಕ್ರಮವನ್ನು ತೆಗೆದುಕೊಂಡು, ಇದಕ್ಕಾಗಿಯೇ ಒಬ್ಬ ಸೂಪರಿಂಟೆಂಡಿಗ್ ಇಂಜಿನಿಯರ್ ಅವರನ್ನು ನೇಮಕ ಮಾಡಿದ್ದೇವೆ. ಅಲ್ಲದೆ ಒಂದು ಸರ್ಕಲನ್ನು ಸಹ ಮಾಡಿದ್ದೇವೆ.

ಇನ್ನು ಹೇಮಾವತಿ ಪ್ರಾಜೆಕ್ಟ್ ಕೆಲಸವಾಗಿಲ್ಲವೆಂದು ಕೆಲವು ಸದಸ್ಯರುಗಳು ಹೇಳಿದರು. ಇದುವರೆಗೆ ಎಸ್ಟಿಮೇಟ್ ತಯಾರಾಗಿರಲಿಲ್ಲ. ಈಗ ಎಸ್ಟಿಮೇಟ್ ತಯಾರಾಗಿದೆ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ಗೆ ಕಳಿಸಿದ್ದೇವೆ. 1967—68ರೊಳಗೆ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂವಿದ್ದೇವೆ. ಇನ್ನು ದೊಡ್ಡ ದೊಡ್ಡ ಪ್ರಾಜೆಕ್ಟ್ ಕೆಲಸಗಳೇನಿವೆ, ಆ ಕೆಲಸಗಳನ್ನು ಮಾಡಿ ಮುಗಿಸುತ್ತಿದ್ದೇವೆ. ನನ್ನ ಖಾತೆ ಬಗ್ಗೆ ಎಲ್ಲಾ ವಿವರಣೆಗಳನ್ನು ಕೊಟ್ಟಿದ್ದೇನೆ.

ಶ್ರೀ ಬಿ. ರಾಚಯ್ಯ (ಕಂದಾಯ ಮತ್ತು ಅರಣ್ಯ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಈ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯಾದಂಥ ಕಾಲದಲ್ಲಿ ಕೆಲವು ಮಾನ್ಯ ಸದಸ್ಯರುಗಳು ಭೂಕಂದಾಯವನ್ನು ತೆಗೆದುಹಾಕುತ್ತೇವೆಂದು ಸರ್ಕಾರದವರು ಭರವಸೆ ಕೊಟ್ಟಿದ್ದರು, ಅದರಂತೆ ನಡೆದುಕೊಂಡಿಲ್ಲವಾದ್ದರಿಂದ ರಾಜೀನಾಮೆ ಕೊಡಬೇಕೆಂದು ವಿರೋಧಪಕ್ಷದ ನಾಯಕರಾದಿಯಾಗಿ ಎಲ್ಲರೂ ತಿಳಿಸಿದ್ದಾರೆಂದು ಈ ರಿಪೋರ್ಟನ್ನು ಓದಿ ತಿಳಿದುಕೊಂಡಿದ್ದೇನೆ. ಚರ್ಚೆ ನಡೆಯುತ್ತಿದ್ದಾಗ ನಾನು ಇಲ್ಲಿರುವುದಕ್ಕೆ ಸಾಧ್ಯವಾಗಲಿಲ್ಲ ಏಕೆಂದರೆ ಮೇಲೆ ಮನೆಯಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳು ಚರ್ಚೆಯಾಗುತ್ತಿದ್ದರಿಂದ ನಾನು ಅಲ್ಲಿರಬೇಕಾಯಿತು. ಈಗಿರತಕ್ಕಂಥ ಭೂಕಂದಾಯ ಪದ್ಧತಿಯನ್ನು ತಪ್ಪಿಸಬೇಕೆಂದು ಸರ್ಕಾರದವರು ನಿರ್ಧಾರ ಮಾಡಿದ್ದಾರೆಂದು ನಾನು ಹೇಳಿದ್ದೇನೆಯೇ ವಿನಾ ಸಂಪೂರ್ಣವಾಗಿ ಭೂಕಂದಾಯವನ್ನು ರದ್ದು ಮಾಡುತ್ತೇವೆಂದು ಹೇಳಿರಲ್ಲಿಲ್ಲ. "The Government have decided to abolish land revenue in its present form. It involves certain other difficulties." ಎಂಬುದಾಗಿ ಸರ್ಕಾರದವರು ಹೇಳಿದ್ದಾರೆ. ಇದರ ಅರ್ಥ, ಈಗಿರತಕ್ಕಂಥ ಭೂಕಂದಾಯ ಪದ್ಧತಿಯನ್ನು ರದ್ದು ಪಡಿಸುವುದಾದರೆ, ನೇರವಾಗಿ ಕಂದಾಯ ತೆಗೆದುಕೊಳ್ಳುವುದನ್ನು ಬಿಟ್ಟುಬಿಟ್ಟರೆ, ಬೇರೆ ರೂಪದಲ್ಲಿ ಅದಕ್ಕೆ ಆಗತಕ್ಕಂಥ ನಷ್ಟವನ್ನು ಕೂಡಿಸಿಕೊಳ್ಳುವುದು ಸರ್ಕಾರದ ಯೋಜನೆಯಲ್ಲಿದೆಯೆಂದು. ಭೂಕಂದಾಯದಲ್ಲಿ ನೂರಕ್ಕೆ 70ರಷ್ಟು ತಾಲ್ಲೂಕ್ ಬೋರ್ಡ್‌ಗಳಿಗೆ ಕೊಡುತ್ತಿದ್ದೇವೆ. ಈ ವಿಷಯ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಈಗಾಗಲೆ ಪ್ಲಾನ್‌ನಲ್ಲಿ ಭೂಕಂದಾಯದಿಂದ ಬರುವ ಆದಾಯವನ್ನು ತೋರಿಸಿಕೊಂಡಿರುವುದರಿಂದ, ಕೂಡಲೇ ವಜಾ ಮಾಡುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಭೂಕಂದಾಯವನ್ನು ರದ್ದು ಮಾಡುವ ವಿಚಾರದಲ್ಲಿ ಸರ್ಕಾರಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಈ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿ ವರದಿ ಮಾಡಲು ಸರ್ಕಾರದವರು ಒಂದು ಉಪಸಮಿತಿಯನ್ನು ನೇಮಕ ಮಾಡಿದರು. ಆ ಉಪಸಮಿತಿಯವರು ಸಹ ತಮ್ಮ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅನುದಾನವಾಗಿ ನಡೆದುಕೊಂಡು ಬಂದಿರುವ ಪದ್ಧತಿಯನ್ನು ಇಷ್ಟೊಂದು ಬೇಗ ತೆಗೆಯಬೇಕಾದರೆ, ಆ ಜಾಗದಲ್ಲಿ ಇನ್ನೊಂದು ಹೊಸ ಪದ್ಧತಿಯನ್ನು ಜಾರಿಗೆ ತರಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಮದ್ರಾಸ್, ಆಂಧ್ರ ಮತ್ತು ಕೇರಳಾ ರಾಜ್ಯಗಳಲ್ಲಿ ಯಾವ ರೀತಿ ಈ ಕಾನೂನನ್ನು ಸಡಿಲಗೊಳಿಸಿದ್ದಾರೆ, ಹೇಗೆ ಮಾಡಿದ್ದಾರೆಂಬ ಬಗ್ಗೆ ಅಲ್ಲಿಯ ಕಾನೂನುಗಳನ್ನು ತರಿಸಿಕೊಂಡು ಓದುತ್ತಿದ್ದೇನೆ. ಈ ಕಾನೂನುಗಳನ್ನು ಓದಲು ನನಗೆ ಸ್ವಲ್ಪ ಕಾಲಾವಕಾಶ ಕೊಡಿ, ನಂತರ ಎಲ್ಲಾ ವಿವರಗಳನ್ನು ಮಂತ್ರಿಮಂಡಲದ ಮುಂದೆ ಇಡುತ್ತೇವೆಂದು ನಾನೇ ಸ್ವಲ್ಪ ಕಾಲಾವಕಾಶ ತೆಗೆದುಕೊಂಡಿದ್ದೇನೆ. ಭೂಕಂದಾಯವನ್ನು ರದ್ದು ಮಾಡುವ ಬಗ್ಗೆ ಸರ್ಕಾರಕ್ಕೆ ಮನಸ್ಸಿಲ್ಲ ಎಂದು ಮಾನ್ಯ ಸದಸ್ಯರುಗಳು ಹೇಳುವುದು ಸರಿಯಲ್ಲ. ಮುಂದಿನ ಬಡ್ಜೆಟ್ ಅಧಿವೇಶನ ಬರುವುದರೊಳಗೆ ಒಂದು ತೀರ್ಮಾನ ಕೈಕೊಳ್ಳುತ್ತೇವೆ, ಅಲ್ಲಿಯವರೆಗೆ ಕಾಲಾವಕಾಶ ಕೊಡಿ ಎಂಬುದಾಗಿ ಮೇಲ್ಮನೆಯಲ್ಲಿ ಕೇಳಿಕೊಂಡಿದ್ದೇನೆ, ಇಲ್ಲಿಯೂ ಸಹ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಹಿಂದಿನ ಬಾಕಿಯನ್ನು ಕೊಡಬೇಕಾಗಿಲ್ಲ ಅಲ್ಲವೆ ?

ಶ್ರೀ ಬಿ. ರಾಚಯ್ಯ.—ಹಿಂದಿನ ಬಾಕಿಯನ್ನು ಕೊಡಲೇಬೇಕು. ಇಲ್ಲದಿದ್ದರೆ ತಾಲ್ಲೂಕ್ ಬೋರ್ಡಿನ ಕೆಲಸವಾಗುವುದಿಲ್ಲ, ಪಂಚಾಯಿತಿಗಳ ಕೆಲಸವಾಗುವುದಿಲ್ಲ; ಮತ್ತು ಕ್ಷಾಮ ಪರಿಹಾರ ಕಾಮಗಾರಿಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ರೀತಿಯಲ್ಲಿ ಸಕಾಲದಲ್ಲಿ ಮಳೆ ಬಾರದೆ, ಸರಿಯಾಗಿ ಬೆಳೆಯಾಗದೆ ಜನರು ಪರಿತಪಿಸುತ್ತಿದ್ದಾರೆ. ಅಂತಹ ಕಡೆಗಳಲ್ಲಿ ಪರಿಹಾರ ಕಾಮಗಾರಿಗಳನ್ನು ನಡೆಸಬೇಕಾಗುತ್ತದೆ, ಈ ಮಂತ್ರಿ ಮಂಡಲದವರು ಕಣ್ಣಿದ್ದರೂ ಕುರುಡರಾಗಿದ್ದಾರೆ, ಕಿವಿಯಿದ್ದರೂ ಕಿವುಡರಾಗಿದ್ದಾರೆಂದು ಕೆಲವು ಸದಸ್ಯರುಗಳು ಹೇಳುತ್ತಿದ್ದರು; ನಾನು ಮಾನ್ಯ ಶಿವಪ್ಪನವರಿಗೆ ವಿನಂತಿ ಮಾಡಿಕೊಳ್ಳುವುದು ಇಷ್ಟೆ: ಯಾರಿಗೆ ಕಂದಾಯ ಕೊಡತಕ್ಕಂಥ ಚೈತನ್ಯವಿದೆಯೋ ಅವರು ಕಂದಾಯ ಕೊಡಲಿ. ಅದರಿಂದ ನಮಗೆ ಎಷ್ಟೋ ಸಹಾಯವಾಗುತ್ತದೆ. ಈ ಬಾಬಿನಿಂದ ಬರತಕ್ಕಂಥ ದುಡ್ಡಿನಿಂದ ಪಂಚಾಯತಿಗಳಿಗೆ ದುಡ್ಡು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಕಂದಾಯ ವಸೂಲ್ಮಾಡುವುದು ಬೇಡ ಎಂದು ವಿರೋಧ ಪಕ್ಷದವರು ಹೇಳುತ್ತಾರೆ. ಆದರೆ ಯಾರಿಗೆ ಕಂದಾಯದ ಹೊರೆ ಹೊರಲು ಸಾಧ್ಯವಿಲ್ಲವೋ ಅಂಥವರಿಗೆ ರಿಯಾಯತಿ ಕೊಡಿ ಎಂದು ಹೇಳಿದರೆ ಒಳ್ಳೆಯದು. ಆದರೆ ಕಂದಾಯ ಕೊಡಬೇಡಿ ಎಂದು ಪ್ರಚಾರ ಮಾಡುವುದು ಸರಿಯಲ್ಲ.

ಶ್ರೀ ಮಹದೇವಪ್ಪ ಜಿ. ಬಣಕಾರ.—ನೀವು ಹೇಳುವುದು ನಿಜವಲ್ಲ.

ಶ್ರೀ ಬಿ ರಾಚಯ್ಯ.—ಜನ ಎಲ್ಲರೂ ಹೇಳಿದ್ದನ್ನು ತೂಕ ಮಾಡಿ ನೋಡಿ ನಮಗೆ ವೋಟು ಕೊಟ್ಟು ಇಲ್ಲಿಗೆ ಕಳಿಸಿರುತ್ತಾರೆ. ನಾವು ಕಂದಾಯ ನಿಲ್ಲಿಸುತ್ತೇವೆ ಎಂದು ಹೇಳಿ ಚುನಾವಣೆಯಲ್ಲಿ ಗೆದ್ದು ಬಂದಿಲ್ಲ. ಅವರವರ ಪಕ್ಷದ ಪ್ರಣಾಲಿಕೆಗೆ ಅನುಸಾರವಾಗಿ ಹೇಳತಕ್ಕಂಥಾದ್ದನ್ನು ಹೇಳಿ ಚುನಾವಣೆಯಲ್ಲಿ ನಮ್ಮ ನಮ್ಮ ಕ್ಷೇತ್ರದಿಂದ ನಾವು ಗೆದ್ದು ಬಂದಿದ್ದೇವೆ ಎಂದು ಇಷ್ಟೊಂದು ಹೇಳಿದರೆ ಸಾಕು.

ಶ್ರೀ ಎಸ್. ಶಿವಪ್ಪ.—ಮಾರ್ಚಿ 31ನೇ ತಾರೀಖಿನವರೆಗೆ ಕೊಡುವುದು ಬೇಡ ಎಂದು ಏತಕ್ಕೆ ಹೇಳಿದಿರಿ ?

ಶ್ರೀ ಬಿ. ರಾಚಯ್ಯ.—ದೇಶದಲ್ಲಿ ಮಳೆ ಇಲ್ಲ ಬೆಳೆ ಇಲ್ಲ ಎಂದು ತಮ್ಮ ಭಾಷಣದಲ್ಲಿ ಏತಕ್ಕೆ ಹೇಳಿದ್ದೀರಿ ? ಆಗಿನ ಕಂದಾಯ ಮಂತ್ರಿಗಳಿಗೆ ಕಂದಾಯ ಮುಂದೂಡಿರಿ ಎಂದು ನೀವು ಹೇಳಿದಿರಿ. ಆಗ್ಗೆ ಕಂದಾಯ ಕೊಡತಕ್ಕಂಥವರಿಗೆ ಅವಕಾಶವಿದ್ದರೂ ಕೂಡ ಕಂದಾಯ ಕೊಡುವುದನ್ನು ಮುಂದೂಡಿಸಲಾಯಿತು. ಎರಡು ವರ್ಷದ ಕಂದಾಯ ವಸೂಲು ಮಾಡತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಇಂದು ಬಿದ್ದಿದೆ. 14 ಕೋಟಿ ರೂಪಾಯಿ ಬಾಕಿ ರೈತರಮೇಲೆ ಬಿದ್ದಿದೆ. ಬುಲ್ ಡೋಜರ್ಸ್, ಟ್ರ್ಯಾಕ್ಟರ್ಸ್, ಪಾವರ್ ಟಿಲರ್ಸ್ ತೆಗೆದು ಕೊಳ್ಳುವುದಕ್ಕೆ ಸರಕಾರದಿಂದ ಸಾಲ ಪಡೆದಿದ್ದಾರೆ, ಭೂಸುಧಾರಣೆಗಾಗಿ ನಾನಾ ರೀತಿ ಸಾಲ ತೆಗೆದುಕೊಂಡಿದ್ದಾರೆ. ಭೂಮಿಯನ್ನು ಇಟ್ಟುಕೊಂಡು ನಾನಾ ರೀತಿಯ ಸೌಲಭ್ಯ ಪಡೆದಿರತಕ್ಕಂಥವರು ಎಷ್ಟೋ ಜನ ಇದ್ದಾರೆ ಎನ್ನತಕ್ಕಂಥಾದ್ದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅಂಥವರಿಂದ ಹಣ ವಸೂಲ್ಮಾಡದೇ ಇದ್ದರೆ ಪರಿಹಾರ ಕೊಡುವುದಕ್ಕೆ ಹಣ ಸಿಕ್ಕುತ್ತಿಲ್ಲ ಒಂದು ಕಂತು ಇದ್ದುದನ್ನು ನಾಲ್ಕು ಕಂತುಗಳಲ್ಲಿ ಕೊಡಬಹುದು ಎಂದು ಮಾಡಿದ ಮೇಲೆ ಕಂದಾಯ ವಸೂಲಾದುದು ಎರಡು ಕೋಟಿ ರೂಪಾಯಿ. ಈ ಕಂದಾಯ ವಸೂಲ್ಮಾಡುವುದಕ್ಕೆ ಅಧಿಕಾರಿಗಳು ಕೂಡ ಹೆದರಿಕೊಂಡಿದ್ದಾರೆ. ಆಡಳಿತ ನಡೆಸುವುದಕ್ಕೆ ತೆರಿಗೆ ವಸೂಲ್ಮಾಡಬೇಕಾಗುತ್ತದೆ. ಹೊಸ ತೆರಿಗೆ ಹಾಕುವುದಿಲ್ಲ. ಹಣವಿಲ್ಲದೆ ಎಲ್ಲ ಕಾರ್ಯ ನಿಲ್ಲಿಸಬೇಕಾದ ಕಷ್ಟ ಪರಿಸ್ಥಿತಿ ಇದೆ. ಜನತೆಗೆ ಒಳ್ಳೆಯದಾಗಬೇಕು ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಈ ಕಡೆ ಹೇಮಾವತಿ ಯೋಜನೆ ಇದೆ, ಭದ್ರಾ ಚಾನೆಲ್ ಕೆಲಸ ಮಾಡಬೇಕಾಗಿದೆ. ಐದಾರು ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ತುಂಗಾಭದ್ರಾ ಯೋಜನೆಗೋಸ್ಕರ ಹಣ ಖರ್ಚು ಮಾಡಿದ್ದೇವೆ. ಇದನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಸರಕಾರ ಈ ಕೆಲಸಗಳಿಗೆ ಎಲ್ಲಿಂದ ದುಡ್ಡು ಕೊಡಬೇಕು ? ಸರಕಾರಕ್ಕೆ ಹಣ ಬರುವುದು ತೆರಿಗೆಯಿಂದ, ಕೇಂದ್ರ ಸರಕಾರದಿಂದ, ಸಾರ್ವಜನಿಕರ ಸಾಲದಿಂದ ಹಣ ಬರಬೇಕು. ಏಳೆಂಟು ಕೋಟಿ ಅನಾಯಾಸವಾಗಿ ಬರುತ್ತಿತ್ತು. ಮಳೆ ಇಲ್ಲ ಬೆಳೆ ಇಲ್ಲ ಎಂಬ ಕಾರಣಕ್ಕಾಗಿ ರೆಮಿಷನ್ ಕೊಡುತ್ತಾ ಇದ್ದೇವೆ. ಕಂದಾಯ ವಸೂಲಿ ಮುಂದೆ ಹೋಗುತ್ತದೆ. ರೆವೆನ್ಯೂ ಸೆಟಲ್‌ಮೆಂಟ್‌ನಲ್ಲಿ ಕಡಿಮೆ ಕಂದಾಯವಾಗಿದೆ, ಬೆಳಗಾಂವ ಜಿಲ್ಲೆಯ ಒಂದೆರಡು ಹಳ್ಳಿಗಳಲ್ಲಿ ಮೈಸೂರಿನ ಕೆಲವು ಭಾಗದಲ್ಲಿ ಮಾತ್ರ ಹೆಚ್ಚಾಗಿದೆ. 133 ಪರ್ಸೆಂಟ್ ಹೆಚ್ಚಾಗಿದ್ದುದು ಹೈಯೆಸ್ಟ್ ಆಗಿದೆ.

ಶ್ರೀ ಎಸ್. ಶಿವಪ್ಪ.—ಇದನ್ನು ಲೆಕ್ಕ ಮಾಡಿ ಹೇಳುತ್ತೀರಾ ? ಹಾಸನ ಜಿಲ್ಲೆಯಲ್ಲಿ ಎಷ್ಟು ಕಡೆ ಹೆಚ್ಚಾಗಿದೆ ಗೊತ್ತಿದೆಯೇನು ?

ಶ್ರೀ ಬಿ. ರಾಚಯ್ಯ.—ನಮ್ಮ ಸಂಸ್ಥಾನದಲ್ಲಿ 42 ಪರ್ಸೆಂಟ್, 133 ಪರ್ಸೆಂಟ್, ಹೆಚ್ಚಾಗಿದೆ. ಹೆಚ್ಚಾಗಿರುವ ಕಡೆ ಸ್ವಲ್ಪಮಟ್ಟಿಗೆ ರಿಯಾಯತಿ ಕೊಡುವುದು ಅನಿವಾರ್ಯವಾಗಿ ರೀಸೆಟ್ಲ್‌ಮೆಂಟ್ ಆಫೀಸರರಿಗೆ ಕಳಿಸಿ ರಿವೈಜ್ ಮಾಡುವುದು ಸಾಧ್ಯವೇ ಎನ್ನುವುದಕ್ಕೆ ವರದಿ ತರಿಸಿದ್ದೇವೆ. ಜನರ ಮೇಲೆ ಹೆಚ್ಚು ಭಾರ ವಹಿಸುವುದಕ್ಕೆ ನಮಗೆ ಇಚ್ಛೆ ಇಲ್ಲ. ಆದುದರಿಂದ ಕಡಿಮೆ ಮಾಡುವುದಕ್ಕೆ ಸಾಧ್ಯವಿದ್ದರೆ ಪ್ರಯತ್ನ ಮಾಡುತ್ತೇವೆ.

ಸ್ವಾಮಿ, ದರಖಾಸ್ತು ರದ್ದು ಮಾಡುವುದಕ್ಕೆ ರೆಮಿಷನ್ ಕೊಡುವುದಕ್ಕೆ ಹಾಗು ಬೆಂಕಿ ಬಿದ್ದು ನಷ್ಟವಾದ ಕಡೆಗೆ ಪರಿಹಾರ ಕೊಡುವ ವಿಷಯ ಇಬ್ಬರು ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ರೂಲ್ಸ್ ಪಬ್ಲಿಷ್ ಮಾಡಿದ್ದೇವೆ. ಪರಿಹಾರ ಕಾರ್ಯ ತೆಗೆದುಕೊಂಡಿರುವ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ. ನಿನ್ನೆಯ ದಿವಸ ಈ ವಿಷಯದ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಅದನ್ನು ಮತ್ತೆ ಈಗ ಹೇಳಿದರೆ ಅದು ಪುನರುಕ್ತಿಯಾಗುತ್ತದೆ ಎಂದು ಅದನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ನಿಮ್ಮ ಬಗ್ಗೆ ವೈಯಕ್ತಿಕವಾಗಿ ಹೇಳಬೇಕಾದರೆ ನಿಮ್ಮ ಅಧಿಕಾರಾವಧಿಯಲ್ಲಿ ಹರಿಜನರ ಹಿಂದುಳಿದವರ ಹಿತ ರಕ್ಷಣೆಯಾಗುತ್ತಾ ಇಲ್ಲ. ಹಿಂದಕ್ಕೆ ನೇಮಕ ಮಾಡಿದ 17 ಜನ ಅಧಿಕಾರಿಗಳನ್ನು ಮನೆಗೆ ಕಳಿಸಿ ಬಹಳ ಅನ್ಯಾಯವಾಗಿದೆ ಅಲ್ಲವೇ ?

ಶ್ರೀ ಬಿ. ರಾಚಯ್ಯ.—ಹಿಂದಿನ ಮಂತ್ರಿಮಂಡಳದ ಕಾಲಾವಧಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ 17 ಜನ ಅಧಿಕಾರಿಗಳನ್ನು ನೇಮಕ ಮಾಡಲಾಗಿತ್ತು. ಅವರನ್ನು ರಿವರ್ಟ್ ಮಾಡಬೇಕಾಯಿತು. ಅವರು ಕೆಲಸ ಕಳಕೊಂಡು ಮನೆಗೆ ಹೋಗಲಿಲ್ಲ. ಯಾವ ಯಾವ ಇಲಾಖೆಯಿಂದ ಅವರು ಬಂದಿದ್ದರೋ ಯಾವ ಇಲಾಖೆಯಲ್ಲಿ ಮೊದಲು ಅವರ ಸ್ಥಾನ ಏನು ಇದ್ದಿತೋ ಅಲ್ಲಿಗೆ ಹೋದರು. ಯಾಕೆಂದರೆ ಫಸ್ಟ್ ಡಿವಿಜನ್ ಕ್ಲಾರ್ಕ್, ಸೆಕೆಂಡ್ ಡಿವಿಜನ್ ಕ್ಲಾರ್ಕ್ ಇದ್ದವರನ್ನು ಇಲಾಖೆಯಿಂದ ತೆಗೆದುಕೊಂಡು ಬಂದು ಆಫೀಸರ್ ಎಂದು ನೇಮಕ ಮಾಡಲಾಗಿತ್ತು. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ನೇಮಕವಾಗಿರಲಿಲ್ಲ. ಸ್ವಾಮಿ, ಕಾನೂನು ಬದ್ಧವಾಗಿ ಸರಕಾರ ನೇಮಕ ಮಾಡಿದ್ದು ತಪ್ಪು ಎಂದು ಹೈಕೋರ್ಟು ತೀರ್ಮಾನ ಮಾಡಿದಮೇಲೆ ಈ ಅಧಿಕಾರಿಗಳನ್ನು ರಿವರ್ಟ್ ಮಾಡಬೇಕಾಯಿತು.

ಕಾನೂನು ಬದ್ಧವಾಗಿ ಕೆಲಸ ಮಾಡಲಿಲ್ಲ, ಸರ್ಕಾರದವರು ಮಾಡಿದ್ದು ತಪ್ಪು ಎಂದು ರಿವರ್ಟ್ ಆದ ಅಧಿಕಾರಿಗಳು ಹೈಕೋರ್ಟ್ ಮುಂದೆ ಹೋಗಿ ಫಿರ್ಯಾದು ಮಾಡಿದರು. ಹೈಕೋರ್ಟಿನವರು ಅವರ ಫಿರ್ಯಾದು ಸರಿಯಾಗಿದ್ದ ಪಕ್ಷದಲ್ಲಿ ಅವರಂತೆ ತೀರ್ಮಾನ ಕೊಡಬಹುದಾಗಿತು. ಆದರೆ ಈ ಅಧಿಕಾರಿಗಳ ನೇಮಕ ಕ್ರಮಬದ್ಧವಾಗಿಲ್ಲ, ಸರ್ಕಾರ ರಿವರ್ಟ್ ಮಾಡಿರುವುದು ಸರಿ, ಬೇರೆಯವರಿಗೆ ಪ್ರಮೋಷನ್ ಕೊಡಬಹುದು ಎಂದು ನಿರ್ದೇಶನ ಬಂತು. ಸರ್ಕಾರದವರು ಆ ನಿರ್ದೇಶನದಂತೆ ಮಾಡಬೇಕಾಗಿ ಬಂತು.

7-00 P.M.

ಮಂತ್ರಿಮಂಡಲದಲ್ಲಿ ಕುಳಿತುಕೊಂಡು ಏನು ಕೆಲಸ ಮಾಡಿದ್ದಾರೆಂದು ಕೇಳಿದರು. ಒಬ್ಬ ಹೈಕೋರ್ಟ್ ಪ್ಲೀಡರ್ ಇರಲಿಲ್ಲ, ಒಬ್ಬ ಡಿಸ್ಟ್ರಿಕ್ಟ್ ಜಡ್ಜ್ ಇರಲಿಲ್ಲ, ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಒಬ್ಬ ಸದಸ್ಯರು ಇರಲಿಲ್ಲ, ಹೀಗೆ ಇಲಾಖೆಗಳ ಹೆಸರುಗಳನ್ನು ಹೇಳುತ್ತ ಹೋದರೆ ಹೆಚ್ಚು ವೇಳೆಯಾಗುತ್ತದೆ. ಹರಿಜನರ ಹಕ್ಕುಬಾಧ್ಯತೆಗಳನ್ನು ಕಾಪಾಡಿದ್ದೇನೆಯೇ ಇಲ್ಲವೇ ಎನ್ನುವುದನ್ನು ತೋರಿಸಲು ಒಂದು ಪಟ್ಟಿಯನ್ನೇ ಬೇಕಾದರೂ ಕೊಡಬಲ್ಲೆ. ಆದರೆ ಸಮಯವಿಲ್ಲ. ಮಂತ್ರಿಮಂಡಲದಲ್ಲಿ ಕಣ್ಣುಮುಚ್ಚಿ ಕುಳಿತಿಲ್ಲ, ಹರಿಜನರ ಹಕ್ಕುಬಾಧ್ಯತೆಗಳನ್ನು ಸಾಧಿಸುವುದಕೆ ಏನು ಮಾಡಬೇಕೋ ಎಲ್ಲವನ್ನೂ ಮಾಡಿದ್ದೇನೆ. ಕರ್ತವ್ಯಲೋಪ ಮಾಡಿಲ್ಲ, ದ್ರೋಹ ಮಾಡಿಲ್ಲ. ಹರಿಜನರಾಗಲೀ, ಗಿರಿಜನರಾಗಲೀ, ಯಾವ ಕಾಯಿದೆ ಕಾನೂನುಗಳನ್ನು ಈ ಶಾಸನ ಸಭೆ ಒಪ್ಪಿಕೊಂಡಿದೆಯೋ ಆ ಪ್ರಕಾರ ನಡೆದಿದ್ದೇನೆಯೇ ವಿನಾ ನಾನು ಹರಿಜನರ ಹಕ್ಕುಬಾಧ್ಯತೆಗಳನ್ನು ಕಾಪಾಡಿಲ್ಲ ಎಂದು ಹೇಳುವುದು ಸಾಧುವಲ್ಲ. ಈ ರೀತಿ ಅಪದ್ಧ ಪ್ರಸ್ತಾಪಗಳನ್ನು ಪದೇ ಪದೇ ಮಾಡುವುದನ್ನು ಬಿಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಂ. ನಾಡಗೌಡ (ಸಹಕಾರ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರದ ಪ್ರತಿನಿಧಿ ಎಂದು ಹೇಳಿ ಮೇಲಿಂದ ಮೇಲೆ ಮಾನ್ಯ ಸಿದ್ಧವೀರಪ್ಪನವರು ದಾವಣಗೆರೆ ಮಾರ್ಕೆಟ್ ಕಮಿಟಿಯನ್ನು ನಾನು ಬಿಜಾಪುರಕ್ಕೆ ಒಯ್ದಿದ್ದೇನೆ ಎಂದು ತಕರಾರು ಮಾಡುತ್ತಿದ್ದಾರೆ. ಈ ವಿಷಯದ ಬಗ್ಗೆ ಮಾನ್ಯ ಸಿದ್ಧವೀರಪ್ಪನವರು ಪಿಟಿಷನ್ ಕಮಿಟಿಗೆ ಹೋದರು. ಆ ವಿಷಯದಲ್ಲಿ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಇದೆ. ಆದ್ದರಿಂದ ಅದನ್ನು ಈಗ ವಿಚಾರ ಮಾಡಲಿಕ್ಕೆ ಬರುವುದಿಲ್ಲ ಎನ್ನುವುದನ್ನು ಅವರೂ ನೋಡಿಕೊಂಡಿದ್ದಾರೆ. ಪಿಟಿಷನ್ ಕಮಿಟಿಯವರೂ ನೋಡಿದ್ದಾರೆ. ಅದಾದಮೇಲೆ ಹೈಕೋರ್ಟಿನಲ್ಲಿ ಒಂದು, ಒಂದೂವರೆ ತಿಂಗಳ ಕಾಲ. ಅದರ ತನಿಖೆಗೆ ತೆಗೆದುಕೊಂಡರು. ಮುಂದೆ ಏನಾಯಿತು ಎಂದರೆ ಬೇರೆ ಬೇರೆ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯೊಳಗೆ ಬೇರೆ ಬೇರೆ ಕಾನ್‌ಸ್ಟಿಟ್ಯುಯನ್ಸಿ ಇತ್ತು. ಒಂದು ಅಗ್ರಿಕಲ್ಚರಲ್ ಕಾನ್‌ಸ್ಟಿಟ್ಯೂಯನ್ಸಿ, ಟ್ರೇಡರ್ಸ್ ಕಾನಸ್ಟಿಟ್ಯೂಯನ್ಸಿ, ಗವರ್ನಮೆಂಟ್ ನಾಮಿನಿ, ರೆಪ್ರೆಸೆಂಟೆಟಿವ್ಸ್ ಆಫ್ ದಿ ಮುನಿಸಿಪಾಲಿಟೀಸ್, ಹೀಗೆ ಬೇರೆ ಕಾನಸ್ಟಿಟ್ಯುಯನ್ಸಿಗಳಿವೆ. ಈ ಕಮಿಟಿಗೆ ಎರಡು ಇಲೆಕ್ಷನ್‌ಗಳಾಗಿವೆ. ಒಂದು ಮುನಿಸಿಪಾಲಿಟಿ ಪ್ರತಿನಿಧಿ ಬರಬೇಕು ಎಂದು ಮಾಡಿದ್ದಾರೆ. ಮುನಿಸಿಪಾಲಿಟಿಯಲ್ಲಿ ಅಡ್ಮಿನಿಸ್ಟ್ರೇಟರ್ ಇದ್ದಾರೆ. ಅಡ್ಮಿನಿಸ್ಟ್ರೇಟರ ಮುನಿಸಿಪಾಲಿಟಿ ಹೌದೋ ಅಲ್ಲವೋ ಎನ್ನುವುದರ ನಿಷ್ಕರ್ಷೆ ಲಾ ಡಿಪಾರ್ಟ್‌ಮೆಂಟಿನಲ್ಲಿ ನಡೆದಿದೆ. ಎರಡು ದಿವಸ ಏನು ಬೊಬ್ಬಾಟ ಮಾಡಿದ್ದಾರೆ, ಅವರು ಈಗ ನಾನು ಹೇಳುವುದನ್ನು ಕೇಳಲಿ. ನಾನು ಹೇಳುವುದನ್ನು ಕೇಳಲು ಒಂದು ನಿಮಿಷ ತಾಳ್ಮೆ ಇರಲಿ. ಅಡ್ಮಿನಿಸ್ಟ್ರೇಟರ ಪ್ರತಿನಿಧಿ ಬರಬೇಕು, ಸರ್ಕಾರದ ನಾಮಿನೇಷನ್ ಆಗಬೇಕು, ಕೆಳಗಿನಿಂದ ಆಫೀಸರ್ಸ್ ಶಿಫಾರಸು ಮಾಡಬೇಕು. ಇವೆಲ್ಲವೂ ಆದಮೇಲೆ ಈಗ ಮಧ್ಯದಲ್ಲಿ ಯಾವ ಮೆಂಬರುಗಳ ಚುನಾವಣೆ ಆಗಿದೆಯೋ ಅವರು ರಾಜಿನಾಮೆ ಕೊಟ್ಟಿದ್ದಾರೆ. ಇದು ಬಹಳ ಕ್ಲಿಷ್ಟ

(ಶ್ರೀ ಪಿ. ಎಂ. ನಾಡಗೌಡ)

ವಾದ ಲೀಗಲ್ ಪ್ರಶ್ನೆ ಇದೆ. ಕಮಿಟಿಯನ್ನು ಪೂರ್ತಿಯಾಗಿ ಕಾನ್‌ಸ್ಟಿಟ್ಯೂಟ್ ಮಾಡಬೇಕಾದರೆ ಎಲ್ಲ ಕಾನ್‌ಸ್ಟಿಟ್ಯುಯನ್ಸಿಗಳ ಪ್ರತಿನಿಧಿಗಳನ್ನೂ ಚುನಾವಣೆ ಮಾಡಿದ ಮೇಲೆ ಸರ್ಕಾರದ ನಾಮಿನಿಯನ್ನು ನೇಮಿಸಬೇಕಾಗುತ್ತದೆ. ಶ್ರೀಮಾನ್ ಸಿದ್ದವೀರಪ್ಪನವರು, ಬಿಜಾಪುರಕ್ಕೆ ದಾವಣಗೆರೆ ಮಾರ್ಕೆಟ್ ಕಮಿಟಿಯನ್ನು ತೆಗೆದುಕೊಂಡು ಹೋದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಇದು ಲೀಗಲ್ ಪ್ರಶ್ನೆ ಇದೆ. ಶೀಘ್ರದಲ್ಲಿಯೇ ಸರ್ಕಾರ ದಾವಣಗೆರೆ ಮಾರ್ಕೆಟ್ ಕಮಿಟಿಯನ್ನು ಮಾಡಲು ಕ್ರಮ ತೆಗೆದುಕೊಳ್ಳುತ್ತದೆ ಎಂದು ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ನಾನು ಮಂತ್ರಿಯಾಗಿರಲು ನಾಲಾಯಕ್ ಎಂದು ಹೇಳಿದರು. ಇದು ಭೂಷಣವಾದ ಮಾತಲ್ಲ ಎಂದು ಹೇಳುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ಮೈಸೂರು ರಾಜ್ಯದೊಳಗೆ ಬಹಳ ದಿವಸ ಲೆಜಿಸ್ಲೇಟರ್ ಆಗಿದ್ದವರು, ಪಾರ್ಲಿಮೆಂಟೇರಿಯನ್ ಇದ್ದರು. ಅವರಿಗೆ ಏನು ಗೌರವವಿತ್ತು ಅದನ್ನು ಕಡಿಮೆ ಮಾಡಿಕೊಳ್ಳಲಿಕ್ಕೆ ಹತ್ತಿದ್ದಾರೆ ಈ ರೀತಿ ಮಾತನಾಡಿ.

ಶ್ರೀ ಎಚ್. ಸಿದ್ದವೀರಪ್ಪ.—ಮೂರು ದಿವಸದ ಕೆಳಗೆ ಮಂತ್ರಿಗಳ ಛೇಂಬರಿನಲ್ಲಿ ಏನು ಹೇಳಿದರು ಎನ್ನುವುದನ್ನು ನ್ಯಾಯವಾಗಿ ತಿಳಿಸಲಿ. ಸತ್ಯವಲ್ಲದ ಮಾತನ್ನು ಹೇಳುವುದು ಬೇಡ. ಇವತ್ತಿನ ದಿವಸ ಆರ್ಡರ್ ಕೊಟ್ಟುಬಿಡುತ್ತೇನೆ ಎಂದು ಹೇಳಿದರು. ಈಗ ಎಂಟು ತಿಂಗಳಿನಿಂದ ರೈತರನ್ನು ಸತಾಯಿಸುತ್ತಿದ್ದಾರೆ. ಇದು ಯಾವ ಸರ್ಕಾರಕ್ಕೂ ಮರ್ಯಾದೆ ತರತಕ್ಕ ಮಾತಲ್ಲ ಎನ್ನುವುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಲಿ. ನಾನು ಈ ಸಭೆಯ ಸದಸ್ಯನಾದ ಲಾಗಾಯ್ತು ಈ ರೀತಿ ಮಾಡಬೇಡಿ ಎಂದು ಸರ್ಕಾರಕ್ಕೆ ಹೇಳಿದೆ. ಇದನ್ನು ಮಾಡಬೇಡಿ ಎಂದು ಈಗಲೂ ಹೇಳುತ್ತಿದ್ದೇನೆ. ಅಲ್ಲಿ ಮುನಿಸಿಪಾಲಿಟಿ ಇಲ್ಲ; ಡಿಸ್ಟ್ರಿಕ್ ಬೋರ್ಡ್ ರೆಪ್ರೆಸೆಂಟಿವ್ ಎಂದು 1939ರ ಕಾನೂನಲ್ಲಿದೆ. ಡಿಸ್ಟ್ರಿಕ್ಟ್ ಬೋರ್ಡ್ ನಮ್ಮ ದೇಶದಲ್ಲಿಲ್ಲದೆ ಎಷ್ಟೋ ವರ್ಷವಾಯಿತು. ಡಿಸ್ಟ್ರಿಕ್ಟ್ ಬೋರ್ಡ್ ರೆಪ್ರೆಸೆಂಟೇಷನ್ ಇಲ್ಲದೆ ಈಗ ಇರತಕ್ಕ ನಿಮ್ಮ ಅಧ್ಯಕ್ಷರು ಇರತಕ್ಕುದು ಎಂದು ಕಾನಸ್ಟಿಟ್ಯೂಟ್ ಮಾಡಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ ನಮ್ಮ ರೈತರ ವಿಚಾರದಲ್ಲಿ ಯಾವ ಯಾವ ರೀತಿಯ ಕನಿಕರವೂ ಇಲ್ಲ, ಯಾವ ರೀತಿಯ ವಿಶ್ವಾಸವೂ ಇಲ್ಲ, ಪ್ರೇಮವೂ ಇಲ್ಲ. ಇವರಿಗೆ ಬೇಕಾಗಿರುವುದು ವ್ಯಾಪಾರಸ್ಥರು ಮತ್ತು ಅವರ ಅರ್ಜಿ. ರೈತರ ಮರ್ಜಿ ಬೇಕಾಗಿಲ್ಲ. ಇವರು— ಈ ರೀತಿ ಜವಾಬು ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೆ. ಈ ಮಂತ್ರಿಗಳ ವಿಚಾರದಲ್ಲಿ ಹೆಚ್ಚಿನ ಗೌರವವಿತ್ತು. ಇವತ್ತು ಹೇಳಿದ ಮೇಲೆ ಇವರು ಮಂತ್ರಿಗಳಾಗುವುದಕ್ಕೆ ನಾಲಾಯಕ್ ಎಂದು ನಿರ್ಧಾರಮಾಡಿಕೊಂಡಿದ್ದೇನೆ.

ಶ್ರೀ ಪಿ. ಎಂ. ನಾಡಗೌಡ.—ಒಂದು ವಿಚಾರ. ಮಾನ್ಯ ಸದಸ್ಯರು ಹೊಸ ಕಾಯಿದೆ ಮಾಡಿದ್ದಾರೆ............

ಶ್ರೀ ಎಚ್. ಸಿದ್ದವೀರಪ್ಪ.—ಅದರ ಪ್ರಕಾರ ಮಾಡಬೇಡಿ ಎಂದು ಹೇಳಿದ್ದೆ, ನೀವು ಕೇಳಲಿಲ್ಲ, ನಿಮ್ಮ ಕೈಗೆ ಅಧಿಕಾರ ಸಿಕ್ಕಿದೆ, ಮಾಡಿದಿರಿ.

ಶ್ರೀ ಪಿ. ಎಂ. ನಾಡಗೌಡ.—ಈಗ ಹೊಸ ಕಾಯಿದೆ ಬಂದಿದೆ, ಬೈಲಾ ಇದೆ, ಕಾರ್ಯರೂಪಕ್ಕೆ ತರಬೇಕು, ತಡವಾಗುತ್ತಿದೆ. ಸರಕಾರ ಯಾವರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದೆ. ಸಹಕಾರಿ ಖಾತೆ ವಿಚಾರ ಹೇಳಿದ್ದೇನೆ, ಸರಕಾರ ಆ ಸಂಸ್ಥೆಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ, ಅಲ್ಲಿನ ಕಾರ್ಯ ಸದಸ್ಯರಿಗೆ ಸಂಬಂಧಪಟ್ಟಿದೆ.

ಶ್ರೀ ಮಹಾದೇವ್ ಜಿ. ಬಣಕಾರ್.—ದಾವಣಗೆರೆ ಮುನಿಸಿಪಾಲಟಿ ಚುನಾವಣೆಯಿರುವಾಗ 4 ದಿವಸಗಳ ಮುಂಚೆಯೇ ಸಸ್ಪೆಂಡ್ ಮಾಡುವುದಕ್ಕೆ ಕಾರಣವೇನು ? 8 ಜನ ರೈತರ ಪ್ರತಿನಿಧಿಗಳು ಆರಿಸಿಬಂದರೆ ತಮ್ಮ ಹಿಂಬಾಲಕರಿಗೆ ಬಹುಮತ ದೊರೆಯದೆ ಹೋಗುತ್ತದೆ ಎಂದು ಚುನಾವಣೆಯನ್ನು ಮುಂದಕ್ಕೆ ಹಾಕಿದಿರೇ ಹೊರತು ಕಾನೂನಿನ ದೃಷ್ಟಿಯಿಂದಲ್ಲ; ಹಸ್ತಕ್ಷೇಪದ ದೃಷ್ಟಿಯಿಂದ ಆ ಕೆಲಸಮಾಡಲಾಗಿದೆ, ನಾನು ಚಾಲೆಂಜ್‌ಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ತಮಗೆ ವಿರುದ್ಧವಾಗಿದ್ದುದರಿಂದ ಹಾಗೆ ಮಾಡಿದಿರಿ.

ಶ್ರೀ ಎಸ್ ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಈ ಅವಿಶ್ವಾಸ ನಿರ್ಣಯದ ಬಗ್ಗೆ ಎರಡು ದಿವಸಗಳಿಂದ ಸಾಕಷ್ಟು ಚರ್ಚೆಯಾಗಿದೆ, ನಾನು ಬಹಳ ಕುತೂಹಲದಿಂದ ಅದನ್ನು ಕೇಳಿದೆ ಈ ನಿರ್ಣಯವನ್ನು ತಂದಿರುವವರು ಹೊಸದಾಗಿ ಏನಾದರೂ ಪ್ರಸ್ತಾಪಮಾಡಿರುವರೇ ಎಂದು ನೋಡಿದೆ, ಆದರೆ ಏನೂ ಕಾಣಲಿಲ್ಲ, ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಿದ್ದಾರೆ. ಶಿವಪ್ಪನವರು ಯಥಾಪ್ರಕಾರ ಹೇಳಿದ್ದಾರೆ. ಹೇಳಿದ್ದನ್ನೇ ಹೇಳಿದ್ದಾರೆ, ಅವರು ಚೆನ್ನಾಗಿ ಮಾತನಾಡುತ್ತಾರೆ.

ಆದರೆ ಒಂದು ಸಲ ಕೇಳಿದನಂತರ ಮತ್ತೊಂದು ಸಲ ಕೇಳುವಂಥ ಹೊಸ ವಿಷಯಗಳೇನೂ ಇರುವುದಿಲ್ಲ. ಹತ್ತು ವರ್ಷಗಳಿಂದ ಹೇಳಿರುವುದನ್ನೇ ಮತ್ತೆ ಹೇಳಿದ್ದಾರೆ, ಹಾಡಿದ್ದೇ ಹಾಡಿದ್ದಾರೆ, ಚೆನ್ನಾಗಿಯೇ ಹಾಡಿದ್ದಾರೆ. ಆದರೆ ಒಂದು ವಿಷಯ ಎದ್ದುಕಾಣುತ್ತದೆ. ಏನೆಂದರೆ, ಮುಖ್ಯಮಂತ್ರಿ ವಿಚಾರವಲ್ಲಿ ಒಳ್ಳೆಯದು ಅಥವಾ ಕೆಟ್ಟದ್ದು ಎಷ್ಟು ಹೇಳಬೇಕೆಂಬುದು ಮನಸ್ಸು ಮಾಡಿದ್ದರೋ ಅಷ್ಟನ್ನು ಚೆನ್ನಾಗಿ ಹೇಳಿದ್ದಾರೆ, ಅದಕ್ಕಾಗಿ ಅವರಿಗೆ ಧನ್ಯವಾದಗಳು. ಬೈದವರಿಗೆಲ್ಲಾ ದೇವರು ಒಳ್ಳೆಯದನ್ನು ಮಾಡಲಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆಮೇಲೆ ಒಂದು ಗಾದೆಯಿದೆ, ಸಿದ್ದವೀರಪ್ಪನವರು ಅದನ್ನು ಹೇಳಿದರೆ ಸಿಟ್ಟುಮಾಡಿಕೊಳ್ಳಬಾರದು, ಗಿಡ್ಡರಿಗೆ ಹೆಜ್ಜೆಯೆಲ್ಲಾ ಬುದ್ಧಿ ಎಂದು ಹೇಳುತ್ತಾರೆ, ಆ ಕಡೆ ಮತ್ತು ಈ ಕಡೆ ಕೂಡ ಅಂಥವರಿದ್ದಾರೆ. (ನಗು). ಅದೇ ರೀತಿ ಅವರು ಮಾಡಿದ್ದಾರೆ. ನಾವು ಕೆಲವರನ್ನು ನಮ್ಮ ಕಡೆಗೆ ಎಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿರುವುದಾಗಿ ಅರೋಪಮಾಡಿದ್ದಾರೆ. ಆದರೆ ನಾನು ಯಾರಿಗೂ ಕಾಂಗ್ರೆಸ್ಸಿಗೆ ಸೇರಬೇಕೆಂದು ಹೇಳಿಲ್ಲ. ಆದರೆ ಇಬ್ಬರು ಅವರಾಗಿಯೇ ಸೇರಿದ್ದಾರೆ. ಪ್ರತಿಪಕ್ಷದವರೇನೂ ಸುಮ್ಮನಿಲ್ಲ. ಮುಖ್ಯಮಂತ್ರಿಗಳಾಗಿ ಹೊಸಬರನ್ನು ಚುನಾಯಿಸುವ ವಿಚಾರ ಪ್ರಸ್ತಾಪಮಾಡಿದ್ದಾರೆ. ಅದು ನಮಗೆ ಸಂಬಂಧಪಟ್ಟ ವಿಚಾರ, ನಾಯಕರನ್ನು ಆರಿಸುವುದು ನಮ್ಮ ಪಕ್ಷಕ್ಕೆ ಸಂಬಂಧಪಟ್ಟ ವಿಷಯ, ಅದಕ್ಕೇಕೆ ಇತರರು ಪ್ರವೇಶಮಾಡಬೇಕು ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಎರಡೂವರೆ ಕೋಟಿ ಜನರಿಗೆ ಮುಖ್ಯ ಮಂತ್ರಿಗಳಾದ್ದರಿಂದ ಹೇಳಬೇಕಾಗುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಅದು ನಿಜ. ಆದರೆ ಅದು ಪಕ್ಷಕ್ಕೆ ಸಂಬಂಧಪಟ್ಟವಿಷಯ, ಅವರೇಕೆ ಇದಕ್ಕೆ ಕೈಹಾಕಬೇಕು, ಅವರಿಗೇಕೆ ಇದರಲ್ಲಿ ಅಸಕ್ತಿ ? ನಾವೇನೂ ಮಾಡುವುದಿಲ್ಲ, ನಮಗೇನೂ ಗೊತ್ತಿಲ್ಲ ಎಂದು ಡಾಣ ಡಂಗುರವಾಗಿ ಹೇಳುವ ಜನ ಎಲ್ಲೆಲ್ಲೆ ಏನೇನು ಮಾಡುತ್ತಾರೆ, ಸುಮ್ಮನಿದ್ದಾರೇ ಎಂಬ ಅನುಮಾನ ಬರುತ್ತಿದೆ. ಅದು ಹೋಗಲಿ. ಈಗ ಲಿಂಗಾಯಿತರು ಬೇಡ, ವಕ್ಕಲಿಗರು ಬೇಡ, ಹರಿಜನರನ್ನು ಮುಖ್ಯ ಮಂತ್ರಿ ಮಾಡಿ ಎಂದು ಹೇಳುತ್ತಿದ್ದಾರೆ. ಏನಾದರೂ ತಿಕ್ಕಾಟ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳೋಣ ಎಂದು ಪ್ರಯತ್ನಮಾಡುತ್ತಿದ್ದಾರೆ. ಆದರೆ ಅದು ನಡೆಯುವುದಿಲ್ಲ, ಅಂಥಾದ್ದನ್ನು ಬಿಟ್ಟುಬಿಡಿ. ಕಾಂಗ್ರೆಸ್ಸಿನಲ್ಲಿ ಜಾತಿಯ ಭಾವನೆ ಬರಬಾರದು ಎಂಬ ತತ್ವವನ್ನು ಅನೇಕ ವರ್ಷದಿಂದ ಒಪ್ಪಿಕೊಂಡಿದ್ದೇವೆ. ಜಾತಿಯ ಭಾವನೆ ನಮ್ಮಲ್ಲಿಲ್ಲ. ಯಾರು ಯೋಗ್ಯರೆಂದು ಕಾಣುವುದೋ ಅವರನ್ನು ಆರಿಸುತ್ತೇವೆ. ಜಾತಿಯ ಪ್ರಶ್ನೆಯನ್ನೆತ್ತುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ, ಯಾವ ಪಕ್ಷವೇ ಆಗಲಿ ಜಾತಿಗೆ ಪ್ರಾಮುಖ್ಯತೆ ಕೊಡುವುದು ದೇಶಕ್ಕೆ ಹಾನಿಯೇ ಹೊರತು ಒಳ್ಳೆಯದಲ್ಲ. ಇದನ್ನು ಸ್ಪಷ್ಟಪಡಿಸುತ್ತಿದ್ದೇನೆ.

ಇನ್ನು ಕೆಲವು ವಿಚಾರಗಳನ್ನು ಹೇಳಿದ್ದಾರೆ. 1960ರಲ್ಲಿ ಯಾವುದೋ ಕಂಟ್ರಾಕ್ಟನ್ನು ರಾಯಚೂರಿನಲ್ಲಿ ಕೊಟ್ಟಿದ್ದ ವಿಚಾರ ಹೇಳಿದರು, ನಾವು ಯಾರೂ ಆಗ ಇರಲಿಲ್ಲ. ಅದು ಸಣ್ಣ ವಿಚಾರ, ಇಂದು ನಾವಿರುವಾಗ ಸರಕಾರ ಮಾಡಿದೆಯೆಂದು ಹೇಳಬಹುದು, ಮಾಡಿಲ್ಲವೆಂದು ಹೇಳುತ್ತಿಲ್ಲ. ಗೌಡರು ಒಂದು ಗಾದೆ ಹೇಳಿದರು, ಮಲಗಿಕೊಂಡಿರುವವನನ್ನು ಎಬ್ಬಿಸಬಹುದು, ಅದು ಸುಲಭ, ಬೇಕಂತ ಕಣ್ಣುಮುಚ್ಚಿ ಮಲಗಿರುವವರನ್ನು ಎಬ್ಬಿಸುವುದಕ್ಕಾಗುವುದಿಲ್ಲ, ಉರುಳಿಸಿದರೂ ಅವರು ಏಳುವುದಿಲ್ಲ ಎಂದು ಹೇಳಿದರು. ನಾನು ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಏನೂ ಸರಕಾರ ಮಾಡಿಲ್ಲವೆಂದರು. ಆದರೆ ಕಣ್ಣು ಮುಚ್ಚಿಕೊಂಡಿರುವವರಿಗೆ ನಾವೇನು ಮಾಡಿದರೂ ಕಾಣುವುದಿಲ್ಲ, ಶಾಲೆ ಕೊಟ್ಟಿಲ್ಲ, ಕಾಲೇಜು ಸ್ಥಾಪಿಸಿಲ್ಲ, ರಸ್ತೆ ಮಾಡಿಲ್ಲ, ಆಸ್ಪತ್ರೆ ಕೊಟ್ಟಿಲ್ಲ, ನೀರಾವರಿ ಸೌಕರ್ಯಮಾಡಿಲ್ಲ, ಕಾಲುವೆ ಮಾಡಿಲ್ಲ, ಆಹಾರ ಒದಗಿಸಿಲ್ಲ, ಜಮೀನು ಕೊಟ್ಟಿಲ್ಲ, ಏನೂ ಆಗಿಲ್ಲ ಎಂದು ಆಗಿರುವುದನ್ನು ನೋಡದೆ ಕಣ್ಣುಮುಚ್ಚಿಕೊಂಡು ಹೇಳುವುದು ಸರಿಯಲ್ಲ. ಕಣ್ಣುಮುಚ್ಚಿಕೊಂಡು ಮಲಗಿರುವವರಿಗೆ ಏನೂ ಕಾಣಿಸುವುದಿಲ್ಲ.

ಇನ್ನು ನಾನು ಭಾಷಣವನ್ನು ಬೆಳೆಸುವುದಿಲ್ಲ. ಈ ಅವಿಶ್ವಾಸ ಸೂಚನೆಯಲ್ಲಿ ಏನೇನೂ ಹುರುಳಿಲ್ಲ, ಅರ್ಥವಿಲ್ಲ, ವಿವೇಚನೆಯಿಲ್ಲ, ಇದನ್ನು ತಿರಸ್ಕಾರ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಮಹದೇವ್ ಜಿ. ಬಣಕಾರ್.—ಮಹಜನ್ ಅವರ ಕಮಿಷನ್ ವರದಿ ಬಗ್ಗೆ ಏಕಾಭಿಪ್ರಾಯವನ್ನು ನಿರೂಪಿಸಬೇಕೆಂದು ಕೇಂದ್ರ ಸರ್ಕಾರದಲ್ಲಿ ಪ್ರಯತ್ನ ನಡೆದಿದೆ. ಆ ವಿಷಯವನ್ನು ಹೇಳಬೇಕು.

(ಉತ್ತರವಿಲ್ಲ)

ಶ್ರೀ ಅಜೀಜ್ ಸೇಟ್.—ಸೌದಿ ಅರೇಬಿಯಾದಲ್ಲಿ 30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಅಲ್ಲಿ ಮುಸಲ್ಮಾನರು ತಂಗುವುದಕ್ಕೆ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದು ಚದುರಗಜ ಒಂದಕ್ಕೆ 2 ಸಾವಿರ ರೂಪಾಯಿಗಳಂತೆ ಒಂದು ಸೈಟನ್ನು ತೆಗೆದುಕೊಂಡು, ಅದನ್ನು ನೋಡುವುದಕ್ಕಾಗಿ ನಮ್ಮ ಉಪಮಂತ್ರಿಗಳು ಹೋಗುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರ ಜೊತೆಯಲ್ಲಿ ಒಬ್ಬರು ಕೇಂದ್ರ ಸರ್ಕಾರದಿಂದ, ಇಬ್ಬರು ಹಾಜ್ ಕಮಿಷನ್ನಿಂದ, ಒಬ್ಬ ಸತ್ತಾರ್ ಎಂಬ ಆಫೀಸ್ ಗುಮಾಸ್ತ, ಹಾಜಿ ಕಮಿಷನ್ನಿನ ಲೈಯಸನ್ ಆಫೀಸರ್, ಅಕ್ಬರ್ ಸಾಹೇಬರು, ಮೈಸೂರು ಸರ್ಕಾರದಿಂದ ವಾಕ್ಫ್ ಬೋರ್ಡಿನಿಂದ ಒಬ್ಬರು—ಹೀಗೆ 6-7 ಜನರು ಹೋಗುತ್ತಾ ಇರುವ ಬಗ್ಗೆ ಅವರವರೇ ಕೂತುಕೊಂಡು ತೀರ್ಮಾನಮಾಡಿದ್ದಾರೆ, ಇದಾವುದೂ ಲೆಜಿಸ್ಲೇಟರುಗಳಾದ ನಮಗೆ ಗೊತ್ತಿಲ್ಲ. ಇದು ಏನು ಸಮಾಚಾರ, ತಿಳಿಸಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಆ ಒಂದು ಪ್ರಯತ್ನಮಾಡುತ್ತಿದ್ದಾರೆ. ಅದು ಸಾಧ್ಯವಾಗುತ್ತದೆ. ಅಲ್ಲಿಗೆ ಮುಸಲ್ಮಾನ ಬಂಧುಗಳು ಅನೇಕರು ಹೋಗುತ್ತಾರೆ. ಅವರು ಅಲ್ಲಿಹೋಗಿ ಇರುವುದಕ್ಕೆ; ಹಾಗೂ ತಂಗುವುದಕ್ಕೆ ಜಾಗ ಬೇಕು ಎಂಬುದಾಗಿ ಹೇಳುತ್ತಿದ್ದಾರೆ. ಅದನ್ನು ಯೋಚನೆಮಾಡುತ್ತಿದ್ದೇವೆ. ಅಲ್ಲಿಗೆ ಹೋಗುವಂತಹವರು ನಮ್ಮ ಸರ್ಕಾರದ ಖರ್ಚಿನಲ್ಲಿ ಹೋಗುತ್ತಾ ಇಲ್ಲ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

(Several members stood up)

Sri S. SIVAPPA.—I have got a right of reply, Sir.

Mr. SPEAKER.—Yes. But, if a number of members begin to ask for clarifications, it is not possible to allow every one.

† ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಈ ಅವಿಶ್ವಾಸ ನಿರ್ಣಯ ಈ ಸಭೆಯಲ್ಲಿ ಸುಮಾರು 15 ಘಂಟೆಗಳ ಕಾಲ ಸವಿಸ್ತಾರವಾಗಿ ಚರ್ಚೆಯಾಗಿದ ಈ ಮಂತ್ರಿಮಂಡಲದಲ್ಲಿ ವಿಶ್ವಾಸವಿಲ್ಲವೆಂಬ ನಿರ್ಣಯವನ್ನು ನಾವು ಮಂಡನೆ ಮಾಡಿದಾಗ ನಾವು ಈ ಕಡೆಯಿಂದ ಏನೇನು ಅಪಾದನೆಗಳನ್ನು ಈ ಮಂತ್ರಿಮಂಡಲದಮೇಲೆ ಹೊರಿಸಿದ್ದೇವೆ ಅ ಅಪಾದನೆಗಳನ್ನು ಖಡಾಖಂಡಿತವಾಗಿ ಇಲ್ಲವೆಂದು ಆ ಕಡೆಯವರು ಹೇಳಿದ್ದಾರೆ. ಅವರಿಗೆ ಸಕಾರಣಗಳು ಇಲ್ಲದೆ ಅತ್ತಕಡೆಯಿಂದ ಬಂದ ಉತ್ತರವೂ ಅದೇ ರೀತಿಯಲ್ಲಿ ಎಲ್ಲರ ಬಾಯಿಂದ ಬಂತು. ಈ ಅವಿಶ್ವಾಸ ನಿರ್ಣಯವೇಕೆ, ಅತುರಾತುರವಾಗಿ ಇಂತಹ ಅವಿಶ್ವಾಸ ನಿರ್ಣಯಗಳನ್ನು ಈ ಸಭೆಯ ವೇಳೆಯನ್ನು ವ್ಯರ್ಥಮಾಡುವ ಬಗ್ಗೆ ತಂದಿದ್ದಾರೆಂದು ಕೆಲವರು ಹೇಳಿದರು. ಅದರೆ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಕಣ್ಣಿಗೆ ಇದು ಅಭಿನಯ, ಯಕ್ಷಗಾನದಂತಿದೆ ಎಂಬುದಾಗಿ ಹೇಳಿದರು. ಅವರಿಗೆ ಅಭಿನಯದ ಮೇಲೆ ಎಷ್ಟೊಂದು ರುಚಿ, ಅದೆಷ್ಟು ಚೆನ್ನಾಗಿದೆಯೋ ಗೊತ್ತಿಲ್ಲ. ಅವರಿಗೆ ಅಭಿನಯದ ರುಚಿ ಈಚೆಗೆ ಜಾಸ್ತಿಯಾಗಿದೆ.

ಶ್ರೀ ಎಚ್. ಸಿದ್ಧವೀರಪ್ಪ.—ಮೊನ್ನೆಮೊನ್ನೆ ಪರದೇಶಗಳಿಗೆ ಹೋಗಿ ಬಂದಿದ್ದಾರೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಶ್ರೀ ಚನ್ನಬಸಪ್ಪನವರು ನೋಡಿದಷ್ಟು ಅಭಿನಯ ಅವರು ನೋಡಿಲ್ಲ. ಬೇರೆ ಇನ್ನೇನೋ ಅಭಿನಯಗಳನ್ನು ಇವರು ನೋಡಿ ಬಂದಿದ್ದಾರೆ. ಅದರೆ ಈ ಶಾಸನಸಭೆಯಲ್ಲಿ ಅಂತಹ ಅಭಿನಯಗಳು ನಿಮಗೆ ಕಾಣುತ್ತದೆಯೇ? ಮಾನ್ಯ ಶ್ರೀ ಪುಟ್ಟಸ್ವಾಮಿಯವರ ಮಾತೇ ಮುತ್ತು. ಆದರೆ ಕೆಲವು ವೇಳೆ ಅವರ ಮಾತುಗಳು ಮೃತ್ಯುವಿನಂತೆ ಇರುತ್ತದೆ. ಅವರ ಮಾತುಗಳನ್ನು ಸರಿಯಾಗಿ ಹೇಳಬೇಕು. ಅವರ ಕಡೆಯವರಿಗೂ ಉಪದೇಶಮಾಡಿದ್ದೇವೆ. ಈಗ ಇವರ ಹೇಳಿಕೆಯಿಂದ ಈ ಒಂದು ಅವಿಶ್ವಾಸನಿರ್ಣಯ ಹಿನ್ನಲೆಯಲ್ಲಿ ಇವರ ಒಂದು ಪಾತ್ರವಿದೆ. ನನ್ನ ಮಿತ್ರರು ರೈತನಂತಹ ಒಳ್ಳೆಯ ರಾಜ್ಯಲಕ್ಷ್ಮಿಯನ್ನು ಹೊಂದಿದ್ದಾರೆ. ರೈತನಿಂದ ಎಳೆಯುವುದಕ್ಕೆ ಕಾಂಗ್ರೆಸ್ ಕುದುರೆ ಗಾಡಿಗಳು, ವಿರೋಧಪಕ್ಷವೆಂಬುದು ಚಾಟಿ. ಅ ಕುದುರೆಯನ್ನು ಚಾಟಿ ಮೊನೆಯಿಂದ ಓಡಿಸಬಹುದು. ಅಂದಮೇಲೆ ಪ್ರಜಾಪ್ರಭುತ್ವದ ಅಡಿಗಲ್ಲು ಆಗಿರುವ ಈ ಶಾಸನಸಭೆ ಒಂದು ಚಾಟಿ. ಈ ಒಂದು ಚಾಟಿಯಿಂದ ನಿಮ್ಮನ್ನು ಓಡಿಸುವುದಕ್ಕೆ ಆರು ವರ್ಷಗಳಿಂದಲೂ ಪ್ರಯತ್ನಮಾಡಿದ್ದೇವೆ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಹೇಳಿದಹಾಗೆ ಸರಿಯಾದ ದಾರಿಗೆ ತಿರುಗದ ಕುದುರೆ ಧಾರವಾಡದ ಎಮ್ಮೆಯೋಪಾದಿಯಲ್ಲಿ ಕೂತರೆ ಅಂಥಾದ್ದಕ್ಕೆ ಚಾಟಿ ಏಟು ತಟ್ಟುವುದಿಲ್ಲ. ಆದಕ್ಕೆ ದೊಣ್ಣೆ ಹೊಡೆತವೇ ಬೇಕು ಎಂಬುದಾಗಿ ಅವರು ಹೇಳಿದ್ದನ್ನು ನಾನು ಬೆಂಬಲ ಮಾಡುತ್ತೇನೆ. ಈ ಅವಿಶ್ವಾಸ ನಿರ್ಣಯವನ್ನು ಈ ಪ್ರಜಾಪ್ರಭುತ್ವದಲ್ಲಿ ತಂದಿರುವ ಉದ್ದೇಶ ಈ ದೇಶದ ಜನತೆಗೆ ಸರ್ಕಾರ ಮಾಡುತ್ತಿರುವ ಲೋಪ

ದೋಷಗಳನ್ನು ಅವರ ಒಂದು ತಿಳುವಳಿಕೆಗೆ ತರುವುದಕ್ಕಾಗಿ. ಅದಕ್ಕಾಗಿ ನಾವು ಪ್ರಯತ್ನ ಮಾಡಿದ್ದೇವೆ. ಅದು ಕೇವಲ ಮಾನ್ಯ ಶ್ರೀ ನಿಜಲಿಂಗಪ್ಪನವರಿಗೆ ಒಂದು ಹಳೆಯ ಹಾಡು, ಹಳೆಯ ಗಾಗವೆಂದು ಇರಬಹುದು. ಅದನ್ನು ಅವರೇ ಹೇಳಿದ್ದಾರೆ. ಆ ರೀತಿ ಇದ್ದರೆ ಮಾನ್ಯ ಶ್ರೀ ಸಿದ್ಧ ವೀರಪ್ಪನವರು ಹೇಳಿದಹಾಗೆ ಚಾಟಿ ಹಳೆಯದು ಆಗುತ್ತದೆ, ಅದಕ್ಕೆ ದೊಣ್ಣೆಯನ್ನು ಉಪಯೋಗಿಸ ಬೇಕಾಗುತ್ತದೆ. ಆದರೆ ಪ್ರಜಾಪ್ರಭುತ್ವದಲ್ಲಿ ಅಂತಹ ದೊಣ್ಣೆಯನ್ನು ಉಪಯೋಗಿಸುವುದಕ್ಕೆ ನನಗೆ ಇಷ್ಟವಿಲ್ಲ. ಅಂತಹ ಒಂದು ದೊಣ್ಣೆಯನ್ನು ನಾವು ಉಪಯೋಗಿಸಿ ಈ ದೇಶವನ್ನು ಆಳುವ ಕಾಲ ಬಂದಿಲ್ಲ. ನಿಮ್ಮ ಒಂದು ಜಿಜ್ಞಾಸ, ಆಲಸ್ಯಗಳ ಕಾರಣ ನೀವು ಇಂತಹ ನಿರ್ಣಯಗಳನ್ನು ಈ ಸಭೆಯಲ್ಲಿ ಕಾಣುತ್ತಿದ್ದೀರಿ. ಈ ದೇಶದ ಜನತೆಯನ್ನು ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಂದ ಇರಿಸಬೇಕಾದರೆ ಈ ದೇಶದ ಆಡಳಿತ ಉತ್ತಮವಾಗಬೇಕು. ಇಲ್ಲದಿದ್ದರೆ ಮಾನ್ಯ ಶ್ರೀ ಸಿದ್ಧವೀರಪ್ಪ ನವರು ಹೇಳಿದಹಾಗೆ ಕಡೆಗೆ ಜನ ದೊಣ್ಣೆಯನ್ನು ಉಪಯೋಗಿಸುವ ಒಂದು ನೀತಿ ಬರಬಹುದು ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.— ಪಂಡಿತರು ಹೇಳುತ್ತಾರೆ, ಅದೇನೆಂದರೆ word for the wise and rod for the fool ಎಂದು.

ಶ್ರೀ ಎಸ್. ಶಿವಪ್ಪ.—ಮತ್ತೊಮ್ಮೆ ನಾನು ಎಚ್ಚರಿಕೆ ಕೊಡುತ್ತೇನೆ. ಇಂತಹ ಅವಿಶ್ವಾಸ ನಿರ್ಣಯಗಳು ನಮ್ಮ ಕೈಲಿ ಪವಿತ್ರವಾದ ಆಯುಧ, ಅಸ್ತ್ರದಂತಿವೆ. ಅವನ್ನು ನಿಮ್ಮಮೇಲೆ ಇಟ್ಟಿ ದ್ದೇವೆ. ಇವು ನಿಮ್ಮನ್ನು ಎಚ್ಚರಿಸುವುದಕ್ಕೋಸ್ಕರ. Democracy is a hanging sword. ಕತ್ತಿ ಹರಿತವಾಗಿರಬೇಕು. ಅದು ಹರಿತವಿಲ್ಲದಿದ್ದರೆ ಯಾವ ರೀತಿಯಲ್ಲಿ ಹರಿತಮಾಡಿಸುತ್ತೇವೋ ಹಾಗೆ ಇವರು ಒಂದು ಆಲಸ್ಯ, ಜಡತ್ವದಿಂದ ಅಥವಾ ಗಾಢ ನಿದ್ರೆಯಿಂದ ಇರುವುದರಿಂದ ಇವರ ಮೇಲೆ ಈ ರೀತಿಯ ಕತ್ತಿಯನ್ನು ಪ್ರಯೋಗಮಾಡುವ ಕರ್ತವ್ಯಮಾಡಿದ್ದೇವೆ. ಇವತ್ತು ಸುಮಾರು 15 ಘಂಟೆಗಳ ಕಾಲ ಚರ್ಚೆಯಾಗಿರುವ ಈ ಕಾಲದಲ್ಲಿ ಏನೇನು ನಿಮ್ಮಮೇಲೆ ಅಪರಾಧಗಳನ್ನು ಹೊರಿಸಿದ್ದೇವೋ ಅದರ ಬಗ್ಗೆ ನೀವು ಉತ್ತರ ಕೊಡುವುದರಲ್ಲಿ ಖಂಡಿತವಾಗಿ ಉತ್ತೀರ್ಣರಾಗಿಲ್ಲ. ಮಾನ್ಯ ಶ್ರೀ ರಾಚಯ್ಯನವರು ಕಂದಾಯದ ವಿಚಾರದಲ್ಲಿ ಹೆಚ್ಚಿನ ಕಾಲಾವಕಾಶಬೇಕು, ನಾವು ಬೇರೆ ಪದ್ಧತಿ ಮಾಡುತ್ತೇವೆ ಎಂಬುದಾಗಿ ಒಂದು ಜಾರು ಮಾತನ್ನು ಆಡಿದರು. ಆ ರೀತಿಯಾಗಿ ಜನತೆ ಯನ್ನು ಮೋಸಮಾಡುವುದಕ್ಕೆ ಸಾಧ್ಯವಿಲ್ಲವೆಂಬುದಾಗಿ ನಾನು ಒತ್ತಿಒತ್ತಿ ಹೇಳುತ್ತೇನೆ. ಯಾವ ಸರ್ಕಾರವೇ ಆಗಿರಲಿ, ಅದು ತನ್ನ ಒಂದು ನೀತಿಯನ್ನು ಆಲಸ್ಯವಿಲ್ಲದೆ ಖಡಾಖಂಡಿತವಾಗಿ ತೆಗೆದು ಕೊಳ್ಳುವುದು ಆ ಒಂದು ಸರ್ಕಾರದ ಕರ್ತವ್ಯ ಮತ್ತು ಅದರಂತೆ ನಡೆಯುವುದೂ ಆ ಒಂದು ಸರ್ಕಾರಕ್ಕೇ ಗೌರವ. ಆ ರೀತಿ ಮಾಡದೆ ಈ ದೇಶದ ಜನತೆಯನ್ನು ಮರುಳುಮಾಡುವುದಕ್ಕೆ ಇನ್ನು ಎಷ್ಟು ಕಾಲ ಇವರಿಗೆ ಸಾಧ್ಯವಾದೀತು ಎಂಬುದಾಗಿ ನಾನು ಕೇಳುತ್ತೇನೆ. You can fool some people for some time, you cannot fool all the people for all the time. ಎಂಬುದಾಗಿ ಲಿಂಕನ್ ಅವರು ಹೇಳಿದಂಥ ಮಾತು ಇವತ್ತಿಗೂ ನಿಜವಾಗಿದೆ. ಈ ದೇಶದ ಜನತೆಯನ್ನು ಎಲ್ಲಾ ಕಾಲದಲ್ಲಿಯೂ ಮೋಸಮಾಡಿ ನಿಮ್ಮ ಕಡೆ ಅವರು ವಾಲುತ್ತಾರೆ ಎಂಬ ಭ್ರಮೆ ಇದ್ದರೆ ಅದನ್ನು ಬಿಡಿ. ಒಟ್ಟಿನಲ್ಲಿ ನಾವು ಮಾಡಿದಂಥ ಅಪಾದನೆಗಳಿಗೆ ನಿಮ್ಮಿಂದ ಸರಿಯಾದ ಉತ್ತರ ಬರಲಿಲ್ಲ. ಮಧುಗಿರಿ ಪ್ರಕರಣದ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿಯನ್ನು ಮಾಡುವ ಬಗ್ಗೆ ಜಡ್ಜನ್ನು ಯಾವಾಗ ನೇಮಕಮಾಡುತ್ತೀರಿ ಎಂಬುದನ್ನು ಹೇಳಲೇ ಇಲ್ಲ.

7-30 P.M.

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ನಾನು ಶನಿವಾರದ ದಿವಸ ಮಾಡುತ್ತೇನೆಂದು ಹೇಳಿದೆ ಸಂಬಂಧಪಟ್ಟ ಸಚಿವರನ್ನೂ ಕೇಳಿದೆ. ಚೀಫ್ ಜಡ್ಜ್ ಅವರು ಬೆಂಗಳೂರಿನಲ್ಲಿರಲಿಲ್ಲ. ಭಾನುವಾರ ರಾತ್ರಿ ಬಂದರು. ಕೂಡಲೇ ಕಾಂಟ್ಯಾಕ್ಟ್ ಮಾಡಿದರು. ಸೋಮವಾರ ಬೆಳಿಗ್ಗೆ ಸಿಕ್ಕಿದರು. ಇನ್ನು 2-3 ದಿವಸಗಳಲ್ಲಿ ಯೋಚನೆಮಾಡಿ ಹೇಳುತ್ತೇನೆಂದು ಹೇಳಿದರು. ಇವತ್ತು ಸಾಯಂಕಾಲ ಮಾತ ನಾಡಿ ತೀರ್ಮಾನಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ ಬೇಕು ಎಂದು ಸುಮ್ಮನೆ ಅದರ ಬಗ್ಗೆ ಕಾಲ ಕಳೆಯುವುದಕ್ಕೆ ನನಗೆ ಇಷ್ಟವಿಲ್ಲ. ಇವತ್ತೇ ತೀರ್ಮಾನಮಾಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಮಧುಗಿರಿ ಪ್ರಕರಣದ ವಿಚಾರಣೆ ಬಗ್ಗೆ ಒಬ್ಬ ನ್ಯಾಯಾಧೀಶರನ್ನು ನೇಮಕಮಾಡುತ್ತೇನೆಂದು ಹೇಳಿದರು. ಆ ನ್ಯಾಯ ಅತಿ ಶೀಘ್ರದಲ್ಲಿ ಆಗಬೇಕು. ಆದರೆ ಸಾಕ್ಷಿ, ಸಾಹಿತ್ಯಗಳು ಮರೆಮಾಚದ ರೀತಿಯಲ್ಲಿ ಅದು ಆಗಬೇಕು. ವಿಳಂಬ ವಾಗುವುದು ಅಷ್ಟೊಂದು ಶ್ರೇಷ್ಠವಲ್ಲ, ಅದನ್ನು ಆದಷ್ಟು ಶೀಘ್ರವಾಗಿ ಮಾಡುವುದು ನಿಮ

(ಶ್ರೀ ಎಸ್. ಶಿವಪ್ಪ)

ಕರ್ತವ್ಯ. ಮಾನ್ಯ ಶ್ರೀ ನಿಜಲಿಂಗಪ್ಪನವರು ಸ್ವಾಭಾವಿಕವಾಗಿ ಒಂದು ಮಾತನ್ನು ಹೇಳಿದರು. ಇಲ್ಲಿರುವವರು ಬಹಳವಾಗಿ ಬೈದಿದ್ದಾರೆ. ಬೈದವರಿಗೆ ಒಳ್ಳೆಯದಾಗಲಿ, ಎಂಬುದಾಗಿ ಆಶೀರ್ವಾದ ಮಾಡಿದರು. ಇವತ್ತು ನಿಮ್ಮನ್ನು ಬೈಯ್ಯಬೇಕು ಅಂದರೆ ಈ ಶಾಸನಸಭೆಯಲ್ಲಿಯೇ ಬೈಯ್ಯಬೇಕಾಗಿಲ್ಲ. ಎಲ್ಲಿ ಬೇಕಾದರೂ ನಿಮ್ಮನ್ನು ಬೈಯ್ಯುತ್ತಾರೆ. ಆದರೆ ಬೈಯುವ ಕೆಲಸ ನಮ್ಮದಲ್ಲ. ನಿಮಗೆ ಪ್ರಜಾಪ್ರಭುತ್ವದಲ್ಲಿ ನಿಮ್ಮಲ್ಲಿ ಶಾಸನ ಸಭೆಯ ಚರ್ಚೆಗೆ ಪ್ರಾಶಸ್ತ್ಯ ಅವಶ್ಯಕವೆಂದು ಹೇಳುವ ನೀತಿ ಇಲ್ಲ. To criticise Government is our sacred duty ; Criticism is not abuse. ಮೂರು ಶತಮಾನಗಳ ಹಿಂದೆ ಪಾರ್ಲಿಮೆಂಟ್‌ನಲ್ಲಿ ವಿರೋಧ ಪಕ್ಷದವರು ಬಂದಾಗ ಅಲ್ಲಿ ರಾಜರನ್ನು ಬೈಯ್ಯುವುದು ಉಂಟೇ ಎಂಬ ಭಾವನೆ ಇತ್ತು. ಆಗ ವಿರೋಧಪಕ್ಷದವರು, It is not abusing king it is abusing the evil ಎಂದು ಹೇಳಿದರಂತೆ. Then the Opposition was recognised and His Majesty's opposition was formed. ಆದ್ದರಿಂದ ನೀವು ಇನ್ನೂ ಮೂರು ಶತಮಾನಗಳ ಹಿಂದೆ ಇದ್ದೀರಿ. ಈಗ 20 ನೇ ಶತಮಾನಕ್ಕೆ ಬರಬೇಕು ಎಂಬುದಾಗಿ ಪ್ರಾರ್ಥನೆ ಮಾಡಿ, ಈ ಕೆಲಸ ಮಾಡಬೇಕೆಂದು ನಿನ್ನೆ ನನ್ನ ಮಿತ್ರರಿಗೆ ಹೇಳಿದೆ. ನಾನು ನೆನ್ನೆ ದಿನವೂ ಸಹಾ ಹೇಳಿದೆ—ಯಾರಿಗೆ ಈ ಪ್ರಜಾಪ್ರಭುತ್ವದಲ್ಲಿ ಒಂದು ನಂಬಿಕೆಯಿದೆಯೋ ಅಂಥವರೆಲ್ಲರೂ ಈ ನಿರ್ಣಯಕ್ಕೆ ಬೆಂಬಲ ನೀಡಬೇಕು ಎಂದು. ನನ್ನ ತರುಣ ಮಿತ್ರರು ಹಾಗೂ ಪ್ರಗತಿಪರವಾದ ಜನರು ಈ ನಿರ್ಣಯಕ್ಕೆ ಬೆಂಬಲವನ್ನು ಕೊಟ್ಟು ಈ ರಾಜ್ಯದಲ್ಲಿ ಒಂದು ಸುಭದ್ರವಾದ ಪ್ರಜಾಪ್ರಭುತ್ವಾಡಳಿತವನ್ನು ಸ್ಥಾಪಿಸುವುದಕ್ಕೆ—ಒಂದು ಸರ್ಕಾರವನ್ನು ಸ್ಥಾಪಿಸುವುದಕ್ಕೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿ, ಸ್ವಾಮಿ ಅಧ್ಯಕ್ಷರೇ ತಾವು ಈ ಒಂದು ದೀರ್ಘಕಾಲದ ಚರ್ಚೆಗೆ ಅವಕಾಶ ಕೊಟ್ಟಿದ್ದುದಕ್ಕಾಗಿ ತಮಗೂ ನನ್ನ ವಂದನೆಗಳರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—I will put the motion to the Vote of the House.

The question is :

"That this House has no confidence in the Council of Ministers."

The motion was negatived.

We have another item on the Agenda, *i.e.*, Half an Hour Discussion. Shall we take it up ?

THE HON'BLE MEMBERS.—No.

BUSINESS OF THE HOUSE

Mr. SPEAKER.—Before I adjourn the House, I would like to give a brief review of the business transacted during the current meetings, *i.e.*, from 7th December 1967 to 23rd December 1967. The House met for 15 days. The total number of hours the House met is 88 hours and 23 minutes.

Financial Business.—A statement showing Supplementary and Additional Demands for grant for the year 1967-68 (Second Instalment) was presented on 13-12-1967, discussion and voting took place on the same on 21-12-1967. Discussion and voting of demands for excess grants for the years 1962-63 and 1963-64, also took place on 21-12-1967. The Appropriation Bills in this behalf were passed on 22-12-1967.